ಗುರುವಾರ, ಜೂನ್ 20, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 171 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ಮೂರು ಭಾರತೀಯ ಕೃತಿಗಳಿಗೆ 'ಮೆಮೊರಿ ಆಫ್ ವರ್ಲ್ಡ್' ಗರಿ



ಆಳ-ಅಗಲ
ರೇಣುಕಸ್ವಾಮಿ ಹತ್ಯೆ ಪ್ರಕರಣ: ಆರೋಪಿಗಳ ಪಾತ್ರ ಏನು...?
ಅಕ್ರಮ ಮದ್ಯ ಕುಡಿದು 20 ಜನರ ಸಾವು 11
ಯುಜಿಸಿ ನೆಟ್ ಪರೀಕ್ಷೆ ರದ್ದು 4

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
77,337	23,516	₹73,980 (ಬೆಂಗಳೂರು)	₹90,600 (ಬೆಂಗಳೂರು)	83.44

ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅಕ್ರಮ ತಡೆಯಲು ತಂತ್ರಜ್ಞಾನ ಬಳಕೆ: ಕೆಇಎ ಪ್ರಸ್ತಾವ

ಸಿಇಟಿ ಕಣ್ಗಾವಲಿಗೆ 'ಎಐ'

• ರಾಜೇಶ್ ರೈ ಚಟ್ಲ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳಿಗೆ ರಾಜ್ಯದಲ್ಲಿ ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಗಳಲ್ಲಿ (ಸಿಇಟಿ) ಅಕ್ರಮ ತಡೆಯಲು 'ಕೃತಕ ಬುದ್ಧಿಮತ್ತೆ' (ಎಐ) ತಂತ್ರಜ್ಞಾನ ಅಳವಡಿಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಮುಂದಾಗಿದೆ.

'ಸಿಇಟಿ ಹಾಗೂ ಸರ್ಕಾರದ ನಾನಾ ಇಲಾಖೆಗಳು, ನಿಗಮ ಮಂಡಳಿಗಳಲ್ಲಿನ ಖಾಲಿ ಹುದ್ದೆಗಳ ನೇಮಕಾತಿಗಳಿಗೆ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಕಳ್ಳಮಾರ್ಗ ಅನುಸರಿಸುವ ಅಭ್ಯರ್ಥಿಗಳ ಮೇಲೆ ಕಣ್ಗಾವಲು ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಲು ಉದ್ದೇಶಿಸಲಾಗಿದೆ. ಪರೀಕ್ಷೆಗಳನ್ನು ಪಾರದರ್ಶಕವಾಗಿ ನಡೆಸಲು ಅತ್ಯಾಧುನಿಕ ತಂತ್ರಜ್ಞಾನ ಬಳಸಲು ತೀರ್ಮಾನಿಸಿದ್ದು, ಅನುಮತಿಗಾಗಿ ರಾಜ್ಯ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ' ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದರು.

'ಪ್ರಜಾವಾಣಿ' ಜೊತೆ ಮಾತನಾಡಿದ ಅವರು, 'ಪಾರದರ್ಶಕವಾಗಿ ಪರೀಕ್ಷೆಗಳನ್ನು ನಡೆಸಲು ಪರೀಕ್ಷಾ ಕೇಂದ್ರಗಳಲ್ಲಿ ಎಐ ತಂತ್ರಜ್ಞಾನ ಅಳವಡಿಸಿಕೊಳ್ಳಲು ನಿರ್ಧರಿಸಲಾಗಿದೆ. ಆ ಮೂಲಕ, ಸಾಮೂಹಿಕ ನಕಲು, ಬ್ಲೂಟೂತ್ ಬಳಕೆ, ಅಸಲಿ ಅಭ್ಯರ್ಥಿಯ ಬದಲು ನಕಲಿ ಅಭ್ಯರ್ಥಿ ಪರೀಕ್ಷೆ ಬರೆಯಲು ಹಾಜರಾಗುವುದನ್ನು ತಡೆಯಲಾಗುವುದು' ಎಂದು ಹೇಳಿದರು.

ಕಲ್ಯಾಣ ಕರ್ನಾಟಕ ಸಾರಿಗೆ ನಿಗಮ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಹಾಗೂ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗಳಲ್ಲಿನ ವಿವಿಧ ಹುದ್ದೆಗಳ ನೇಮಕಾತಿಗಳಿಗೆ ನಡೆಯಲಿರುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಈ ವ್ಯವಸ್ಥೆಯನ್ನು ಪ್ರಾಯೋಗಿಕವಾಗಿ ಅಳವಡಿಸಲು ಕೆಇಎ ನಿರ್ಧರಿಸಿದೆ.

'ಕಲ್ಯಾಣ ಕರ್ನಾಟಕ ಸಾರಿಗೆ ನಿಗಮದಲ್ಲಿ ಒಟ್ಟು 36 ಹುದ್ದೆಗಳಿಗೆ ರಾಜ್ಯದ ನಾಲ್ಕು (ಬೆಂಗಳೂರು, ಧಾರವಾಡ, ಬಳ್ಳಾರಿ, ಕಲಬುರಗಿ) ಜಿಲ್ಲೆಗಳಲ್ಲಿ ಜುಲೈ 13, 14ರಂದು ಸ್ಪರ್ಧಾತ್ಮಕ ಪರೀಕ್ಷೆ ನಡೆಯಲಿದೆ. ಈ ಪರೀಕ್ಷೆಗಳ ಕೇಂದ್ರಗಳಲ್ಲಿ ಎಐ ವ್ಯವಸ್ಥೆ ಅಳವಡಿಸಲು ಟೆಂಡರ್ ಆಹ್ವಾನಿಸಿದ್ದೇವೆ' ಎಂದರು.

5ನೇ ಪುಟ ನೋಡಿ

ಒಬ್ಬ ಅಭ್ಯರ್ಥಿ; ಎರಡು ಹಾಲ್ ಟಿಕೆಟ್

'ಹೇಗಾದರೂ ಮಾಡಿ ಹುದ್ದೆ ಗಿಟ್ಟಿಸಿಕೊಳ್ಳಬೇಕೆಂದು ನಾನಾ ಅಡ್ಡದಾರಿಗಳನ್ನು ಅಭ್ಯರ್ಥಿಗಳು ಹುಡುಕುತ್ತಿರುವುದು ಗಮನಕ್ಕೆ ಬಂದಿದೆ. ಒಬ್ಬ ಅಭ್ಯರ್ಥಿ ಎರಡು ಅರ್ಜಿಗಳನ್ನು (ಒಂದರಲ್ಲಿ ತನ್ನ ಹೆಸರಿನಲ್ಲಿ ಸಣ್ಣ ಬದಲಾವಣೆ ಮಾಡಿಕೊಂಡು) ಸಲ್ಲಿಸಿ, ಎರಡು ಹಾಲ್ ಟಿಕೆಟ್ ಪಡೆದುಕೊಂಡು ಅಸಲಿ ವ್ಯಕ್ತಿ ಒಂದು ಕೇಂದ್ರದಲ್ಲಿ, ನಕಲಿ ವ್ಯಕ್ತಿ (ಪ್ರತಿಭಾವಂತ) ಇನ್ನೊಂದು ಕೇಂದ್ರದಲ್ಲಿ ಪರೀಕ್ಷೆ ಬರೆದಿರುವುದು ಗೊತ್ತಾಗಿದೆ. ಪ್ರತಿಭಾವಂತ ಬರೆದ ಪರೀಕ್ಷೆಯ ಮೂಲಕ ಅಸಲಿ ಅಭ್ಯರ್ಥಿ ಆಯ್ಕೆಗೆ ಯತ್ನಿಸಿರುವುದನ್ನು ಪತ್ತೆ ಹಚ್ಚಲಾಗಿದೆ' ಎಂದು ಪ್ರಸನ್ನ ತಿಳಿಸಿದರು.

ಈ ರೀತಿಯ ಅಕ್ರಮ ತಡೆಯಲು ಅಭ್ಯರ್ಥಿಗಳ ಭಾವಚಿತ್ರವನ್ನು ಏಜೆನ್ಸಿಗಳಿಗೆ ನೀಡಿ, ಪರೀಕ್ಷಾ ಕೇಂದ್ರಕ್ಕೆ ಬರುವಾಗಲೇ ಅಸಲಿ ವ್ಯಕ್ತಿಯನ್ನು ಪತ್ತೆ ಮಾಡಲು ಭಾವಚಿತ್ರದ ಜೊತೆ 'ಹೊಂದಾಣಿಕೆ' ಮಾಡಲಾಗುವುದು. ಈ ವ್ಯವಸ್ಥೆಯಲ್ಲಿ ಶೇ 85ರಷ್ಟು ಹೊಂದಾಣಿಕೆಯಾಗುತ್ತಿದೆ. ಅನುಮಾನ ಬಂದ ಶೇ 15ರಷ್ಟು ಅಭ್ಯರ್ಥಿಗಳ ಆಧಾರ ಕಾರ್ಡ್ ಸೇರಿದಂತೆ ಇತರ ದಾಖಲೆಗಳನ್ನು ಪರಿಶೀಲಿಸಲು ಪರೀಕ್ಷಾ ಕೇಂದ್ರಗಳ ಮೇಲ್ವಿಚಾರಕರಿಗೆ ಸೂಚನೆ ನೀಡಲಾಗುವುದು' ಎಂದರು.

ಕೆಇಎಯಿಂದ ನೇಮಕಾತಿ

	ಯಾವ ಹುದ್ದೆ	ಎಷ್ಟು ಸ್ಥಾನ	ಎಷ್ಟು ಅರ್ಜಿ
ಕಂದಾಯ ಇಲಾಖೆ	ಗ್ರಾಮ ಆಡಳಿತ ಅಧಿಕಾರಿ	1,000	6 ಲಕ್ಷ
ಗೃಹ ಇಲಾಖೆ	ಪೊಲೀಸ್ ಸಬ್ ಇನ್‌ಸ್ಪೆಕ್ಟರ್	402	45 ಸಾವಿರ
ಬಿಎಂಟಿಸಿ	ನಿರ್ವಾಹಕ (ದರ್ಜೆ–3) ಮೇಲ್ವಿಚಾರಕೇತರ	2,500	28,422
ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ	ಸಹಾಯಕ ಎಂಜಿನಿಯರ್ (ಸಿವಿಲ್)	50	19,025
ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ	ಪ್ರಥಮ ದರ್ಜೆ ಲೆಕ್ಕ ಸಹಾಯಕರು	14	8,212

ಅಭ್ಯರ್ಥಿಗಳ ಮೇಲೆ ನಿಗಾಕ್ಕೆ 'ತ್ರಿ'ಸೂತ್ರ

- ಎಲ್ಲ ಪರೀಕ್ಷಾ ಕೇಂದ್ರಗಳಲ್ಲಿ ವೆಬ್ ಕಾಸ್ಟಿಂಗ್. ಆಯಾ ಜಿಲ್ಲಾಧಿಕಾರಿ ಕಚೇರಿ ಮತ್ತು ಕೆಇಎ ಕೇಂದ್ರ ಕಚೇರಿಯಲ್ಲಿ ಸಿ.ಸಿ.ಟಿವಿ ಕ್ಯಾಮೆರಾ ಅಳವಡಿಸಿ ನೇರ ನಿಗಾ
- ಅಭ್ಯರ್ಥಿಗಳ ಭಾವಚಿತ್ರವನ್ನು ಏಜೆನ್ಸಿಗಳಿಗೆ ಮೊದಲೇ ಕೊಟ್ಟು, ಪರೀಕ್ಷೆ ಬರೆಯಲು ಬಂದಾಗ 'ಹೊಂದಾಣಿಕೆ' ಆಗುತ್ತಿದೆಯೇ ಎಂದು ಪರಿಶೀಲನೆ. ಪರೀಕ್ಷಾ ಕೇಂದ್ರಗಳಲ್ಲಿ ಅಭ್ಯರ್ಥಿಗಳ ಹಸ್ತ ಮತ್ತು ಬೆರಳಚ್ಚು ಸಂಗ್ರಹ.
- ದೇಹದ ಯಾವುದೇ ಭಾಗದಲ್ಲಿ ಬ್ಲೂಟೂತ್‌ನಂತಹ ಸೂಕ್ಷ್ಮ ಎಲೆಕ್ಟ್ರಾನಿಕ್ ಉಪಕರಣಗಳಿದ್ದರೂ ಶೋಧಿಸುವ ಲೋಹ ಶೋಧಕ (ಫ್ರಿಸ್ಕಿಂಗ್) ಪರೀಕ್ಷಾ ಕೇಂದ್ರದಲ್ಲಿ ಅಳವಡಿಕೆ



ಭವಿಷ್ಯದ ದಿನಗಳಲ್ಲಿ ಸಿಇಟಿ ಮತ್ತು ವಿವಿಧ ಇಲಾಖೆಗಳ ಖಾಲಿ ಹುದ್ದೆಗಳಿಗೆ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅಕ್ರಮ ತಡೆಯಲು ಎಐ ತಂತ್ರಜ್ಞಾನ ಅಳವಡಿಸಲು ಅನುಮತಿ ನೀಡುವಂತೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ

ಎಚ್. ಪ್ರಸನ್ನ
ಕಾರ್ಯನಿರ್ವಾಹಕ ನಿರ್ದೇಶಕ, ಕೆಇಎ

14 ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ಹೆಚ್ಚಳ

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಂಗಾರು ಬಿತ್ತನೆ ಹಂಗಾಮಿಗೆ ಸಂಬಂಧಿಸಿದಂತೆ 14 ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಹೆಚ್ಚಳಕ್ಕೆ ಅನುಮೋದನೆ ನೀಡುವ ಮೂಲಕ ಕೇಂದ್ರ ಸಚಿವ ಸಂಪುಟ ಬುಧವಾರ ಮಹತ್ವದ ನಿರ್ಧಾರ ಕೈಗೊಂಡಿದೆ.

ಹರಿಯಾಣ, ಮಹಾರಾಷ್ಟ್ರ ಮತ್ತು ಜಾರ್ಖಂಡ್ ರಾಜ್ಯಗಳ ವಿಧಾನಸಭೆಗಳ ಚುನಾವಣೆ ಸಮೀಪಿಸುತ್ತಿರುವ ಸಂದರ್ಭದಲ್ಲಿ, ಕನಿಷ್ಠ ಬೆಂಬಲ ಬೆಲೆಗೆ ಅನುಮೋದನೆ ನೀಡುವ ಕೇಂದ್ರದ ನಿರ್ಧಾರಕ್ಕೆ ಮಹತ್ವ ಬಂದಿದೆ. 'ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ ಎಂಎಸ್‌ಪಿಗೆ ಅನುಮೋದನೆ ನೀಡಲಾಗಿದೆ' ಎಂದು ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ಅವರು ಸಂಪುಟ ಸಭೆ ಬಳಿಕ ತಿಳಿಸಿದ್ದಾರೆ.

10ನೇ ಪುಟ ನೋಡಿ

ಉಪ ಚುನಾವಣೆಯಲ್ಲಿ ಸ್ಪರ್ಧೆ: ಡಿಕೆಶಿ ಪರೋಕ್ಷ ಇಂಗಿತ

'ಚನ್ನಪಟ್ಟಣದಿಂದ ಹೊಸ ಅಧ್ಯಾಯ'

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): 'ಚನ್ನಪಟ್ಟಣ ಕ್ಷೇತ್ರದ ಮಹಾಜನತೆಯ ಋಣ ತೀರಿಸುವುದಕ್ಕಾಗಿ ಇಲ್ಲಿಂದ ನನ್ನ ಹೊಸ ರಾಜಕೀಯ ಅಧ್ಯಾಯ ಶುರು ಮಾಡಲು ಬಂದಿದ್ದೇನೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

ತಾಲ್ಲೂಕಿನ ಕೆಂಗಲ್‌ನಲ್ಲಿರುವ ಆಂಜನೇಯ ದೇವಸ್ಥಾನಕ್ಕೆ ಬುಧವಾರ ಭೇಟಿ ನೀಡಿ ಮಾತನಾಡಿದ ಅವರು, 'ಆಂಜನೇಯ ಸಮಾಜಸೇವೆಯ ಪ್ರತೀಕ. ಅಂತಹ ಆಂಜನೇಯನ ಸನ್ನಿಧಿಯಿಂದ ಹೊಸ ಅಧ್ಯಾಯ ಶುರು ಮಾಡಲು ಹೆಜ್ಜೆ ಇಟ್ಟಿದ್ದೇನೆ' ಎಂದರು.

7ನೇ ಪುಟ ನೋಡಿ

'ತಿದ್ದಿಕೊಳ್ಳಪ್ಪ ಎಂಬ ತೀರ್ಪು ಕೊಟ್ಟಿದ್ದೀರಿ'

'ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಲ್ಲಿ ನೀವು ಕೊಟ್ಟಿರುವ ತೀರ್ಪನ್ನು ಸ್ವಾಗತಿಸುತ್ತೇನೆ. ನನ್ನ ತಮ್ಮನಿಗಾದ ಸೋಲಿಗೆ ಯಾರನ್ನೂ ದೂರಲಾರೆ. ನನ್ನಲ್ಲೇ ಏನೋ ತಪ್ಪಿದೆ ಎಂದು ಅರಿತಿದ್ದೇನೆ. ನನಗೆ ಬುದ್ಧಿ ಹೇಳಲು ಹಾಗೂ ತಪ್ಪು ತಿದ್ದಿಕೊಳ್ಳಲು ತೀರ್ಪು ಕೊಟ್ಟಿದ್ದೀರಿ ಎಂದು ಭಾವಿಸಿದ್ದೇನೆ. ಇದರಿಂದ ನಾನು ಹೆದರಿ ಧೈರ್ಯ ಕಳೆದುಕೊಳ್ಳುವವನಲ್ಲ. ಬದಲಿಗೆ ಹೋರಾಟ ಮಾಡುವವನು. ತಪ್ಪು ತಿದ್ದಿಕೊಂಡು ನೀವು ಕೊಟ್ಟಿರುವ ಈ ಅಧಿಕಾರದ ಶಕ್ತಿಯಿಂದ ಮತ್ತಷ್ಟು ಕೆಲಸ ಮಾಡುವೆ. ಇಲ್ಲಿ ಗೆದ್ದಿರುವ ಬಿಜೆಪಿ ಅಭ್ಯರ್ಥಿ ನನ್ನ ಸಹೋದರ ಸುರೇಶ್‌ಗಿಂತ ಚೆನ್ನಾಗಿ ಸೇವೆ ಮಾಡಲಿ. ಅದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ' ಎಂದು ಶಿವಕುಮಾರ್ ನುಡಿದರು.




ಚನ್ನಪಟ್ಟಣ ತಾಲ್ಲೂಕಿನ ಕೆಂಗಲ್ ಆಂಜನೇಯ ದೇವಸ್ಥಾನಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬುಧವಾರ ಭೇಟಿ ನೀಡಿ ಪೂಜೆ ಸಲ್ಲಿಸಿದರು

ಅಧಿಕ ತಾಪಮಾನ; 900 ಜನರ ಸಾವು

ರಿಯಾದ್/ಮೀನಾ(ರಾಯಿಟರ್ಸ್): ಈ ಸಲದ ಹಜ್ ವಾರ್ಷಿಕ ಯಾತ್ರೆ ಸಂದರ್ಭದಲ್ಲಿ ಅಧಿಕ ತಾಪಮಾನದಿಂದ 900ಕ್ಕೂ ಅಧಿಕ ಜನರು ಮೃತಪಟ್ಟಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿವೆ. ಸೋಮವಾರ ಮೆಕ್ಕಾದಲ್ಲಿ 51.8 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿತ್ತು. 10

ಚಿನಕುರುಳಿ

ಪ್ರಕಾಶ್ ಶೆಟ್ಟಿ



ದುಬಾರಿ ಮದ್ಯ ಜುಲೈ 1ರಿಂದ ಅಗ್ಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ದುಬಾರಿ ಮದ್ಯದ ಮೇಲಿನ ಹೆಚ್ಚುವರಿ ಅಬಕಾರಿ ತೆರಿಗೆಯನ್ನು ಸರ್ಕಾರ ಇಳಿಕೆ ಮಾಡಲಿದ್ದು, ಜುಲೈ 1ರಿಂದ ಭಾರಿ ಬೆಲೆಯ ಬ್ರ್ಯಾಂಡ್‌ಗಳ ಮದ್ಯದ ದರ ಅಗ್ಗವಾಗಲಿದೆ.

ನೆರೆಯ ರಾಜ್ಯಗಳ ಮದ್ಯದ ದರಗಳಿಗೆ ಸಮೀಪಿಸುವಂತೆ ದರ ಪರಿಷ್ಕರಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಫೆಬ್ರುವರಿಯಲ್ಲಿ ಮಂಡಿಸಿದ್ದ ಬಜೆಟ್‌ನಲ್ಲಿ ಪ್ರಕಟಿಸಿದ್ದರು. ಈ ಘೋಷಣೆಯು ಈಗ ಜಾರಿಯಾಗಲಿದೆ.

ರಾಜ್ಯ ಸರ್ಕಾರವು ವರಮಾನ ಸಂಗ್ರಹ ಹೆಚ್ಚಿಸಿಕೊಳ್ಳುವುದಕ್ಕಾಗಿ ಸತತವಾಗಿ ಮದ್ಯದ ಮೇಲಿನ ಹೆಚ್ಚುವರಿ ಅಬಕಾರಿ ತೆರಿಗೆ (ಎಇಡಿ) ಹೆಚ್ಚಿಸುತ್ತಾ ಬಂದಿತ್ತು. 2023ರ ಜುಲೈನಲ್ಲಿ ಭಾರತೀಯ ಉತ್ಪಾದಿತ ಮದ್ಯದ ಮೇಲಿನ ಎಇಡಿ ಹೆಚ್ಚಿಸಿದ್ದರೆ, 2024ರ ಜನವರಿಯಲ್ಲಿ ಬಿಯರ್ ಮೇಲಿನ ಎಇಡಿ ಹೆಚ್ಚಿಸಲಾಗಿತ್ತು. ಇದೇ ಮೊದಲ ಬಾರಿಗೆ ಎಇಡಿ ಕಡಿಮೆ ಮಾಡುವ ನಿರ್ಧಾರವನ್ನು ಕೈಗೊಂಡಿದೆ.

5ನೇ ಪುಟ ನೋಡಿ

ಯಾವುದು ಅಗ್ಗ
ದುಬಾರಿ ಬೆಲೆಯ ಬ್ರಾಂದಿ, ವಿಸ್ಕಿ, ಜಿನ್, ರಮ್

ಯಥಾಸ್ಥಿತಿ
ಬಿಯರ್, ವೈನ್

ಮದ್ಯ ಮಾರಾಟ ಹೆಚ್ಚಳ ನಿರೀಕ್ಷೆ

ದರ ಇಳಿಕೆ ಕಾರಣದಿಂದ ರಾಜ್ಯದಲ್ಲಿ ಮದ್ಯ ಮಾರಾಟದಲ್ಲಿ ಗಣನೀಯ ಪ್ರಮಾಣದ ಹೆಚ್ಚಳ ಆಗಬಹುದು. ಇದರಿಂದ ಈಗ ಸಂಗ್ರಹ ವಾಗುವುದಕ್ಕಿಂತಲೂ ಹೆಚ್ಚು ಅಬಕಾರಿ ತೆರಿಗೆ ಬೊಕ್ಕಸಕ್ಕೆ ಬರಬಹುದು ಎಂಬ ನಿರೀಕ್ಷೆ ಅಬಕಾರಿ ಇಲಾಖೆ ಅಧಿಕಾರಿಗಳಲ್ಲಿದೆ.

ರೈತ ಸ್ನೇಹಿ ಯೋಜನೆ ಅನುಷ್ಠಾನಕ್ಕೆ ಮುಂದಾದ ಕೃಷಿ ಇಲಾಖೆ

ಬಿತ್ತನೆ ಬೀಜ ತರಲಿದ್ದಾನೆ ಅಂಚೆಯಣ್ಣ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಹಣ ಕೊಟ್ಟರೂ ಬೇಕಾದ ತಳಿಯ, ಉತ್ತಮ ಗುಣಮಟ್ಟದ ಬಿತ್ತನೆ ಬೀಜ ಸಿಗಲಿಲ್ಲವೆಂದು ರೈತರು ಇನ್ನು ಮುಂದೆ ಪರಿತಪಿಸುವ ಅಗತ್ಯವಿಲ್ಲ. ಬೇಡಿಕೆಯಷ್ಟು ಬಿತ್ತನೆ ಬೀಜಗಳನ್ನು ಆಯಾ ಊರಿನ ಅಂಚೆ ಕಚೇರಿ ಸಿಬ್ಬಂದಿಯೇ ಮನೆ ಬಾಗಿಲಿಗೆ ತಲುಪಿಸಲಿದ್ದಾರೆ.

ದೇಶದಲ್ಲೇ ಮೊದಲ ಬಾರಿಗೆ ಇಂತಹ ರೈತ ಸ್ನೇಹಿ ಕಾರ್ಯಕ್ರಮದ ಅನುಷ್ಠಾನಕ್ಕೆ ಕೃಷಿ ಇಲಾಖೆ ಸಿದ್ಧತೆ ಮಾಡಿಕೊಂಡಿದೆ. ಯೋಜನೆಯ ಅನುಷ್ಠಾನಕ್ಕೆ ಕರ್ನಾಟಕ ರಾಜ್ಯ ಬೀಜ ನಿಗಮ ಹಾಗೂ ಅಂಚೆ ಇಲಾಖೆ ಮಧ್ಯೆ ಒಪ್ಪಂದವಾಗಿದೆ. ಅತ್ಯುತ್ತಮ ತಳಿಯ ಗುಣಮಟ್ಟದ ಬಿತ್ತನೆ ಬೀಜಗಳನ್ನು ರೈತರು ಸಲ್ಲಿಸಿದ ಬೇಡಿಕೆಗೆ ಅನುಗುಣವಾಗಿ ಜುಲೈನಿಂದಲೇ ಮನೆ ಬಾಗಿಲಿಗೆ ತಲುಪಿಸಲಾಗುತ್ತದೆ. ರೈತರು ಹಾಗೂ ಅಂಚೆ ಇಲಾಖೆ ಮಧ್ಯೆ ಪೇಮೆಂಟ್ ಬ್ಯಾಂಕ್ ಆಗಿ ಕೆನರಾ ಬ್ಯಾಂಕ್ ಕಾರ್ಯನಿರ್ವಹಿಲಿದೆ.

ಪ್ರತಿವರ್ಷ ಮುಂಗಾರು ಹಾಗೂ ಹಿಂಗಾರು ಬಿತ್ತನೆಗಾಗಿ ರೈತರು ಆಯಾ ರೈತ ಸಂಪರ್ಕ ಕೇಂದ್ರಗಳು, ಸಹಕಾರ ಸಂಘಗಳು, ಸಮೀಪದ ಪರವಾನಗಿ ಪಡೆದ ಮಾರಾಟಗಾರರ ಮೂಲಕ ಅಗತ್ಯ ಬಿತ್ತನೆ ಬೀಜಗಳನ್ನು ಖರೀದಿ ಮಾಡುತ್ತಾರೆ.

10ನೇ ಪುಟ ನೋಡಿ

ದುಬಾರಿ ಬೆಲೆಯ ಕಾರಣಕ್ಕೇ ರೈತರು ಅನಧಿಕೃತ ಮಾರಾಟಗಾರ ಮೊರೆಹೋಗುತ್ತಾರೆ. ಮೊದಲು ಬೆಲೆ ಇಳಿಕೆ ಮಾಡಬೇಕು
ಎಚ್.ಆರ್. ಬಸವರಾಜಪ್ಪ
ಅಧ್ಯಕ್ಷ, ಕರ್ನಾಟಕ ರಾಜ್ಯ ರೈತ ಸಂಘ

ಅಂಚೆ ಇಲಾಖೆ ಮೂಲಕ ಬಿತ್ತನೆ ಬೀಜ ಪೂರೈಸಲು ಸಿದ್ಧತೆ ನಡೆದಿದೆ. ಪ್ರಕ್ರಿಯೆ ಪೂರ್ಣಗೊಂಡ ತಕ್ಷಣ ಸಂಪೂರ್ಣ ಮಾಹಿತಿ ನೀಡಲಾಗುವುದು
ವಿ. ಅನ್ಬುಕುಮಾರ್
ಪ್ರಧಾನ ಕಾರ್ಯದರ್ಶಿ, ಕೃಷಿ ಇಲಾಖೆ

ಬೆಳೆಗಳು	ಬಿತ್ತನೆ ಬೀಜದ ಬೇಡಿಕೆ (ಕ್ವಿಂಟಲ್‌ಗಳಲ್ಲಿ)
ಭತ್ತ	75,000
ಹೈಬ್ರಿಡ್ ಭತ್ತ	500
ರಾಗಿ	25,500
ಸಜ್ಜೆ	4,300
ಜೋಳ	1,350
ಮೇವಿನ ಧಾನ್ಯಗಳು	300
ಮೆಕ್ಕೆಜೋಳ	1,00,400
ತೊಗರಿ	27,000
ಹೆಸರು	8,000
ಉದ್ದು	3,000
ಅಲಸಂದೆ	3,000
ಶೇಂಗಾ	97,000
ಸೂರ್ಯಕಾಂತಿ	7,000
ಸೋಯಾ ಅವರೆ	2,00,000
ಒಟ್ಟು	5,52,350

ರೈತರು ಹೇಗೆ ಬೇಡಿಕೆ ಸಲ್ಲಿಸಬೇಕು?

ಯಲಹಂಕದಲ್ಲಿರುವ ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ (ಕೆಎಸ್‌ಆರ್‌ಎಸ್‌ಎಸಿ) ಸಿದ್ಧಪಡಿಸಿರುವ ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಬೇಕು. (ಆ್ಯಪ್ ಹೆಸರು ಇನ್ನು ಒಂದೆರಡು ದಿನಗಳಲ್ಲಿ ಅಂತಿಮಗೊಳ್ಳಲಿದೆ) ಮೊಬೈಲ್ ಫೋನ್ ಅಥವಾ ಆನ್‌ಲೈನ್‌ನಲ್ಲಿ ಬೇಡಿಕೆ ಸಲ್ಲಿಸಬಹುದು. ಜಿಲ್ಲೆ, ತಾಲ್ಲೂಕು, ಹೋಬಳಿ, ಗ್ರಾಮ ಪಂಚಾಯಿತಿ ಹಾಗೂ ಗ್ರಾಮ, ರೈತರ ಹೆಸರು, ಮನೆಯ ವಿಳಾಸ ನಮೂದಿಸಿದ ನಂತರ ಅಗತ್ಯವಿರುವ ಬಿತ್ತನೆ ಬೀಜ, ಎಷ್ಟು ಪ್ರಮಾಣ ಎಂದು ನಮೂದಿಸಬೇಕು.

10ನೇ ಪುಟ ನೋಡಿ

ಅತಿಥಿ ಉಪನ್ಯಾಸಕರ ಹುದ್ದೆಗೆ ಅರ್ಜಿ ಆಹ್ವಾನ

ಬೆಂಗಳೂರು: ನಗರದ ಕೆ.ಆರ್. ವೃತ್ತದಲ್ಲಿರುವ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯದಲ್ಲಿ ತಾಂತ್ರಿಕೇತರ ವಿಷಯಗಳನ್ನು ಬೋಧಿಸಲು ಅತಿಥಿ ಉಪನ್ಯಾಸಕರ ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿದೆ.

ಎಐಸಿಟಿಇ/ಯುಜಿಸಿ ನಿಯಮಗಳ ಅನುಸಾರ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ಅರ್ಜಿಗಳನ್ನು ಹಾಗೂ ಸಂಬಂಧಿತ ಮಾಹಿತಿಗಳನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ www.uvce.ac.in ನಲ್ಲಿ ಪಡೆಯಬಹುದು ಎಂದು ಕುಲಸಚಿವರು ತಿಳಿಸಿದ್ದಾರೆ.

ನರ್ಸ್ ಕೊಲೆ ಪ್ರಕರಣ: ಮತ್ತೆ ನಾಲ್ವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ತಿ ವಿಚಾರಕ್ಕೆ ಹೋಟೆಲ್‌ನ ಸ್ಟಾಫ್ ನರ್ಸ್ ಕೊಲೆ ಮಾಡಿದ್ದ ಪ್ರಕರಣದಲ್ಲಿ ಒಂದೇ ಕುಟುಂಬದ ನಾಲ್ವರು ಆರೋಪಿಗಳನ್ನು ಹೈಗ್ರೌಂಡ್ಸ್ ಠಾಣೆ ಪೊಲೀಸರು ಬಂಧಿಸಿದ್ದಾರೆ. ಪ್ರಕರಣದಲ್ಲಿ ಬಂಧಿತರ ಸಂಖ್ಯೆ 6ಕ್ಕೆ ಏರಿಕೆಯಾಗಿದೆ.

ಚಾಮರಾಜಪೇಟೆ ನಿವಾಸಿ ಸೋಮಿನಿ ಸತ್ಯಭಾಮಾ(46) ಅವರನ್ನು ಕೊಲೆ ಮಾಡಲಾಗಿತ್ತು. ಪ್ರಕರಣ ಸಂಬಂಧ ಜೂನ್ 12ರಂದು ಕೊಲೆಯಾದ ಮಹಿಳೆಯ ಅಣ್ಣನ ಮಗ ಚಾಮರಾಜಪೇಟೆ ನಿವಾಸಿಗಳಾದ ಸಾಗರ್(25) ಮತ್ತು ದೂರದ ಸಂಬಂಧಿ ಆಕಾಶ್(26) ಎಂಬುವರನ್ನು ಬಂಧಿಸಲಾಗಿತ್ತು. ಕೃತ್ಯಕ್ಕೆ ಸಂಚು ರೂಪಿಸಿದ್ದ ಆರೋಪದಲ್ಲಿ ಸಾಗರ್, ಶಿವ ಶಂಕರ್(50), ಗಾಯಿತ್ರಿದೇವಿ(45), ದಿಲೀಪ್(24) ಹಾಗೂ ಪೂಜಾ(22) ಎಂಬುವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಸೋಮಿನಿ ಸತ್ಯಭಾಮ ಅವರು ಜೂನ್ 11ರಂದು ರಾತ್ರಿ ಕೆಲಸ ಮುಗಿಸಿ ಮನೆಗೆ ಬರುತ್ತಿದ್ದರು. ಅಲ್ಲಿಗೆ ಬಂದಿದ್ದ ಸಾಗರ್, ಆಕಾಶ್ ಮಾರಕಾಸ್ತ್ರಗಳಿಂದ ದಾಳಿ ನಡೆಸಿ ಕೊಲೆ ಮಾಡಿದ್ದರು.

ಇದೇ 30ಕ್ಕೆ ಶಿಕ್ಷಕರ ಅರ್ಹತಾ ಪರೀಕ್ಷೆ

ಬೆಂಗಳೂರು: 'ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆ (ಟಿಇಟಿ)' ಜೂನ್ 30ರಂದು ನಡೆಯಲಿದ್ದು, ನಿಗದಿತ ಶುಲ್ಕ ಪಾವತಿಸಿ, ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು 20ರಿಂದ ಪ್ರವೇಶ ಪತ್ರ ಪಡೆಯಬಹುದು.

ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ವೆಬ್‌ಸೈಟ್ www.schooleducation.kar.nic.in ನಲ್ಲಿ ಯೂಸರ್ ಐಡಿ, ಪಾಸ್‌ವರ್ಡ್ ಬಳಸಿ ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಳ್ಳಬಹುದು. ಪ್ರಕಟಿಸಿರುವ ಸೂಚನೆಗಳನ್ನು ಪರೀಕ್ಷೆಯ ವೇಳೆ ಪಾಲಿಸಬೇಕು ಎಂದು ಕೇಂದ್ರೀಕೃತ ದಾಖಲಾತಿ ಘಟಕ ಸೂಚಿಸಿದೆ.

ಕನಕಪುರ ಯೋಜನಾ ಪ್ರಾಧಿಕಾರ

ಖಾತಾ ನಂ. 469/ಸಿ.ಎ./ ಸಹಕಾರಿ ವಸತಿ ಬಡಾವಣೆ, ಅಗ್ರಹಾರ ನ್ಯೂ ಕಾಲೋನಿ, ತುಂಗಣಿ ಅಂಚೆ,
ಕನಕಪುರ ತಾ॥, ರಾಮನಗರ ಜಿಲ್ಲೆ. ದೂ. : 080–29762005, 29762006, ಇ–ಮೇಲ್ : kkpaplan@gmail.com

ಸಂಖ್ಯೆ : ಕ.ಯೋ.ಪ್ರಾ./69(2)ಭೂ.ಉ./03/2024–25/482 ದಿನಾಂಕ : 15–06–2024

ಸಾರ್ವಜನಿಕ ಪ್ರಕಟಣೆ

ಕನಕಪುರ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಿರುವ ಮಹಾಯೋಜನೆಗೆ ಸರ್ಕಾರದ ಆದೇಶ ದಿನಾಂಕ : 07–08–2015 ರಂದು ಅನುಮೋದನೆ ನೀಡಲಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿರುತ್ತದೆ. ಈ ಕೆಳಕಂಡ ಅರ್ಜಿದಾರರು ಮಹಾಯೋಜನೆಯಲ್ಲಿ ನಿಗಧಿಪಡಿಸಿರುವ ಭೂ ಉಪಯೋಗಗಳನ್ನು ಮರುನಿಗಧಿಪಡಿಸಲು ಕೆಟಿಸಿಪಿ ಕಾಯ್ದೆ 1961ರ ಕಲಂ 69 ರಡಿಯಲ್ಲಿ ಕೋರಿರುತ್ತಾರೆ. ಪರಿಶೀಲಿಸಲಾಗಿ, ಸದರಿ ಸರ್ವೆ ನಂಬರ್‌ಗಳನ್ನು ಕೋಷ್ಟಕದಲ್ಲಿ ವಿವರಿಸಿರುವಂತೆ ಭೂ ಉಪಯೋಗಗಳನ್ನು ಮಹಾಯೋಜನೆಯಲ್ಲಿ ನಿಗಧಿಪಡಿಸಲಾಗಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (2) ರಂತೆ ಭೂ ಉಪಯೋಗ ರದ್ದಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (3) ರನ್ವಯ ಭೂ ಉಪಯೋಗ ಮರುನಿಗಧಿಪಡಿಸಲು ಅರ್ಜಿದಾರರು ಕೋರಿರುವಂತೆ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(4) ರ ಅಡಿಯಲ್ಲಿ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಮರುನಿಗಧಿಪಡಿಸಲು ಯಾರಿಂದಲಾದರೂ ಆಕ್ಷೇಪಣೆ/ಸಲಹೆಗಳಿದ್ದರೆ, **ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಕನಕಪುರ ಯೋಜನಾ ಪ್ರಾಧಿಕಾರ, ಕನಕಪುರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.**

–: ಕೋಷ್ಟಕ :–

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ. ಡಿ. ಕಾಂತ ಬಿನ್ ದಾಸಶೆಟ್ಟಿ	ಕನಕಪುರ	ಕಸಬಾ	ಶಿವನಹಳ್ಳಿ	11/5	0–35.08	ಉದ್ಯಾನವನ ಮತ್ತು ಬಯಲು ಜಾಗ	ವಸತಿ
					11/22	0–24		
					ಒಟ್ಟು	1–19.08		

ಸಹಿ/– ಜಂಟಿ ನಿರ್ದೇಶಕರು,
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ–ಕಾರ್ಯದರ್ಶಿ,
ಕನಕಪುರ ಯೋಜನಾ ಪ್ರಾಧಿಕಾರ, ಕನಕಪುರ.

ಡಿಐಪಿಆರ್/ರಾಮನಗರ/61/ಮಣಿಪಾಲ್/2024–25

ಕನಕಪುರ ಯೋಜನಾ ಪ್ರಾಧಿಕಾರ

ಖಾತಾ ನಂ. 469/ಸಿ.ಎ./ ಸಹಕಾರಿ ವಸತಿ ಬಡಾವಣೆ, ಅಗ್ರಹಾರ ನ್ಯೂ ಕಾಲೋನಿ, ತುಂಗಣಿ ಅಂಚೆ,
ಕನಕಪುರ ತಾ॥, ರಾಮನಗರ ಜಿಲ್ಲೆ. ದೂ. : 080–29762005, 29762006, ಇ–ಮೇಲ್ : kkpaplan@gmail.com

ಸಂಖ್ಯೆ : ಕ.ಯೋ.ಪ್ರಾ./69(2)ಭೂ.ಉ./18/2023–24/476 ದಿನಾಂಕ : 13–06–2024

ಸಾರ್ವಜನಿಕ ಪ್ರಕಟಣೆ

ಕನಕಪುರ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಿರುವ ಮಹಾಯೋಜನೆಗೆ ಸರ್ಕಾರದ ಆದೇಶ ದಿನಾಂಕ : 07–08–2015 ರಂದು ಅನುಮೋದನೆ ನೀಡಲಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿರುತ್ತದೆ. ಈ ಕೆಳಕಂಡ ಅರ್ಜಿದಾರರು ಮಹಾಯೋಜನೆಯಲ್ಲಿ ನಿಗಧಿಪಡಿಸಿರುವ ಭೂ ಉಪಯೋಗಗಳನ್ನು ಮರುನಿಗಧಿಪಡಿಸಲು ಕೆಟಿಸಿಪಿ ಕಾಯ್ದೆ 1961ರ ಕಲಂ 69 ರಡಿಯಲ್ಲಿ ಕೋರಿರುತ್ತಾರೆ. ಪರಿಶೀಲಿಸಲಾಗಿ, ಸದರಿ ಸರ್ವೆ ನಂಬರ್‌ಗಳನ್ನು ಕೋಷ್ಟಕದಲ್ಲಿ ವಿವರಿಸಿರುವಂತೆ ಭೂ ಉಪಯೋಗಗಳನ್ನು ಮಹಾಯೋಜನೆಯಲ್ಲಿ ನಿಗಧಿಪಡಿಸಲಾಗಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (2) ರಂತೆ ಭೂ ಉಪಯೋಗ ರದ್ದಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (3) ರನ್ವಯ ಭೂ ಉಪಯೋಗ ಮರುನಿಗಧಿಪಡಿಸಲು ಅರ್ಜಿದಾರರು ಕೋರಿರುವಂತೆ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(4) ರ ಅಡಿಯಲ್ಲಿ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಮರುನಿಗಧಿಪಡಿಸಲು ಯಾರಿಂದಲಾದರೂ ಆಕ್ಷೇಪಣೆ/ಸಲಹೆಗಳಿದ್ದರೆ, **ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಕನಕಪುರ ಯೋಜನಾ ಪ್ರಾಧಿಕಾರ, ಕನಕಪುರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.**

–: ಕೋಷ್ಟಕ :–

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ. ತಿಮ್ಮೇಗೌಡ ಮತ್ತು ಇತರರು	ಬೆಂಗಳೂರು ದಕ್ಷಿಣ	ಉತ್ತರಹಳ್ಳಿ	ಕಗ್ಗಲೀಪುರ	389	4–02	ಸಾರ್ವಜನಿಕ ಮತ್ತು ಅರೆಸಾರ್ವಜನಿಕ	ವಸತಿ
					ಒಟ್ಟು	4–02		

ಸಹಿ/– ಜಂಟಿ ನಿರ್ದೇಶಕರು,
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ–ಕಾರ್ಯದರ್ಶಿ,
ಕನಕಪುರ ಯೋಜನಾ ಪ್ರಾಧಿಕಾರ, ಕನಕಪುರ.

ಡಿಐಪಿಆರ್/ರಾಮನಗರ/65/ಮಣಿಪಾಲ್/2024–25

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು ಕನಕಪುರ ತಾಲ್ಲೂಕು, ಹಾರೋಹಳ್ಳಿ ಹೋಬಳಿ, ಕಗ್ಗಲ ಹಳ್ಳಿ ಗ್ರಾಮದಲ್ಲಿರುವ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಐಟಂ ಸಂಖ್ಯೆ 1 ರಿಂದ ಐಟಂ ಸಂಖ್ಯೆ 12ರ ವರೆಗಿನ 10 ಎಕರೆ 13 ಗುಂಟೆಗಳು ಇನ್ನು ಮುಂದೆ ಷೆಡ್ಯೂಲ್ ಪ್ರಾಪರ್ಟಿ ಎಂದು ಕರೆಯಲಿರುವ ಸಂಪೂರ್ಣ ಸ್ವತ್ತನ್ನು ಖರೀದಸಲು ಇಚ್ಛೆಸಿದ್ದಾರೆ.

ಷೆಡ್ಯೂಲ್ ಸ್ವತ್ತಿನ ಮೇಲೆ ಅಥವಾ ಸ್ವತ್ತಿನ ಯಾವುದೇ ಭಾಗದ ಮೇಲೆ ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳು ಹಕ್ಕು, ಮಾಲೀಕತ್ವ, ಹಿತಾಸಕ್ತಿ ಅಥವಾ ಪರಿಹಾರ ಪಡೆಯುವ ಮತ್ತು ಭೋಗ್ಯದ ವಿವರಗಳನ್ನು ಒಳಗೊಂಡ ಕ್ಲೈಮ್‌ಗಳನ್ನು ಹೊಂದಿದ್ದಲ್ಲಿ ಸದರಿ ಮಾಲೀಕರುಗಳ ವಿರುದ್ಧ ಆಕ್ಷೇಪಣೆಗಳಿದ್ದಲ್ಲಿ ಅಥವಾ ಸದರಿ ಮಾಲೀಕರಿಂದ ನಮ್ಮ ಕಕ್ಷಿದಾರರ ಪರವಾಗಿ ಆಗುವ ವ್ಯವಹಾರದ ಬಗ್ಗೆ ಆಕ್ಷೇಪಣೆ ಇದ್ದಲ್ಲಿ ಅಂತಹವರು ಸದರಿ ಪ್ರಕಟಣೆ ಪ್ರಕಟವಾದ ದಿನಾಂಕದಿಂದ **10 ದಿನಗಳ ಒಳಗಾಗಿ** ತಮ್ಮ ಆಕ್ಷೇಪಣೆಯನ್ನು ದಾಖಲಾತಿಗಳ ಪುರಾವೆಯೊಡನೆ ಕೆಳ ಸಹಿದಾರರಿಗೆ ತಿಳಿಸತಕ್ಕದ್ದು. ಇಲ್ಲದಿದ್ದರೆ ಷೆಡ್ಯೂಲ್ ಸ್ವತ್ತಿನ ಸಂಬಂಧ ಯಾವುದೇ ವ್ಯಕ್ತಿಯು ಯಾವುದೇ ಹಕ್ಕು, ಹಕ್ಕುಬಾಧ್ಯತೆ ಅಥವಾ ಆಸಕ್ತಿ ಹೊಂದಿರುವುದಿಲ್ಲವೆಂದು ತಿಳಿಯಲಾಗುವುದು ಮತ್ತು ಇದರಂತೆ ನಮ್ಮ ಕಕ್ಷಿದಾರರು ಈ ಸ್ವತ್ತಿನ ಮೇಲೆ ಇತರರ ಹಕ್ಕು ಇಲ್ಲವೆಂದು ಭಾವಿಸಿ ಷೆಡ್ಯೂಲ್ ಸ್ವತ್ತಿನ ಬಗ್ಗೆ ವ್ಯವಹರಿಸಲು ಮುಂದಾಗುವರು.

ಷೆಡ್ಯೂಲ್ ಆಸ್ತಿ

ಕನಕಪುರ ತಾಲ್ಲೂಕು, ಹಾರೋಹಳ್ಳಿ ಹೋಬಳಿ, ಕಗ್ಗಲ ಹಳ್ಳಿ ಗ್ರಾಮದಲ್ಲಿರುವ ಐಟಂ ಸಂಖ್ಯೆ 1 ರಿಂದ ಐಟಂ ಸಂಖ್ಯೆ 12ರ ವರೆಗಿನ 10 ಎಕರೆ 13 ಗುಂಟೆಗಳ ಸಂಪೂರ್ಣ ಜಮೀನು ಚೆಕ್ಕುಬಂದಿ ವಿವರಗಳೊಂದಿಗೆ ಕೆಳಕಂಡ ಕೋಷ್ಟಕದಲ್ಲಿ ನಮೂದಿಸಿರುವಂತೆ ಇರುತ್ತದೆ:–

ಕ್ರಮ ಸಂ.	ಸರ್ವೆ ಸಂಖ್ಯೆ	ವಾಸ್ತವಿಕ ವಿಸ್ತೀರ್ಣ		ಖರಾಬು ವಿಸ್ತೀರ್ಣ	ಚೆಕ್ಕುಬಂದಿ			
		ಎಕರೆ	ಗುಂಟೆ	ಗುಂಟೆ	ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
1	68/4 (ಈ ಮೊದಲು ಸರ್ವೆ ನಂ. 68/1ರ ಭಾಗ)	01	00	00	ಸರ್ವೆ ನಂ. 68/2	ಸರ್ವೆ ನಂ. 68/1 BWSSB ವಶ ಪಡಿಸಿಕೊಂಡದ್ದು, 69/2 & 3	ಸರ್ವೆ ನಂ. 68/1 BWSSB ವಶ ಪಡಿಸಿಕೊಂಡದ್ದು, & 72/4	ಗುಬ್ಬಾಡಿ ಹಳ್ಳಿಯ ಸರಹದ್ದು
2	68/2	01	13	05	ಸರ್ವೆ ನಂ. 68/3	ಸರ್ವೆ ನಂ. 68/4	ಸರ್ವೆ ನಂ. 72/5	ಗುಬ್ಬಾಡಿ ಹಳ್ಳಿಯ ಸರಹದ್ದು
3	68/3	04	06	08	ಸರ್ವೆ ನಂ. 67	ಸರ್ವೆ ನಂ. 68/2	ಸರ್ವೆ ನಂ. 72	ಗುಬ್ಬಾಡಿ ಹಳ್ಳಿಯ ಸರಹದ್ದು
4	68/5 (ಈ ಮೊದಲು ಸರ್ವೆ ನಂ. 68/4)	00	15	00	ಸರ್ವೆ ನಂ. 68/4	ಸರ್ವೆ ನಂ. 68/1 BWSSB ವಶ ಪಡಿಸಿಕೊಂಡದ್ದು, & ಸರ್ವೆ ನಂ. 69/2 & 69/3	ಸರ್ವೆ ನಂ. 68/4	ಸರ್ವೆ ನಂ. 68/4
5	69/1C (P)	00	13	00	ಸರ್ವೆ ನಂ. 69/2 & ಸರ್ವೆ ನಂ. 69/1C ರ ಭಾಗದ ಭೂಮಿಯನ್ನು BWSSB ವಶ ಪಡಿಸಿಕೊಂಡದ್ದು	ಸರ್ವೆ ನಂ. 69/1B	ಸರ್ವೆ ನಂ. 71	ಸರ್ವೆ ನಂ. 69/1Cರ ಭಾಗದ ಭೂಮಿಯನ್ನು BWSSB ವಶ ಪಡಿಸಿಕೊಂಡದ್ದು
6	69/2 (P)	00	3/4	00	ಸರ್ವೆ ನಂ. 69/3 & 68/4	ಸರ್ವೆ ನಂ. 69/2ರ ಭಾಗದ ಭೂಮಿ BWSSB ವಶ ಪಡಿಸಿಕೊಂಡದ್ದು	ಸರ್ವೆ ನಂ.69/1Cರ ಭಾಗದ ಭೂಮಿ BWSSB ವಶ ಪಡಿಸಿಕೊಂಡದ್ದು	ಸರ್ವೆ ನಂ. 69/3 & ಗುಬ್ಬಾಡಿ ಹಳ್ಳಿಯ ಸರಹದ್ದು
7	69/3 (ಈ ಮೊದಲು ಸರ್ವೆ ನಂ. 69/2ರ ಭಾಗ)	00	09	00	ಸರ್ವೆ ನಂ. 68/1, 68/5 & 68/4	ಸರ್ವೆ ನಂ. 69/2 & ಸರ್ವೆ ನಂ. 69/1Cರ ಭಾಗದ ಭೂಮಿಯನ್ನು BWSSB ವಶ ಪಡಿಸಿಕೊಂಡದ್ದು	ಸರ್ವೆ ನಂ. 69/2 & ಸರ್ವೆ ನಂ. 68/1 ಭಾಗದ ಭೂಮಿಯನ್ನು BWSSB ವಶ ಪಡಿಸಿಕೊಂಡದ್ದು	ಗುಬ್ಬಾಡಿ ಹಳ್ಳಿಯ ಸರಹದ್ದು
8	69/4 (ಈ ಮೊದಲು ಸರ್ವೆ ನಂ. 69/2ರ ಭಾಗ)	00	03 ¼	00	ಸರ್ವೆ ನಂ. 69/2ರ ಭಾಗದಭೂಮಿ BWSSB ವಶ ಪಡಿಸಿಕೊಂಡದ್ದು	ಸರ್ವೆ ನಂ. 69/1C	ಸರ್ವೆ ನಂ. 71	ಸರ್ವೆ ನಂ. 69/2ರ ಭಾಗದ ಭೂಮಿ BWSSB ವಶ ಪಡಿಸಿಕೊಂಡದ್ದು
9	72/3 (P)	00	30	00	ಸರ್ವೆ ನಂ. 72/4 & ಸರ್ವೆ ನಂ. 72/3ರ ಭಾಗದಭೂಮಿ BWSSB ವಶ ಪಡಿಸಿಕೊಂಡದ್ದು	ಸರ್ವೆ ನಂ. 72/2, 71/2 & 71/3	ರಸ್ತೆ	ಸರ್ವೆ ನಂ. 72/3 & ಸರ್ವೆ ನಂ. 71/3 & 68ರ ಭಾಗದ ಭೂಮಿ BWSSB ವಶ ಪಡಿಸಿಕೊಂಡದ್ದು
10	72/4 (P)	00	13	00	ಸರ್ವೆ ನಂ. 72/4ರ ಭಾಗದ ಭೂಮಿ BWSSB ವಶ ಪಡಿಸಿಕೊಂಡದ್ದು & ಸರ್ವೆ ನಂ. 72/5	ಸರ್ವೆ ನಂ. 72/3 & ಸರ್ವೆ ನಂ. 72/4ರ ಭಾಗದ ಭೂಮಿ BWSSB ವಶ ಪಡಿಸಿಕೊಂಡದ್ದು	ರಸ್ತೆ & ಸರ್ವೆ ನಂ. 72/4ರ ಭಾಗದ ಭೂಮಿ BWSSB ವಶ ಪಡಿಸಿಕೊಂಡದ್ದು	ಸರ್ವೆ ನಂ. 72/4ರ ಭಾಗದಭೂಮಿ BWSSB ವಶ ಪಡಿಸಿಕೊಂಡದ್ದು & ಸರ್ವೆ ನಂ. 68/4
11	72/5 (P)	00	36	00	ಸರ್ವೆ ನಂ. 72/6	ಸರ್ವೆ ನಂ. 72/4 & ಸರ್ವೆ ನಂ. 72/5ರ ಭಾಗದ ಭೂಮಿ BWSSB ವಶ ಪಡಿಸಿಕೊಂಡದ್ದು	ರಸ್ತೆ & ಸರ್ವೆ ನಂ. 72/5ರ ಭಾಗದ ಭೂಮಿ BWSSB ವಶ ಪಡಿಸಿಕೊಂಡದ್ದು	ಸರ್ವೆ ನಂ. 68/2 & 68/3
12	72/6	00	28	02	ರಸ್ತೆ	ಸರ್ವೆ ನಂ. 72/5	ರಸ್ತೆ	ಸರ್ವೆ ನಂ. 68/3
ಒಟ್ಟು		10	13	15				

ಸಹಿ/– (ಆರ್. ಸುನೀತಾ), ವಕೀಲರು, ಇಂಡಸ್‌ಲಾ
ನಂ. 101, 1ನೇ ಮಹಡಿ ಎಂಬೆಸ್ಸಿ ಕ್ಲಾಸಿಕ್, #11, ವಿಠ್ಠಲ್‌ಮಲ್ಯ ರಸ್ತೆ, ಬೆಂಗಳೂರು–560001 ದೂ. +91 80–40726600

ನಾರ್ಥ್ ಸೆಂಟ್ರಲ್ ರೈಲ್ವೆ

ನಂ. ಎಜಿಸಿ–ಇಎಲ್–ಸಿ–ಟಿ–ಇಪಿಸಿ–01–2023–24 ದಿನಾಂಕ: 14.06.2024

ಇ–ಟೆಂಡರ್ ಪ್ರಕಟಣೆ

ಭಾರತದ ರಾಷ್ಟ್ರಪತಿಗಳ ಪರವಾಗಿ, ಡೆ. ಚೀಫ್ ಇಲೆಕ್ಟ್ರಿಕಲ್ ಇಂಜಿನಿಯರ್ (ಕನ್ಸ್ಟ್.), ನಾರ್ಥ್ ಸೆಂಟ್ರಲ್ ರೈಲ್ವೆ, ಆಗ್ರಾ ಇವರು ಕೆಳಕಂಡ ಕಾಮಗಾರಿಗಳಿಗಾಗಿ ಆನ್‌ಲೈನ್ ಮುಖಾಂತರ ಮಾತ್ರ (ಇ–ಟೆಂಡರಿಂಗ್) "ಬಹಿರಂಗ ಟೆಂಡರ್" ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು ಮತ್ತು ಸ್ಥಳ: ಗಂಟೆಗೆ 160 ಕಿಮೀ/ಗಂಟೆಗೆ 200 ಕಿಮೀ ವೇಗ ಹೆಚ್ಚಿಸುವುದಕ್ಕೆ ಸಂಬಂಧಿಸಿದಂತೆ, ನಾರ್ಥ್ ಸೆಂಟ್ರಲ್ ರೈಲ್ವೆಯ ಮಥುರಾ–ಢೋಲ್‌ಪುರ–ಅಂತ್ರಿ–ಬಿನಾ ಸೆಕ್ಷನ್ ನಡುವೆ ಎಸ್‌ಪಿ/ಎಸ್‌ಎಸ್‌ಪಿ ಜೊತೆಗಿನ 220/2*25 ಕೆವಿ ಮತ್ತು 132/2x25 ಕೆವಿ ಟ್ರಾಕ್ಷನ್ ಸಬ್–ಸ್ಟೇಷನ್ ವಿನ್ಯಾಸ, ಪೂರೈಕೆ, ಅಳವಡಿಕೆ, ಪರೀಕ್ಷೆ ಮತ್ತು ಕಮಿಷನಿಂಗ್.

ಕಾಮಗಾರಿಯ ಅಂದಾಜು ವೆಚ್ಚ: ರೂ. 509,72,42,747.00/– **ಬಿಡ್ ಸೆಕ್ಯೂರಿಟಿ:** 100,00,000.00/–

ಪೂರ್ಣಗೊಳಿಸುವ ಅವಧಿ: ಸ್ವೀಕೃತಿ ಪತ್ರ ಹೊರಡಿಸಿದ ದಿನಾಂಕದಿಂದ ಮಳೆಗಾಲವೂ ಸೇರಿದಂತೆ 720 ದಿನಗಳು. **ಟೆಂಡರ್ ಕ್ಲೋಸಿಂಗ್ ದಿನಾಂಕ ಮತ್ತು ಸಮಯ: 05.08.2024 ರಂದು 15.30 ಗಂಟೆವರೆಗೆ. ಆಫರ್ ವ್ಯಾಲಿಡಿಟಿ:** ಟೆಂಡರ್ ಒಪನಿಂಗ್ ದಿನಾಂಕದಿಂದ 180 ದಿನಗಳು. ಆಸಕ್ತಿಯುಳ್ಳ ಟೆಂಡರ್‌ದಾರರು **05.08.2024 ರಂದು 15:30 ಗಂಟೆಯವರೆಗೆ www.ireps.gov.in** ಪೋರ್ಟಲ್ ಮೂಲಕ ಮಾತ್ರ ತಮ್ಮ ಆಫರ್‌ಗಳನ್ನು ಸಲ್ಲಿಸುವುದು. ಸಂಪೂರ್ಣ ವಿವರಗಳಿಗಾಗಿ ಮತ್ತು ಬಿಡ್ ಸಲ್ಲಿಕೆಗಾಗಿ ದಯವಿಟ್ಟು ಭಾರತೀಯ ರೈಲ್ವೆಯ **www.ireps.gov.in** ವೆಬ್‌ಸೈಟ್‌ಗೆ ಭೇಟಿ ಕೊಡಿ. 1050/24(K)

@CPRONCR @northcentralrailway North central railways www.ncr.indianrailways.gov.in

---

PUBLIC NOTICE

This is to bring to the notice of the General Public that our Clients intent to purchase the residential house property bearing **New No.57, old No.1794,** assigned with **PID No.34-56-57,** situated at 9th Cross Road, RPC Layout, Swimming Pool Road, Vijayanagar, within the jurisdiction of Bruhath Bangalore Mahanagara Palike, Ward No.133-Hampinagar, Bangalore –measuring East to West: 80 feet and North to South: 50 feet, with constructed residential building measuring 40 squares, which is morefully described in the schedule hereunder as Schedule Property from its Owner **Mr. MUKESH S MEHTA,** aged about 71 years, S/o. Late Sri. Shantilal O.Mehta, residing at No.57, 9th Cross Road, RPC Layout, Swimming Pool Road, Hampinagar, Vijayanagar, Bangalore–560 047. The owner had represented that he had lost the original allotment letter dated 06/02/1975 vide its No.A5/1794/RPC/74-75 issued by the then City Improvement Trust Board (now 'BDA'). Any person / financial institutions having any right, title, claim or interest over the below mentioned Schedule Property and also if any person possess with the above mentioned original allotment letter in their custody, may lodge their objections / claims in writing with documentary proof or if they found original document may handover the same to the undersigned, within **FIVE (05) days** from the date of this publication. In the event of no claim / objections being received within the stipulated period, our Clients will proceed further to purchase the Schedule Property from its owner, and thereafter, no claim/s will be entertained and any claims whatsoever in nature shall not bind our Clients.

SCHEDULE PROPERTY

All that piece and parcel of the residential Property **bearing New No.57, old No.1794, assigned with PID No.34-56-57, situated at 9th Cross Road, RPC Layout, Swimming Pool Road, Vijayanagar, within the jurisdiction of Bruhath Bangalore Mahanagara Palike, Ward No.133-Hampinagar, Bangalore–measuring East to West: 80 feet and North to South: 50 feet, with constructed residential building measuring 40 squares,** and bounded on: **East by: Property No.1801, West by : Road, North by : Property No.1793 & South by: Property No.1795.**

(N Shiva Kumar) Advocate / Partner, Shiva & Shiva, Advocates,
No: 11, Shiva Krupa, 2nd Floor, 19th Main,Rajajinagar 2nd Block, Bangalore -560 010, **Ph: 080-23323131**
Place: Bangalore Date : 20-06-2024

ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ

ಬೆಂಗಳೂರು ನಗರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ(ರಿ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮುಖ್ಯ ಆರೋಗ್ಯಾಧಿಕಾರಿಗಳು(ಸಾ.ಅ)ರವರ ಕಛೇರಿ, ಅನೆಕ್ಸ್ ಕಟ್ಟಡ–2,
ಬೃ.ಬೆಂ.ಮ.ಪಾಲಿಕೆ ಕೇಂದ್ರ ಕಛೇರಿ, ಎನ್.ಆರ್.ಚೌಕ, ಬೆಂಗಳೂರು – 02.

ಸಂಖ್ಯೆ:ಸಿ.ಪಿ.ಎಂ.ಓ/ಎನ್.ಯು.ಹೆಚ್.ಎಂ/ಪಿ.ಆರ್/150/23–24/2024–25 ದಿ:19.06.2024

ಪ್ರಕಟಣೆ

ರಾಷ್ಟ್ರೀಯ ಆರೋಗ್ಯ ಅಭಿಯಾನ ಯೋಜನೆಯಡಿ ಎನ್.ಎಲ್.ಇ.ಪಿ, ಎನ್.ಟಿ.ಇ.ಪಿ, ಡಿ.ಎಂ.ಹೆಚ್.ಪಿ, ಎನ್.ಯು.ಹೆಚ್.ಎಂ, ಎನ್.ಪಿ.ಸಿ.ಬಿ ಮತ್ತು ಆರ್.ಸಿ.ಹೆಚ್ ಕಾರ್ಯಕ್ರಮದಡಿಯಲ್ಲಿ ಖಾಲಿ ಇರುವ ವಿವಿಧ ವೃಂದಗಳ ಹುದ್ದೆಗಳಿಗೆ ದಿನಾಂಕ: 08.02.2024ರಂದು ಪತ್ರಿಕಾ ಪ್ರಕಟಣೆ ನೀಡಿ 01 ವರ್ಷದ ಅವಧಿಗೆ ಸಂಪೂರ್ಣ ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಿಕೊಳ್ಳಲು ದಿನಾಂಕ: 13.02.2024 ರಿಂದ 15.02.2024ರವರೆಗೆ ವಾಕ್–ಇನ್ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿರುತ್ತದೆ. ಸದರಿ ಪ್ರಕಟಣೆಯ ಅನ್ವಯ ಮೆರಿಟ್ ಕಮ್ ರೋಸ್ಟರ್ ಆಧಾರದ ಮೇಲೆ ಆಯ್ಕೆಯಾದ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೆಬ್‌ಸೈಟ್‌ನಲ್ಲಿ ಪ್ರಚುರಗೊಳಿಸಿದ್ದು, **(https://bbmp.gov.in)** ಈ ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿರುವ ಹುದ್ದೆಗಳಿಗೆ ಯಾವುದೇ ರೀತಿಯ ಆಕ್ಷೇಪಣೆಗಳಿದ್ದಲ್ಲಿ, ಈ ಪತ್ರಿಕಾ ಪ್ರಕಟಣೆ ಹೊರಡಿಸಿದ 07 ಸರ್ಕಾರಿ ಕೆಲಸ ದಿನಗಳೊಳಗೆ ನಗರ ಯೋಜನಾ ನಿರ್ವಹಣಾಧಿಕಾರಿಗಳ ಕಛೇರಿ, #304, ಅನೆಕ್ಸ್–3, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ. ಎನ್.ಆರ್.ಚೌಕ, ಬೆಂಗಳೂರು – 560 002 ಇಲ್ಲಿಗೆ ಖುದ್ದಾಗಿ ಅಥವಾ ಅಂಚೆ (ರಿಜಿಸ್ಟಾರ್ ಪೋಸ್ಟ್) ಮೂಲಕ ಅಭ್ಯರ್ಥಿಗಳು/ಸಾರ್ವಜನಿಕರು ಸಲ್ಲಿಸಬಹುದಾಗಿರುತ್ತದೆ. 07 ದಿನಗಳ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸಿದೆ.

ಸಹಿ/– ಮುಖ್ಯ ಆರೋಗ್ಯಾಧಿಕಾರಿಗಳು (ಸಾ.ಆ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಜಯ ಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ

(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಭೈರಸಂದ್ರ, ಜಯನಗರ ಪೂರ್ವ, ಬೆಂಗಳೂರು – 560 011.
ದೂ: 080–26564516,26562500, ಗ್ರಾಮ್ಸ್:SITO ಫ್ಯಾಕ್ಸ್:26565222 ಇ–ಮೇಲ್: sitodirector@gmail.com

ಸಂಖ್ಯೆ: SGITO/E-Auction/FD/21/2024-25 ದಿನಾಂಕ: 19.06.2024

ಇ–ಆಕ್ಷನ್ ಪ್ರಕಟಣೆ

ವಿಷಯ: ಸಂಜಯಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಯ ವಿವಿಧ ಬಾಬ್ತಿನ ಮೊತ್ತವನ್ನು ಒಂದು ವರ್ಷದ ಅವಧಿಗೆ ಇ–ಆಕ್ಷನ್ ಮೂಲಕ ನಿಶ್ಚಿತ ಠೇವಣಿ / Callable ನಲ್ಲಿ ತೊಡಗಿಸಲು ಇ–ಟೆಂಡರ್ ಮೂಲಕ ಬಡ್ಡಿ ದರಗಳನ್ನು ಆಹ್ವಾನಿಸುವ ಬಗ್ಗೆ.

ಸಂಜಯಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಯ ವಿವಿಧ ಬಾಬ್ತಿನ ಮೊತ್ತಗಳಿಗೆ ಒಂದು ವರ್ಷದ ಅವಧಿಗೆ ನಿಶ್ಚಿತ ಠೇವಣಿಯಲ್ಲಿ ತೊಡಗಿಸಲು ಇ–ಆಕ್ಷನ್ ಬಿಡ್ಡಿಂಗ್ ವ್ಯವಸ್ಥೆ ಮಾದರಿಯಲ್ಲಿ ಕೆಪಿಪಿಪಿ ಪೋರ್ಟಲ್, ಕರ್ನಾಟಕ ಸರ್ಕಾರ ಇದರಲ್ಲಿ ಅರ್ಹ ರಾಷ್ಟ್ರೀಕೃತ ಬ್ಯಾಂಕ್‌ಗಳ ಪ್ರಾದೇಶಿಕ / ವಲಯ. ಮುಖ್ಯ ಕಛೇರಿಗಳಿಂದ ಸ್ಪರ್ಧಾತ್ಮಕ ಬಡ್ಡಿ ದರವನ್ನು ಆಹ್ವಾನಿಸಲಾಗಿದೆ. ಮೊತ್ತಗಳ ವಿವರ ಕೆಳಕಂಡಂತಿದೆ.

1) **ರೂ.8,24,29,311.00** (ರೂಪಾಯಿ ಎಂಟು ಕೋಟಿ ಇಪ್ಪತ್ನಾಲ್ಕು ಲಕ್ಷದ ಇಪ್ಪತ್ತೊಂಭತ್ತು ಸಾವಿರದ ಮುನ್ನೂರ ಹನ್ನೊಂದು ಮಾತ್ರ) (Callable)
2) **ರೂ.5,37,56,690.00** (ರೂಪಾಯಿ ಐದು ಕೋಟಿ ಮೂವತ್ತೇಳು ಲಕ್ಷದ ಐವತ್ತಾರು ಸಾವಿರದ ಆರು ನೂರ ತೊಂಭತ್ತು ಮಾತ್ರ) (Callable)

ಸದರಿ ಇ–ಆಕ್ಷನ್ ಅನ್ನು ವಿದ್ಯುನ್ಮಾನ ಮೂಲಕವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ (https://kppp.karnataka.gov.in/) ಸಲ್ಲಿಸುವುದು. ದಾಖಲಾತಿಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **28.06.2024** ಸಂಜೆ **4:00** ರೊಳಗಾಗಿ. ಹೆಚ್ಚಿನ ವಿವರಗಳಿಗಾಗಿ ಮುಖ್ಯ ಆಡಳಿತಾಧಿಕಾರಿಗಳನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/–
ಮುಖ್ಯ ಆಡಳಿತಾಧಿಕಾರಿಗಳು,
ಸಂಜಯಗಾಂಧಿ ಟ್ರಾಮ ಮತ್ತು
ಅಸ್ಥಿ ಚಿಕಿತ್ಸಾ ಸಂಸ್ಥೆ

ಡಿ.ಐ.ಪಿ.ಆರ್/431/2024–25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರು – 5 ರವರ ಕಛೇರಿ, ಘನ ತ್ಯಾಜ್ಯ ನಿರ್ವಹಣೆ,
ಬೃಬೆಂಮಪಾ, ನರಸಿಂಹರಾಜ ಚೌಕ, ಬೆಂಗಳೂರು – 560002

ಸಂ. ಬೃಬೆಂಮಪಾ/ಕಾಅ–5/ಘತ್ಯಾನಿ/ಟೆಂಡರ್/03/2022–23/ಕರೆ–3 ದಿನಾಂಕ : 19–06–2024

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು–5, ಘನ ತ್ಯಾಜ್ಯ ನಿರ್ವಹಣೆ ವಿಭಾಗ, ಬೃಬೆಂಮಪಾ, ಬೆಂಗಳೂರು ಇವರು "ಬೃಬೆಂಮಪಾ ಮಿತಿಗಳಲ್ಲಿ ಡಿಎಫ್‌ಬಿಓಟಿ ಮಾದರಿಯ ಅಡಿಯಲ್ಲಿ SHE ಶೌಚಾಲಯಗಳ ನಿರ್ಮಾಣ" ಕ್ಕಾಗಿ ಹೆಸರಾಂತ ಸಂಸ್ಥೆ / ಏಜೆನ್ಸಿಗಳಿಂದ ಸ್ಪರ್ಧಾತ್ಮಕ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ. ಪ್ಯಾಕೇಜ್ ವಿವರಗಳು ಕೆಳಕಂಡಂತಿವೆ.

ಕ್ರ.	ಕಾಮಗಾರಿಯ ಹೆಸರು
1	ಬೃಬೆಂಮಪಾ ಮಿತಿಗಳಲ್ಲಿ ಪಿಪಿಪಿ ಮಾದರಿಯ ಅಡಿಯಲ್ಲಿ SHE ಶೌಚಾಲಯಗಳ ನಿರ್ಮಾಣ. ಪ್ಯಾಕೇಜ್–1ಬಿ. **ಶೌಚಾಲಯಗಳ ಸಂಖ್ಯೆ** : 07. **ಇಎಂಡಿ** : ರೂ. 1.20 ಲಕ್ಷಗಳು. ಪ.ಪಂಗಡ ಸಮುದಾಯಕ್ಕೆ ಮೀಸಲಾಗಿದೆ

ವೇಳಾಪಟ್ಟಿ : (1) ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ವೆಬ್‌ಸೈಟ್ **https://kppp.karnataka.gov.in** ನಿಂದ ಬಿಡ್ ದಾಖಲೆಯನ್ನು ಡೌನ್‌ಲೋಡ್ ಮಾಡಬಹುದು. (2) ಪ್ರಸ್ತಾವನೆಗಾಗಿ ಕೋರಿಕೆಯ ದಾಖಲೆಗಳನ್ನು **21–06–2024, 16.00 ಗಂಟೆಯಿಂದ** ಡೌನ್‌ಲೋಡ್ ಮಾಡಬಹುದು. (3) ವಿಚಾರಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **01–07–2024 ರಂದು 17.30 ಗಂಟೆಯವರೆಗೆ** (4) ಬಿಡ್–ಪೂರ್ವ ಸಭೆಯನ್ನು ಮುಖ್ಯ ಇಂಜಿನಿಯರ್‌ರವರ ಕಛೇರಿ, ಘನ ತ್ಯಾಜ್ಯ ನಿರ್ವಹಣೆ, 4ನೇ ಮಹಡಿ, ಅನೆಕ್ಸ್–3, ನರಸಿಂಹರಾಜ ಚೌಕ, ಬೃಬೆಂಮಪಾ, ಬೆಂಗಳೂರು–560002 ಇಲ್ಲಿ **02–07–2024 ರಂದು 15.30 ಗಂಟೆಗೆ** ನಡೆಸಲಾಗುವುದು. (5) ಬಿಡ್ ದಾಖಲೆಯನ್ನು ಸಲ್ಲಿಸಲು ಕೊನೆಯ ದಿನಾಂಕ : **23–07–2024 ರಂದು 16.00 ಗಂಟೆಯವರೆಗೆ** (6) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **24–07–2024 ರಂದು 16.30 ಗಂಟೆಯ ನಂತರ** (7) ಸಕ್ಷಮ ಪ್ರಾಧಿಕಾರದಿಂದ ತಾಂತ್ರಿಕ ಬಿಡ್‌ನ ಅನುಮೋದನೆಯ ನಂತರ ಆರ್ಥಿಕ ಬಿಡ್ ತೆರೆಯಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು – 5, ಘನ ತ್ಯಾಜ್ಯ ನಿರ್ವಹಣೆ

ನೈರುತ್ಯ ರೈಲ್ವೆ

ಟೆಂಡರ್ ಸೂಚನೆ ಸಂ.: **23/2024**
ದಿನಾಂಕ: **13.06.2024**

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಸಂಕ್ಷಿಪ್ತವಾಗಿ ವಿವರಣೆ: ಜೆನ್‌ಸೆಟ್‌ನೊಂದಿಗೆ ಪೋರ್ಟಬಲ್ ಎಲ್‌ಇಡಿ ಲೈಟ್ ಟವರ್, ಶೇಪ್‌ಶಿಫ್ಟರ್ ಎಲ್‌ಇಡಿ ಲೈಟ್ ಟವರ್ ಮಾದರಿ ಶೇಪ್‌ಶಿಫ್ಟರ್ ಎಲ್‌ಇಡಿ 180?– 360
ಟೆಂಡರ್ ಸಂಖ್ಯೆ.: L8245879 ಪ್ರಮಾಣ: 07 ಸೆಟ್‌ಗಳು

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ:
05–07–2024, 10:30 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ಸಾಮಗ್ರಿಗಳ ವ್ಯವಸ್ಥಾಪಕರು
ಬೆಂಗಳೂರು
PUB/163/AAMO/PRB/SWR/2024-25

South Western Railway-SWR SWRRLY SWRRLY

Dr.AMBEDKAR INSTITUTE OF TECHNOLOGY

BDA Outer Ring Road, Mallathahally, Bengaluru – 560 056
Tel – 080- 23211232 & Mob No -9986003865

AIT/SS/409/2024-25 Date: 19.06.2024

TENDER NOTIFICATION

Sealed quotations are invited from Reputed/Authorized firms for the following.

A) Supply Installation, Testing & Commissioning of balance work of 300KW Roof top grid connected solar power plant and other allied electrical works @ Dr.AIT Campus.

B) Providing Microsoft Edu Cloud Campus License for 200 units.

C) Printing & Supply of Stationery Items to Exam Section.

Details and specification of requirements can be downloaded from college website **www.drait.edu.in.** The sealed quotation shall be attached with a DD of **Rs.500/-** for each item and submit the sealed quotations on or before **09.07.2024 by 1.00 PM.** Quotations will be opened on the same day i.e.**09.07.2024 at 4.00 PM.**

Sd/- Principal Sd/- Secretary, PVPWT

ರೇಷ್ಮೆ ಇಲಾಖೆ, ರೇಷ್ಮೆ ಸಹಾಯಕ ನಿರ್ದೇಶಕರು, ಗೌರಿಬಿದನೂರು ವಿಭಾಗ, ಗೌರಿಬಿದನೂರು

ಇ–ಟೆಂಡರ್ ಪ್ರಕಟಣೆ

ಗೌರಿಬಿದನೂರು ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ತಾಂತ್ರಿಕ ಸೇವಾ ಕೇಂದ್ರಗಳಾದ **ಗೌರಿಬಿದನೂರು ಮತ್ತು ದಾರಿನಾಯಕನಪಾಳ್ಯ ತಾಂತ್ರಿಕ ಸೇವಾ ಕೇಂದ್ರಗಳಿಗೆ ಜುಲೈ–2024 ರಿಂದ ಜೂನ್–2025ರ ಮಾಹೆಯವರೆಗೆ** ತಲಾ ಒಬ್ಬರಂತೆ ಕಛೇರಿಗಳಿಗೆ ಕಾರ್ಯಾಧಾರಿತ ದರಗಳಲ್ಲಿ ಗಣಕಯಂತ್ರ ನಿರ್ವಾಹಕರ ಸೇವೆಯನ್ನು ಒದಗಿಸಲು ಸರ್ಕಾರ ನಿಗದಿಪಡಿಸಿರುವ ಮೊತ್ತಕ್ಕೆ ಸೇವಾ ಶುಲ್ಕ ಭರಿಸಲು ನಿಯಮಾನುಸಾರ ಇ–ಸಂಗ್ರಹಣೆ ಮೂಲಕ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿವುಳ್ಳವರು **ದಿನಾಂಕ: 27.06.2024 ಸಂಜೆ 5.00 ಘಂಟೆಯೊಳಗೆ kppp.karnataka.gov.in.**ಮೂಲಕ ಸಲ್ಲಿಸಲು ಸೂಚಿಸಿದೆ ಹೆಚ್ಚಿನ ಮಾಹಿತಿಗಾಗಿ ಕೆಳಕಂಡ ಅಧಿಕಾರಿಗಳನ್ನು ಸಂಪರ್ಕಿಸುವುದು. **ಮೊಬೈಲ್ ಸಂ:9141939172.**

ಸಹಿ/– ರೇಷ್ಮೆ ಸಹಾಯಕ ನಿರ್ದೇಶಕರು
ಗೌರಿಬಿದನೂರು ವಿಭಾಗ, ಗೌರಿಬಿದನೂರು

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:35/ಕೆಎಸ್ಎಂಸಿಎ/2024–25

ನೈರುತ್ಯ ರೈಲ್ವೆ

ಅಪ್ಲಿಕೇಶನ್ ಅಧಿಸೂಚನೆ ಸಂಖ್ಯೆ:
565/ATVM Facilitator/06/2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಒಂದು ವರ್ಷದ ಅವಧಿಗೆ ರೀಚಾರ್ಜ್ ಬೋನಸ್ ಆಧಾರದ ಮೇಲೆ ಎಟಿವಿಎಂ ಯಂತ್ರಗಳ ಮೂಲಕ ಕಾಯ್ದಿರಿಸದ / ಸಾಮಾನ್ಯ ಟಿಕೆಟ್‌ಗಳನ್ನು ವಿತರಿಸಲು ಈ ಕೆಳಗಿನ ರೈಲು ನಿಲ್ದಾಣಗಳಲ್ಲಿ ಎಟಿವಿಎಂ ಫೆಸಿಲಿಟೇಟರ್‌ಗಳನ್ನು ತೊಡಗಿಸಿಕೊಳ್ಳಲು ಬೆಂಗಳೂರು ವಿಭಾಗದ ನಿವೃತ್ತ ರೈಲ್ವೆ ಉದ್ಯೋಗಿಗಳಿಂದ ಮೊಹರು ಮಾಡಿದ ಅರ್ಜಿಗಳನ್ನು ಅರ್ಜಿಗಳನ್ನು ಆಹ್ವಾನಿಸಿದ್ದಾರೆ.

ನಿಲ್ದಾಣ	ಖಾಲಿ ಹುದ್ದೆಗಳ ಸಂಖ್ಯೆ
ಕೆಎಸ್‌ಆರ್ ಬೆಂಗಳೂರು	45
ಬೆಂಗಳೂರು ಕಂಟೋನ್ಮೆಂಟ್	6
ಯಶವಂತಪುರ	21
ತುಮಕೂರು	6
ಕೃಷ್ಣರಾಜಪುರಂ	9
ಕೆಂಗೇರಿ	9
ಮಂಡ್ಯ	6
ಚನ್ನಪಟ್ಟಣ	6
ಹೊಸೂರು	6
ಹಿಂದೂಪುರ	6
ಮಾಲೂರು	3
ರಾಮನಗರಂ	3
ಕುಮಾರಪುರಂ	3
ಎಸ್‌ಎಂವಿಟಿ ಬೆಂಗಳೂರು	6
ಬಂಗಾರಪೇಟೆ	3
ಮದ್ದೂರು	3
ಚಿಕ್ಕಬಾಣಾವರ	3
ಬೆಂಗಳೂರು ಪೂರ್ವ	3
ಧರ್ಮಾಪುರಿ	3
ವೈಟ್ ಫೀಲ್ಡ್	3
ಯಲಹಂಕ	3

ಅರ್ಜಿಯನ್ನು ಸಲ್ಲಿಸುವ ದಿನಾಂಕ ಮತ್ತು ಸಮಯ:
24–06–2024, 10:00 ಗಂಟೆಯಿಂದ 15:00 ಗಂಟೆಯವರೆಗೆ

ಮಾಹಿತಿಗಾಗಿ ಲಾಗಾನ್ ಆಗಿ:
www.swr.indianrailways.gov.in

ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು
ಬೆಂಗಳೂರು
PUB/166/AAMO/PRB/SWR/2024-25

S.W.Railways SWRRLY SWRRLY

ಕನಕಪುರ ಯೋಜನಾ ಪ್ರಾಧಿಕಾರ

ಖಾತಾ ನಂ. 469/ಸಿ.ಎ./ ಸಹಕಾರಿ ವಸತಿ ಬಡಾವಣೆ, ಅಗ್ರಹಾರ ನ್ಯೂ ಕಾಲೋನಿ, ತುಂಗಣಿ ಅಂಚೆ,
ಕನಕಪುರ ತಾ॥, ರಾಮನಗರ ಜಿಲ್ಲೆ. ದೂ. : 080–29762005, 29762006, ಇ–ಮೇಲ್ : kkpaplan@gmail.com

ಸಂಖ್ಯೆ : ಕ.ಯೋ.ಪ್ರಾ./69(2)ಭೂ.ಉ./19/2023–24/518 ದಿನಾಂಕ : 18–06–2024

ಸಾರ್ವಜನಿಕ ಪ್ರಕಟಣೆ

ಮರಳವಾಡಿ ಕೀರಣಗೆರೆಕನಕಪುರ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಿರುವ ಮಹಾಯೋಜನೆಗೆ ಸರ್ಕಾರದ ಆದೇಶ ದಿನಾಂಕ : 07–08–2015 ರಂದು ಅನುಮೋದನೆ ನೀಡಲಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿರುತ್ತದೆ. ಈ ಕೆಳಕಂಡ ಅರ್ಜಿದಾರರು ಮಹಾಯೋಜನೆಯಲ್ಲಿ ನಿಗಧಿಪಡಿಸಿರುವ ಭೂ ಉಪಯೋಗಗಳನ್ನು ಮರುನಿಗಧಿಪಡಿಸಲು ಕೆಟಿಸಿಪಿ ಕಾಯ್ದೆ 1961ರ ಕಲಂ 69 ರಡಿಯಲ್ಲಿ ಕೋರಿರುತ್ತಾರೆ. ಪರಿಶೀಲಿಸಲಾಗಿ, ಸದರಿ ಸರ್ವೆ ನಂಬರ್‌ಗಳನ್ನು ಕೋಷ್ಟಕದಲ್ಲಿ ವಿವರಿಸಿರುವಂತೆ ಭೂ ಉಪಯೋಗಗಳನ್ನು ಮಹಾಯೋಜನೆಯಲ್ಲಿ ನಿಗಧಿಪಡಿಸಲಾಗಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (2) ರಂತೆ ಭೂ ಉಪಯೋಗ ರದ್ದಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (3) ರನ್ವಯ ಭೂ ಉಪಯೋಗ ಮರುನಿಗಧಿಪಡಿಸಲು ಅರ್ಜಿದಾರರು ಕೋರಿರುವಂತೆ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(4) ರ ಅಡಿಯಲ್ಲಿ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಮರುನಿಗಧಿಪಡಿಸಲು ಯಾರಿಂದಲಾದರೂ ಆಕ್ಷೇಪಣೆ/ಸಲಹೆಗಳಿದ್ದರೆ, **ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಕನಕಪುರ ಯೋಜನಾ ಪ್ರಾಧಿಕಾರ, ಕನಕಪುರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.**

–: ಕೋಷ್ಟಕ :–

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀಮತಿ. ಬಿ. ಎಸ್. ಲಕ್ಷ್ಮೀ ಶ್ರೀ ರಜನಿಕಾಂತ್ ಕಟ್ರಗಡ್ಡ ಇವರ ಪರವಾಗಿ ಜಿ.ಪಿ.ಎ.ದಾರರು	ಬೆಂಗಳೂರು ದಕ್ಷಿಣ	ಉತ್ತರಹಳ್ಳಿ	ತರಳು	105	1–27	ಸಾರ್ವಜನಿಕ ಉಪಯುಕ್ತತೆ ಹಾಗೂ ಉದ್ಯಾನವನ ಮತ್ತು ಬಯಲು ಜಾಗ	ವಸತಿ
					ಒಟ್ಟು	1–27		

ಸಹಿ/– ಜಂಟಿ ನಿರ್ದೇಶಕರು,
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ–ಕಾರ್ಯದರ್ಶಿ,
ಕನಕಪುರ ಯೋಜನಾ ಪ್ರಾಧಿಕಾರ, ಕನಕಪುರ.

ಡಿಐಪಿಆರ್/ರಾಮನಗರ/73/ಮಣಿಪಾಲ್/2024–25

ಕನಕಪುರ ಯೋಜನಾ ಪ್ರಾಧಿಕಾರ

ಖಾತಾ ನಂ. 469/ಸಿ.ಎ./ ಸಹಕಾರಿ ವಸತಿ ಬಡಾವಣೆ, ಅಗ್ರಹಾರ ನ್ಯೂ ಕಾಲೋನಿ, ತುಂಗಣಿ ಅಂಚೆ,
ಕನಕಪುರ ತಾ॥, ರಾಮನಗರ ಜಿಲ್ಲೆ. ದೂ. : 080–29762005, 29762006, ಇ–ಮೇಲ್ : kkpaplan@gmail.com

ಸಂಖ್ಯೆ : ಕ.ಯೋ.ಪ್ರಾ./69(2)ಭೂ.ಉ./09/2023–24/477 ದಿನಾಂಕ : 13–06–2024

ಸಾರ್ವಜನಿಕ ಪ್ರಕಟಣೆ

ಕನಕಪುರ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಿರುವ ಮಹಾಯೋಜನೆಗೆ ಸರ್ಕಾರದ ಆದೇಶ ದಿನಾಂಕ : 07–08–2015 ರಂದು ಅನುಮೋದನೆ ನೀಡಲಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿರುತ್ತದೆ. ಅರ್ಜಿದಾರರು **ದಿನಾಂಕ : 31–10–2023 ರಂದು ಉತ್ತರಿ ಗ್ರಾಮದ ಸ.ನಂ. 158 ರಲ್ಲಿ 5ಎ–16 ಗುಂ ವಿಸ್ತೀರ್ಣದ ಜಮೀನಿಗೆ ವಸತಿ ಉದ್ದೇಶಕ್ಕೆ ಮರು ನಿಗಧಿಪಡಿಸಲು ಕೋರಿದ್ದು, ಸದರಿ ಜಮೀನು ಭಾಗಶಃ ವಾಣಿಜ್ಯ ಹಾಗೂ ಉದ್ಯಾನವನ & ಬಯಲುಜಾಗ ವಲಯಕ್ಕಾಗಿ ಕಾಯ್ದಿರಿಸಲಾಗಿದ್ದು, 5ಎ–16ಗುಂ ಪೈಕಿ 0ಎ–07ಗುಂ ಅಧಿಕವಿದ್ಯುತ್ ತಂತಿ ಹಾದು ಹೋಗಿರುವ ಪ್ರದೇಶವಾಗಿರುತ್ತದೆ, ಕಲ್ಲುಗುಡ್ಡೆಯ ಬಗ್ಗೆ 0ಎ–24ಗುಂ ಖರಾಬು ದಾಖಲಾಗಿರುತ್ತದೆ ಮತ್ತು ಸ.ನಂ. 158 ರಲ್ಲಿ 1ಎ–31 ಗುಂ ವಿಸ್ತೀರ್ಣದ ಜಮೀನನ್ನು ವಾಣಿಜ್ಯ ವಲಯಕ್ಕಾಗಿ ಕಾಯ್ದಿರಿಸಲಾಗಿರುತ್ತದೆ. ಸ.ನಂ. 158 ರಲ್ಲಿ 5ಎ–16ಗುಂ ವಿಸ್ತೀರ್ಣದ ಪೈಕಿ 1ಎ–31 ಗುಂ ವಾಣಿಜ್ಯ ವಲಯದಲ್ಲಿರುವ ಜಮೀನನ್ನು ಹೊರತುಪಡಿಸಿ 3ಎ–25ಗುಂ (ಅಧಿಕ ವಿದ್ಯುತ್ ತಂತಿ ಹಾದುಹೋಗಿರುವ ಪ್ರದೇಶ ಮತ್ತು ಖರಾಬು ಸೇರಿ) ವಿಸ್ತೀರ್ಣವನ್ನು ಉದ್ಯಾನವನ ಮತ್ತು ಬಯಲುಜಾಗ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಮರುನಿಗಧಿಪಡಿಸಬೇಕಾಗಿರುತ್ತದೆ.**

ಸದರಿ ಸರ್ವೆ ನಂಬರ್‌ಗಳನ್ನು ಕೋಷ್ಟಕದಲ್ಲಿ ವಿವರಿಸಿರುವಂತೆ ಭೂ ಉಪಯೋಗಗಳನ್ನು ಮಹಾಯೋಜನೆಯಲ್ಲಿ ನಿಗಧಿಪಡಿಸಲಾಗಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (2) ರಂತೆ ಭೂ ಉಪಯೋಗ ರದ್ದಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (3) ರನ್ವಯ ಭೂ ಉಪಯೋಗ ಮರುನಿಗಧಿಪಡಿಸಲು ಅರ್ಜಿದಾರರು ಕೋರಿರುವಂತೆ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(4) ರ ಅಡಿಯಲ್ಲಿ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಮರುನಿಗಧಿಪಡಿಸಲು ಯಾರಿಂದಲಾದರೂ ಆಕ್ಷೇಪಣೆ / ಸಲಹೆಗಳಿದ್ದರೆ, **ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಕನಕಪುರ ಯೋಜನಾ ಪ್ರಾಧಿಕಾರ, ಕನಕಪುರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.**

–: ಕೋಷ್ಟಕ :–

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ. ಪುಷ್ಪರಾಜ್ ಎ. ಬಿನ್ ಅಣ್ಣಯಪ್ಪ ಎಂ. ಶ್ರೀಮತಿ ರಶ್ಮಿ ಜೆ. ಕೋಂ. ಹನುಮಂತೇಗೌಡ	ಬೆಂಗಳೂರು ದಕ್ಷಿಣ	ಉತ್ತರಹಳ್ಳಿ	ಉತ್ತರಿ	158	3–25	ಉದ್ಯಾನವನ ಮತ್ತು ಬಯಲು ಜಾಗ	ವಸತಿ
					ಒಟ್ಟು	3–25		

ಸಹಿ/– ಜಂಟಿ ನಿರ್ದೇಶಕರು,
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ–ಕಾರ್ಯದರ್ಶಿ,
ಕನಕಪುರ ಯೋಜನಾ ಪ್ರಾಧಿಕಾರ, ಕನಕಪುರ.

ಡಿಐಪಿಆರ್/ರಾಮನಗರ/69/ಮಣಿಪಾಲ್/2024–25

ಕಿದ್ವಾಯಿ, ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆಗೆ ಸಚಿವ ಶರಣಪ್ರಕಾಶ ಪಾಟೀಲ ಭೇಟಿ

‘ನಾಲ್ಕು ಕಡೆ ಕಿದ್ವಾಯಿ ಮಾದರಿ ಆಸ್ಪತ್ರೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತುಮಕೂರು, ಶಿವಮೊಗ್ಗ, ಮಂಡ್ಯ ಮತ್ತು ಕಾರವಾರದಲ್ಲಿ ಕಿದ್ವಾಯಿ ಮಾದರಿಯ ಆಸ್ಪತ್ರೆ ಹಾಗೂ ಕಲಬುರಗಿಯಲ್ಲಿ ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆ ಆರಂಭಿಸುವ ಚಿಂತನೆಯಿದೆ’ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ ತಿಳಿಸಿದರು.

ನಗರದ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಮತ್ತು ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆಗೆ ಬುಧವಾರ ದಿಢೀರ್ ಭೇಟಿ ನೀಡಿ ವೈದ್ಯರ ಕಾರ್ಯವೈಖರಿ ಪರಿಶೀಲಿಸಿದ ಬಳಿಕ ಸುದ್ದಿಗಾರರ ಜೊತೆ ಅವರು ಮಾತನಾಡಿದರು.

‘ರಾಜ್ಯದ ನಾನಾ ಭಾಗಗಳಿಂದ ರೋಗಿಗಳು ಬೆಂಗಳೂರಿಗೆ ಬರುವುದರಿಂದ ಕಿದ್ವಾಯಿಯಲ್ಲಿ ಎಲ್ಲರಿಗೂ ಉತ್ತಮವಾದ ಚಿಕಿತ್ಸೆ ನೀಡಲು ಕಷ್ಟವಾಗುತ್ತಿದೆ. ಇದನ್ನು ತಪ್ಪಿಸಲು ಇತರ ಕಡೆ ಇದೇ ಮಾದರಿಯ ಆಸ್ಪತ್ರೆ ತೆರೆಯುವ ಆಲೋಚನೆಯಿದೆ. ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆಯನ್ನು ಕಲಬುರಗಿಯಲ್ಲಿ ಆರಂಭಿಸುವ ಕುರಿತು ಮುಖ್ಯಮಂತ್ರಿ ಜೊತೆ ಚರ್ಚೆ ನಡೆಸಲಾಗುವುದು’ ಎಂದು ಪಾಟೀಲ ಹೇಳಿದರು.



ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ ಅವರು ಕಿದ್ವಾಯಿ ಆಸ್ಪತ್ರೆಗೆ ಬುಧವಾರ ಭೇಟಿ ನೀಡಿ ರೋಗಿಗಳ ಆರೋಗ್ಯ ವಿಚಾರಿಸಿದರು. ಇಲಾಖೆ ಪ್ರಧಾನ ಕಾರ್ಯದರ್ಶಿ ಟಿ.ಕೆ. ಅನಿಲ್‌ಕುಮಾರ್, ಆಸ್ಪತ್ರೆಯ ಆಡಳಿತಾಧಿಕಾರಿ ಮಂಜುಶ್ರೀ ಇದ್ದರು

ಕಾಲಮಿತಿಯಲ್ಲಿ ಪರಿಹಾರ: ಕಿದ್ವಾಯಿ ಆಸ್ಪತ್ರೆಗೆ ಭೇಟಿ ನೀಡಿದ ಸಚಿವರು, ‘ಎಷ್ಟು ರೋಗಿಗಳು ದಾಖಲಾಗುತ್ತಿದ್ದಾರೆ, ವಸತಿ ಸೌಲಭ್ಯ ಹೇಗಿದೆ, ಯಾವೆಲ್ಲ ಅವಕಾಶಗಳನ್ನು ಬಳಸಿಕೊಳ್ಳುತ್ತಿದ್ದೀರಿ’ ಎಂದು ಆಡಳಿತಾಧಿಕಾರಿ ಮಂಜುಶ್ರೀ ಮತ್ತು ನಿರ್ದೇಶಕ ಡಾ. ಲೋಕೇಶ್ ಅವರನ್ನು ಪ್ರಶ್ನಿಸಿದರು.

‘ರೋಗಿಗಳಿಗೆ ಚಿಕಿತ್ಸೆ ಕೊಡಲು ಎಷ್ಟು ದಿನ ಬೇಕು. ಕ್ಯಾನ್ಸರ್ ಪತ್ತೆ ಮಾಡಲು ಎಷ್ಟು ದಿನ ಬೇಕಾಗುತ್ತದೆ. ಚಿಕಿತ್ಸೆ ನೀಡಲು ಎಷ್ಟು ದಿನ ತೆಗೆದುಕೊಳ್ಳುತ್ತೀರಿ. ಕ್ಯಾನ್ಸರ್ ಪತ್ತೆಯಾದ ಬಳಿಕ ರೋಗಿಯನ್ನು ಎಷ್ಟು ದಿನಗಳ ನಂತರ ದಾಖಲು ಮಾಡಿಕೊಳ್ಳುತ್ತಿದ್ದೀರಿ. ಯಾವ ಸಮಯದಲ್ಲಿ ಗರಿಷ್ಠ ಸಂಖ್ಯೆಯಲ್ಲಿ ರೋಗಿಗಳು ಆಸ್ಪತ್ರೆಗೆ ಬರುತ್ತಾರೆ’ ಎಂದೂ ವಿವರ ಕೇಳಿದರು.

‘ಆಸ್ಪತ್ರೆಯಲ್ಲಿ ಕೆಲವು ಸಮಸ್ಯೆಗಳು ಇರುವುದು ನನ್ನ ಗಮನಕ್ಕೆ ಬಂದಿದೆ. ಈ ಸಮಸ್ಯೆಗಳ ನಡುವೆಯೂ ಹಲವು ಅಭಿವೃದ್ಧಿ ಕೆಲಸಗಳು ಆಗಿವೆ. ಕಾಲಮಿತಿಯೊಳಗೆ ಹಂತಹಂತವಾಗಿ ಎಲ್ಲ ಸಮಸ್ಯೆಗಳನ್ನು ಪರಿಹರಿಸಲಾಗುವುದು’ ಎಂದು ಭರವಸೆ ನೀಡಿದರು.

ಉಚಿತವಾಗಿ ಔಷಧಿ ನೀಡಲು ಸೂಚನೆ: ₹75 ಸಾವಿರದಷ್ಟು ದೊಡ್ಡ ಮೊತ್ತ ಪಾವತಿಸಿ ಔಷಧಿಗಳನ್ನು ಖರೀದಿಸಲು ಹಣವಿಲ್ಲ ಎಂದು ಅಂಗವಿಕಲ ರೋಗಿ ರಮೇಶ್ ಎಂಬುವರು ಅಳಲು ತೋಡಿಕೊಂಡಾಗ, ಅವರಿಗೆ ತಕ್ಷಣ ಉಚಿತವಾಗಿ ಔಷಧಿ ನೀಡುವಂತೆ ವೈದ್ಯರಿಗೆ ಸಚಿವರು ಸೂಚಿಸಿದರು.

ವೈದ್ಯರ ಕಾರ್ಯವೈಖರಿಗೆ ಸಿಡಿಮಿಡಿ

ಮೊದಲು ಕಿದ್ವಾಯಿ ಆಸ್ಪತ್ರೆಗೆ ಭೇಟಿ ಕೊಟ್ಟ ಸಚಿವರು, ತುರ್ತು ಚಿಕಿತ್ಸಾ ವಾರ್ಡ್ ಪರಿಶೀಲಿಸಿದರು. ಆಸ್ಪತ್ರೆಯಲ್ಲಿ ದಾಖಲಾಗಿದ್ದ ರೋಗಿಯೊಬ್ಬರಿಗೆ ಒಂದು ತಿಂಗಳಾದರೂ ಚಿಕಿತ್ಸೆ ನೀಡದಿರುವುದನ್ನು ಕಂಡು, ವೈದ್ಯರ ವಿರುದ್ಧ ಸಿಡಿಮಿಡಿಗೊಂಡರು. ‘ದಾಖಲಾಗಿ ಒಂದು ತಿಂಗಳಾದರೂ ಏಕೆ ಸರ್ಜರಿ ಮಾಡಿಲ್ಲ. ವಿಳಂಬ ಮಾಡುತ್ತಿರುವ ಉದ್ದೇಶವಾದರೂ ಏನು’ ಎಂದು ಪ್ರಶ್ನಿಸಿದ ಸಚಿವರು, ಸಮಸ್ಯೆಗಳನ್ನು ತಕ್ಷಣ ಬಗೆಹರಿಸುವಂತೆ ನಿರ್ದೇಶನ ನೀಡಿದರು.

ಅಮೆಜಾನ್ ಬಾಕ್ಸ್‌ನಲ್ಲಿ ಹಾವು!

ಬೆಂಗಳೂರು(ಪಿಟಿಐ): ಇ-ಕಾಮರ್ಸ್ ವಲಯದ ಅಮೆಜಾನ್ ಗ್ರಾಹಕರಿಗೆ ತಲುಪಿಸಿದ ‘ಎಕ್ಸ್‌ಬಾಕ್ಸ್ ಕಂಟ್ರೋಲರ್’ ಜೊತೆಗೆ ಜೀವಂತ ಹಾವು ಬಂದಿದೆ.

ಅಮೆಜಾನ್‌ನಿಂದ ಬಂದ ಬಾಕ್ಸ್ ತೆರೆದಾಗ ಹಾವು ಕಾಣಿಸಿಕೊಂಡಿತು. ಬಾಕ್ಸ್‌ಗೆ ಅಂಟಿಸಿದ್ದ ಟೇಪ್‌ನಲ್ಲಿ ಹಾವು ಸಿಲುಕಿಕೊಂಡಿದ್ದರಿಂದ, ಯಾವುದೇ ಅಪಾಯ ಸಂಭವಿಸಿಲ್ಲ. ಸರ್ಜಾಪುರದಲ್ಲಿರುವ ಐಟಿ ವೃತ್ತಿಪರರಾದ ದಂಪತಿ, ಬಾಕ್ಸ್ ಅನ್ನು ಬಕೆಟ್‌ನಲ್ಲಿಟ್ಟು ವಿಡಿಯೊ ಮಾಡಿದ್ದಾರೆ. ಈ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಅಮೆಜಾನ್ ಇಂಡಿಯಾದ ವಕ್ತಾರರು, ‘ಈ ಪ್ರಕರಣದ ಬಗ್ಗೆ ಕಂಪನಿ ಪರಿಶೀಲನೆ ನಡೆಸಲಿದೆ. ಗ್ರಾಹಕರು, ಉದ್ಯೋಗಿಗಳ ರಕ್ಷಣೆ ಆದ್ಯ ಕರ್ತವ್ಯ’ ಎಂದಿದ್ದಾರೆ.



‘ಬಾಕ್ಸ್ ಅನ್ನು ಡೆಲಿವರಿ ಸಿಬ್ಬಂದಿ ನೇರವಾಗಿ ನಮಗೇ ನೀಡಿದರು. ನಾವು ಸರ್ಜಾಪುರದಲ್ಲಿದ್ದು, ಪೂರ್ಣ ಪ್ರಕರಣವನ್ನು ಕ್ಯಾಮೆರಾದಲ್ಲಿ ಸೆರೆಹಿಡಿದಿದ್ದೇವೆ’ ಎಂದು ದಂಪತಿ ಹೇಳಿದ್ದಾರೆ.

‘ಬಾಕ್ಸ್‌ನಲ್ಲಿದ್ದ ಹಾವನ್ನು ಅತಿ ವಿಷಕಾರಿ ನಾಗರಹಾವು ಎಂದು ನಾವು ಗುರುತಿಸಿದ್ದೇವೆ. ಪ್ಯಾಕೇಜ್‌ನ ಸಂಪೂರ್ಣ ಮೊತ್ತವನ್ನು ಕಂಪನಿ ಮರುಪಾವತಿ ಮಾಡಿದೆ. ಆದರೆ, ವಿಷಕಾರಿ ಹಾವಿನ ಸಂಕಷ್ಟದಿಂದ ಜೀವಹಾನಿಯಾಗಿದ್ದರೆ ಏನು ಮಾಡುತ್ತಿದ್ದರು? ಅವರ ದಾಸ್ತಾನು ಮಳಿಗೆಗಳು ಹಾಗೂ ಸಾಗಣೆಯಲ್ಲಿ ಸ್ವಚ್ಛತೆ ಮತ್ತು ಮೇಲುಸ್ತುವಾರಿಯಲ್ಲಿನ ನಿರ್ಲಕ್ಷತೆಯೇ ಇದಕ್ಕೆಲ್ಲ ಕಾರಣ ’ ಎಂದು ಅವರು ದೂರಿದ್ದಾರೆ.

ಕೇಂದ್ರ ಬಜೆಟ್ ಚರ್ಚೆಗೆ ಸಚಿವ ಕೃಷ್ಣ ಬೈರೇಗೌಡ

ಬೆಂಗಳೂರು: ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ನೇತೃತ್ವದಲ್ಲಿ ದೆಹಲಿಯಲ್ಲಿ ಶನಿವಾರ ನಡೆಯಲಿರುವ ಕೇಂದ್ರ ಬಜೆಟ್‌ನ ಪೂರ್ವಭಾವಿ ಚರ್ಚೆಯಲ್ಲಿ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ರಾಜ್ಯದ ಪ್ರತಿನಿಧಿಯಾಗಿ ಭಾಗವಹಿಸಲಿದ್ದಾರೆ.

ಹೊಸ ಸರ್ಕಾರ ರಚನೆಯಾಗಿರುವುದರಿಂದ ಪ್ರಸಕ್ತ ಆರ್ಥಿಕ ವರ್ಷಕ್ಕೆ ಕೇಂದ್ರ ಸರ್ಕಾರ ಹೊಸ ಬಜೆಟ್ ಮಂಡಿಸಲಿದೆ. ಈ ಕುರಿತ ಪೂರ್ವಭಾವಿ ಚರ್ಚೆ ಜೂನ್ 22ರಂದು ನಿಗದಿಯಾಗಿದ್ದು, ಅದರಲ್ಲಿ ಭಾಗವಹಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನಿರ್ಮಲಾ ಸೀತಾರಾಮನ್ ಜೂನ್ 12ರಂದು ಪತ್ರ ಬರೆದು, ಆಹ್ವಾನಿಸಿದ್ದರು.

‘ಶೇ 16ರಷ್ಟು ಕೈಗಾರಿಕಾ ಬೆಳವಣಿಗೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: 2032ರ ವೇಳೆಗೆ ಒಂದು ಟ್ರಿಲಿಯನ್ ಡಾಲರ್ ಜಿಡಿಪಿ ಸಾಧಿಸಲು ವಾರ್ಷಿಕ ಶೇ 15-16ರಷ್ಟು ಕೈಗಾರಿಕಾ ಬೆಳವಣಿಗೆಯ ಗುರಿ ನಿಗದಿ ಮಾಡಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಹೂಡಿಕೆದಾರರ ಸಮಾವೇಶದ ಭಾಗವಾಗಿ ಬುಧವಾರ ವೆಂಚುರೈಸ್ ಉದ್ಘಾಟಿಸಿ ಮಾತನಾಡಿದ ಅವರು, ಬರುವ ಫೆಬ್ರುವರಿ 12ರಿಂದ 14ರವರೆಗೆ ಜಾಗತಿಕ ಹೂಡಿಕೆದಾರರ ಸಮಾವೇಶ–2025 ಆಯೋಜಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ‘ಬೆಳವಣಿಗೆಯ ಹೊಸ ಪರಿಕಲ್ಪನೆ’ ಈ ಸಮಾವೇಶದ ಮುಖ್ಯ ಧ್ಯೇಯ. ತಂತ್ರಜ್ಞಾನ ಆಧಾರಿತ, ಪರಿಸರ ಸ್ನೇಹಿ, ಸುಸ್ಥಿರ ಹಾಗೂ ಸಮತೋಲನದ ಬೆಳವಣಿಗೆಯನ್ನು ಉತ್ತೇಜಿಸುವ ರಾಜ್ಯ ಸರ್ಕಾರದ ಬದ್ಧತೆ ಪ್ರತೀಕವಾಗಿ ಸಮಾವೇಶ ಆಯೋಜಿಸಲಾಗುತ್ತಿದೆ ಎಂದರು.

ರಾಜ್ಯ ಸರ್ಕಾರ ಗ್ರಾಮೀಣಾಭಿವೃದ್ಧಿ, ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿ ಸಾಧಿಸಲು ಪಣ ತೊಟ್ಟಿದೆ. ಇದಕ್ಕಾಗಿ ರಾಜ್ಯದ ಎಲ್ಲಾ ಭಾಗಗಳಲ್ಲೂ ಕೈಗಾರಿಕಾ ವಲಯ ಬೆಳೆಸಲು ತೀರ್ಮಾನಿಸಲಾಗಿದೆ. ಸ್ಥಳೀಯ ಪ್ರತಿಭೆ ಮತ್ತು ಸಂಪನ್ಮೂಲಗಳನ್ನು ಬಳಸಿಕೊಂಡು, ವಿಶೇಷ ಪರಿಣತ ಉದ್ದಿಮೆಗಳನ್ನು ಬೆಳೆಸಲು ಸರ್ಕಾರ ಬದ್ಧವಾಗಿದೆ. ಹೆಚ್ಚು ಹೂಡಿಕೆ ಮತ್ತು ಉದ್ಯೋಗಸೃಷ್ಟಿಗೆ ಒತ್ತು ಕೊಡುತ್ತಿದ್ದೇವೆ. ಆವಿಷ್ಕಾರ ಹಾಗೂ ಹೂಡಿಕೆಯ ಪ್ರಮುಖ ಕೇಂದ್ರವನ್ನಾಗಿ ರಾಜ್ಯವನ್ನು ಅಭಿವೃದ್ಧಿಪಡಿಸಲಾಗುವುದು ಎಂದು ಸಿದ್ದರಾಮಯ್ಯ ಹೇಳಿದರು.

ಸಮಾವೇಶದಲ್ಲಿ 100ಕ್ಕೂ ಹೆಚ್ಚು ಪರಿಣತರು ವೈವಿಧ್ಯಮಯ ವಿಷಯಗಳನ್ನು ಮಂಡಿಸಲಿದ್ದಾರೆ. 30ಕ್ಕೂ ಹೆಚ್ಚು ತಾಂತ್ರಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಐದು ಸಾವಿರಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಲಿದ್ದಾರೆ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಮಾಹಿತಿ ನೀಡಿದರು.

ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ ಹೆಚ್ಚಿನ ಅವಕಾಶ ನೀಡಲಾಗುತ್ತಿದೆ. ಖರೀದಿದಾರರು ಹಾಗೂ ಮಾರಾಟಗಾರರ ಸಭೆಗಳನ್ನು ಆಯೋಜಿಸಲಾಗುತ್ತಿದೆ. ಸರ್ಕಾರಿ ಇ-ಮಾರುಕಟ್ಟೆ ತಾಣ (ಜಿಇಎಂ) ಹಾಗೂ ಅಮೆಜಾನ್, ಫ್ಲಿಕ್‌ಕಾರ್ಟ್ ನಂತಹ ಪ್ರಮುಖ ಇ-ಕಾಮರ್ಸ್ ಅಂತರ್ಜಾಲ ತಾಣಗಳ ಮಧ್ಯೆ ಮುಕ್ತ ಸಂಪರ್ಕ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಖರೀದಿದಾರರಿಗೆ ತಮ್ಮ ಉತ್ಪನ್ನಗಳನ್ನು ಪ್ರದರ್ಶಿಸಲು ಪ್ರತ್ಯೇಕ ಸ್ಥಳದ ವ್ಯವಸ್ಥೆ ಮಾಡಲಾಗುತ್ತಿದೆ ಎಂದರು.



ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ನಡೆದ ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ಸದಸ್ಯರು ಪಾಲ್ಗೊಂಡಿದ್ದರು
–ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್‌.ಜಿ.

ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರ ಭಾರಿ ಪ್ರತಿಭಟನೆ

ಎಲ್‌ಕೆಜಿ–ಯುಕೆಜಿಗೆ ಪಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲ್ಯಾಣ ಕರ್ನಾಟಕ ಭಾಗದ ಏಳು ಜಿಲ್ಲೆಗಳ ಒಂದು ಸಾವಿರಕ್ಕೂ ಹೆಚ್ಚು ಪ್ರಾಥಮಿಕ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ತರಗತಿ ಗಳನ್ನು ಪ್ರಾರಂಭಿಸುವ ಆದೇಶವನ್ನು ರದ್ದುಪಡಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.

‘ಅಂಗನವಾಡಿ ಕೇಂದ್ರಗಳಲ್ಲೇ ಎಲ್‌ಕೆಜಿ–ಯುಕೆಜಿ ತರಗತಿಗಳನ್ನು ಪ್ರಾರಂಭಿಸಬೇಕು. ಅಂಗನವಾಡಿ ಕೇಂದ್ರದ ಹೆಸರು ಪೂರ್ವ ಪ್ರಾಥಮಿಕ ಶಿಕ್ಷಣ ಕೇಂದ್ರವೆಂದು ಪರಿವರ್ತಿಸಬೇಕು. ಸರ್ಕಾರ ಇಲ್ಲಿನ ಮಕ್ಕಳಿಗೆ ಸಮವಸ್ತ್ರ, ಬ್ಯಾಗ್ ಮತ್ತು ಶೂಗಳನ್ನು ವಿತರಿಸಬೇಕು’ ಎಂದು ಪ್ರತಿಭಟನಕಾರರು ಆಗ್ರಹಿಸಿದರು.

‘ಅಂಗನವಾಡಿ ಕಾರ್ಯಕರ್ತರಿಗೆ ‘ಶಿಕ್ಷಕಿ’ಯರ ಸ್ಥಾನ ನೀಡಬೇಕು. ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಲ್ಲಿರುವ (ಐಸಿಡಿಎಸ್) ಆರಂಭಿಕ ಆರೈಕೆ ಮತ್ತು ಶಿಕ್ಷಣಕ್ಕೆ (ಇಸಿಸಿಇ) ಅನುದಾನ ಹೆಚ್ಚಿಸಬೇಕು. ಶಿಕ್ಷಣ ಇಲಾಖೆಯಲ್ಲಿ ಅತಿಥಿ ಶಿಕ್ಷಕರಿಗೆ ನೀಡುವ ಗೌರವ ಧನವನ್ನು ಅಂಗನವಾಡಿ ಕಾರ್ಯಕರ್ತೆಯರಿಗೆ ನೀಡಬೇಕು. ಇಸಿಸಿಇ ಶಿಕ್ಷಣವನ್ನು ಅಂಗನವಾಡಿ ಕೇಂದ್ರಗಳಲ್ಲಿ ನೀಡುವಂತೆ ಕಾನೂನು ಜಾರಿಗೊಳಿಸಬೇಕು’ ಎಂದು ಒತ್ತಾಯಿಸಿದರು.

‘ಅಂಗನವಾಡಿ ಕಾರ್ಯಕರ್ತೆಯರನ್ನು ಚುನಾವಣೆ ಕೆಲಸಗಳಿಂದ ಮುಕ್ತಗೊಳಿಸಬೇಕು. ಐಸಿಡಿಎಸ್ ಯೋಜನೆಯನ್ನು ಪ್ರತ್ಯೇಕ ನಿರ್ದೇಶನಾಲಯವನ್ನಾಗಿ ಪರಿವರ್ತಿಸಬೇಕು. ನಿವೃತ್ತರಾದ ಅಂಗನವಾಡಿ ಕಾರ್ಯಕರ್ತೆಯರಿಗೆ ಗ್ರಾಚ್ಯುಯಿಟಿ ಹಣ ಪಾವತಿಸಬೇಕು. ಮಿನಿ ಅಂಗನವಾಡಿ ಕೇಂದ್ರಗಳನ್ನು ಪೂರ್ಣ ಕೇಂದ್ರಗಳನ್ನಾಗಿ ಪರಿವರ್ತಿಸಬೇಕು’ ಎಂಬ ಬೇಡಿಕೆಗಳನ್ನು ಮಂಡಿಸಿದರು.

‘ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಪ್ರಾರಂಭಿಸಿರುವ ಕೂಸಿನ ಮನೆಯ ಫಲಾನುಭವಿಗಳು ಅಂಗನವಾಡಿ ಕೇಂದ್ರಗಳ ಫಲಾನುಭವಿಗಳು ಒಂದೇ ಆಗಿದ್ದಾರೆ. ಆದ್ದರಿಂದ, ಅವೈಜ್ಞಾನಿಕ ಕೂಸಿನ ಮನೆಯ ಯೋಜನೆಯನ್ನು ರದ್ದುಗೊಳಿಸಬೇಕು. ಅಂಗನವಾಡಿ ಕೇಂದ್ರಗಳಲ್ಲಿ ಪೌಷ್ಟಿಕ ಆಹಾರ, ಪೂರ್ವ ಪ್ರಾಥಮಿಕ ಶಿಕ್ಷಣ ಗರ್ಭಿಣಿ–ಬಾಣಂತಿಯರ ಆರೈಕೆ ಹೊರತುಪಡಿಸಿ ಉಳಿದ ಕೆಲಸ ನಿರ್ಬಂಧಿಸಬೇಕು’ ಎಂದು ಆಗ್ರಹಿಸಿದರು.

ಸಂಘದ ಅಧ್ಯಕ್ಷೆ ಎಸ್. ವರಲಕ್ಷ್ಮಿ, ಪ್ರಧಾನ ಕಾರ್ಯದರ್ಶಿ ಎಚ್.ಎಸ್. ಸುನಂದ ಸೇರಿದಂತೆ ವಿವಿಧ ಜಿಲ್ಲೆಗಳ ನೂರಾರು ಅಂಗನವಾಡಿ ಕಾರ್ಯಕರ್ತೆಯರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ನಿರ್ಧಾರ ವಾಪಸ್‌ಗೆ ಎಐಟಿಯುಸಿ ಆಗ್ರಹ

ಸರ್ಕಾರದ ಕೆಲ ನಿರ್ಧಾರಗಳಿಂದ ಅಂಗನವಾಡಿಗಳ ಅಸ್ತಿತ್ವಕ್ಕೆ ಧಕ್ಕೆಯಾಗಿದೆ. ತಕ್ಷಣ ಅಂತಹ ನಿರ್ಧಾರಗಳನ್ನು ಹಿಂದಕ್ಕೆ ಪಡೆಯಬೇಕು ಎಂದು ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಫೆಡರೇಷನ್ (ಎಐಟಿಯುಸಿ) ಅಧ್ಯಕ್ಷ ಬಿ. ಅಮ್ಜದ್ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ಸರ್ಕಾರದ ವಿವಿಧ ಇಲಾಖೆಗಳು ಕೂಸಿನ ಮನೆ, ಶಿಶುಪಾಲನ ಕೇಂದ್ರಗಳು, ಪೂರ್ವ ಪ್ರಾಥಮಿಕ ತರಗತಿಗಳನ್ನು ಆರಂಭಿಸುವ ಮೂಲಕ ಅಂಗನವಾಡಿಗಳಲ್ಲಿನ ಶಾಲಾ ಪೂರ್ವ ಶಿಕ್ಷಣ ವ್ಯವಸ್ಥೆಗೆ ಧಕ್ಕೆ ತರುತ್ತಿವೆ. ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದ್ದು, ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ಸವಲತ್ತುಗಳಿಂದ ಮಕ್ಕಳು ವಂಚಿತರಾಗುತ್ತಿದ್ದಾರೆ ಎಂದು ಹೇಳಿದರು.

ರಾಜ್ಯ ಶಿಕ್ಷಣ ನೀತಿ ರೂಪಿತವಾಗುವ ಮೊದಲೇ ಪೂರ್ವ ಪ್ರಾಥಮಿಕ ತರಗತಿಗಳನ್ನು ಆರಂಭಿಸುತ್ತಿರುವುದು ಸರಿಯಲ್ಲ. ಇದರಿಂದ ಮಕ್ಕಳ ಬೆಳವಣಿಗೆ ಕುಂಠಿತಗೊಳ್ಳುತ್ತದೆ. ಅಂಗನವಾಡಿಗಳು ದುರ್ಬಲಗೊಳ್ಳಲಿವೆ. ಹಾಗಾಗಿ, ನಿರ್ಧಾರಗಳನ್ನು ಮರು ಪರಿಶೀಲನೆ ನಡೆಸಬೇಕು ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ. ಜಯಮ್ಮ ಉಪಸ್ಥಿತರಿದ್ದರು.

‘ಎರಡು ದಿನದಲ್ಲಿ ಸೂಕ್ತ ನಿರ್ಧಾರ’

‘ಅಂಗನವಾಡಿ ಕೇಂದ್ರಗಳಲ್ಲೆ ಪೂರ್ವ ಪ್ರಾಥಮಿಕ ಶಾಲಾ ಶಿಕ್ಷಣ ಜಾರಿಗೊಳಿಸುವ ಕುರಿತು ಶಿಕ್ಷಣ ಸಚಿವರು ಹಾಗೂ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಇನ್ನೆರಡು ದಿನಗಳಲ್ಲಿ ಚರ್ಚಿಸಿ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು’ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಹೇಳಿದರು.

ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ ಅವರು, ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ಸದಸ್ಯರ ಮನವಿ ಸ್ವೀಕರಿಸಿ, ‘ಅಂಗನವಾಡಿ ನೌಕರರಿಗೆ ಯಾವುದೇ ರೀತಿಯ ತೊಂದರೆ ಆಗದಂತೆ ಕ್ರಮ ಕೈಗೊಳ್ಳಲಾಗುವುದು’ ಎಂಬ ಭರವಸೆ ನೀಡಿದರು.

‘ನಿಷ್ಪಕ್ಷಪಾತ ತನಿಖೆ ನಡೆಯಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿ.ಎಸ್. ಯಡಿಯೂರಪ್ಪ ಅವರು ಆರೋಪಿಯಾಗಿರುವ ಪೋಕ್ಸೊ ಪ್ರಕರಣವನ್ನು ನಿಷ್ಪಕ್ಷಪಾತವಾಗಿ ತನಿಖೆ ನಡೆಸಬೇಕು’ ಎಂದು ‘ನಾವೆದ್ದು ನಿಲ್ಲದಿದ್ದರೆ ಸಂಘಟನೆ’ ಆಗ್ರಹಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಗೌರಮ್ಮ, ‘ಪೋಕ್ಸೊ ಕಾಯ್ದೆ ಅಡಿಯಲ್ಲಿ ದಾಖಲಾಗುವ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಬೇಕು. ಆದರೆ, ಯಡಿಯೂರಪ್ಪ ಅವರ ಪ್ರಕರಣ ದಲ್ಲಿ ದೂರುದಾರರ ತಾಯಿಯ ವಿರುದ್ಧವೇ ಸುಳ್ಳು ಆರೋಪ ಮತ್ತು ಅಪಪ್ರಚಾರ ಮಾಡಲಾಗುತ್ತಿದೆ. ಈ ಪ್ರಕರಣದಲ್ಲಿ ಯಡಿಯೂರಪ್ಪ ಅವರನ್ನು ಬಂಧಿಸದಂತೆ ನೀಡಿರುವ ಆದೇಶದ ವಿರುದ್ಧ ಸರ್ಕಾರ ಮೇಲ್ಮನವಿ ಸಲ್ಲಿಸಬೇಕು’ ಎಂದು ಆಗ್ರಹಿಸಿದರು.

ಅಖಿಲ ಭಾರತ ಜನವಾದಿ ಮಹಿಳಾ ಸಂಘದ ಶಿಲ್ಪಾ, ಮಧು, ವಿನಯ್ ಶ್ರೀನಿವಾಸ ಭಾಗವಹಿಸಿದ್ದರು.

ನಿಗಮದ 9 ಸಿಬ್ಬಂದಿ ವಿರುದ್ಧ ಕ್ರಮ

ಬೆಂಗಳೂರು: ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಡಿ ಬರುವ ‘ಮಯೂರ ಬಾಲ ಭವನ’ ಕಿಯೋಸ್ಕ್‌ನಲ್ಲಿ ನಿಗಮದ ಕ್ಯೂಆರ್ ಕೋಡ್ ಬಳಸದೇ ಯುಪಿಐ ಮೂಲಕ ತಮ್ಮ ಖಾತೆಗಳಿಗೆ ಹಣ ಪಾವತಿ ಮಾಡಿಕೊಂಡಿರುವ ಆರೋಪ ಸಾಬೀತಾಗಿರುವುದರಿಂದ ನಿಗಮದ ಒಂಬತ್ತು ಸಿಬ್ಬಂದಿಯ ವಿರುದ್ಧ ಕ್ರಮ ಜರುಗಿಸಲಾಗಿದೆ.

ಮಯೂರ ಬಾಲಭವನ ಕಿಯೋಸ್ಕ್‌ನ ದ್ವಿತೀಯ ದರ್ಜೆ ಸಹಾಯಕ(ಗುತ್ತಿಗೆ) ರಾಮಚಂದ್ರ ಕೆ., ಪ್ರಭಾರ ವ್ಯವಸ್ಥಾಪಕ ನಾಗಭೂಷಣ ಸಹಾಯಕ ಕೆ.ವೆಂಕಟೇಶ್ ಅವರನ್ನು ಅಮಾನತುಗೊಳಿಸಲು ಆದೇಶಿಸಲಾಗಿದೆ. ಇದೇ ಆರೋಪದ ಮೇಲೆ ವಾಹನ ಚಾಲಕ ಅಬ್ದುಲ್ ವಾಜೀದ್ ಅವರನ್ನು ವಜಾಗೊಳಿಸಲಾಗಿದೆ. ಸಹಾಯಕ ಪರಿಚಾರಕ ಕೆ.ಕೋದಂಡರಾಮಯ್ಯ ಅವರನ್ನು ಅಮಾನತುಗೊಳಿಸಲಾಗಿದೆ.

ಡಾ.ಬಿ.ಆರ್.ಅಂಬೇಡ್ಕರ್ ಅರ್ಥಶಾಸ್ತ್ರ ವಿಶ್ವವಿದ್ಯಾಲಯದ ಪ್ರಥಮ ಘಟಿಕೋತ್ಸವ

ಅಭಿವೃದ್ಧಿ ಹಾದಿ ಕಠಿಣ: ಸಿ.ರಂಗರಾಜನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯ ದೊರೆತು ನೂರು ವರ್ಷ ತುಂಬುವ ಹೊತ್ತಿಗೆ ಭಾರತ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಬೇಕು ಎಂಬ ಗುರಿ ಇಟ್ಟುಕೊಂಡಿದೆ. ಆದರೆ, ಈಗಿನ ತಲಾ ಆದಾಯ ನೋಡಿದರೆ ಇದು ಕಠಿಣದ ಹಾದಿಯಾಗಿದೆ ಎಂದು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಮಾಜಿ ಗವರ್ನರ್ ಸಿ. ರಂಗರಾಜನ್ ಅಭಿಪ್ರಾಯ ವ್ಯಕ್ತಪಡಿಸಿದರು.

ಬುಧವಾರ ನಡೆದ ಡಾ.ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯದ ಪ್ರಥಮ ಘಟಿಕೋತ್ಸವದಲ್ಲಿ ಅವರು ಮಾತನಾಡಿದರು.

ಪ್ರಸ್ತುತ 13,845 ಡಾಲರ್‌ಗಿಂತ(₹11.55 ಲಕ್ಷ) ಅಧಿಕ ತಲಾ ಆದಾಯ ಹೊಂದಿರುವ ದೇಶಗಳನ್ನು ಅಭಿವೃದ್ಧಿ ಹೊಂದಿದ ದೇಶಗಳೆಂದು ಅಂತರ ರಾಷ್ಟ್ರೀಯ ಹಣಕಾಸು ಸಂಸ್ಥೆ ವರ್ಗೀಕರಿಸಿದೆ. 2047ರ ಹೊತ್ತಿಗೆ ತಲಾ ಆದಾಯದ ಮಟ್ಟ ಇನ್ನೂ ಹೆಚ್ಚಾಗುತ್ತದೆ. ಭಾರತವು ಸದ್ಯ 2,500 ಡಾಲರ್(₹2.08 ಲಕ್ಷ) ತಲಾ ಆದಾಯವನ್ನು ಹೊಂದಿದೆ. ಇದು ನಾವು ಕ್ರಮಿಸಬೇಕಾದ ದೂರವನ್ನು ತೋರಿಸುತ್ತದೆ ಎಂದು ವಿವರಿಸಿದರು.

‘ಜ್ಞಾನದ ಸ್ಪರ್ಧಾತ್ಮಕ ಜಗತ್ತಿನಲ್ಲಿದ್ದೇವೆ. ಕೃಷಿ, ಕೈಗಾರಿಕೆ ಮತ್ತು ವೈಜ್ಞಾನಿಕ ಕ್ಷೇತ್ರಗಳಲ್ಲಿನ ಬೆಳವಣಿಗೆಗಳು ದೇಶದ ಬೆಳವಣಿಗೆಯನ್ನು ಸೂಚಿಸುತ್ತದೆ. ಗುಣಮಟ್ಟದ ಮತ್ತು ಪರಿಣಾಮಕಾರಿ ಶೈಕ್ಷಣಿಕ ಜ್ಞಾನ ಪಡೆಯುವ ಮೂಲಕ ಎಲ್ಲ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಬಹುದು’ ಎಂದು ಹೇಳಿದರು.

ಯುವಜನರು ಆದರ್ಶ ಮತ್ತು ಮಹತ್ವಾಕಾಂಕ್ಷೆಯನ್ನು ಇಟ್ಟುಕೊಂಡು ಕೆಲಸ ಮಾಡಬೇಕು. ಮಹತ್ವಾಕಾಂಕ್ಷೆ ಇಲ್ಲದ ಆದರ್ಶವಾದದಿಂದ ಏನನ್ನೂ ಸಾಧಿಸಲಾಗದು. ಆದರ್ಶವಿಲ್ಲದ ಮಹತ್ವಾಕಾಂಕ್ಷೆ ಅಪಾಯಕಾರಿಯಾಗಿರುತ್ತದೆ ಎಂದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಮಾತನಾಡಿ, ‘ಉನ್ನತ ಶಿಕ್ಷಣ ಪಡೆದು ಬಾಬಾ ಸಾಹೇಬರು ಬಯಸಿದ್ದರೆ ಲಂಡನ್, ಅಮೆರಿಕ ಅಥವಾ ದೇಶದಲ್ಲೇ ಉನ್ನತ ಹುದ್ದೆಯಲ್ಲಿ ಸೇವೆ ಸಲ್ಲಿಸಿ ಭವ್ಯ ಜೀವನ ನಡೆಸಬಹುದಿತ್ತು. ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಅಸಮಾನತೆಗಳನ್ನು ತೊಡೆದುಹಾಕಲು ಸಮಾನತೆ ಮತ್ತು ಸಾಮರಸ್ಯದ ವಾತಾವರಣ ವನ್ನು ನಿರ್ಮಿಸುವ ಸಂಕಲ್ಪದೊಂದಿಗೆ ದೇಶದಲ್ಲಿ ಕೆಲಸ ಮಾಡಿದರು. ನುರಿತ ಅರ್ಥಶಾಸ್ತ್ರಜ್ಞರಾಗಿದ್ದರು. ಭಾರತೀಯ ಕರೆನ್ಸಿ ಸಮಸ್ಯೆ, ಹಣದುಬ್ಬರ ಮತ್ತು ವಿನಿಮಯ ದರ, ಭಾರತದ ರಾಷ್ಟ್ರೀಯ ಲಾಭಾಂಶ, ಭೂರಹಿತ ಕಾರ್ಮಿಕರ ಸಮಸ್ಯೆ ಮತ್ತು ಪ್ರಮುಖ ವಿಷಯಗಳ ಕುರಿತು ಸಂಶೋಧನೆ ನಡೆಸುವ ಮೂಲಕ ಸಮಸ್ಯೆಗಳನ್ನು ಪರಿಹರಿಸಿದ್ದರು’ ಎಂದು ವಿವರಿಸಿದರು.

ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್, ಕುಲಪತಿ ಎನ್.ಆರ್.ಭಾನುಮೂರ್ತಿ ಭಾಗವಹಿಸಿದ್ದರು.



ಪ್ರಥಮ ಘಟಿಕೋತ್ಸವದಲ್ಲಿ ಚಿನ್ನದ ಪದಕ ಪಡೆದ ನಿಹಾರಿಕಾ ಚೌಧರಿ, ಧನುಶಾ ಪ್ರಭು, ಮೀರಾ ಮೋಹನ್, ಪ್ರಖರ್ ರಾಣಾ
–ಪ್ರಜಾವಾಣಿ ಚಿತ್ರ

ಚಿನ್ನದ ಪದಕ ಪಡೆದ ನಾಲ್ವರೂ ಉದ್ಯೋಗದಲ್ಲಿ

ಪ್ರಥಮ ಘಟಿಕೋತ್ಸವದಲ್ಲಿ ನಾಲ್ವರಿಗೆ ಚಿನ್ನದ ಪದಕವನ್ನು ಪ್ರದಾನ ಮಾಡಲಾಯಿತು. ನಾಲ್ವರೂ ವಿವಿಧ ಕಂಪನಿಗಳ ಉದ್ಯೋಗಿಗಳಾಗಿದ್ದಾರೆ.

2017–18ನೇ ಸಾಲಿನ ಬಿಎಸ್‌ಸಿ ಆನರ್ಸ್ ವಿಭಾಗದಲ್ಲಿ ಚಿನ್ನದ ಪದಕ ಪಡೆದ ನಿಹಾರಿಕಾ ಚೌಧರಿ ಖಾಸಗಿ ಕಂಪನಿಯ ಉದ್ಯೋಗಿಯಾಗಿದ್ದಾರೆ. 2020–21ನೇ ಸಾಲಿನ ಎಂಎಸ್‌ಸಿ ಎಕನಾಮಿಕ್ಸ್‌ನಲ್ಲಿ ಧನುಷ್ ಪ್ರಭು ಚಿನ್ನದ ಪದಕ ಪಡೆದರು. ಅವರು ಕ್ಯಾಂಟರ್ ಐಎಂಆರ್‌ಬಿಯಲ್ಲಿ ಸಂಶೋಧನಾ ವ್ಯವಸ್ಥಾಪಕರಾಗಿದ್ದಾರೆ. 2021–22ನೇ ಸಾಲಿನ ಎಂಎಸ್‌ಸಿ ಎಕನಾಮಿಕ್ಸ್‌ನಲ್ಲಿ ದೆಹಲಿ ನಿವಾಸಿ ಪ್ರಖರ ರಾಣಾ ಚಿನ್ನದ ಪದಕ ಪಡೆದಿದ್ದಾರೆ. ಅವರು ಇವೈ ಕಂಪನಿಯಲ್ಲಿ ಉದ್ಯೋಗಿಯಾಗಿದ್ದಾರೆ. 5 ವರ್ಷದ ಸಂಯೋಜಿತ ಎಂಎಸ್‌ಸಿ ಎಕನಾಮಿಕ್ಸ್‌ನಲ್ಲಿ ಮೀರಾ ಮೋಹನ್ ಚಿನ್ನದ ಪದಕ ಪಡೆದಿದ್ದು, ಅವರು ಮುಂಬೈನ ಕ್ರಿಸಿಲ್ ಕಂಪನಿಯಲ್ಲಿ ಉದ್ಯೋಗಿಯಾಗಿದ್ದಾರೆ.

‘ಡಾ.ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯದಲ್ಲಿ ವಿದ್ಯಾಭ್ಯಾಸ ಮಾಡಿದರೆ, ಕಲಿಕೆ ವೇಳೆಯೇ ಕ್ಯಾಂಪಸ್ ಸೆಲೆಕ್ಷನ್‌ನಲ್ಲಿ ಉದ್ಯೋಗಗಳಿಗೆ ಆಯ್ಕೆ ಮಾಡಲಾಗುತ್ತದೆ. ವಿಜ್ಞಾನ ವಿಷಯ ತೆಗೆದುಕೊಂಡವರು, ಅರ್ಥಶಾಸ್ತ್ರದಲ್ಲಿ ಓದಿದವರಿಗೆ ಹೆಚ್ಚು ಬೇಡಿಕೆ ಇದೆ’ ಎಂದು ಬಿಎಸ್‌ಸಿ ಆನರ್ಸ್ ವಿಭಾಗದಲ್ಲಿ 3ನೇ ರ್‍ಯಾಂಕ್ ಪಡೆದ ಮಂಜುಶ್ರೀ ಅನುಭವ ಹಂಚಿಕೊಂಡರು.

ಬಿಬಿಎಂಪಿ: ಹಸಿರೀಕರಣಕ್ಕೆ ಆದ್ಯತೆ; ಮೆಜೆಸ್ಟಿಕ್, ಜಯನಗರದಲ್ಲಿ ಕಾರಂಜಿ ನಿರ್ಮಾಣ

ವಾಯುಗುಣಮಟ್ಟ ವೃದ್ಧಿ: ₹18 ಕೋಟಿ ವೆಚ್ಚ

• ಆರ್. ಮಂಜುನಾಥ್



ಸಂಗೊಳ್ಳಿ ರಾಯಣ್ಣ ವೃತ್ತ

ಬೆಂಗಳೂರು: ನಗರದ ರಸ್ತೆಗಳ ಜಂಕ್ಷನ್ ಅಭಿವೃದ್ಧಿಯಲ್ಲಿ ಮತ್ತೊಂದು ಹೆಜ್ಜೆ ಮುಂದಕ್ಕೆ ಹೋಗಿರುವ ಬಿಬಿಎಂಪಿ, ವಾಯುಗುಣಮಟ್ಟ ವೃದ್ಧಿಗಾಗಿ ಜಂಕ್ಷನ್ ಅಭಿವೃದ್ಧಿ ಮಾಡುವುದಾಗಿ ಹೇಳಿಕೊಂಡಿದೆ.

'ಪ್ರಮುಖ 20 ಜಂಕ್ಷನ್‌ಗಳ ಸುತ್ತಮುತ್ತ ಹಸಿರೀಕರಣದೊಂದಿಗೆ ವಾಯುಗುಣಮಟ್ಟ ವೃದ್ಧಿಸಲು ಅಭಿವೃದ್ಧಿ' ಎಂಬ ಹೆಸರಿನಲ್ಲಿ ₹18 ಕೋಟಿ ವೆಚ್ಚ ಮಾಡಲು ಮುಂದಾಗಿದ್ದು, ಟೆಂಡರ್ ಆಹ್ವಾನಿಸಿದೆ. ಜೂನ್ 21ಕ್ಕೆ ಟೆಂಡರ್ ತೆರೆಯಲಾಗುತ್ತಿದೆ. ಗುತ್ತಿಗೆ ನೀಡಿದ 11 ತಿಂಗಳ ಅವಧಿಯಲ್ಲಿ ಈ ಜಂಕ್ಷನ್‌ಗಳ ಅಭಿವೃದ್ಧಿ ಮುಗಿಯಲಿದೆ ಎಂದು ತಿಳಿಸಲಾಗಿದೆ.

ನಗರದಲ್ಲಿ ಈಗಾಗಲೇ 25 ಜಂಕ್ಷನ್‌ಗಳ ಅಭಿವೃದ್ಧಿ 2023ರ ಜನವರಿಯಲ್ಲಿ ಆರಂಭವಾಗಿದ್ದರೂ ಇನ್ನೂ ಮುಗಿದಿಲ್ಲ. ಕಳಾಹೀನಗೊಂಡಿದ್ದ ಸ್ಥಳಗಳ ಸ್ವರೂಪ ಬದಲಿಸಿ, ನಾಗರಿಕರಿಗೆ ತಂಪನೆಯ ತಾಣವಾಗಬೇಕಿದ್ದ ಈ ಜಂಕ್ಷನ್‌ಗಳ ಕಾಮಗಾರಿ ವಿಳಂಬವಾಗುತ್ತಿದೆ. ಈ ಬಗ್ಗೆ 'ಪ್ರಜಾವಾಣಿ' ಮೇ 31ರಂದು 'ಬಿಲ್ ವಿಳಂಬ: ಜಂಕ್ಷನ್ ಅಭಿವೃದ್ಧಿ ಕುಂಠಿತ' ಶೀರ್ಷಿಕೆಯಡಿ ವಿಶೇಷ ವರದಿ ಪ್ರಕಟಿಸಿತ್ತು. ಅದಾದ ನಂತರ 25 ಜಂಕ್ಷನ್‌ಗಳ ಕಾಮಗಾರಿ ಸ್ವಲ್ಪ ಚುರುಕುಗೊಂಡಿದೆ. ಇದರ ಮಧ್ಯೆ, ಜೂನ್ 6ರಂದು 20 ಜಂಕ್ಷನ್‌ಗಳ ಅಭಿವೃದ್ಧಿಗೆ ಟೆಂಡರ್ ಕರೆದಿದೆ.

ವಾಯುಗುಣಮಟ್ಟ ವೃದ್ಧಿ ಹಾಗೂ ಹಸಿರೀಕರಣದ ಹೆಸರಿನಲ್ಲಿರುವ 20 ಜಂಕ್ಷನ್‌ಗಳ ಅಭಿವೃದ್ಧಿಯ ಕಾಮಗಾರಿಗಳಲ್ಲಿ ಸಿವಿಲ್ ಕೆಲಸಗಳಿಗೇ ಸಿಂಹಪಾಲು. ಜಂಕ್ಷನ್‌ಗಳ ಸುತ್ತಮುತ್ತಲ ಚರಂಡಿಗಳ ಹೂಳು ತೆಗೆಯುವುದು, ಚರಂಡಿ ಮರು ಅಭಿವೃದ್ಧಿ, ಈಗಿರುವ ಪಾದಚಾರಿ ರಸ್ತೆಯನ್ನು ತೆರವುಗೊಳಿಸುವುದು, ತಡೆಗೋಡೆಗಳಿಗೆ ಗ್ರಾನೈಟ್ ಕ್ಲಾಡಿಂಗ್, ಕ್ಯಾನೊಪಿ ರಚನೆ, ರ‍್ಯಾಂಪ್ ನಿರ್ಮಾಣ, ಆಸನಗಳ ವ್ಯವಸ್ಥೆ, ಆಕರ್ಷಕ ದೀಪಾಲಂಕಾರ, ಫಲಕಗಳ ಅಳವಡಿಕೆ, ರಸ್ತೆಗಳಲ್ಲಿ ಲೇನ್ ಗುರುತಿಸುವ ಕಾಮಗಾರಿಗಳೂ ಸೇರಿವೆ. ಇದರೊಂದಿಗೆ ಜಂಕ್ಷನ್‌ಗಳಲ್ಲಿ ಇರುವ ಮರಗಳ ಬೆಳವಣಿಗೆಗೆ ಪೂರಕ ಮಣ್ಣು, ವಿನ್ಯಾಸ, ಹೊಸ ಗಿಡಗಳನ್ನು ನೆಡುವುದು, ಹೂವು, ಅಲಂಕಾರಿಕ ಗಿಡಗಳನ್ನು ನೆಡುವ ಕಾರ್ಯಗಳನ್ನು ಕೊನೆಯಲ್ಲಿ ಗುರುತಿಸಲಾಗಿದೆ.

ಮರ ತೆರವಿಲ್ಲ: ವಾಯುಗುಣಮಟ್ಟ ವೃದ್ಧಿ ಸೇರಿದಂತೆ ಜಂಕ್ಷನ್‌ಗಳಲ್ಲಿ ಹಸಿರೀಕರಣಕ್ಕೆ ಹೆಚ್ಚು ಆದ್ಯತೆ ನೀಡಲಾಗಿದೆ. ಸಸಿಗಳನ್ನು ನೆಟ್ಟು ಬೆಳೆಸಲಾಗುತ್ತದೆ. ಹೂವಿನ ಗಿಡಗಳನ್ನು ಹಾಕಲಾಗುತ್ತದೆ. ಜಂಕ್ಷನ್‌ಗಳ ಅಭಿವೃದ್ಧಿ ಸಂದರ್ಭದಲ್ಲಿ ಆ ಸ್ಥಳದಲ್ಲಿರುವ ಮರಗಳನ್ನು ತೆರವುಗೊಳಿಸದೆ, ಅವುಗಳನ್ನು ಒಳಗೊಂಡು ವಿನ್ಯಾಸ ಮಾಡಲಾಗುತ್ತದೆ' ಎಂದು ಬಿಬಿಎಂಪಿ ಪ್ರಧಾನ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್ ಹೇಳಿದರು.

ಯಾವ ಜಂಕ್ಷನ್ ಅಭಿವೃದ್ಧಿ?
ಟ್ಯಾಗೋರ್ ವೃತ್ತ, ಬಸವನಗುಡಿ
ಡೇರಿ ವೃತ್ತ, ಕೆಎಂಎಫ್
ಟಿಸಿ ಪಾಳ್ಯ ಜಂಕ್ಷನ್, ಚಿಕ್ಕಬಸವನಪುರ
ಜೆಡಿ ಮರ ಜಂಕ್ಷನ್, ಜೆ.ಪಿ. ನಗರ
ನಾಗರಬಾವಿ 12ನೇ ಬ್ಲಾಕ್ ಬಸ್‌ನಿಲ್ದಾಣ
ಟಿಸಿ ಪಾಳ್ಯ ಮುಖ್ಯರಸ್ತೆ ಬ್ರಿಡ್ಜ್
ಎಸ್‌ಪಿ ರಸ್ತೆ ಜಂಕ್ಷನ್, ಬಿಬಿಎಂಪಿ ಕೇಂದ್ರ ಕಚೇರಿ ಎದುರು
ಮಾಧವನ್ ವೃತ್ತ, ಜಯನಗರ
ಮುದಲಿಯಾರ್ ವೃತ್ತ (ಹಲಸೂರು ಕೆರೆ)
ವೆಂಕಟಾಚಲಂ ವೃತ್ತ (ಹಲಸೂರು ಕೆರೆ)
ಮದ್ರಾಸ್ ಸ್ಯಾಪರ್ಸ್ ಎಚ್‌ಕ್ಯೂ ಜಂಕ್ಷನ್ (ಹಲಸೂರು ಕೆರೆ)
ಡಿ. ಭಾಸ್ಕರನ್ ರಸ್ತೆ ಜಂಕ್ಷನ್ (ಹಲಸೂರು ಕೆರೆ)
ಮೇಖ್ರಿ ವೃತ್ತ, ಬಳ್ಳಾರಿ ರಸ್ತೆ
ಜ್ಞಾನಭಾರತಿ ವೃತ್ತ, ಮೈಸೂರು ರಸ್ತೆ
ನಂಜಪ್ಪ ವೃತ್ತ, ಲಾಂಗ್‌ಫೋರ್ಡ್ ರಸ್ತೆ
ಕೋಣನಕುಂಟೆ ಕ್ರಾಸ್, ಕನಕಪುರ ರಸ್ತೆ
ಸುಬ್ರಮಣ್ಯಪುರ ರಸ್ತೆ ಜಂಕ್ಷನ್
ಸಿಎನ್‌ಆರ್ ರಾವ್ ಅಂಡರ್‌ಪಾಸ್ ಜಂಕ್ಷನ್, ಮಲ್ಲೇಶ್ವರ
ಇಬ್ಲೂರು ಕೆರೆ ಜಂಕ್ಷನ್, ಹೊರವರ್ತುಲ ರಸ್ತೆ
ಸಂಗೊಳ್ಳಿರಾಯಣ್ಣ ಜಂಕ್ಷನ್, ನಗರ ರೈಲು ನಿಲ್ದಾಣ

ಮತ್ತೆ ಉನ್ನತೀಕರಣ?

ನಗರ ರೈಲು ನಿಲ್ದಾಣ ಹಾಗೂ ಬಸ್ ನಿಲ್ದಾಣದ ಬಳಿಯ ಸಂಗೊಳ್ಳಿ ರಾಯಣ್ಣ ಜಂಕ್ಷನ್ ಅನ್ನು 'ಮರು ಉನ್ನತೀಕರಿಸುವ' ಕಾಮಗಾರಿಯೂ 'ವಾಯುಗುಣಮಟ್ಟ ವೃದ್ಧಿ' ಯೋಜನೆಯಲ್ಲಿದೆ. ಈ ಜಂಕ್ಷನ್ ಅನ್ನು ಈಗಾಗಲೇ ಸಾಕಷ್ಟು ಅಭಿವೃದ್ಧಿ ಮಾಡಲಾಗಿದ್ದು, ಅಲ್ಲಿ ಅಲಂಕಾರಿಕ ಗಿಡಗಳನ್ನು ನೆಟ್ಟು, 'ಲಾನ್' ಕೂಡ ಹಾಕಲಾಗಿದೆ. ಆದರೆ ಇದೀಗ ಆ ಜಂಕ್ಷನ್‌ನ ಇನ್ನಿತರ ಪ್ರದೇಶಗಳನ್ನು ಸೇರಿಸಿಕೊಂಡು, ಕಾರಂಜಿಯನ್ನು ನಿರ್ಮಿಸಲು ಯೋಜಿಸಲಾಗಿದೆ.

ಮೈಸೂರು ರಸ್ತೆಯ ಜ್ಞಾನಭಾರತಿ ಜಂಕ್ಷನ್‌ನಲ್ಲಿ ಕೂಡ, ನಮ್ಮ ಮೆಟ್ರೊ ಕಾಮಗಾರಿ ಮುಗಿದ ಮೇಲೆ ಜಂಕ್ಷನ್ ಅಭಿವೃದ್ಧಿಯಾಗಿದೆ. 'ವಾಯುಗುಣಮಟ್ಟ ವೃದ್ಧಿ' ಯೋಜನೆಯಲ್ಲಿ ಈ ಜಂಕ್ಷನ್ ಅನ್ನೂ ಸೇರಿಸಿಕೊಳ್ಳಲಾಗಿದ್ದು, ಸುತ್ತಮುತ್ತಲ ಇನ್ನಷ್ಟು ಪ್ರದೇಶವನ್ನು ಸೇರಿಸಿಕೊಳ್ಳಲಾಗಿದೆ.

'ಈ ಮೊದಲು ಜಂಕ್ಷನ್‌ನಲ್ಲಿ ಮಧ್ಯಭಾಗ ಮಾತ್ರ ಅಭಿವೃದ್ಧಿ ಮಾಡಲಾಗಿತ್ತು. ಈ ಯೋಜನೆಯಲ್ಲಿ ಸುತ್ತಮುತ್ತಲಿನ ಪ್ರದೇಶವನ್ನೂ ಹಸಿರೀಕರಣ ಮಾಡಲಾಗುತ್ತದೆ' ಎಂದು ಬಿಬಿಎಂಪಿ ರಸ್ತೆ ಮೂಲಸೌಕರ್ಯ ವಿಭಾಗದ ಎಂಜಿನಿಯರ್‌ಗಳು ತಿಳಿಸಿದರು.

ನಕಲಿ ಖಾತೆ ಸೃಷ್ಟಿ ಆರೋಪ ವರದಿ ಸಲ್ಲಿಕೆಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜರಾಜೇಶ್ವರಿ ನಗರದ ಪಟ್ಟಣಗೆರೆಯ ಹೆಮ್ಮಿಗೆಪುರದಲ್ಲಿ ಕೆಲವರಿಗೆ ಸರ್ಕಾರದಿಂದ ಮಂಜೂರು ಮಾಡಲಾಗಿದ್ದ ಜಮೀನಿನ ಕುರಿತಂತೆ ನಕಲಿ ಖಾತೆ ಸೃಷ್ಟಿಸಲಾಗಿದೆ' ಎಂಬ ಆರೋಪದ ಹಿನ್ನೆಲೆಯಲ್ಲಿ ಹೆಮ್ಮಿಗೆಪುರ ವಾರ್ಡ್ ಸಂಖ್ಯೆ 198ರಲ್ಲಿರುವ ವಿವಾದಿತ ಸ್ಥಿರಾಸ್ತಿಯೊಂದರ ಬಗ್ಗೆ ವರದಿ ಸಲ್ಲಿಸುವಂತೆ ಹೈಕೋರ್ಟ್, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಆಯುಕ್ತರಿಗೆ ಆದೇಶಿಸಿದೆ.

ಈ ಕುರಿತಂತೆ ಸರ್ಕಾರದಿಂದ ಜಮೀನು ಪಡೆದಿರುವ ನರಸಮ್ಮ ಅವರ ಪರವಾಗಿ ಆರ್.ದೀಪಕ್ (ಜಿಪಿಎ ಪಡೆದಿರುವ) ಸಲ್ಲಿಸಿರುವ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಬಿ.ಎಂ.ಶ್ಯಾಮ್‌ಪ್ರಸಾದ್ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಪುಟ್ಟಮ್ಮ ಎಂಬುವರ ಹೆಸರಿಗೆ 22 ಖಾತೆ ವಿತರಿಸಲಾಗಿದೆಯೇ ಎಂಬ ಬಗ್ಗೆ ವರದಿ ಸಲ್ಲಿಸಬೇಕು. ಅಂತೆಯೇ, 22 ಖಾತೆಗಳ ಪ್ರಮಾಣ ಪತ್ರಗಳನ್ನು ಸಲ್ಲಿಸಬೇಕು' ಎಂದು ಆಯುಕ್ತರಿಗೆ ನಿರ್ದೇಶಿಸಿದೆ.

'ಪಟ್ಟಣಗೆರೆ ಗ್ರಾಮದಲ್ಲಿನ ಸರ್ವೆ ನಂ.10ರಲ್ಲಿನ 10 ಎಕರೆ ಜಾಗವನ್ನು ಜಿಲ್ಲಾಧಿಕಾರಿ ನರಸಮ್ಮ ಅವರ ಪತಿ ಸಿ.ಎಲ್.ಮುನಿಯಪ್ಪ ಸೇರಿದಂತೆ ಒಟ್ಟು 5 ಜನರಿಗೆ 1979ರ ಮೇ 19ರಂದು ಮಂಜೂರು ಮಾಡಿದ್ದರು. ಅದರಲ್ಲಿ ಎರಡು ಎಕರೆ ಜಮೀನು ಮುನಿಯಪ್ಪಗೆ ಮಂಜೂರಾಗಿತ್ತು. 1979ರ ಜುಲೈ 20ರಂದು ಮುನಿಯಪ್ಪ ಹೆಸರಿಗೆ ಸಾಗುವಳಿ ಚೀಟಿಯನ್ನೂ ನೀಡಲಾಗಿದೆ. ಮುನಿಯಪ್ಪ ಮರಣಾನಂತರ ಕಂದಾಯ ದಾಖಲೆಗಳಲ್ಲಿ ಅವರ ಪತ್ನಿ ನರಸಮ್ಮ ಅವರ ಹೆಸರನ್ನು ಸೇರಿಸಲಾಗಿತ್ತು. ಈ ಜಮೀನು ಅವರ ಸ್ವಾಧೀನದಲ್ಲಿದೆ' ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

'ಪಟ್ಟಣಗೆರೆ ಸರ್ವೆ ನಂಬರ್ 10ಕ್ಕೆ (ಹೆಮ್ಮಿಗೆಪುರ ವಾರ್ಡ್ ನಂಬರ್-198ರ ಸ್ಥಿರಾಸ್ತಿ ಸಂಖ್ಯೆ 23/81/10-23) ಸಂಬಂಧಿಸಿದ ಆಸ್ತಿ ಕುರಿತಂತೆ ಲೇಟ್ ಮುನಿಯಪ್ಪ ಅವರ ಪತ್ನಿ ಪುಟ್ಟಮ್ಮ ಅವರ ಹೆಸರಿಗೆ 22 ನಕಲಿ ಖಾತೆಗಳನ್ನು ಸೃಷ್ಟಿಸಿ ವಿತರಿಸಲಾಗಿದೆ.

ಈ ವಿಚಾರವು 2022ರಲ್ಲಿ ತಿಳಿದು ಬಂದಿದೆ. ಈ ಕುರಿತಂತೆ ಮಾಹಿತಿ ಹಕ್ಕು ಕಾಯ್ದೆಯಡಿ ಮಾಹಿತಿ ಕೇಳಿದಾಗ ಪುಟ್ಟಮ್ಮ ಅವರ ಹೆಸರಿನಲ್ಲಿ ಯಾವುದೇ ಖಾತೆ ವಿತರಣೆಯಾಗಿಲ್ಲ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ. ಆದ್ದರಿಂದ, ನಕಲಿ ಖಾತೆ ಸೃಷ್ಟಿಸಿದವರ ವಿರುದ್ಧ ಕಾನೂನು ಕ್ರಮ ಜರುಗಿಸಲು ಆದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ಬಿಬಿಎಂಪಿ ವಿಭಜನೆ: ನೀವೇನನ್ನುತ್ತೀರಿ?

ಬಿಬಿಎಂಪಿಗೆ ಚುನಾವಣೆ ನಡೆಯದೆ ನಾಲ್ಕು ವರ್ಷವಾಗುತ್ತಿದೆ. ಈ ಮಧ್ಯೆ ತಲಾ 80 ವಾರ್ಡ್‌ಗಳ ಐದು ಪಾಲಿಕೆಯನ್ನಾಗಿ ಮಾಡಲು ರಾಜ್ಯ ಸರ್ಕಾರ ಚಿಂತಿಸುತ್ತಿದೆ. ಈ ಬಗ್ಗೆ ನಾಗರಿಕರಾದ ನಿಮ್ಮ ಅಭಿಪ್ರಾಯವನ್ನು 50 ಪದಗಳಲ್ಲಿ ವಾಟ್ಸ್‌ಆ್ಯಪ್ ಮಾಡಿ. ನಿಮ್ಮ ಹೆಸರು, ವಿಳಾಸ ಹಾಗೂ ಭಾವಚಿತ್ರವೂ ಜೊತೆಗಿರಲಿ.

ಪ್ರಜಾವಾಣಿ 96060 38256

ಒಂದೇ ಕಚೇರಿ ಇರಲಿ



ಬೆಂಗಳೂರಿಗರು ಬೆಲೆ ಏರಿಕೆ, ಜನದಟ್ಟಣೆ, ಸಂಚಾರ ದಟ್ಟಣೆಯ ನರಕಯಾತನೆ ಅನುಭವಿಸುತ್ತಿದ್ದಾರೆ. ಇನ್ನು ಬಿಬಿಎಂಪಿ ವಿಂಗಡನೆಯಾದರೆ ತೆರಿಗೆ ಕಟ್ಟಲು, ಸಮಸ್ಯೆಗಳನ್ನು ತಿಳಿಸಲು ಒಂದು ಕಚೇರಿಯಿಂದ ಮತ್ತೊಂದು ಕಚೇರಿಗೆ ಓಡಾಡಬೇಕಾಗುತ್ತದೆ. ಒಬ್ಬರು ಇನ್ನೊಬ್ಬರ ಕಡೆ ಬೆರಳು ತೋರಿಸಿ, ಕೆಲಸಗಳಾಗದಂತಹ ಪರಿಸ್ಥಿತಿ ಬರುತ್ತದೆ. ಈಗ ಇರುವಂತೆ ಒಂದೇ ಕಚೇರಿಯಿದ್ದರೆ ಒಳ್ಳೆಯದು.

ಲತಾ ಕೆ.ಎಸ್.ಹೆಗಡೆ, ಇಂದಿರಾನಗರ


ಅವೈಜ್ಞಾನಿಕ ಚಿಂತನೆ



ಈ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂತು ಅಂದರೆ ಹಟಕ್ಕೆ ಬಿದ್ದು ಕೆಂಪೇಗೌಡರ ಕನಸಿನ ಬೆಂಗಳೂರು ನಗರವನ್ನು 'ಬ್ರ್ಯಾಂಡ್ ಬೆಂಗಳೂರು' ನಿರ್ಮಾಣದ ನೆಪದಲ್ಲಿ ಬೃಹತ್ ಬೆಂಗಳೂರು ಎಂಬ ಪದವನ್ನು ಅಳಿಸಿ ನುಚ್ಚು ಮಾಡುವುದೇ ಧ್ಯೇಯ ಎಂಬಂತಿದೆ. ಇದು ಅವೈಜ್ಞಾನಿಕ ಚಿಂತನೆಯೆ ಸರಿ.

ಟಿ.ಬಿ. ನಿರಂಜನ, ಪದ್ಮನಾಭನಗರ

ರಾಜಕೀಯ ಹುನ್ನಾರದ ವಿಭಜನೆ



ಬಿಬಿಎಂಪಿಯಲ್ಲಿ ಅಧಿಕಾರ ಹಿಡಿಯಲು ಸಾಧ್ಯವಾಗದಿದ್ದರೂ, ಅದನ್ನು ಐದು ಪಾಲಿಕೆಗಳಾಗಿ ಭಾಗ ಮಾಡಿ ಕೆಲವನ್ನಾದರೂ ತಮ್ಮ ತೆಕ್ಕೆಗೆ ತೆಗೆದುಕೊಳ್ಳುವ ರಾಜಕೀಯ ಹುನ್ನಾರವೇ ಈ ವಿಭಜನೆಯ ಉದ್ದೇಶ. ಅಭಿವೃದ್ಧಿ ಮಾಡಲು ಕೆಳ ಹಂತದಲ್ಲಿ ಕೆಲಸ ಮಾಡುವ ಸಿಬ್ಬಂದಿ ಹುದ್ದೆಗಳ ಸೃಷ್ಟಿ ಮಾಡಬೇಕೇ ವಿನಾ ಮೇಲಿನ ಹಂತದಲ್ಲಿ ಬಿಳಿ ಆನೆಗಳಿಗೆ ಹುದ್ದೆ ಸೃಷ್ಟಿಸಬಾರದು.

ಡಾ.ಟಿ.ಶ್ರೀನಿವಾಸ ರೆಡ್ಡಿ, ಭುವನೇಶ್ವರಿ ನಗರ


ಮರುಚಿಂತನೆ ನಡೆಸಲಿ



ಬಿಬಿಎಂಪಿ ವಿಭಜನೆಯಿಂದ ಪಾಲಿಕೆ ಚುನಾವಣೆ ನಡೆಸುವುದು ಪ್ರಸ್ತುತ ಪರಿಸ್ಥಿತಿಯಲ್ಲಿ ಮಾರಕವಾಗಿ ಪರಿಣಮಿಸುವ ಸಾಧ್ಯತೆ ಇದೆ. ಕ್ಷಿಪ್ರಗತಿಯಲ್ಲಿ ಬೆಳೆಯುತ್ತಿರುವ ವಿಶಾಲವಾದ ಈ ಬೆಂಗಳೂರಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ವಲಸಿಗರೇ ಹೆಚ್ಚಾಗಿದ್ದಾರೆ. ವಿಭಜನೆಯಿಂದ ಕನ್ನಡ, ಕನ್ನಡಿಗರಿಗೆ ಪೆಟ್ಟು ಬೀಳುವುದು ನಿಶ್ಚಿತ. ಪರಭಾಷಿಕರ ಹೆಚ್ಚಾಗಿರುವ ಸ್ಥಳದಲ್ಲಿ ಕನ್ನಡ ಅಸ್ತಿತ್ವಕ್ಕೆ ಧಕ್ಕೆ ಕಟ್ಟಿಟ್ಟಬುತ್ತಿ. ಬೆಂಗಳೂರಿನ ಭವಿಷ್ಯದ ಹಿತದೃಷ್ಟಿಯಿಂದ ಸರ್ಕಾರ ವಿಭಜನೆ ಬಗ್ಗೆ ಮರುಚಿಂತನೆ ನಡೆಸಲಿ.

ಬಸವರಾಜ್, ನಾಗವಾರ

ಬೊಕ್ಕಸಕ್ಕೆ ನಷ್ಟ



ಬಿಬಿಎಂಪಿ ವಿಭಜಿಸುವುದು ಬೊಕ್ಕಸಕ್ಕೆ ನಷ್ಟ. ಏಕೆಂದರೆ ಐದು ಭಾಗಗಳಿಗೆ ಆಯುಕ್ತರು, ಕಚೇರಿ, ಸಿಬ್ಬಂದಿ, ಕೆಲಸ ನಿರ್ವಹಿಸಲು ಬೃಹತ್ ಕಟ್ಟಡ, ವಾಹನ ಖರೀದಿ... ಇತ್ಯಾದಿ ಅನವ್ಯಶಕ ಹೊರೆ ಬೆಂಗಳೂರಿನ ಜನತೆಯ ಮೇಲೆ ಬರುತ್ತದೆ. ಐದು ಭಾಗಗಳಿಗೆ ಮೇಯರ್, ಉಪಮೇಯರ್ ಆಯ್ಕೆ ಮಾಡಬೇಕು. ಇದರಿಂದ ಬೊಕ್ಕಸಕ್ಕೆ ನಷ್ಟ. ಬಿಬಿಎಂಪಿಗೆ ಸರಿಯಾದ ಸಮಯದಲ್ಲಿ ಚುನಾವಣೆ ನಡೆಸಿ ಕಾರ್ಪೊರೇಟರ್‌ಗಳು ಆಯ್ಕೆ ಮಾಡಿಸಿ ಕೆಲಸ ಮಾಡಿಸಿಕೊಳ್ಳಬೇಕು.

ಸಿ.ಗಣೇಶ ಬಾಬು, ಸಂಪಂಗಿರಾಮನಗರ

ನಿಗದಿತ ಅವಧಿಯಲ್ಲಿ ಚುನಾವಣೆಯಾಗಲಿ



ಚುನಾವಣೆ, ವಿಭಜನೆ, ಸಿಬ್ಬಂದಿಯ ನೇಮಕ ಮತ್ತಿತರ ಮಹಾನಗರ ಪಾಲಿಕೆಯ ಕೆಲಸಗಳಿಗೆ ಈ ಹಿಂದಿನ ಮತ್ತು ಈಗಿನ ಸರ್ಕಾರ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಕೆಂಪೇಗೌಡರು ಹಾಕಿದ ನಗರದ ಸರಹದ್ದುಗಿಂತ ಹತ್ತು ಪಟ್ಟು ನಗರ ಬೆಳೆದಿದೆ. ಈ ಜನಸಂಖ್ಯೆಯ ಅನುಪಾತಕ್ಕೆ ತಕ್ಕಂತೆ ಪಾಲಿಕೆಯಲ್ಲಿ ಸಿಬ್ಬಂದಿ ಇಲ್ಲ. ನಗರದ ಅನುಪಾತಕ್ಕೆ ತಕ್ಕಂತೆ ಪಾಲಿಕೆಯ ವಿಭಜನೆ, ನಿಗದಿತ ಅವಧಿಯಲ್ಲಿ ಚುನಾವಣೆ, ಪೂರ್ಣ ಪ್ರಮಾಣದ ಸಿಬ್ಬಂದಿ ನೇಮಕದಿಂದ ಮೂಲ ಸೌಕರ್ಯ ದೊರೆಯುವುದರಲ್ಲಿ ಸಂಶಯವಿಲ್ಲ.

ರಾ.ಬಾ. ವರದರಾಜನ್, ವೆಂಕಟೇಶ್ವರ ಲೇಔಟ್, ಚಿಕ್ಕಬಾಣಾವರ

ಸಾಮಾನ್ಯರಿಗೆ ಅನುಕೂಲ



ಬಿಬಿಎಂಪಿಯನ್ನು ವಿಭಜನೆ ಮಾಡುವುದರಿಂದ ಜನಸಾಮಾನ್ಯರಿಗೆ ಮತ್ತೆ ಹಿರಿಯ ನಾಗರಿಕರಿಗೆ ತಮ್ಮ ಕೆಲಸ ಕಾರ್ಯಗಳು ಮಾಡಿಸಿಕೊಳ್ಳಲು ಅನುಕೂಲವಾಗುತ್ತದೆ. ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳಲು ದೂರದ ಪ್ರದೇಶಗಳಿಂದ ಕೇಂದ್ರ ಕಚೇರಿಗೆ ಬರಬೇಕಾಗುತ್ತದೆ. ಕೆಲಸ ಆಗಲಿಲ್ಲವೆಂದರೆ ಇಡೀ ದಿನ ವ್ಯರ್ಥವಾಗುತ್ತದೆ. ಪಾಲಿಕೆಯನ್ನು ವಿಭಜಿಸಿ ಸಾಮಾನ್ಯ ಜನರ ಸಮಸ್ಯೆಗಳಿಗೆ ಅನುಕೂಲವಾಗುವ ರೀತಿಯಲ್ಲಿ ಮಾಡುವುದರಿಂದ, ತುಂಬಾ ಉತ್ತಮ ಕೆಲಸವಾಗುತ್ತದೆ.

ಬಿ.ಪಿ.ಸೋಮಣ್ಣ, ಮಾರುತಿನಗರ, ಕೆಂಗೇರಿ



ಉತ್ತಮ ಆಡಳಿತ ನೀಡಿ



ಬಿಬಿಎಂಪಿಯನ್ನು ವಿಭಜನೆ ಮಾಡದೇ ಹಾಲಿ ಇರುವಂತೆಯೇ ಮುಂದುವರಿಸಿಕೊಂಡು ಹೋಗಿ ಚುನಾವಣೆ ನಡೆಸಿ ಉತ್ತಮ ಆಡಳಿತ ನೀಡಿದರೆ ಸಾಕು. ವಿಭಜನೆ ಆದಷ್ಟು ಆಡಳಿತದಲ್ಲಿ ಭ್ರಷ್ಟಾಚಾರ ಹೆಚ್ಚಾಗುತ್ತದೆ ಹಾಗೂ ಸರ್ಕಾರದ ಮೇಲೆ ನಿರ್ವಹಣೆಯ ಹೊರೆ ಹೆಚ್ಚಾಗುತ್ತದೆ. ಆ ಹೊರೆಯನ್ನು ತೆರಿಗೆ ರೂಪದಲ್ಲಿ ನಮ್ಮಂತಹ ಜನಸಾಮಾನ್ಯರ ಮೇಲೆ ಹೇರಿ ಅಭಿವೃದ್ಧಿಯನ್ನು ಕುಂಠಿತಗೊಳಿಸಲಾಗುತ್ತದೆ. ಮಹಾನಗರದಲ್ಲಿ ಕೇಂದ್ರೀಕರಣ ಆಡಳಿತ ವ್ಯವಸ್ಥೆ ಉತ್ತಮ.

ಗಿರೀಶ್ ಡಿ, ಯಲಹಂಕ ಉಪನಗರ

ಬಿಬಿಎಂಪಿಗೆ ಜೀವರಕ್ಷಕ



ಮರಣ ಶಯ್ಯೆಯಲ್ಲಿರುವ ಕೆಂಪೇಗೌಡರ ಬೆಂಗಳೂರಿಗೆ ಬಿಬಿಎಂಪಿ ವಿಭಜನೆ ಬಹುಶಃ ಕಡೆಯ ಜೀವರಕ್ಷಕ ಔಷಧ ಎಂದರೆ ತಪ್ಪಾಗಲಾರದು. ವಿಭಜನೆಗೆ ಮುನ್ನ ಸಂಸ್ಥೆಗಳು, ನಿವೃತ್ತ ನ್ಯಾಯಾಧೀಶರು, ಹಿರಿಯ ನಾಗರಿಕರಿಂದ ಸಲಹೆ ಪಡೆಯಬೇಕು. ರಾಜಕಾರಣಿಗಳಿಗೆ ವಿಭಜನೆ ಕೆಲಸ ನೀಡಬೇಡಿ. ಯಾವುದೇ ಆಸ್ತಿ ಮಾರಾಟ ಮಾಡಬಾರದು. ವಾಣಿಜ್ಯೀಕರಣ ಮಾಡಿ ಆದಾಯಕ್ಕಾಗಿ ಉಪಯೋಗಿಸಲಿ.

ಯೋಗೇಶ ಎಂ.ಆರ್, ಪ್ರಮೋದ್ ಲೇಔಟ್

ಸರಿದಾರಿಗೆ ತರಲು ಇಚ್ಛಾಶಕ್ತಿ ಬೇಕು



ಬಿಬಿಎಂಪಿ ವಿಭಜನೆ ಮಾಡುವ ಹಾಗಿದ್ದರೆ ಮೊದಲಿನ ನಗರಪಾಲಿಕೆ, ಪುರಸಭೆ ವ್ಯಾಪ್ತಿಯನ್ನು ಏಕೆ ಸೇರಿಸಿಕೊಳ್ಳಬೇಕಿತ್ತು. ಮಹಾನಗರ ಪಾಲಿಕೆ ಮಾಡಿ ಈಗ ಚುನಾವಣಾ ಇಲ್ಲದೆ ಅತಂತ್ರ ಸ್ಥಿತಿ ತಲುಪಿದ ಪಾಲಿಕೆಯನ್ನು ಸರಿದಾರಿಗೆ ತರಲು ಇಚ್ಛಾಶಕ್ತಿ ಬೇಕು. ಕಳ್ಳನೆಪ ಬಿಟ್ಟು ಈಗಿರುವ ಹಾಗೆ ಚುನಾವಣಾ ನಡೆಸಿ.

ಎನ್. ಶಿವಣ್ಣ, ಎಲ್.ಬಿ.ಎಸ್. ನಗರ, ಯಲಹಂಕ

ವಿಶ್ವಕರ್ಮ ಸಮಾಜ: ರಾಜ್ಯಮಟ್ಟದ ಸಮಾವೇಶ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಖಿಲ ಕರ್ನಾಟಕ ವಿಶ್ವಕರ್ಮ ಸಮಾಜವು ಇದೇ 20ರಂದು ರಾಜ್ಯಮಟ್ಟದ ಸಮಾವೇಶ ಹಾಗೂ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಅರಮನೆ ಮೈದಾನದ ವೈಟ್ ಪೆಟಲ್ಸ್ (ಗೇಟ್ ನಂ. 3)ರಲ್ಲಿ ಹಮ್ಮಿಕೊಂಡಿದೆ.

ಬುಧವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಸಮಾಜದ ರಾಜ್ಯ ಘಟಕದ ಅಧ್ಯಕ್ಷ ಮಳವಳ್ಳಿ ಶ್ರೀನಿವಾಸ್, 'ವಿಶ್ವಕರ್ಮ ಅಭಿವೃದ್ಧಿ ನಿಗಮಕ್ಕೆ ₹100 ಕೋಟಿ ಅನುದಾನ ನೀಡಬೇಕು. ನಿಗಮದಲ್ಲಿ ಬಾಕಿ ಇರುವ ಸಾಲವನ್ನು ಮನ್ನಾ ಮಾಡುವುದು, ವಿಧಾನಸೌಧ, ವಿಕಾಸಸೌಧ ಹಾಗೂ ಶಾಸಕರ ಭವನದ ಆವರಣದಲ್ಲಿ ಅಮರಶಿಲ್ಪಿ ಜಕಣಾಚಾರಿ ಅವರ ಪ್ರತಿಮೆಯನ್ನು ಸ್ಥಾಪಿಸಬೇಕು. ಕೆಪಿಎಸ್‌ಸಿ, ಯುಪಿಎಸ್‌ಸಿ ತರಬೇತಿ ಕೇಂದ್ರ ಸ್ಥಾಪನೆ ಮಾಡುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಲಾಗುವುದು' ಎಂದರು.

'2023-24ನೇ ಶೈಕ್ಷಣಿಕ ಸಾಲಿನ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಶೇ 75ಕ್ಕೂ ಹೆಚ್ಚು ಅಂಕಗಳಿಸಿದ 1,101 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು' ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಸಮಾವೇಶದ ಅಧ್ಯಕ್ಷತೆವಹಿಸಲಿದ್ದು, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಸಮಾವೇಶವನ್ನು ಉದ್ಘಾಟಿಸಲಿದ್ದಾರೆ. ಸಚಿವರಾದ ಜಿ. ಪರಮೇಶ್ವರ, ರಾಮಲಿಂಗಾರೆಡ್ಡಿ ಭಾಗವಹಿಸಲಿದ್ದಾರೆ.



ಪ್ರತಿಭಟನೆ ರಾಜ್ಯ ಸರ್ಕಾರವು ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಮಾರಾಟ ತೆರಿಗೆ ಏರಿಕೆ ಮಾಡಿರುವುದನ್ನು ಖಂಡಿಸಿ ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯೂನಿಸ್ಟ್) ಪಕ್ಷದ ಕಾರ್ಯಕರ್ತರು ಬುಧವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಪುಟ್ಟೇನಹಳ್ಳಿ ಕೆರೆ: ಕಾಮಗಾರಿಗೆ ಎನ್‌ಜಿಟಿ ತಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಕ್ಷಿ ಸಂರಕ್ಷಣಾ ಪ್ರದೇಶವೆಂದು ಘೋಷಿಸಲಾಗಿರುವ ಯಲಹಂಕದ ಪುಟ್ಟೇನಹಳ್ಳಿ ಕೆರೆಯಲ್ಲಿ ಕೈಗೆತ್ತಿಕೊಂಡಿರುವ ಕಾಮಗಾರಿಯನ್ನು ನಿಲ್ಲಿಸುವಂತೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯು (ಎನ್‌ಜಿಟಿ) ಬಿಬಿಎಂಪಿಗೆ ಸೂಚಿಸಿದೆ. ಸಂಬಂಧಿಸಿದ ಪ್ರಾಧಿಕಾರಿಗಳಿಂದ ಅಗತ್ಯ ಅನುಮತಿ ಪಡೆದ ಬಳಿಕವೇ ಕೆರೆಯಂಗಳದಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಬೇಕು ಎಂದು ನಿರ್ದೇಶನ ನೀಡಿದೆ.

ಕೆರೆಗೆ ಕೊಳಚೆ ನೀರು ಸೇರುವುದನ್ನು ತಡೆಯಲು ಬಿಬಿಎಂಪಿಯು ಕಾಮಗಾರಿ ಕೈಗೆತ್ತಿಕೊಂಡಿತ್ತು. ಈ ಕಾಮಗಾರಿ ಪೂರ್ಣವಾಗಿರಲಿಲ್ಲ. ಇತ್ತೀಚೆಗೆ ಸುರಿದ ಭಾರಿ ಮಳೆಯಿಂದಾಗಿ ಲಕ್ಷಾಂತರ ಲೀಟರ್ ಕೊಳಚೆ ನೀರು ಜಲಕಾಯಕ್ಕೆ ಸೇರಿತ್ತು. ಆ ಬಳಿಕ ಪುಟ್ಟೇನಹಳ್ಳಿ ಕೆರೆ ಹಾಗೂ ಪಕ್ಷಿ ಸಂರಕ್ಷಣಾ ಟ್ರಸ್ಟ್ ಎನ್‌ಜಿಟಿಯ ದಕ್ಷಿಣ ವಲಯ ಪೀಠ ಮೆಟ್ಟಿಲೇರಿತ್ತು.

ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಅರುಣ್ ಕುಮಾರ್ ತ್ಯಾಗಿ, ಸತ್ಯಗೋಪಾಲ್ ಕೊರ್ಲಪಾಟಿ ಹಾಗೂ ಎ.ಸೆಂಥಿಲ್ ವೇಲ್ ಅವರನ್ನು ಒಳಗೊಂಡ ಪೀಠವು ಬುಧವಾರ ಈ ನಿರ್ದೇಶನ ನೀಡಿದೆ.

1972ರ ವನ್ಯಜೀವಿ (ಸಂರಕ್ಷಣೆ) ಕಾಯ್ದೆಯಡಿ ಬಿಬಿಎಂಪಿಯು ಇಲಾಖೆಯಿಂದ ಅನುಮತಿ ಪಡೆದಿಲ್ಲ ಎಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಸುಭಾಷ್ ಕೆ. ಮಾಳಖೇಡೆ ಅವರು ವಿಚಾರಣೆಯ ವೇಳೆ ನ್ಯಾಯಪೀಠಕ್ಕೆ ತಿಳಿಸಿದರು. ಕಾನೂನು ಪ್ರಕಾರ ಬಿಬಿಎಂಪಿ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಬಿಬಿಎಂಪಿಯ ಪ್ರಧಾನ ಮುಖ್ಯ ಎಂಜಿನಿಯರ್ ಬಿ.ಎಸ್.ಪ್ರಹ್ಲಾದ್, 'ಮೇ 22ರಂದು ಸುರಿದ ಭಾರಿ ಮಳೆಯಿಂದಾಗಿ ಮಳೆ ನೀರಿನೊಂದಿಗೆ ಕೊಳಚೆ ನೀರು ಸೇರ್ಪಡೆಯಾಗಿ ಕೆರೆಗೆ ನುಗ್ಗಿದೆ. ಬಿಬಿಎಂಪಿ, ಜಲಮಂಡಳಿ ಹಾಗೂ ಇತರೆ ಇಲಾಖೆಗಳ ಪ್ರತಿನಿಧಿಗಳನ್ನೊಳಗೊಂಡ ಸಮಿತಿ ಪರಿಶೀಲನೆ ನಡೆಸಿದೆ.

ಚರಂಡಿ ನೀರನ್ನು ಕೆರೆಯ ಕೆಳಭಾಗಕ್ಕೆ ಸಾಗಿಸಲು ಪ್ರತ್ಯೇಕ ಕಾಲುವೆ ನಿರ್ಮಿಸಲು ಉದ್ದೇಶಿಸಲಾಗಿದೆ. ಕೆರೆಗೆ ಕೊಳಚೆ ನೀರು ಸೇರದಂತೆ ಕ್ರಮ ವಹಿಸಲಾಗಿದೆ' ಎಂದರು.

ಚೈತನ್ಯ ಸ್ಕೂಲ್ ವಿದ್ಯಾರ್ಥಿಗಳು ವಿಶ್ವಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾಸಾ'ದ ಎನ್‌ಎಸ್‌ಎಸ್ ಐಎಸ್‌ಡಿಸಿ ಸಮ್ಮೇಳನದಲ್ಲಿ ನಗರದ ಚೈತನ್ಯ ಸ್ಕೂಲ್‌ನ 167 ವಿದ್ಯಾರ್ಥಿಗಳು ಭಾಗವಹಿಸಿ, ವಿಶ್ವಚಾಂಪಿಯನ್‌ಗಳಾಗಿ ಹೊರಹೊಮ್ಮಿದ್ದಾರೆ ಎಂದು ಚೈತನ್ಯ ಸ್ಕೂಲ್ ಶೈಕ್ಷಣಿಕ ನಿರ್ದೇಶಕಿ ಸೀಮಾ ತಿಳಿಸಿದ್ದಾರೆ.

ವಿಶ್ವದ 30 ದೇಶಗಳ ವಿದ್ಯಾರ್ಥಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದು, ಭಾರತದಿಂದ 28,000 ವಿದ್ಯಾರ್ಥಿಗಳು ಪಾಲ್ಗೊಂಡಿದ್ದಾರೆ. ಅದರಲ್ಲಿ ಚೈತನ್ಯ ಸ್ಕೂಲ್‌ನ ವಿದ್ಯಾರ್ಥಿಗಳ ಸಂಖ್ಯೆ ಮೊದಲ ಸ್ಥಾನದಲ್ಲಿದೆ ಎಂದು ಮಾಹಿತಿ ನೀಡಿದ್ದಾರೆ.

62 ಪ್ರಾಜೆಕ್ಟ್‌ಗಳಲ್ಲಿ ವಿವಿಧ ಪ್ರಶಸ್ತಿಗಳನ್ನು ಪಡೆಯುವ ಮೂಲಕ ಸತತ 11ನೇ ಬಾರಿಗೆ ಚೈತನ್ಯ ಸ್ಕೂಲ್ ವಿಶ್ವ ಚಾಂಪಿಯನ್ ಆಗಿ ಹೊರಹೊಮ್ಮಿದೆ.



ನಾಸಾದ ಎನ್‌ಎಸ್‌ಎಸ್ ಐಎಸ್‌ಡಿಸಿ ಸಮ್ಮೇಳನದಲ್ಲಿ ನಗರದ ಚೈತನ್ಯ ಸ್ಕೂಲ್‌ನ ವಿದ್ಯಾರ್ಥಿಗಳು ಭಾಗವಹಿಸಿ, ವಿಶ್ವಚಾಂಪಿಯನ್‌ಗಳಾಗಿ ಹೊರಹೊಮ್ಮಿದ್ದಾರೆ

62 ಪ್ರಾಜೆಕ್ಟ್‌ಗಳಲ್ಲಿ 7ರಲ್ಲಿ ಮೊದಲ ಸ್ಥಾನ, 11ರಲ್ಲಿ ದ್ವಿತೀಯ ಸ್ಥಾನ, 15ರಲ್ಲಿ ತೃತೀಯ ಸ್ಥಾನ ಹಾಗೂ 29 ಪ್ರಾಜೆಕ್ಟ್‌ಗಳು ಗೌರವಾನ್ವಿತ ಪ್ರಶಸ್ತಿಗಳನ್ನು ಪಡೆದಿವೆ.

ಆರ್ಟಿಸ್ಟಿಕ್ ಮೆರಿಟ್ ವಿಭಾಗದಲ್ಲಿ ಮತ್ತು ಲಿಟರರಿ ಮೆರಿಟ್ ವಿಭಾಗದಲ್ಲಿ ವಿಶ್ವದಲ್ಲಿ ತಲಾ ಒಬ್ಬ ವಿದ್ಯಾರ್ಥಿಗೆ ಮಾತ್ರ 500 ಡಾಲರ್ ನಗದು ಪ್ರಶಸ್ತಿಯನ್ನು ನೀಡಲಾಗುತ್ತಿದ್ದು, ಎರಡೂ ವಿಭಾಗಗಳ ಪ್ರಶಸ್ತಿಗೆ ಚೈತನ್ಯ ಸ್ಕೂಲ್ ವಿದ್ಯಾರ್ಥಿಗಳು ಪಾತ್ರರಾಗಿದ್ದಾರೆ ಎಂದು ವಿವರಿಸಿದ್ದಾರೆ.

24ರವರೆಗೆ ಪ್ರಜ್ವಲ್ ರೇವಣ್ಣ ಎಸ್‌ಐಟಿ ಕಸ್ಟಡಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಹಾಗೂ ಅತ್ಯಾಚಾರ ಆರೋಪದ ಮೂರನೇ ಪ್ರಕರಣದಲ್ಲಿ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ಬಾಡಿ ವಾರಂಟ್ ಮೂಲಕ ಪುನಃ ಪೊಲೀಸ್ ಕಸ್ಟಡಿಗೆ ನೀಡಬೇಕು ಎಂಬ ಪ್ರಾಸಿಕ್ಯೂಷನ್ ಮನವಿಗೆ ಪ್ರಜ್ವಲ್ ಪರ ವಕೀಲರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಈ ಕುರಿತ ವಿಚಾರಣೆಯನ್ನು, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ (42ನೇ ಎಸಿಎಂಎಂ) ನ್ಯಾಯಾಧೀಶ ಕೆ.ಎನ್.ಶಿವಕುಮಾರ್ ಬುಧವಾರ ನಡೆಸಿದರು. ವಿಚಾರಣೆ ವೇಳೆ ಆರೋಪಿ ಪ್ರಜ್ವಲ್ ರೇವಣ್ಣ ವಿಡಿಯೊ ಕಾನ್ಫರೆನ್ಸ್ ಮೂಲಕ ಹಾಜರಾದರು.

ಪ್ರಜ್ವಲ್ ಪರ ವಕೀಲ ಜಿ.ಅರುಣ್, 'ಈಗಾಗಲೇ ಮೊದಲ ಎರಡು ಪ್ರಕರಣಗಳಲ್ಲಿ ತನಿಖಾಧಿಕಾರಿಗಳು ಸಾಕ್ಷ್ಯ ಸಂಗ್ರಹ ಮಾಡಿದ್ದಾರೆ. ಹೀಗಿರುವಾಗ ಪುನಃ ಬಾಡಿ ವಾರಂಟ್ ಮೂಲಕ ಕಸ್ಟಡಿಗೆ ಕೇಳುತ್ತಿರುವುದು ಕಿರುಕುಳವಲ್ಲದೆ ಮತ್ತೇನೂ ಅಲ್ಲ. ಹಾಗಾಗಿ ಕಸ್ಟಡಿಯ ಅಗತ್ಯವಿಲ್ಲ' ಎಂದು ಪ್ರತಿಪಾದಿಸಿದರು.

ಇದನ್ನು ಆಕ್ಷೇಪಿಸಿದ ವಿಶೇಷ ಪ್ರಾಸಿಕ್ಯೂಟರ್ ಅಶೋಕ್ ನಾಯಕ್, 'ಆರೋಪಿಯು ವೈದ್ಯಕೀಯ ತಪಾಸಣೆಗಳು ಮುಜುಗರ ಉಂಟು ಮಾಡುತ್ತಿವೆ ಎಂದು ನ್ಯಾಯಾಲಯದಲ್ಲಿ ಆಕ್ಷೇಪಿಸಿದರೆ ಏನು ಮಾಡಲೂ ಸಾಧ್ಯವಿಲ್ಲ. ಇಂತಹ ಪ್ರಕರಣಗಳಲ್ಲಿ ಅಗತ್ಯ ವೈದ್ಯಕೀಯ ಪರೀಕ್ಷೆ ನಡೆಸಲೇಬೇಕು. ಇವನ್ನೆಲ್ಲಾ ಕಿರುಕುಳ ಎಂದು ಆರೋಪಿಸಲು ಆಗದು. ಪ್ರಕರಣದಲ್ಲಿ ವಿಡಿಯೊಗಳನ್ನು ತಾಳೆ ಮಾಡಬೇಕು, ಸ್ಥಳ ಮಹಜರು, ಹೇಳಿಕೆ ದಾಖಲು, ಧ್ವನಿಯ ಮಾದರಿ ಸೇರಿದಂತೆ ಅಗತ್ಯ ವೈದ್ಯಕೀಯ ಪರೀಕ್ಷೆ ನಡೆಸುವ ಅಗತ್ಯವಿದ್ದು ಕಸ್ಟಡಿಗೆ ನೀಡಬೇಕು' ಎಂದು ಮನವಿ ಮಾಡಿದರು. ಇದನ್ನು ಮನ್ನಿಸಿದ ನ್ಯಾಯಾಧೀಶರು ಆರೋಪಿಯನ್ನು ಇದೇ 24ರ ತನಕ ಎಸ್‌ಐಟಿ ಕಸ್ಟಡಿಗೆ ನೀಡಿ ಆದೇಶಿಸಿದರು.

ಸುಳ್ಳು ಮಾಹಿತಿ ; ಯೂಟ್ಯೂಬರ್ ವಿರುದ್ಧ ಬೆಸ್ಕಾಂ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಧನ ಇಲಾಖೆಗೆ ಸಂಬಂಧಿಸಿದಂತೆ ಸುಳ್ಳು ಮಾಹಿತಿಯಿರುವ ವಿಡಿಯೊ ಹರಿಬಿಟ್ಟ ಯೂಟ್ಯೂಬರ್ ವಿರುದ್ಧ ವಿಧಾನಸೌಧ ಪೊಲೀಸ್ ಠಾಣೆಗೆ ಬೆಸ್ಕಾಂ ದೂರು ನೀಡಿದ್ದು, ಪೊಲೀಸರು ಎನ್‌ಸಿಆರ್ ದಾಖಲಿಸಿಕೊಂಡಿದ್ದಾರೆ.

ಯೂಟ್ಯೂಬರ್ ಶೋಭಾ ಪ್ರಭಾಕರ್ ಎಂಬುವವರ ವಿರುದ್ಧ ಬೆಸ್ಕಾಂ ದೂರು ನೀಡಿದೆ. 'ಶೋಭಾ ಪ್ರೈಮ್ ಟ್ಯೂಬ್ @ ಪ್ರೈಮ್ ಟ್ಯೂಬ್-ಶೋಭಾ' ಎಂಬ ಚಾನಲ್‌ನಲ್ಲಿ, ಇಂಧನ ಇಲಾಖೆಗೆ ಸಂಬಂಧಿಸಿದ ಸುಳ್ಳು ಮಾಹಿತಿಗಳಿರುವ ಐದು ನಿಮಿಷದ ವಿಡಿಯೊ ತುಣುಕನ್ನು ಹರಿಬಿಟ್ಟಿದ್ದಾರೆ ಎಂದು ದೂರು ನೀಡಲಾಗಿದೆ.

ಆ ವಿಡಿಯೊದಲ್ಲಿ, ರೈತರು ತಮ್ಮ ಜಮೀನಿನಲ್ಲಿ ವಿದ್ಯುತ್ ಕಂಬ ಅಥವಾ ಟ್ರಾನ್ಸ್‌ಫಾರ್ಮರ್ ಅಳವಡಿಸಿಕೊಂಡಿದ್ದರೆ ಸರ್ಕಾರ ದಿನಕ್ಕೆ ₹50 ಪರಿಹಾರ ನೀಡಲಿದೆ. ಗೃಹಬಳಕೆದಾರರು ಪ್ರತಿನಿತ್ಯ 2000 ರಿಂದ 5000 ಯೂನಿಟ್ ವಿದ್ಯುತ್ ಬಳಸಿಕೊಳ್ಳಬಹುದು. ಅದಕ್ಕೆ ಸರ್ಕಾರ ₹5000 ಪರಿಹಾರ ಧನ ನೀಡಲಿದೆ ಎಂಬ ಸಂದೇಶವಿದೆ.


ಯೂಟ್ಯೂಬ್ ಹಾಗೂ ಕೆಲ ಸಾಮಾಜಿಕ ಮಾಧ್ಯಮಗಳಲ್ಲಿ ಈ ವಿಡಿಯೊ ಹರಿದಾಡುತ್ತಿದ್ದು, ಅದರಲ್ಲಿರುವ ಎಲ್ಲ ಹೇಳಿಕೆಗಳು ಸಂಪೂರ್ಣ ಸುಳ್ಳು ಮಾಹಿತಿಯಿಂದ ಕೂಡಿವೆ ಎಂದು ಬೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ನಗರದಲ್ಲಿ ಇಂದು

ಉಪನ್ಯಾಸ, ಪುಸ್ತಕ ಪ್ರದರ್ಶನ: 'ಕನ್ನಡದ ವಿವೇಕ ಪರಂಪರೆ' ಕುರಿತು ಉಪನ್ಯಾಸ: ನರಹಳ್ಳಿ ಬಾಲಸುಬ್ರಹ್ಮಣ್ಯ, ಅತಿಥಿ: ನ. ರವಿಕುಮಾರ, ಅಧ್ಯಕ್ಷತೆ: ಎಸ್. ಎನ್. ವೆಂಕಟೇಶ್, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು, ಯಲಹಂಕ ಉಪನಗರ, ಬೆಳಿಗ್ಗೆ 10.15

ನಾಡದೇವಿ ಭುವನೇಶ್ವರಿ ಕಂಚಿನ ಪ್ರತಿಮೆ ಸ್ಥಾಪನೆ ಭೂಮಿಪೂಜೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಬಸವರಾಜ ಹೊರಟ್ಟಿ, ಯು.ಟಿ. ಖಾದರ್, ಶಿವರಾಜ ಎಸ್. ತಂಗಡಗಿ, ಸತೀಶ ಜಾರಕಿಹೊಳಿ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ವಿಧಾನಸೌಧದ ಪಶ್ಚಿಮ ದಿಕ್ಕಿನ ಗೇಟ್ 1 ಮತ್ತು 2ರ ನಡುವೆ ಇರುವ ವಾಹನ ನಿಲುಗಡೆ ಸ್ಥಳ, ಬೆಳಿಗ್ಗೆ 11

'ಚಂಪಾ ಸಿರಿಗನ್ನಡ' ಪ್ರಶಸ್ತಿ ಪ್ರದಾನ: ಬರಗೂರು ರಾಮಚಂದ್ರಪ್ಪ, ಪ್ರಶಸ್ತಿ ಪುರಸ್ಕೃತರು: ಅಲ್ಲಮಪ್ರಭು ಬೆಟ್ಟದೂರು, ಅಧ್ಯಕ್ಷತೆ: ಹಂ.ಪ. ನಾಗರಾಜಯ್ಯ, ಅತಿಥಿಗಳು: ಸಿ.ಕೆ. ರಾಮೇಗೌಡ, ಮೀನಾ ಪಾಟೀಲ, ಆಯೋಜನೆ: ಕರ್ನಾಟಕ ಸ್ವಾಭಿಮಾನಿ ವೇದಿಕೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 4



ಹರಿದಾಸ ವಾಣಿ: ಗಾಯನ: ಗೀತಾ ಭತ್ತದ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, 1ನೇ ಮುಖ್ಯರಸ್ತೆ, ಪವಮಾನಪುರ, ಸಂಜೆ 7

ಶ್ರೀನಿವಾಸ ಕಲ್ಯಾಣ ಪ್ರವಚನ ಮಾಲಿಕೆ-3: ಮಾದನೂರು ಪವಮಾನಾಚಾರ್ಯ, ಆಯೋಜನೆ ಮತ್ತು ಸ್ಥಳ: ಅಭಯ ಲಕ್ಷ್ಮಿ ನರಸಿಂಹಸ್ವಾಮಿ ದೇವಸ್ಥಾನ, ತ್ಯಾಗರಾಜನಗರ, ಸಂಜೆ 7

'ರತ್ನನ ಪ್ರಪಂಚ' ನಾಟಕ ಪ್ರದರ್ಶನ: ನಿರ್ದೇಶನ: ಜೋಸೆಫ್, ಆಯೋಜನೆ: ಕ್ರಿಯೇಟಿವ್ ಥಿಯೇಟರ್, ಸ್ಥಳ: ರಂಗಶಂಕರ ಜೆ.ಪಿ. ನಗರ, ಸಂಜೆ 7.30

ಹರಿದಾಸ ವೈಭವ: ಗಾಯನ: ಅನುಪಮಾ ಶ್ರೀಮಾಲಿ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಜಯನಗರ 5ನೇ ಬಡಾವಣೆ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.
nagaradalli_indu@prajavani.co.in

ಚನ್ನಪಟ್ಟಣ ವಿಧಾನಸಭಾ ಕ್ಷೇತ್ರ ಗೆದ್ದು ಜಿಲ್ಲೆಯಲ್ಲಿ ಜೆಡಿಎಸ್ ನಿರ್ನಾಮ ಮಾಡಲು ತಂತ್ರ

ಸಹೋದರನ ಭವಿಷ್ಯಕ್ಕಾಗಿ ಡಿಕೆಶಿ ಕನಕಪುರ ತ್ಯಾಗ?

● ಓದೇಶ ಸಕಲೇಶಪುರ


ಡಿ.ಕೆ. ಶಿವಕುಮಾರ್, ಡಿ.ಕೆ. ಸುರೇಶ್

ರಾಮನಗರ: ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಲ್ಲಿ ಸಹೋದರ ಡಿ.ಕೆ. ಸುರೇಶ್ ಸೋಲಿನಿಂದ ಆಘಾತಕ್ಕೊಳಗಾಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಮ್ಮ ರಾಜಕೀಯ ನೆಲೆ ಕನಕಪುರವನ್ನು ಸಹೋದರನಿಗೆ ಬಿಟ್ಟು ಕೊಡುತ್ತಾರೆಯೇ?

'ಮತದಾರರು ಬಯಸಿದರೆ, ಪಕ್ಷ ತೀರ್ಮಾನಿಸಿದರೆ ಸ್ಪರ್ಧಿಸದೆ ನನಗೆ ಬೇರೆ ವಿಧಿಯೇ ಇಲ್ಲ' ಎಂದು ಹೇಳುವ ಮೂಲಕ ಚನ್ನಪಟ್ಟಣ ಉಪ ಚುನಾವಣೆಯಲ್ಲಿ ಸ್ಪರ್ಧಿಸುವ ಇಂಗಿತವನ್ನು ಡಿ.ಕೆ. ಶಿವಕುಮಾರ್ ವ್ಯಕ್ತಪಡಿಸಿರುವ ಬೆನ್ನಲ್ಲೇ ಇಂತಹದ್ದೊಂದು ಚರ್ಚೆ ಗರಿಗೆದರಿದೆ.

ರಾಜ್ಯದಲ್ಲಿ ತಮ್ಮದೇ ಪಕ್ಷದ ಸರ್ಕಾರವಿದ್ದರೂ, ತಾನು ಉಪ ಮುಖ್ಯಮಂತ್ರಿ ಆಗಿದ್ದರೂ ಸಹೋದರ ಸೋತಿರುವುದು ಶಿವಕುಮಾರ್ ಅವರಿಗೆ ತೀವ್ರ ಮುಖಭಂಗ ಉಂಟಾಗಿದೆ. ಇದರಿಂದಾಗಿ, ಜಿಲ್ಲೆಯಲ್ಲಿ ನಾಲ್ಕು ದಶಕಗಳಿಂದ ನಡೆಯುತ್ತಿರುವ ಎಚ್.ಡಿ. ದೇವೇಗೌಡ ಮತ್ತು ಡಿ.ಕೆ. ಶಿವಕುಮಾರ್ ಕುಟುಂಬದ ರಾಜಕೀಯ ಸಮರದಲ್ಲಿ ಗೌಡರ ಕೈ ಮೇಲಾಗಿದೆ. ಇದಕ್ಕೆ ತಕ್ಕ ಉತ್ತರ ನೀಡಲು ಡಿ.ಕೆ ಸಹೋದರರು ಕಾಯುತ್ತಿದ್ದಾರೆ.

ಒಂದೇ ಕಲ್ಲಿನಲ್ಲಿ ಎರಡು ಹಕ್ಕಿ: 'ಚನ್ನಪಟ್ಟಣದತ್ತ ಶಿವಕುಮಾರ್ ಚಿತ್ತ ಹರಿಸಿರುವುದರ ಹಿಂದೆ ಒಂದೇ ಕಲ್ಲಿನಲ್ಲಿ ಎರಡು ಹಕ್ಕಿಗಳನ್ನು ಹೊಡೆಯುವ ತಂತ್ರವಿದೆ. ಜೆಡಿಎಸ್‌ನ ಎಚ್.ಡಿ. ಕುಮಾರಸ್ವಾಮಿ ರಾಜೀನಾಮೆಯಿಂದ ತೆರವಾಗಿರುವ ಕ್ಷೇತ್ರವನ್ನು 'ಕೈ' ವಶ ಮಾಡಿಕೊಂಡು ಸೋಲಿನ ಸೇಡು ತೀರಿಸಿಕೊಳ್ಳುವುದು ಮತ್ತು ಜಿಲ್ಲೆಯಲ್ಲಿ ಜೆಡಿಎಸ್ ಅಸ್ತಿತ್ವ ಇಲ್ಲವಾಗಿಸುವುದು ಅವರ ಲೆಕ್ಕಾಚಾರವಾಗಿದೆ' ಎಂದು ಕಾಂಗ್ರೆಸ್‌ನ ಮುಖಂಡರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಶಿವಕುಮಾರ್ ಹಿಂದೆ ಸಾತನೂರನ್ನು ಪ್ರತಿನಿಧಿಸುತ್ತಿದ್ದಾಗ ಚನ್ನಪಟ್ಟಣದ ಈಗಿನ ವಿರುಪಾಕ್ಷಿಪುರ ಹೋಬಳಿ ಸೇರಿದಂತೆ ಕೆಲ ಗ್ರಾಮಗಳು ಆ ಕ್ಷೇತ್ರದ ವ್ಯಾಪ್ತಿಯಲ್ಲಿದ್ದವು. ಇಲ್ಲಿ ಅವರ ಸಂಬಂಧಿಕರು ಹೆಚ್ಚಾಗಿರುವುದರಿಂದ ಈಗಲೂ ಅಲ್ಲಿ ಡಿ.ಕೆ ಸಹೋದರರ ಹಿಡಿತವಿದೆ. ಅವರ ತಂಗಿಯನ್ನು ಚನ್ನಪಟ್ಟಣಕ್ಕೆ ಮದುವೆ ಮಾಡಿಕೊಟ್ಟಿರುವುದರಿಂದ ಕ್ಷೇತ್ರದ ಒಡನಾಟವಿದೆ. ಹಾಗಾಗಿ, ಕ್ಷೇತ್ರವು ಅವರ ಸ್ಪರ್ಧೆಗೆ ಪೂರಕವಾಗಿದೆ' ಎಂದರು.

'ಡಿ.ಕೆ. ಸುರೇಶ್ ಬದಲಿಗೆ ಶಿವಕುಮಾರ್ ಸ್ಪರ್ಧಿಸುವುದರಿಂದ ಗೆಲುವಿನ ಸಾಧ್ಯತೆ ಹೆಚ್ಚು. ಮುಖ್ಯಮಂತ್ರಿ ಹುದ್ದೆ ಮೇಲೆ ಕಣ್ಣಿಟ್ಟಿರುವ ಅವರಿಗೆ ಕ್ಷೇತ್ರದಲ್ಲಿ ಪ್ರಭಾವಿಶಾಲಿ ಮತ್ತು ನಿರ್ಣಾಯಕರಾಗಿರುವ ಒಕ್ಕಲಿಗರು ಸೇರಿದಂತೆ ಅಹಿಂದ ವರ್ಗಗಳು ಕೈ ಹಿಡಿಯಬಹುದೆಂಬ ವಿಶ್ವಾಸವಿದೆ. ಅದೇ ಕಾರಣಕ್ಕೆ ಕ್ಷೇತ್ರದ ಹೋಬಳಿಗಳಿಗೆ ಭೇಟಿ ನೀಡಿ ರಾಜಕೀಯ ವಾತಾವರಣ ಪರಿಶೀಲಿಸುತ್ತಿದ್ದಾರೆ' ಎನ್ನುತ್ತಾರೆ.

ಶಿವಕುಮಾರ್ ಚನ್ನಪಟ್ಟಣಕ್ಕೆ ಬಂದು ಗೆದ್ದರೆ ಕನಕಪುರದಲ್ಲಿ ನಡೆಯುವ ಉಪ ಚುನಾವಣೆಯಲ್ಲಿ ಸುರೇಶ್ ಸುಲಭವಾಗಿ ಗೆಲ್ಲುತ್ತಾರೆ. ಆಗ ಸಹೋದರನಿಗೆ ಸರ್ಕಾರದಲ್ಲಿ ಉತ್ತಮ ಸ್ಥಾನಮಾನ ಕೊಡಿಸಿ, ರಾಜ್ಯ ರಾಜಕಾರಣದಲ್ಲಿ ಸಕ್ರಿಯಗೊಳಿಸುವ ಆಲೋಚನೆ ಶಿವಕುಮಾರ್ ಅವರದ್ದು. ಸದ್ಯದ ಸ್ಥಿತಿ ಹೀಗಿದ್ದು, ಮುಂದೆ ಎದುರಾಳಿಗಳ ಪ್ರತಿತಂತ್ರಕ್ಕೆ ಸಹೋದರರ ನಡೆ ಹೇಗಿರಲಿದೆ ಎಂಬುದನ್ನು ಕಾದು ನೋಡಬೇಕಿದೆ.

ಎಚ್‌ಡಿಕೆ ತಡೆಯಲು ಪ್ರತಿತಂತ್ರ!

ಮಂಡ್ಯ ಲೋಕಸಭಾ ಕ್ಷೇತ್ರದಿಂದ ಗೆದ್ದು ಕೇಂದ್ರ ಸಚಿವರಾಗಿರುವ ಎಚ್.ಡಿ. ಕುಮಾರಸ್ವಾಮಿ ಅವರು ತಾವು ಪ್ರತಿನಿಧಿಸುತ್ತಿದ್ದ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದಿಂದ ಪುತ್ರ ನಿಖಿಲ್ ಕುಮಾರಸ್ವಾಮಿ ಅವರನ್ನು ಕಣಕ್ಕಿಳಿಸಿ ರಾಜಕೀಯ ಭವಿಷ್ಯ ರೂಪಿಸುವ ಯೋಚನೆಯಲ್ಲಿದ್ದಾರೆ. ಜೆಡಿಎಸ್ ಮುಖಂಡರು ಸಹ ನಿಖಿಲ್ ಸ್ಪರ್ಧೆ ಪರ ಒಲವು ತೋರಿದ್ದಾರೆ. ಈ ಸೂಕ್ಷ್ಮ ಅರಿತಿರುವ ಡಿ.ಕೆ. ಶಿವಕುಮಾರ್ ಅವರು ನಿಖಿಲ್ ಕಣಕ್ಕಿಳಿಯದಂತೆ ತಡೆಯುವ ತಂತ್ರವಾಗಿ ಈ ದಾಳ ಉರುಳಿಸಿದ್ದಾರೆ ಎಂದು ವಿಶ್ಲೇಷಿಸಲಾಗುತ್ತಿದೆ.

ಆತ್ಮವಿಶ್ವಾಸ ಹೆಚ್ಚಿಸಿದ ಮತಪ್ರಮಾಣ

ಚನ್ನಪಟ್ಟಣ ಕ್ಷೇತ್ರದಲ್ಲಿ ವರ್ಷದ ಹಿಂದೆ ಎಚ್.ಡಿ. ಕುಮಾರಸ್ವಾಮಿ ಅವರು 96,592 ಮತ ಪಡೆದು, 15,915 ಲೀಡ್‌ನಲ್ಲಿ ಗೆದ್ದಿದ್ದರು.

ಬಿಜೆಪಿಯ ಯೋಗೇಶ್ವರ್ 80,677 ಮತ ಪಡೆದರೆ, ಕಾಂಗ್ರೆಸ್ ಅಭ್ಯರ್ಥಿ ಗಂಗಾಧರ್ ಕೇವಲ 15,374 ಮತ ಪಡೆದಿದ್ದರು.

ಅದಾದ ವರ್ಷದ ಬಳಿಕ ಜರುಗಿದ ಲೋಕಸಭಾ ಚುನಾವಣೆಯಲ್ಲಿ ಸುರೇಶ್ 85,357 ಮತ ಪಡೆದಿದ್ದಾರೆ. ಬಿಜೆಪಿ–ಜೆಡಿಎಸ್ ಒಂದಾಗಿಯೂ ಡಾ. ಸಿ.ಎನ್. ಮಂಜುನಾಥ್ 1,06,971 ಮತಗಳೊಂದಿಗೆ 21,614 ಮತಗಳ ಮುನ್ನಡೆಯಷ್ಟೇ ಪಡೆಯಲು ಸಾಧ್ಯವಾಗಿದೆ. ಕಾಂಗ್ರೆಸ್ ಮತಗಳಿಕೆ 69,983ರಷ್ಟು ಏರಿಕೆಯಾಗಿದೆ.

ಸಹೋದರರ ಪ್ರಯತ್ನವು ಪಕ್ಷದ ಮತಬ್ಯಾಂಕ್ ಅನ್ನು ಗಣನೀಯವಾಗಿ ವೃದ್ಧಿಸಿದೆ. ಕ್ಷೇತ್ರ 'ಕೈ' ವಶ ಮಾಡಿಕೊಳ್ಳಬೇಕೆಂಬ ಸಹೋದರರ ಆಲೋಚನೆಗೆ ಇದು ಸಹ ಪ್ರಮುಖ ಕಾರಣವಾಗಿದೆ.

ಸುದ್ದಿ 2 ನಿಮಿಷ

'ಸರ್ಕಾರ ಶ್ವೇತಪತ್ರ ಹೊರಡಿಸಲಿ'

ಮೈಸೂರು: 'ಗ್ಯಾರಂಟಿ ಯೋಜನೆಗಳಿಂದ ರಾಜ್ಯದ ಅಭಿವೃದ್ಧಿ ದಿಕ್ಕು ತಪ್ಪಿದ್ದು, ಸರ್ಕಾರ ಆರ್ಥಿಕ ದಿವಾಳಿಯಾಗಿದೆ. ಕೂಡಲೇ ಶ್ವೇತಪತ್ರ ಹೊರಡಿಸಬೇಕು' ಎಂದು ವಿಧಾನ ಪರಿಷತ್ ಸದಸ್ಯ ಅಡಗೂರು ಎಚ್.ವಿಶ್ವನಾಥ್ ಆಗ್ರಹಿಸಿದರು.

ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಗ್ಯಾರಂಟಿ ಯೋಜನೆಗಳು ಹಾಗೂ ಇತರ ಅಭಿವೃದ್ಧಿ ಕಾರ್ಯಗಳಿಗೆ ಬಳಕೆಯಾದ ಹಣ ಎಷ್ಟು ಎಂಬುದನ್ನು ಜನತೆಯ ಮುಂದಿಡಬೇಕು' ಎಂದರು.



'ಆರ್ಥಿಕ ನೀತಿ ದುರ್ಬಲವಾಗಿದೆ. ಮಹಿಳೆಯರಿಗೆ ಉಚಿತ ಪ್ರಯಾಣ ಸೌಲಭ್ಯ ಕಲ್ಪಿಸಿದರೂ ಕೆಎಸ್‌ಆರ್‌ಟಿಸಿ ಲಾಭದಲ್ಲಿದೆ ಎನ್ನುತ್ತಾರೆ. ಜನರಿಗೆ ಟೋಪಿ ಹಾಕಲಾಗುತ್ತಿದೆ. ಹಣವಿಲ್ಲದೇ ಸರ್ಕಾರಿ ಕಟ್ಟಡಗಳನ್ನು ಅಡವಿಡಲಾಗುತ್ತಿದೆ. ನೀರು, ವಿದ್ಯುತ್, ಆಸ್ತಿ ನೋಂದಣಿ ಶುಲ್ಕ ದುಪ್ಪಟ್ಟಾಗಿದೆ' ಎಂದು ಆರೋಪಿಸಿದರು.

'ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರಕ್ಕೆ ಆದ್ಯತೆ ನೀಡಬೇಕಿತ್ತು. ಸರ್ಕಾರಿ ಶಾಲೆಗಳು ಮುಚ್ಚುತ್ತಿವೆ. ಪೋಷಕರು ಖಾಸಗಿ ಶಾಲೆಗಳಿಗೆ ದುಬಾರಿ ಶುಲ್ಕ ಕಟ್ಟಿ ಸುಸ್ತಾಗಿದ್ದಾರೆ. 1ರಿಂದ 12ನೇ ತರಗತಿವರೆಗೆ ಉಚಿತ ಶಿಕ್ಷಣ ನೀಡಬೇಕು' ಎಂದು ಒತ್ತಾಯಿಸಿದರು.

'2014ರ ಲೋಕಸಭಾ ಚುನಾವಣೆ ವೇಳೆ ನಟ ದರ್ಶನ್ ನನ್ನ ಪರ ಪ್ರಚಾರ ಮಾಡಿದ್ದರು. ಆಗ ಅವರ ತಾಯಿ ಕಾಂಗ್ರೆಸ್‌ನಲ್ಲಿದ್ದರು. ದರ್ಶನ್ ಬಗ್ಗೆ ಮಾತನಾಡಿ ನಾನೇಕೆ ಸಾಕ್ಷಿ ಹೇಳಲು ಹೋಗಿ ನಿಲ್ಲಬೇಕು. ನಮ್ಮ ನಟರಿಗೆ ರಾಜ್‌ಕುಮಾರ್ ಮಾದರಿಯಾಗಬೇಕಿತ್ತು' ಎಂದರು.

ಅಧಿಕಾರಿಗಳಿಗೆ ಹಳ್ಳಿ ಪ್ರವಾಸ ಕಡ್ಡಾಯ: ಸಚಿವ ಪ್ರಿಯಾಂಕ್

ಬೆಂಗಳೂರು: ಕುಡಿಯುವ ನೀರು ಕಲುಷಿತಗೊಳ್ಳುವ ಪ್ರಕರಣಗಳನ್ನು ತಡೆಯಲು ಅಧಿಕಾರಿಗಳು ವಾರದ ಒಂದು ದಿನ ತಮ್ಮ ವ್ಯಾಪ್ತಿಯ ಗ್ರಾಮಗಳಿಗೆ ಕಡ್ಡಾಯವಾಗಿ ಭೇಟಿ ನೀಡಬೇಕು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಸೂಚಿಸಿದರು.

ವಿಕಾಸಸೌಧದಲ್ಲಿ ಬುಧವಾರ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಮಟ್ಟದಲ್ಲಿ ಹಾಗೂ ಸಹಾಯಕ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕುಮಟ್ಟದಲ್ಲಿ ಪ್ರವಾಸ ಮಾಡಬೇಕು. ನೀರು ಸರಬರಾಜು ವ್ಯವಸ್ಥೆ ಪರಿಶೀಲನೆ ಮಾಡಿದ ನಂತರ ಪ್ರತಿ ವಾರ ಆಯುಕ್ತರಿಗೆ ವರದಿ ಸಲ್ಲಿಸಬೇಕು. ಪ್ರತಿ ತಿಂಗಳ 2ನೇ ತಾರೀಕು ವಿಡಿಯೊ ಕಾನ್ಫರೆನ್ಸ್ ಮೂಲಕ ಪ್ರಗತಿ ಪರಿಶೀಲನೆ ನಡೆಸಲಾಗುವುದು ಎಂದು ಹೇಳಿದರು.

ಈ ಬಾರಿ ಉತ್ತಮ ಮಳೆಯಾಗುವ ನಿರೀಕ್ಷೆ ಇದೆ. ಮಳೆಯ ನೀರಿನ ಜೊತೆ ಕಲ್ಮಶ ಕುಡಿಯುವ ನೀರಿನ ಜೊತೆ ಮಿಶ್ರಣವಾಗುವ ಸಾಧ್ಯತೆ ಇರುತ್ತದೆ. ಹಾಗಾಗಿ, ಯಾವುದೇ ಅಹಿತಕರ ಘಟನೆಗಳು ಸಂಭವಿಸದಂತೆ ಎಚ್ಚರಿಕೆ ವಹಿಸಬೇಕು. ಗ್ರಾಮ ಪಂಚಾಯಿತಿ ಸಿಬ್ಬಂದಿಗೆ ನೀರಿನ ಗುಣಮಟ್ಟ ಪರೀಕ್ಷೆಯ ತರಬೇತಿ ನೀಡಬೇಕು ಎಂದು ಸೂಚಿಸಿದರು.

'ಹಮಾರೆ ಬಾರಹ್' ಚಿತ್ರ ಬಿಡುಗಡೆಗೆ ಹೈಕೋರ್ಟ್ ಅಸ್ತು

ಮುಂಬೈ (ಪಿಟಿಐ): ಕೆಲವು ಆಕ್ಷೇಪಾರ್ಹ ಭಾಗಗಳಿಗೆ ಕತ್ತರಿ ಹಾಕಲು 'ಹಮಾರೆ ಬಾರಹ್' ಚಿತ್ರತಂಡವು ಒಪ್ಪಿದ ಕಾರಣಕ್ಕೆ ಆ ಸಿನಿಮಾ ಬಿಡುಗಡೆಗೆ ಬಾಂಬೆ ಹೈಕೋರ್ಟ್ ಬುಧವಾರ ಅನುಮತಿ ನೀಡಿದೆ.

ಈ ಸಿನಿಮಾ ಜೂನ್ 7ಕ್ಕೆ ಬಿಡುಗಡೆ ಆಗಬೇಕಿತ್ತು. ನಂತರ ಜೂನ್ 14ಕ್ಕೆ ಮುಂದೂಡಲಾಗಿತ್ತು. ಈಗ ಚಿತ್ರವು ಶುಕ್ರವಾರ (ಜೂನ್ 21) ಬಿಡುಗಡೆಯಾಗುವ ಸಾಧ್ಯತೆ ಇದೆ.

ಈ ಚಿತ್ರವು ಕುರಾನ್ ಬಗ್ಗೆ ತಪ್ಪು ಮಾಹಿತಿ ನೀಡುತ್ತದೆ, ಇಸ್ಲಾಮಿಕ್ ನಂಬಿಕೆಗಳನ್ನು ಅವಹೇಳನ ಮಾಡುತ್ತದೆ ಎಂದು ದೂರಿ ಕೆಲವು ಅರ್ಜಿಗಳನ್ನು ಹೈಕೋರ್ಟ್‌ನಲ್ಲಿ ಸಲ್ಲಿಸಲಾಗಿತ್ತು. ಚಿತ್ರದ ಬಿಡುಗಡೆಗೆ ನಿಷೇಧ ಹೇರಬೇಕು ಎಂದು ಅರ್ಜಿಗಳಲ್ಲಿ ಕೋರಲಾಗಿತ್ತು.

ಚಿತ್ರ ವೀಕ್ಷಿಸಿದ ನ್ಯಾಯಮೂರ್ತಿಗಳಾದ ಬಿ.ಪಿ. ಕೊಲಾಬಾವಾಲಾ ಮತ್ತು ಫಿರ್ದೋಷ್ ಪೂನಿವಾಲಾ ಅವರು ಇದ್ದ ವಿಭಾಗೀಯ ಪೀಠವು ಸಿನಿಮಾದಲ್ಲಿ ಕೆಲ ಬದಲಾವಣೆಗೆ ಸಲಹೆ ನೀಡಿತು. ಇದಕ್ಕೆ ಅರ್ಜಿದಾರರು ಹಾಗೂ ಚಿತ್ರತಂಡದವರು ಒಪ್ಪಿದರು.

ಅಗತ್ಯ ಬದಲಾವಣೆಗಳನ್ನು ಮಾಡಿ, ಕೇಂದ್ರೀಯ ಚಲನಚಿತ್ರ ಪ್ರಮಾಣೀಕರಣ ಮಂಡಳಿಯಿಂದ (ಸಿಬಿಎಫ್‌ಸಿ) ಪ್ರಮಾಣಪತ್ರ ಪಡೆಯಲಾಗುತ್ತದೆ ಎಂದು ಚಿತ್ರತಂಡವು ಹೇಳಿದೆ.

ಸಿಬಿಎಫ್‌ಸಿಯಿಂದ ಪ್ರಮಾಣಪತ್ರ ಸಿಗುವ ಮೊದಲೇ ಚಿತ್ರದ ಟ್ರೇಲರ್ ಬಿಡುಗಡೆ ಮಾಡಿದ್ದಕ್ಕೆ ಹೈಕೋರ್ಟ್, ಈ ಚಿತ್ರತಂಡಕ್ಕೆ ₹5 ಲಕ್ಷ ದಂಡ ವಿಧಿಸಿದೆ.

'ಬರ್ನ್‌ಪುರ ಕಂಪನಿ ಮಾದರಿಯಲ್ಲಿ ವಿಐಎಸ್‌ಎಲ್'

ಕಾರ್ಖಾನೆ ಪುನರುಜ್ಜೀವನಗೊಳಿಸಲು ಉಕ್ಕು ಸಚಿವಾಲಯದ ಅಧಿಕಾರಿಗಳೊಂದಿಗೆ ಎಚ್‌ಡಿಕೆ ಸಭೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಶ್ಚಿಮ ಬಂಗಾಳದ ಬರ್ನ್‌ಪುರದಲ್ಲಿರುವ ಭಾರತೀಯ ಕಬ್ಬಿಣ ಮತ್ತು ಉಕ್ಕು ಕಂಪನಿಯ ಅಭಿವೃದ್ಧಿಯ ಮಾದರಿಯಲ್ಲೇ ಭದ್ರಾವತಿಯ ವಿಶ್ವೇಶ್ವರಾಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ (ವಿಐಎಸ್‌ಎಲ್) ಪುನರುಜ್ಜೀವನಗೊಳಿಸಲು ಕೇಂದ್ರ ಉಕ್ಕು ಸಚಿವಾಲಯ ಚಿಂತನೆ ನಡೆಸಿದೆ.

ಭಾರತೀಯ ಕಬ್ಬಿಣ ಮತ್ತು ಉಕ್ಕು ಕಂಪನಿ, ಉಕ್ಕು ಸಚಿವಾಲಯದ ಉನ್ನತ ಅಧಿಕಾರಿಗಳೊಂದಿಗೆ ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವ ಎಚ್.ಡಿ.ಕುಮಾರಸ್ವಾಮಿ ಬುಧವಾರ ಸಭೆ ನಡೆಸಿದರು. ಭದ್ರಾವತಿ ಕಾರ್ಖಾನೆ ಪುನರುಜ್ಜೀವನಗೊಳಿಸಲು ಇರುವ ಅವಕಾಶಗಳ ಬಗ್ಗೆ ಸಮಾಲೋಚನೆ ನಡೆಸಿದರು.

ಬರ್ನ್‌ಪುರದಲ್ಲಿರುವ ಕಾರ್ಖಾನೆ ಈ ಹಿಂದೆ ಭಾರಿ ನಷ್ಟದಲ್ಲಿತ್ತು. ಕೇಂದ್ರ ಸರ್ಕಾರವು ಈ ಕಾರ್ಖಾನೆಯ ಪುನರುಜ್ಜೀವನಕ್ಕೆ ₹16 ಸಾವಿರ ಕೋಟಿ ನೆರವು ನೀಡಿತ್ತು. ಈ ಕಾರ್ಖಾನೆಯನ್ನು ಪ್ರಧಾನಿ ನರೇಂದ್ರ ಮೋದಿ 2015ರಲ್ಲಿ ಉದ್ಘಾಟಿಸಿದ್ದರು. ನಷ್ಟದಲ್ಲಿದ್ದ ಈ ಕಂಪನಿಯು ಮೋದಿ ಅವರ ಒತ್ತಾಸೆಯಿಂದ ಲಾಭದತ್ತ ಸಾಗಿದೆ. ಲಾಭದಲ್ಲಿರುವ ಕಂಪನಿಯನ್ನು ಮತ್ತಷ್ಟು ಲಾಭದತ್ತ ಮುನ್ನಡೆಸಬೇಕು ಎಂದು ಕುಮಾರಸ್ವಾಮಿ ಸೂಚಿಸಿದರು. ಅದೇ ರೀತಿಯಲ್ಲಿ ಭದ್ರಾವತಿ ಕಂಪನಿಯ ಅಭಿವೃದ್ಧಿಪಡಿಸಲು ಯೋಜನೆ ರೂಪಿಸಬೇಕು. ಪ್ರಧಾನಿ ಅವರೊಂದಿಗೆ ಸಮಾಲೋಚಿಸಿ ಅಗತ್ಯ ಅನುದಾನ ಕೊಡಿಸಲು ಪ್ರಯತ್ನ ಪಡುತ್ತೇನೆ ಎಂದು ಸಚಿವರು ಭರವಸೆ ನೀಡಿದರು.

ವಿಐಎಸ್‌ಎಲ್ ಖಾಸಗೀಕರಣ ಮಾಡಲು ಕೇಂದ್ರ ಸಚಿವ ಸಂಪುಟವು 2016ರಲ್ಲಿ ಒಪ್ಪಿಗೆ ನೀಡಿತ್ತು. ಸಂಸ್ಥೆಯನ್ನು ಸಂಪೂರ್ಣವಾಗಿ ಮಾರಾಟ ಮಾಡಲು ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣಾ ಇಲಾಖೆಯು (ಡಿಐಪಿಎಎಂ) ಈ ಹಿಂದೆ ಬಿಡ್ ಕರೆದಿತ್ತು. ಬಿಡ್‌ದಾರರು ಆಸಕ್ತಿ ವಹಿಸದ ಕಾರಣಕ್ಕೆ ಕಾರ್ಖಾನೆಯನ್ನು ಖಾಸಗೀಕರಣ ಮಾಡುವ ಪ್ರಕ್ರಿಯೆಯನ್ನು ಕೇಂದ್ರ ಸರ್ಕಾರ 2022ರ ನವೆಂಬರ್‌ನಲ್ಲಿ ಕೈ ಬಿಟ್ಟಿತ್ತು. ನಂತರ ಸರ್ಕಾರವು ಕಾರ್ಖಾನೆಯನ್ನು ಮುಚ್ಚುವ ಪ್ರಕ್ರಿಯೆ ಆರಂಭಿಸಿತ್ತು. ಸಂಸ್ಥೆಯ ಪುನರುಜ್ಜೀವನದ ಸಾಧ್ಯತೆಗಳ ಪರಿಶೀಲನೆ ನಡೆಸುವಂತೆ ಅಧಿಕಾರಿಗಳಿಗೆ ಕುಮಾರಸ್ವಾಮಿ ಈಗಾಗಲೇ ನಿರ್ದೇಶನ ನೀಡಿದ್ದಾರೆ.

ಬಿಎಚ್‌ಇಎಲ್ ನಿಯೋಗ ಭೇಟಿ: ಕುಮಾರಸ್ವಾಮಿ ಅವರನ್ನು ಭಾರತ್ ಹೆವಿ ಎಲೆಕ್ಟ್ರಿಕಲ್ ಕಂಪನಿ (ಬಿಎಚ್‌ಇಎಲ್) ನಿಯೋಗ ಭೇಟಿ ಮಾಡಿ ಚರ್ಚಿಸಿತು. ಸಂಸ್ಥೆಯ ಕಾರ್ಯ ಚಟುವಟಿಕೆಗಳ ಬಗ್ಗೆ ವ್ಯವಸ್ಥಾಪಕ ನಿರ್ದೇಶಕ ಕೆ.ಸದಾಶಿವ ಮೂರ್ತಿ ಪ್ರಾತ್ಯಕ್ಷಿಕೆ ನೀಡಿದರು. ಸಂಶೋಧನೆ ಮತ್ತು ಅಭಿವೃದ್ಧಿ, ರಕ್ಷಣೆ ವಲಯದಲ್ಲಿ ಉತ್ಪಾದನೆ ಬಗ್ಗೆ ಸಚಿವರು ಮಾಹಿತಿ ಪಡೆದುಕೊಂಡರು.


ಅಮಿತ್ ಶಾ ಅವರೊಂದಿಗೆ ಎಚ್.ಡಿ.ಕುಮಾರಸ್ವಾಮಿ ಸಮಾಲೋಚನೆ ನಡೆಸಿದರು

ಉಪಚುನಾವಣೆ: ಶಾ–ಎಚ್‌ಡಿಕೆ ಚರ್ಚೆ

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಎಚ್.ಡಿ.ಕುಮಾರಸ್ವಾಮಿ ಭೇಟಿ ಮಾಡಿ ಕರ್ನಾಟಕ ರಾಜಕೀಯ ಬೆಳವಣಿಗೆಗಳು ಸೇರಿ ಹಲವಾರು ವಿಷಯಗಳ ಬಗ್ಗೆ ಚರ್ಚೆ ನಡೆಸಿದರು.

ಚನ್ನಪಟ್ಟಣ, ಶಿಗ್ಗಾವಿ ಹಾಗೂ ಸಂಡೂರು ವಿಧಾನಸಭಾ ಕ್ಷೇತ್ರಗಳಿಗೆ ಶೀಘ್ರ ಉಪಚುನಾವಣೆ ಘೋಷಣೆಯಾಗಲಿದೆ. ಈ ಚುನಾವಣೆಯಲ್ಲಿ ಜೆಡಿಎಸ್–ಬಿಜೆಪಿ ಮೈತ್ರಿಯನ್ನು ಮುಂದುವರಿಸುವ ಬಗ್ಗೆ ಉಭಯ ನಾಯಕರು ಚರ್ಚಿಸಿದರು. ಚನ್ನಪಟ್ಟಣದಲ್ಲಿ ಎಚ್.ಡಿ.ಕುಮಾರಸ್ವಾಮಿ ಶಾಸಕರಾಗಿದ್ದರು. ಈ ಕ್ಷೇತ್ರದಲ್ಲಿ ನಿಖಿಲ್ ಕುಮಾರಸ್ವಾಮಿ ಅವರನ್ನು ಕಣಕ್ಕಿಳಿಸಬೇಕು ಎಂದು ಜೆಡಿಎಸ್ ರಾಜ್ಯ ನಾಯಕರು ನಿರ್ಣಯ ತೆಗೆದುಕೊಂಡಿದ್ದಾರೆ. ಇನ್ನೊಂದೆಡೆ, ಬಿಜೆಪಿ ಮುಖಂಡ ಸಿ.ಪಿ.ಯೋಗೇಶ್ವರ ಸ್ಪರ್ಧಿಸಲು ಸಿದ್ಧತೆ ನಡೆಸಿದ್ದಾರೆ. ಈ ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟುಕೊಡಬೇಕು ಎಂದು ಕುಮಾರಸ್ವಾಮಿ ಅವರು ಶಾ ಅವರಿಗೆ ಮನವಿ ಮಾಡಿದರು ಎಂದು ಮೂಲಗಳು ತಿಳಿಸಿವೆ.

ಗುಜರಾತ್‌ನಲ್ಲಿ ಸೆಮಿಕಂಡಕ್ಟರ್ ಉದ್ಯಮದಲ್ಲಿ ಹೂಡಿಕೆ ಮಾಡುತ್ತಿರುವ ಕಂಪನಿಗೆ ₹16,710 ಕೋಟಿ (ಎರಡು ಬಿಲಿಯನ್ ಡಾಲರ್) ಸಹಾಯಧನ ನೀಡಿರುವುದಕ್ಕೆ ಕುಮಾರಸ್ವಾಮಿ ಕಳೆದ ಶುಕ್ರವಾರ ಆಕ್ಷೇಪ ವ್ಯಕ್ತಪಡಿಸಿದ್ದರು. ಮರುದಿನ ನಿಲುವು ಬದಲಿಸಿದ್ದರು. ಈ ವಿಷಯವನ್ನು ಶಾ ಅವರು ಪ್ರಸ್ತಾಪಿಸಿ ಸರ್ಕಾರಕ್ಕೆ ಮುಜುಗರ ಉಂಟು ಮಾಡುವ ಹೇಳಿಕೆ ನೀಡದಂತೆ ಕಿವಿಮಾತು ಹೇಳಿದರು ಎಂದು ಗೊತ್ತಾಗಿದೆ.

ಸತ್ಯಮಂಗಲ ರೈಲಿಗೆ ಎಚ್‌ಡಿಕೆ ಒತ್ತಡ

ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರನ್ನು ಭೇಟಿ ಮಾಡಿದ ಕುಮಾರಸ್ವಾಮಿ ಅವರು ರಾಜ್ಯದ ರೈಲ್ವೆ ಯೋಜನೆಗಳ ಬಗ್ಗೆ ಚರ್ಚೆ ನಡೆಸಿದರು.

ರಾಜ್ಯದಲ್ಲಿ ನನೆಗುದಿಗೆ ಬಿದ್ದಿರುವ ಹಾಗೂ ಹಾಲಿ ನಡೆಯುತ್ತಿರುವ ರೈಲ್ವೆ ಯೋಜನೆಗಳನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಬೇಕು.ಹೊಸ ರೈಲ್ವೆ ಮಾರ್ಗಗಳಿಗೆ ಅನುಮೋದನೆ ನೀಡಿ ಹಣಕಾಸು ನೆರವು ಒದಗಿಸಬೇಕು ಎಂದು ಅವರು ಒತ್ತಾಯಿಸಿದರು.

ಎಚ್.ಡಿ.ದೇವೇಗೌಡ ಕಾಲದಲ್ಲಿ ಮಂಜೂರಾಗಿದ್ದ ಬೆಂಗಳೂರು - ಸತ್ಯಮಂಗಲ- ಚಾಮರಾಜನಗರ (ಕನಕಪುರ - ಮಳವಳ್ಳಿ ಮಾರ್ಗವಾಗಿ) ರೈಲ್ವೆ ಯೋಜನೆಯನ್ನು ಕೈಗೆತ್ತಿಕೊಂಡು ಆದಷ್ಟು ಶೀಘ್ರವಾಗಿ ಪೂರ್ಣಗೊಳಿಸಬೇಕು ಎಂದು ಅವರು ಕೋರಿದರು.

ಇನ್ವೆಸ್ಟ್ ಕರ್ನಾಟಕ 3ಡಿ ಚಿತ್ರ ನ್ಯಾಯಪೀಠದ ಆದೇಶ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇನ್ವೆಸ್ಟ್ ಕರ್ನಾಟಕ 2022ರಲ್ಲಿ (ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ) 3ಡಿ ಚಿತ್ರ ನಿರ್ಮಿಸಲು ನೇಮಕಗೊಂಡಿದ್ದ, 'ಮೆಸರ್ಸ್ ಬಿಬಿಪಿ ಸ್ಟುಡಿಯೊ ವರ್ಚ್ಯುವಲ್ ಭಾರತ್ ಪ್ರೈವೇಟ್ ಲಿಮಿಟೆಡ್ ಕಂಪನಿ'ಗೆ ಬಾಕಿ ಉಳಿಸಿಕೊಂಡಿದ್ದ ಮೊತ್ತವನ್ನು ಪಾವತಿಸಲು ರಾಜ್ಯ ಸರ್ಕಾರಕ್ಕೆ ಸೂಚಿಸಿದ್ದ ಏಕಸದಸ್ಯ ನ್ಯಾಯಪೀಠದ ಆದೇಶವನ್ನು ವಿಭಾಗೀಯ ನ್ಯಾಯಪೀಠ ರದ್ದುಪಡಿಸಿದೆ.

ನ್ಯಾಯಪೀಠದ ಆದೇಶ ಪ್ರಶ್ನಿಸಿ ರಾಜ್ಯ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ಮುಖ್ಯ ನ್ಯಾ. ಎನ್. ವಿ.ಅಂಜಾರಿಯಾ ಮತ್ತು ನ್ಯಾ. ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ ಕುರಿತಂತೆ 'ಮೆಸರ್ಸ್ ಬಿಬಿಪಿ ಸ್ಟುಡಿಯೊ ವರ್ಚ್ಯುವಲ್ ಭಾರತ್ ಪ್ರೈವೇಟ್ ಲಿಮಿಟೆಡ್ ಕಂಪನಿ' ನಿರ್ಮಿಸಿರುವ ಚಿತ್ರವು ಅಗತ್ಯವಿರುವ ಎಲ್ಲಾ ಅಂಶಗಳನ್ನು ಒದಗಿಸಿಲ್ಲ. ವಿಡಿಯೊ ವೀಕ್ಷಿಸಿದ್ದ ಆಂತರಿಕ ಸಮಿತಿಯು; ಚಿತ್ರವು ಅತ್ಯಂತ ಕಳಪೆ ಮತ್ತು ಅಪೂರ್ಣವಾಗಿದೆ ಎಂದು ಗುತ್ತಿಗೆ ರದ್ದುಪಡಿಸಲಾಗಿದೆ' ಎಂದು ನ್ಯಾಯಪೀಠ ತಿಳಿಸಿದೆ.

'ಗುತ್ತಿಗೆ ನಿಯಮಗಳ ಉಲ್ಲಂಘನೆ ವಿಷಯದಲ್ಲಿ ನ್ಯಾಯಾಲಯದ ಪರಿಶೀಲನಾ ವ್ಯಾಪ್ತಿ ಅತ್ಯಂತ ಸೀಮಿತವಾದುದು. ಅಪರೂಪದ ಪ್ರಕರಣದಲ್ಲಿ ಮಾತ್ರವೇ ಇಂತಹ ಪ್ರಕರಣಗಳ ಕುರಿತು ಆದೇಶಿಸಬಹುದಾಗಿದೆ. ಪ್ರಸ್ತುತ ಪ್ರಕರಣದಲ್ಲಿ ವಾಸ್ತವ ವಿಷಯಗಳನ್ನು ಚರ್ಚಿಸದೆ ಬಾಕಿ ಮೊತ್ತ ಪಾವತಿಗೆ ಏಕಸದಸ್ಯ ಪೀಠ ಆದೇಶಿಸುವಂತಿಲ್ಲ. ಒಪ್ಪಂದದ ನಿಯಮಗಳು, ಅದನ್ನು ಜಾರಿ ಮಾಡುವುದು ಮತ್ತು ಉಲ್ಲಂಘಿಸಿರುವುದರ ಕುರಿತಂತೆ ನ್ಯಾಯಾಲಯ ಮಧ್ಯಪ್ರವೇಶಿಸುವಂತಿಲ್ಲ' ಎಂದಿದೆ.

'ಷರತ್ತುಗಳ ಉಲ್ಲಂಘನೆ ವ್ಯಾಜ್ಯಗಳನ್ನು ಕರ್ನಾಟಕ (ದೇಸೀಯ ಮತ್ತು ಅಂತಾರಾಷ್ಟ್ರೀಯ) ನಿಯಮಗಳು–2012ರ ಅಡಿಯಲ್ಲಿ ಮಧ್ಯಸ್ಥಿಕೆ ಕೇಂದ್ರ ಇತ್ಯರ್ಥ ಪಡಿಸಬೇಕಾಗುತ್ತದೆ. ಹೀಗಿರುವಾಗಿ ಏಕಸದಸ್ಯ ನ್ಯಾಯಪೀಠ, ಅರ್ಜಿದಾರರನ್ನು ಮಧ್ಯಸ್ಥಿಕೆ ಕೇಂದ್ರಕ್ಕೆ ರವಾನಿಸಬೇಕಾಗಿತ್ತು. ಬದಲಿಗೆ ಬಾಕಿ ಪಾವತಿಗೆ ಆದೇಶಿಸಿದೆ. ಇದು ನಿಯಮಗಳಿಗೆ ವಿರುದ್ಧವಾಗಿದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ವರದಿ ಜಾರಿ ವಿಳಂಬ: ಅಸಮಾಧಾನ

ಶಿವಮೊಗ್ಗ: ಏಳನೇ ವೇತನ ಆಯೋಗದ ವರದಿ ಜಾರಿಗೆ ಸರ್ಕಾರ ವಿಳಂಬ ನೀತಿ ಅನುಸರಿಸುತ್ತಿರುವುದು ಸರಿಯಲ್ಲ ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಆಯೋಗದ ವರದಿ ಅನುಷ್ಠಾನದ ಕುರಿತು ಮುಂಬರುವ ಸಚಿವ ಸಂಪುಟ ಸಭೆಯಲ್ಲಿ ಸರ್ಕಾರ ತೀರ್ಮಾನ ಕೈಗೊಳ್ಳುವ ವಿಶ್ವಾಸವಿದೆ ಎಂದು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಹಿಂದೆ ವೇತನ ಆಯೋಗವು ಸರ್ಕಾರಕ್ಕೆ ವರದಿ ಸಲ್ಲಿಸಿದ ಒಂದು ತಿಂಗಳ ಒಳಗಾಗಿ ಶಿಫಾರಸುಗಳನ್ನು ಅನುಷ್ಠಾನಗೊಳಿಸುವ ಸಂಪ್ರದಾಯವಿತ್ತು. ಆದರೆ ಏಳನೇ ವೇತನ ಆಯೋಗ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿ ನಾಲ್ಕು ತಿಂಗಳು ಗತಿಸಿವೆ. ಆದರೆ ಇನ್ನೂ ವರದಿ ಜಾರಿಯಾಗಿಲ್ಲ ಎಂದು ಅವರು ಬೇಸರ ವ್ಯಕ್ತಪಡಿಸಿದರು.

ಯುಜಿಸಿ ನೆಟ್ ಪರೀಕ್ಷೆ ರದ್ದು ಸಿಬಿಐ ತನಿಖೆಗೆ ಹಸ್ತಾಂತರ

ನವದೆಹಲಿ (ಪಿಟಿಐ): ಪರೀಕ್ಷಾ ಅಕ್ರಮದಿಂದಾಗಿ ವೈದ್ಯಕೀಯ ಪ್ರವೇಶದ ನೀಟ್ ವಿರುದ್ಧ ದೇಶದಾದ್ಯಂತ ವ್ಯಾಪಕ ಆಕ್ರೋಶ ಭುಗಿಲೆದ್ದ ಬೆನ್ನಲ್ಲೇ ಯುಜಿಸಿಯ ರಾಷ್ಟ್ರೀಯ ಅರ್ಹತಾ ಪರೀಕ್ಷೆಗೂ (ಎನ್‌ಇಟಿ) ಈ ಕಳಂಕ ತಗುಲಿದೆ. ಮಂಗಳವಾರವಷ್ಟೇ ನಡೆದಿದ್ದ ಈ ಪರೀಕ್ಷೆಯನ್ನು ರದ್ದುಪಡಿಸಿ, ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಲಾಗಿದೆ.

ಪರೀಕ್ಷೆಯ ಪಾರದರ್ಶಕತೆಗೆ ಧಕ್ಕೆಯುಂಟಾಗಿರಬಹುದೆಂಬ ಮಾಹಿತಿಗಳು ಲಭಿಸಿರುವುದರಿಂದ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯು ನಡೆಸಿದ ಯುಜಿಸಿ-ನೆಟ್ ಪರೀಕ್ಷೆಯನ್ನು ರದ್ದುಗೊಳಿಸುವಂತೆ ಶಿಕ್ಷಣ ಸಚಿವಾಲಯ ಬುಧವಾರ ಆದೇಶಿಸಿದೆ.

ಹೊಸದಾಗಿ ಪರೀಕ್ಷೆ ನಡೆಸಲು ನಿರ್ಧರಿಸಿದ್ದು, ಇದರ ಮಾಹಿತಿಯನ್ನು ಪ್ರತ್ಯೇಕವಾಗಿ ಹಂಚಿಕೊಳ್ಳಲಾಗುವುದು ಎಂದು ಶಿಕ್ಷಣ ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಹಿಂದಿನ ಪರೀಕ್ಷಾ ವಿಧಾನವನ್ನು ಈ ಬಾರಿ ಬದಲಿಸಿ, ಪೆನ್ ಮತ್ತು ಪೇಪರ್ ಬಳಕೆಯ ಒಎಂಆರ್ ವಿಧಾನದಲ್ಲಿ ಒಂದೇ ದಿನದಲ್ಲಿ ಎರಡು ಪಾಳಿಯಲ್ಲಿ ಪರೀಕ್ಷೆ ನಡೆಸಲಾಗಿತ್ತು.

ದೇಶದಾದ್ಯಂತ 9 ಲಕ್ಷಕ್ಕೂ ಹೆಚ್ಚು ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. 11 ಲಕ್ಷ ಅಭ್ಯರ್ಥಿಗಳು ಪರೀಕ್ಷೆ ಬರೆಯಲು ಹೆಸರು ನೋಂದಾಯಿಸಿದ್ದರು.

'ಗೃಹ ಸಚಿವಾಲಯದ ಅಡಿಯಲ್ಲಿರುವ ಭಾರತೀಯ ಸೈಬರ್ ಅಪರಾಧ ಸಮನ್ವಯ ಕೇಂದ್ರದ (ಐ4ಸಿ) ನ್ಯಾಷನಲ್ ಸೈಬರ್ ಕ್ರೈಮ್ ಥ್ರೆಟ್ ಅನಾಲಿಟಿಕ್ಸ್ ಯೂನಿಟ್‌ನಿಂದ, ಪರೀಕ್ಷೆಯಲ್ಲಿ ಕೆಲವು ಅಕ್ರಮಗಳು ನಡೆದಿರುವ ಬಗ್ಗೆ ಯುಜಿಸಿಗೆ ಮಾಹಿತಿ ಲಭಿಸಿದೆ. ಪರೀಕ್ಷೆಯ ಪಾರದರ್ಶಕತೆ ಮತ್ತು ಸಮಗ್ರತೆಗೆ ಈ ಅಕ್ರಮಗಳಿಂದ ಧಕ್ಕೆ ಉಂಟಾಗಿದೆ' ಎಂದು ಅಧಿಕಾರಿ ಹೇಳಿದ್ದಾರೆ

ಬಿಐಸಿಯಲ್ಲಿ ಸುಸ್ಥಿರ ಅಭಿವೃದ್ಧಿ ಕೇಂದ್ರಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ


ಬಿಐಸಿಯಲ್ಲಿ ಬುಧವಾರ ನಡೆದ ಚಾಣಕ್ಯ ಸುಸ್ಥಿರ ಅಭಿವೃದ್ಧಿ ಕೇಂದ್ರದ ಉದ್ಘಾಟನೆಯಲ್ಲಿ ಮಾಹಿತಿ ಪತ್ರ ಬಿಡುಗಡೆ ಮಾಡಿದ ಸಂದರ್ಭದಲ್ಲಿ ಚಾಣಕ್ಯ ಸುಸ್ಥಿರ ಅಭಿವೃದ್ಧಿ ಕೇಂದ್ರದ ಸಲಹಾ ಮಂಡಳಿ ಅಧ್ಯಕ್ಷ ಸುಬ್ಬಣ್ಣ ಅಯ್ಯಪ್ಪನ್, 'ಝೆರೋಧಾ' ಸಹ ಸಂಸ್ಥಾಪಕ ನಿತಿನ್ ಕಾಮತ್, ಆ್ಯಕ್ಸೆಲ್ ಬೆಂಗಳೂರು ಸ್ಥಾಪಕ ಪಾಲುದಾರ ಪ್ರಶಾಂತ್ ಪ್ರಕಾಶ್, ಚಾಣಕ್ಯ ವಿಶ್ವವಿದ್ಯಾಲಯದ ಸ್ಥಾಪಕ ಕುಲಾಧಿಪತಿ ಎಂ.ಕೆ. ಶ್ರೀಧರ್, ಕೆಂಪೇಗೌಡ ವಿಮಾನ ನಿಲ್ದಾಣದ ವ್ಯವಸ್ಥಾಪಕ ನಿರ್ದೇಶಕ ಹರಿ ಕೆ. ಮಾರರ್, ಚಾಣಕ್ಯ ವಿಶ್ವವಿದ್ಯಾಲಯದ ಕುಲಪತಿ ಎಚ್.ಎಸ್. ಅಶೋಕ್, ಸಹ ಕುಲಪತಿ ಎಂ.ಪಿ. ಕುಮಾರ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಬೆಂಗಳೂರು: ಚಾಣಕ್ಯ ವಿಶ್ವವಿದ್ಯಾಲಯದ ವಿವಿಧ ಉದ್ದೇಶಗಳ ಸುಸ್ಥಿರ ಅಭಿವೃದ್ಧಿ ಕೇಂದ್ರಕ್ಕೆ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ) ಬುಧವಾರ ಚಾಲನೆ ನೀಡಲಾಯಿತು. ಆ್ಯಕ್ಸೆಲ್ ಸಂಸ್ಥಾಪಕ ಪಾಲುದಾರ ಪ್ರಶಾಂತ್ ಪ್ರಕಾಶ್ ಮತ್ತು 'ಝೆರೋಧ' ಸಹ ಸಂಸ್ಥಾಪಕ ನಿತಿನ್ ಕಾಮತ್ ಉದ್ಘಾಟಿಸಿದರು.

ಜೈವಿಕ ಅಧ್ಯಯನದ ಕುರಿತು ಕ್ಲಿಷ್ಟಕರ ಸಮಸ್ಯೆಗಳ ನಿರ್ಮೂಲನೆ, ಭಾರತೀಯ ಜ್ಞಾನ ಪರಂಪರೆ ಹಾಗೂ ಸಾಂಸ್ಕೃತಿಕ ಮೂಲಗಳ ಆಧಾರಿತ ಮಾನವ ಸ್ವಭಾವದ ಬದಲಾವಣೆ, ಸಾಂಸ್ಕೃತಿಕ ಹಾಗೂ ಜನ ಸಮೂಹದ ಜೀವನ ಪದ್ಧತಿಗಳ ಕುರಿತ ಸಂಶೋಧನೆ ಹಾಗೂ ಅದರ ಪ್ರಸಾರ ಮಾಡುವುದು ಕೇಂದ್ರದ ಉದ್ದೇಶ ಎಂದು ಪ್ರಶಾಂತ್ ಪ್ರಕಾಶ್ ತಿಳಿಸಿದರು.

ಭವಿಷ್ಯದ ದೃಷ್ಟಿಕೋನದಿಂದ ಪರಿವರ್ತನಾ ರಾಯಭಾರಿಗಳನ್ನು ಗ್ರಾಮೀಣ ಮಟ್ಟದಲ್ಲಿ ಸ್ಥಾಪಿಸಿ ಬದಲಾವಣೆಯ ವೇಗವರ್ಧಕರನ್ನಾಗಿ ಬಳಸುವುದು. ಸುಸ್ಥಿರ ಅಭಿವೃದ್ಧಿಯ ಭವಿಷ್ಯದ ಆಯಾಮಗಳ ಕುರಿತು ಹೊಸ ನೀತಿಗಳನ್ನು ರಾಜ್ಯ ಸರ್ಕಾರದ ಜೊತೆಯಲ್ಲಿ ರೂಪಿಸುವುದು. ಜೊತೆಗೆ ಕಾಲ ಕಾಲಕ್ಕೆ ವಿವಿಧ ಚಟುವಟಿಕೆಗಳನ್ನು ನಡೆಸುವುದು ಸುಸ್ಥಿರ ಅಭಿವೃದ್ಧಿ ಕೇಂದ್ರದ ಉದ್ದೇಶ ಎಂದರು.

ಚಾಣಕ್ಯ ವಿಶ್ವವಿದ್ಯಾಲಯದ ಕುಲಾಧಿಪತಿ ಎಂ.ಕೆ. ಶ್ರೀಧರ್ ಅಧ್ಯಕ್ಷತೆ ವಹಿಸಿ ಮಾತನಾಡಿ, 'ಸುಸ್ಥಿರ ಭವಿಷ್ಯದ ಸೃಷ್ಟಿಯಲ್ಲಿ ಕ್ರಿಯಾಶೀಲ, ಸಂಶೋಧನೆ ಹಾಗೂ ಪರಿಹಾರ ಸೂಚಿಸುವ ಸಾಮರ್ಥ್ಯವನ್ನು ಹೊಂದುವಂತಾಗಬೇಕು. ಸಮಾಜದ ಎಲ್ಲ ಸ್ತರದ ವ್ಯಕ್ತಿಗಳು ಒಟ್ಟಾಗಿ ಕಾರ್ಯೋನ್ಮುಖರಾಗುವುದರಿಂದ ಬಹಳಷ್ಟು ಸಮಸ್ಯಗಳಿಗೆ ಪರಿಹಾರಗಳನ್ನು ಪಡೆಯಬಹುದು. ಆರೋಗ್ಯಕರ ಹಾಗೂ ಸಮತೋಲಿತ ವಿಶ್ವವನ್ನು ಸೃಷ್ಟಿಸುವುದು ಸುಸ್ಥಿರ ಅಭಿವೃದ್ಧಿ ಕೇಂದ್ರದ ಗುರಿ' ಎಂದು ತಿಳಿಸಿದರು.

ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ವ್ಯವಸ್ಥಾಪಕ ನಿರ್ದೇಶಕ ಹರಿ ಕೆ. ಮಾರರ್, ಇಂಫಾಲ್ ಕೇಂದ್ರೀಯ ಕೃಷಿ ವಿಶ್ವವಿದ್ಯಾಲಯದ ಕುಲಾಧಿಪತಿ ಸುಬ್ಬಣ್ಣ ಅಯ್ಯಪ್ಪನ್, ಚಾಣಕ್ಯ ವಿಶ್ವವಿದ್ಯಾಲಯದ ಸಹ ಕುಲಾಧಿಪತಿ ಎಂ.ಪಿ. ಕುಮಾರ್, ಕುಲಪತಿ ಯಶವಂತ ಡೋಂಗ್ರೆ, ಎಚ್.ಎಸ್. ಅಶೋಕ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ನಾಗರಾಜ್ ರೆಡ್ಡಿ ಇದ್ದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಮನವಿ

'ಆಂಗ್ಲ ಮಾಧ್ಯಮ ಆದೇಶ ಹಿಂಪಡೆಯಿರಿ'

ಬೆಂಗಳೂರು: ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಕನ್ನಡ ಮಾಧ್ಯಮದ ಜೊತೆಗೆ ಆಂಗ್ಲ ಮಾಧ್ಯಮ ತರಗತಿಗಳನ್ನು (ದ್ವಿಭಾಷಾ ಮಾಧ್ಯಮ) ಆರಂಭಿಸಲು ಸರ್ಕಾರ ಹೊರಡಿಸಿರುವ ಆದೇಶವನ್ನು ಹಿಂಪಡೆಯುವಂತೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರಿಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು ಮನವಿ ಸಲ್ಲಿಸಿದರು.

ಸಚಿವರನ್ನು ಬುಧವಾರ ಭೇಟಿಯಾಗಿ ಮನವಿ ಸಲ್ಲಿಸಿ ಮಾತನಾಡಿದ ಅವರು, 'ಸರ್ಕಾರದ ಈ ಆದೇಶವು ಕನ್ನಡ ಭಾಷೆಯಲ್ಲಿ ಶಿಕ್ಷಣ ಒದಗಿಸುವುದಕ್ಕೆ ಹಿನ್ನಡೆಯನ್ನುಂಟು ಮಾಡುತ್ತದೆ. ಕನ್ನಡ ಭಾಷೆಯ ಸಾರ್ವಭೌಮತ್ವಕ್ಕೆ ಧಕ್ಕೆಯನ್ನುಂಟು ಮಾಡುತ್ತದೆ. ಜೊತೆಗೆ, ಇದು ಕನ್ನಡ ಭಾಷಾ ಕಲಿಕಾ ಅಧಿನಿಯಮ 2015ಕ್ಕೆ ವಿರುದ್ಧವಾಗಿದೆ. ಹಾಗಾಗಿ, ಈ ಆದೇಶವನ್ನು ಹಿಂಪಡೆದು ಶಿಕ್ಷಣದಲ್ಲಿ ಕನ್ನಡ ಭಾಷಾ ಮಾಧ್ಯಮವನ್ನು ಉಳಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು' ಎಂದು ಹೇಳಿದರು.

'ಮಕ್ಕಳ ಬೆಳವಣಿಗೆಯಲ್ಲಿ ಆರಂಭಿಕ ಕಲಿಕೆ ಮತ್ತು ಕಲಿಕೆಯ ಭಾಷೆ ನಿರ್ಣಾಯಕ ಪಾತ್ರ ವಹಿಸಲಿದೆ. ಮುಖ್ಯವಾಗಿ ಕಲಿಕೆಯು ಕನ್ನಡದಲ್ಲಿ ಇರಬೇಕು. ಮಗುವಿಗೆ ಗೊತ್ತಿರುವ ಭಾಷೆಯಲ್ಲಿ ಕಲಿಸಿದರೆ ಬೌದ್ಧಿಕ ಬೆಳವಣಿಗೆ ಸಾಧ್ಯವಾಗಲಿದೆ' ಎಂದು ಅವರು ವಿವರಿಸಿದರು.

'ಭಾಷೆ ಎಂಬುದು ಸಂವಹನದ ಮಾಧ್ಯಮವಷ್ಟೇ ಅಲ್ಲದೇ, ಸಂಸ್ಕೃತಿ ಮತ್ತು ಮೌಲ್ಯಯುತ ವ್ಯವಸ್ಥೆಯನ್ನು ಪರಿಚಯಿಸುವ ಸಾಧನವಾಗಿದೆ. ರಾಜ್ಯದ ಮಕ್ಕಳ ಚಿಂತನ ಶಕ್ತಿಗೆ ಕನ್ನಡ ಭಾಷೆ ಭದ್ರ ಬುನಾದಿ ಹಾಕುತ್ತದೆ. ತಾಯ್ನುಡಿಯಲ್ಲಿ ಶಿಕ್ಷಣ ನೀಡುವುದನ್ನು ಅಂತರರಾಷ್ಟ್ರೀಯವಾಗಿ ಒಪ್ಪಿಕೊಳ್ಳಲಾಗಿದೆ' ಎಂದು ಬಿಳಿಮಲೆ ಹೇಳಿದರು.


ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಮನವಿ ಸಲ್ಲಿಸಿದರು. ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ ಹಾನಗಲ್ಲ ಹಾಜರಿದ್ದರು

ಶಾಸಕ ಸೋಮಶೇಖರ್ ಅಧ್ಯಕ್ಷತೆಯಲ್ಲಿ ಪ್ರಗತಿ ಪರಿಶೀಲನಾ ಸಭೆ

ಜಲ ಜೀವನ್ ಮಿಷನ್: ಆಕ್ಷೇಪ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: 'ಜಲಜೀವನ ಮಿಷನ್ ಯೋಜನೆ ಹೆಸರಿನಲ್ಲಿ ಮನೆಮನೆಗೆ ನಲ್ಲಿ ನೀರು ಸರಬರಾಜು ಮಾಡುವ ಯೋಜನೆಯ ಅಗತ್ಯ ಇರಲಿಲ್ಲ. ಇದು ದುಡ್ಡು ಮಾಡುವ ಕಾರ್ಯಕ್ರಮ' ಎಂದು ವಿವಿಧ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಆರೋಪಿಸಿದರು.

ಮಾಗಡಿ ರಸ್ತೆಯ ಬಿಇಎಲ್ ಬಡಾವಣೆಯ ಶಾಸಕರ ಕಚೇರಿಯಲ್ಲಿ ಶಾಸಕ ಎಸ್.ಟಿ. ಸೋಮಶೇಖರ್ ಅಧ್ಯಕ್ಷತೆಯಲ್ಲಿ ನಡೆದ ಜಲ ಜೀವನ್ ಮಿಷನ್ ಯೋಜನೆ ಕಾಮಗಾರಿಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಪಕ್ಷ ಭೇದ ಮರೆತು ಯೋಜನೆ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದರು.

'ಈಗಾಗಲೇ ಮನೆಮನೆಗಳಿಗೆ ಕೊಳಾಯಿ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. ಈಗ ಮತ್ತೊಂದು ಯೋಜನೆಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅನುದಾನದಲ್ಲಿ ಜಾರಿಗೆ ತರಲಾಗಿದೆ' ಎಂದು ದೂರಿದರು. ಕಳಪೆ ಕಾಮಗಾರಿಗಳು, ರಸ್ತೆ ಅಗೆದ ಬಳಿಕ ಮುಚ್ಚದೇ ಹಾಗೇ ಬಿಟ್ಟು ಹೋಗಿರುವುದು, ಒಳಚರಂಡಿ ಒಡೆದು ಸರಿಪಡಿಸದಿವುದರ ಬಗ್ಗೆಯೂ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು.

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಗ್ರಾಮೀಣ ನೀರು ಸರಬರಾಜು ಎಂಜಿನಿಯರಿಂಗ್ ವಿಭಾಗದ ಉಸ್ತುವಾರಿಯಲ್ಲಿ ಕಾಮಗಾರಿ ನಡೆಯುತ್ತಿದ್ದರೂ, ಎಂಜಿನಿಯರ್‌ಗಳ ನಿರ್ಲಕ್ಷ್ಯದಿಂದ ಕಳಪೆ ಕಾಮಗಾರಿ ನಡೆಯುತ್ತಿದೆ ಎಂದು ದೂರಿದರು.

ಕಾಮಗಾರಿಗಳ ನೆಪದಲ್ಲಿ ರಸ್ತೆ ಅಗೆದು, ನೀರಿನ ಪೈಪು, ಒಳ ಚರಂಡಿ ಪೈಪು ಒಡೆದು ಹಾಕಿ ಗುತ್ತಿಗೆದಾರರು ಕಾಣೆಯಾಗುತ್ತಾರೆ. ಎಂಜಿನಿಯರ್‌ಗಳಿಗೆ ಫೋನ್ ಮಾಡಿದರೂ ಸ್ಪಂದಿಸುತ್ತಿಲ್ಲ. ಸ್ಥಳೀಯವಾಗಿ ಸಿಗುವ ಗ್ರಾಮ ಪಂಚಾಯಿತಿ ಸದಸ್ಯರು, ಅಧ್ಯಕ್ಷರಿಗೆ ಜನರು ಶಾಪ ಹಾಕುತ್ತಿದ್ದಾರೆ ಎಂದು ಕಗ್ಗಲೀಪುರ ಗ್ರಾಮ ಪಂಚಾಯಿತಿ ಅಧ್ಯಕ್ಷ ಕೆ.ಎಸ್.ಪರ್ವೀಜ್, ರಾಮೋಹಳ್ಳಿ ಪಂಚಾಯಿತಿ ಮಾಜಿ ಅಧ್ಯಕ್ಷ ವಿ.ವೇಣುಗೋಪಾಲ್, ಚೋಳನಾಯಕನಹಳ್ಳಿ ಪಂಚಾಯಿತಿಯ ಡಿ.ಆನಂದಸ್ವಾಮಿ ದೂರಿದರು.

'ಕಾಮಗಾರಿಗೆ ಸಂಬಂಧ ಇಲ್ಲದೇ ಇದ್ದರೂ ನಾವು ಜನರಿಂದ ಬೈಸಿಕೊಳ್ಳಬೇಕು' ಎಂದು ತಾವರೆಕೆರೆ ಪಂಚಾಯಿತಿ ಟಿ.ಎಲ್.ಕೆಂಪೇಗೌಡ ಬೇಸರ ವ್ಯಕ್ತಪಡಿಸಿದರು.

'ನಾಳೆಯಿಂದಲೇ ಪರಿಶೀಲನೆ ಮಾಡಿ ಸಮಸ್ಯೆ ಪರಿಹರಿಸಲಾಗುವುದು' ಎಂದು ಕಾರ್ಯನಿರ್ವಾಹಕ ಎಂಜಿನಿಯರ್ ಇಂದ್ರಕುಮಾರ್ ಭರವಸೆ ನೀಡಿದರು.

'ಮುಂದೆ ಯಾವುದೇ ಸಮಸ್ಯೆ ಬಂದರೂ ನೀವೇ ಜವಾಬ್ದಾರರಾಗುತ್ತೀರಿ' ಎಂದು ಶಾಸಕ ಎಸ್.ಟಿ.ಸೋಮಶೇಖರ್ ಎಚ್ಚರಿಸಿದರು.


ಪ್ರಗತಿ ಪರಿಶೀಲನಾ ಸಭೆಯಲ್ಲಿ ಶಾಸಕ ಎಸ್.ಟಿ.ಸೋಮಶೇಖರ್ ಮಾತನಾಡಿದರು

ಸರ್ಕಾರದ ಅಭಿಯಾನಕ್ಕೆ ಹಲವು ಜಿಲ್ಲೆಗಳಲ್ಲಿ ರೈತರ ನಿರಾಸಕ್ತಿ

1.09 ಕೋಟಿ ಪಹಣಿಗೆ ಆಧಾರ್ ಲಿಂಕ್

• ಸಂತೋಷ ಜಿಗಳಿಕೊಪ್ಪ

ಪ್ರಜಾವಾಣಿ ವಿಶೇಷ

ಹಾವೇರಿ: ಆಸ್ತಿ ಅಕ್ರಮ ನೋಂದಣಿ ತಡೆಗೆ ರಾಜ್ಯ ಸರ್ಕಾರ ‘ನನ್ನ ಆಧಾರ್‌ದೊಂದಿಗೆ ನನ್ನ ಆಸ್ತಿ ಸುಭದ್ರ’ ಅಭಿಯಾನ ಆರಂಭಿಸಿದೆ. ರಾಜ್ಯದ 4.03 ಕೋಟಿ ಆಸ್ತಿಗಳ ಪೈಕಿ 1.09 ಕೋಟಿ ಆಸ್ತಿ ಪಹಣಿಗೆ ಮಾತ್ರ ಆಧಾರ್ ಜೋಡಣೆ ಆಗಿದೆ. ನಿಗದಿತ ಗುರಿಯಲ್ಲಿ ಈವರೆಗೆ ಶೇ39.82ರಷ್ಟು ಸಾಧನೆ ಮಾಡಲು ಮಾತ್ರ ಸಾಧ್ಯವಾಗಿದೆ.

‘ಬೆಳೆ ಪರಿಹಾರ ಮತ್ತು ಸರ್ಕಾರದ ಇತರೆ ಸೌಲಭ್ಯ ಸಿಗುವುದಿಲ್ಲ’ ಎಂಬ ಭಾವನೆಯಲ್ಲಿ ರೈತರು ತಮ್ಮ ಆಸ್ತಿಗಳ ಪಹಣಿಗೆ (ಉತಾರ್ ಅಥವಾ ಆರ್‌ಟಿಸಿ) ಆಧಾರ್ ಜೋಡಣೆ ಮಾಡಲು ನಿರಾಸಕ್ತಿ ಹೊಂದಿದ್ದಾರೆ.

ರಾಜ್ಯದಲ್ಲಿ ಅತಿ ಹೆಚ್ಚು ಪಹಣಿಗಳಿಗೆ ಆಧಾರ್ ಜೋಡಣೆ ಮಾಡಿರುವ ಜಿಲ್ಲೆಗಳ ಪೈಕಿ ಕೋಲಾರ (ಶೇ 68.50) ಮೊದಲನೇ ಸ್ಥಾನದಲ್ಲಿದೆ. ವಿಜಯನಗರ (ಶೇ 68.37) ಮತ್ತು ದಾವಣಗೆರೆ (ಶೇ 68.04) 2ನೇ ಮತ್ತು 3ನೇ ಸ್ಥಾನದಲ್ಲಿವೆ. ಉಡುಪಿ (ಶೇ 18.77) ಕೊನೆ ಸ್ಥಾನದಲ್ಲಿದೆ.

‘ರಾಜ್ಯದಲ್ಲಿ 4.03 ಕೋಟಿ ಆಸ್ತಿಗಳಿಗೆ ಪಹಣಿ ಇದೆ. ರೈತರು, ಪಹಣಿಗೆ ಆಧಾರ್ ಜೋಡಣೆ ಮಾಡುವುದು ಕಡ್ಡಾಯ. ಕಂದಾಯ ಇಲಾಖೆ ಅಧಿಕಾರಿಗಳು ಜಾಗೃತಿ ಮೂಡಿಸುವುದರ ಜೊತೆಗೆ ಗ್ರಾಮ ಲೆಕ್ಕಾಧಿಕಾರಿಗಳು ಟ್ಯಾಬ್‌ಗಳ ಸಹಿತ ರೈತರ ಬಳಿ ತೆರಳಿ ಆಧಾರ್ ಜೋಡಣೆ ಮಾಡುತ್ತಿದ್ದಾರೆ’ ಎಂದು ಕಂದಾಯ ಇಲಾಖೆ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಪಹಣಿಯನ್ನು ಮುಂದಿಟ್ಟುಕೊಂಡು ಯಾರದ್ದೋ ಆಸ್ತಿಯನ್ನು, ಬೇರೆ ಯಾರೋ ನೋಂದಣಿ ಮಾಡಿಕೊಳ್ಳುತ್ತಿದ್ದಂತಹ ಪ್ರಕರಣಗಳು ಹೆಚ್ಚಾಗಿದ್ದವು. ಇದರ ಜತೆಗೆ ಕೃಷಿ ಜಮೀನು ಇಲ್ಲದವರು ಯಾರದ್ದೋ ಪಹಣಿ ಬಳಸಿ ಸರ್ಕಾರದ ಸೌಲಭ್ಯ ಪಡೆಯುತ್ತಿದ್ದ ಪ್ರಕರಣಗಳೂ ಹಲವು ಇದ್ದವು. ಇದೇ ಕಾರಣಕ್ಕಾಗಿ, ಪಹಣಿಗೆ ಆಧಾರ್ ಜೋಡಿಸಲಾಗುತ್ತಿದೆ ಎಂದು ಅವರು ವಿವರಣೆ ನೀಡಿದರು.



ಆಧಾರ್ ಜೋಡಣೆ ಮಾಡಿದರೆ ಆಸ್ತಿ ಅಕ್ರಮ ನೋಂದಣಿ ಬಂದ್ ಆಗಲಿದೆ. ಬೆಳೆ ಸಮೀಕ್ಷೆ, ಪರಿಹಾರ ವಿತರಣೆ ಸೇರಿ ಸರ್ಕಾರದ ಸೌಲಭ್ಯ ಪಡೆಯುವುದು ಸುಲಭವಾಗಲಿದೆ

ವೀರಮಲ್ಲಪ್ಪ ಪೂಜಾರ, ಹೆಚ್ಚುವರಿ ಜಿಲ್ಲಾಧಿಕಾರಿ, ಹಾವೇರಿ



ಪಹಣಿಗೆ ಆಧಾರ್ ಜೋಡಿಸಿದರೆ, ಜಮೀನು ಜಾಸ್ತಿ ಇದ್ದವರ ರೇಷನ್ ಕಾರ್ಡ್ ಬಂದ್ ಆಗುತ್ತದೆ. ಯಾವುದೇ ಸೌಲಭ್ಯ ಸಿಗುವುದಿಲ್ಲವೆಂಬ ಭಾವನೆ ರೈತರಲ್ಲಿದೆ

ಭುವನೇಶ್ವರ ಶಿಡ್ಲಾಪುರ, ಅಧ್ಯಕ್ಷ, ಕಬ್ಬು ಬೆಳೆಗಾರರ ಸಂಘದ ಜಿಲ್ಲಾ ಘಟಕ

ಕಟೀಲು ದೇವಸ್ಥಾನಕ್ಕೆ ₹40 ಲಕ್ಷ ಮೌಲ್ಯದ ಸ್ವರ್ಣ ಪಾದುಕೆ ಸಮರ್ಪಣೆ

ಮೂಲ್ಕಿ (ದಕ್ಷಿಣ ಕನ್ನಡ): ಶೃಂಗೇರಿ ಶಾರದಾ ಪೀಠದ ಪೀಠಾಧಿಪತಿ ಭಾರತಿ ತೀರ್ಥ ಸ್ವಾಮೀಜಿ ಅವರ ಸನ್ಯಾಸ ಸ್ವೀಕಾರದ ಸುವರ್ಣ ಮಹೋತ್ಸವದ ನೆನಪಿಗಾಗಿ ₹40 ಲಕ್ಷ ಮೌಲ್ಯದ ಸ್ವರ್ಣಪಾದುಕೆ ಹಾಗೂ ಒಡ್ಯಾಣವನ್ನು ಕಟೀಲು ದುರ್ಗಾ ಪರಮೇಶ್ವರಿ ದೇವಸ್ಥಾನಕ್ಕೆ ನೀಡಲಾಗಿದೆ. ಆಂಧ್ರ ಪ್ರದೇಶದ ಪೋಲಿಸೆಟ್ಟಿ ಶ್ಯಾಮ್ ಸುಂದರ್ ಸ್ವರ್ಣಪಾದುಕೆ ಹಾಗೂ ಒಡ್ಯಾಣ ವನ್ನು ಕಟೀಲು ದುರ್ಗಾಪರಮೇಶ್ವರಿ ದೇವಸ್ಥಾನಕ್ಕೆ ಸಮರ್ಪಿಸಿದರು. ಅರ್ಚಕ ಶ್ರೀಹರಿನಾರಾಯಣದಾಸ ಆಸ್ರಣ್ಣ ದೇವಳದ ಪರವಾಗಿ ಪಾದುಕೆ ಸ್ವೀಕರಿಸಿದರು.

ದುಬಾರಿ ಮದ್ಯ ಜುಲೈ 1ರಿಂದ ಅಗ್ಗ

ಒಂದನೇ ಪುಟದಿಂದ...

ಹೆಚ್ಚುವರಿ ಅಬಕಾರಿ ತೆರಿಗೆ ಪ್ರಮಾಣ ರಾಜ್ಯದಲ್ಲಿ ಹೆಚ್ಚು ಇರುವ ಕಾರಣದಿಂದ ನೆರೆಯ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಮದ್ಯದ ದರ ದುಬಾರಿಯಾಗಿದೆ. ಈ ಕಾರಣದಿಂದ ದೊಡ್ಡ ಪ್ರಮಾಣದಲ್ಲಿ ನೆರೆಯ ರಾಜ್ಯಗಳಿಂದ ರಾಜ್ಯಕ್ಕೆ ಅಕ್ರಮವಾಗಿ ಮದ್ಯ ಪೂರೈಕೆಯಾಗುತ್ತಿದೆ. ಗಡಿ ಭಾಗದ ಜಿಲ್ಲೆಗಳ ಜನರು ನೆರೆಯ ರಾಜ್ಯಗಳಿಗೆ ಹೋಗಿ ಮದ್ಯ ಖರೀದಿಸುತ್ತಿದ್ದಾರೆ. ಇದರಿಂದ ರಾಜ್ಯ ಸರ್ಕಾರಕ್ಕೆ ಅಬಕಾರಿ ತೆರಿಗೆ ನಷ್ಟವಾಗುತ್ತಿದೆ. ಮದ್ಯ ಮಾರಾಟ ಹೆಚ್ಚಿಸಿ, ಅಬಕಾರಿ ತೆರಿಗೆ ಮೂಲದ ವರಮಾನವನ್ನು ಹೆಚ್ಚಿಸಿಕೊಳ್ಳುವ ಉದ್ದೇಶದಿಂದ ದರ ಪರಿಷ್ಕರಣೆ ಮಾಡಲಾಗಿದೆ.

ನೆರೆಯ ರಾಜ್ಯಗಳಲ್ಲಿನ ಮದ್ಯ ದರಗಳಿಗೆ ಸಮೀಪಿಸುವಂತೆ ರಾಜ್ಯದಲ್ಲೂ ಮದ್ಯದ ದರ ಪರಿಷ್ಕರಿಸಲು ಕರ್ನಾಟಕ ಅಬಕಾರಿ (ಅಬಕಾರಿ ಸುಂಕಗಳು ಮತ್ತು ಶುಲ್ಕಗಳು) ನಿಯಮಗಳು– 1968ಕ್ಕೆ ತಿದ್ದುಪಡಿ ತರಲು ಮಂಗಳವಾರ ಕರಡು ಅಧಿಸೂಚನೆ ಪ್ರಕಟಿಸಲಾಗಿದೆ. ಜುಲೈ 1ರಿಂದ ಪರಿಷ್ಕೃತ ದರಗಳು ಜಾರಿಗೆ ಬರಲಿವೆ.

ಸ್ಲ್ಯಾಬ್‌ಗಳ ಸಂಖ್ಯೆ ಇಳಿಕೆ: ರಾಜ್ಯದಲ್ಲಿ ಈವರೆಗೆ 18 ಸ್ಲ್ಯಾಬ್‌ಗಳಲ್ಲಿ ಮದ್ಯದ ಮೇಲೆ ಅಬಕಾರಿ ತೆರಿಗೆ ವಿಧಿಸಲಾಗುತ್ತಿತ್ತು. ಈಗ ಸ್ಲ್ಯಾಬ್‌ಗಳ ಸಂಖ್ಯೆಯನ್ನು 16ಕ್ಕೆ ಇಳಿಕೆ ಮಾಡಲಾಗಿದೆ.

ಪ್ರತಿ ಬಲ್ಕ್ ಲೀಟರ್ ಮದ್ಯದ ಘೋಷಿತ ಉತ್ಪಾದನಾ ದರ ₹449 ಮೊದಲ ಸ್ಲ್ಯಾಬ್‌ನಲ್ಲಿದ್ದರೆ, 15,001ರಿಂದ ಮೇಲಿನ ಘೋಷಿತ ದರದ ಎಲ್ಲ ಮದ್ಯಗಳನ್ನು 18ನೇ ಸ್ಲ್ಯಾಬ್‌ನಲ್ಲಿಡಲಾಗಿತ್ತು. ಪರಿಷ್ಕೃತ ಪಟ್ಟಿಯ ಪ್ರಕಾರ, ಪ್ರತಿ ಬಲ್ಕ್ ಲೀಟರ್‌ನ ಘೋಷಿತ ಉತ್ಪಾದನಾ ದರ ₹450 ಹೊಂದಿರುವ ಮದ್ಯ ಮೊದಲ ಸ್ಲ್ಯಾಬ್‌ನಲ್ಲಿದ್ದರೆ, ₹20,001 ಮತ್ತು ಅದಕ್ಕಿಂತ ಹೆಚ್ಚಿನ ಘೋಷಿತ ಉತ್ಪಾದನಾ ದರ ಹೊಂದಿರುವ ಮದ್ಯವನ್ನು 16ನೇ ಸ್ಲ್ಯಾಬ್‌ಗೆ ಸೇರಿಸಲಾಗಿದೆ.

ದುಬಾರಿ ಮದ್ಯಗಳ ತೆರಿಗೆಯೇ ಹೆಚ್ಚು ಇಳಿಕೆ

ಮೊದಲ ಐದು ಸ್ಲ್ಯಾಬ್‌ಗಳಲ್ಲಿ ಈಗ ಇರುವ ಹೆಚ್ಚುವರಿ ಅಬಕಾರಿ ತೆರಿಗೆ ಮತ್ತು ಪರಿಷ್ಕೃತ ಹೆಚ್ಚುವರಿ ಅಬಕಾರಿ ತೆರಿಗೆ ದರದ ಮಧ್ಯೆ ಹೆಚ್ಚಿನ ವ್ಯತ್ಯಾಸಗಳಿಲ್ಲ. ಆದರೆ, ಆರರಿಂದ 16ನೇ ಸ್ಲ್ಯಾಬ್‌ಗಳಲ್ಲಿ ಹೆಚ್ಚುವರಿ ಅಬಕಾರಿ ತೆರಿಗೆ ದರ ಗಣನೀಯವಾಗಿ ಇಳಿಕೆಯಾಗಲಿದೆ.

‘ಈಗ 750 ಎಂ.ಎಲ್. ಗಾತ್ರದ ಬಾಟಲಿಗೆ ₹2,000 ದರ ಇರುವ ಬ್ರ್ಯಾಂಡ್‌ಗಳ ಮದ್ಯದ ದರವು ಜುಲೈ 1ರಿಂದ ₹1,700ರಿಂದ ₹1,800ಕ್ಕೆ ಇಳಿಕೆಯಾಗಲಿದೆ. ಪ್ರತಿ ಬಾಟಲಿಗೆ ₹5,000 ದರ ಇರುವ ಬ್ರ್ಯಾಂಡ್ ಮದ್ಯಗಳ ದರ ₹3,600ರಿಂದ ₹3,700ಕ್ಕೆ ಇಳಿಯಲಿದೆ. ಪ್ರತಿ ಬಾಟಲಿಗೆ ₹7,100 ಇರುವ ಮದ್ಯದ ದರ 5,200ರ ಆಸುಪಾಸಿಗೆ ಕಡಿಮೆಯಾಗಲಿದೆ’ ಎಂದು ಅಬಕಾರಿ ಇಲಾಖೆ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

ಇದೇ ಮಾದರಿಯಲ್ಲಿ ಹೆಚ್ಚಿನ ದರದ ಮದ್ಯಗಳ ದರ ಇಳಿಕೆಯಾಗಲಿದೆ. ಘೋಷಿತ ಉತ್ಪಾದನಾ ದರಕ್ಕೆ ಅನುಗುಣವಾಗಿ ಪ್ರತಿ ಬ್ರ್ಯಾಂಡ್ ಮದ್ಯದ ಪರಿಷ್ಕೃತ ದರ ಪಟ್ಟಿಯನ್ನು ಜೂನ್ ಅಂತ್ಯದ ವೇಳೆಗೆ ಅಬಕಾರಿ ಇಲಾಖೆ ಪ್ರಕಟಿಸಲಿದೆ ಎಂದು ಮೂಲಗಳು ಹೇಳಿವೆ.

ಬಸ್‌ನಲ್ಲಿ ಬಿಟ್ಟಿದ್ದ ₹2.50 ಲಕ್ಷ ಹಣ ಮರಳಿಸಿದ ನಿರ್ವಾಹಕ

ಪ್ರಜಾವಾಣಿ ವಾರ್ತೆ

ರಾಯಚೂರು: ಬಸ್‌ನಲ್ಲಿಯೇ ₹2.50 ಲಕ್ಷ ಇದ್ದ ಬ್ಯಾಗ್ ಬಿಟ್ಟುಹೋಗಿದ್ದ ಪ್ರಯಾಣಿಕನಿಗೆ ಬಸ್ ನಿರ್ವಾಹಕ ಹಾಗೂ ಚಾಲಕ ಅದನ್ನು ಮರಳಿಸಿದ್ದಾರೆ.

ಹುಬ್ಬಳ್ಳಿಯಿಂದ ಹೈದರಾಬಾದ್‌ಗೆ ತೆರಳುತ್ತಿದ್ದ ಬಸ್‌ನಲ್ಲಿ ಮಾನ್ವಿ ಬಸ್ ನಿಲ್ದಾಣದಿಂದ ರಾಯಚೂರಿಗೆ ಬರುತ್ತಿದ್ದ ಪ್ರಯಾಣಿಕ ಸೋಮಶೇಖರ ಪಾಟೀಲ ರಾಯಚೂರಿನಲ್ಲಿ ಇಳಿಯುವಾಗ ಹಣವಿದ್ದ ಬ್ಯಾಗ್ ಅನ್ನು ಬಸ್‌ನಲ್ಲೇ ಬಿಟ್ಟು ಹೋಗಿದ್ದರು.

ಹೈದರಾಬಾದ್ ಬಸ್ ನಿಲ್ದಾಣದಲ್ಲಿ ಎಲ್ಲ ಪ್ರಯಾಣಿಕರು ಇಳಿದ ನಂತರ ಕಂಡಕ್ಟರ್ ಕಣ್ಣಿಗೆ ಬ್ಯಾಗ್ ಕಾಣಿಸಿಕೊಂಡಿದೆ. ಬ್ಯಾಗ್ ತೆರೆದು ನೋಡಿದಾಗ ₹2.50 ಲಕ್ಷ ಇತ್ತು. ಜತೆಗೆ ಬ್ಯಾಂಕ್ ಪಾಸ್‌ಬುಕ್ ಸಹ ಇರುವುದರಿಂದ ಅದರಲ್ಲಿ ಮೊಬೈಲ್ ಸಂಖ್ಯೆ ದೊರೆತಿದೆ.

‘ಬ್ಯಾಂಕ್ ಪಾಸ್‌ಬುಕ್‌ನಲ್ಲಿದ್ದ ಮೊಬೈಲ್ ಸಂಖ್ಯೆಗೆ ಕರೆ ಮಾಡಿ ಸೋಮಶೇಖರ ಪಾಟೀಲ ಅವರನ್ನು ರಾಯಚೂರು ಬಸ್ ನಿಲ್ದಾಣಕ್ಕೆ ಕರೆಸಿಕೊಂಡು ಹಣದ ಸಮೇತ ಬ್ಯಾಗ್ ಹಸ್ತಾಂತರಿಸಿದ್ದೇವೆ’ ಎಂದು ಚಾಲಕ ಮಂಜುನಾಥ ನವಲಗುಂದ ಅವರು ತಿಳಿಸಿದ್ದಾರೆ.

ವಿರಾಮದ ಬಳಿಕ ಸುರಿದ ಮಳೆ

ಪ್ರಜಾವಾಣಿ ವಾರ್ತೆ

ಮೈಸೂರು: ಕೆಲ ದಿನಗಳ ವಿರಾಮದ ಬಳಿಕ ಬುಧವಾರ ಸಂಜೆ ನಗರದ ವಿವಿಧೆಡೆ ಅರ್ಧ ಗಂಟೆ ಕಾಲ ಉತ್ತಮ ಮಳೆಯಾಯಿತು. ಕೆಲವೆಡೆ ಬಿರುಗಾಳಿಯೂ ಬೀಸಿತು. ಮಳೆಯಲ್ಲಿ ಜನ ಸಂಭ್ರಮಿಸಿದರು.

ಕಳೆದ ಕೆಲವು ದಿನಗಳಿಂದ ಬಿಸಿಲಿನ ಝಳ ಹೆಚ್ಚಾಗಿದ್ದು, ಜನ ಚಿಂತೆಯಿಂದಿದ್ದರು. ಬುಧವಾರವೂ ಬೆಳಿಗ್ಗೆ ಉರಿ ಬಿಸಿಲಿತ್ತು. ಮಧ್ಯಾಹ್ನದ ವೇಳೆ ಬಿಸಿಲಿನೊಂದಿಗೆ ಮಳೆಯೂ ಸುರಿಯಿತು. ಸಂಜೆ 4ಕ್ಕೆ ಮೋಡ ಕವಿದು ಜೋರು ಮಳೆಯಾಯಿತು.



ಮೈಸೂರಿನ ಕಲಾಮಂದಿರ ಬಳಿ ಬುಧವಾರ ಸಂಜೆ ಸುರಿದ ಮಳೆಯಲ್ಲೇ ವಾಹನಗಳು ಸಂಚರಿಸಿದವು ಪ್ರಜಾವಾಣಿ ಚಿತ್ರ/ಅನೂಪ್ ರಾಘ್.ಟಿ.

ಭುವನೇಶ್ವರಿ ಪ್ರತಿಮೆ ಇಂದು ಭೂಮಿ ಪೂಜೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಕ್ಕೆ ಕರ್ನಾಟಕವೆಂದು ನಾಮಕರಣಗೊಂಡು ಸುವರ್ಣ ಮಹೋತ್ಸವ ಆಚರಿಸುತ್ತಿರುವ ಸಂಭ್ರಮದ ಹೊತ್ತಿನಲ್ಲಿ ವಿಧಾನಸೌಧದ ಆವರಣದಲ್ಲಿ ‘ನಾಡದೇವಿ ಭುವನೇಶ್ವರಿ’ಯ 25 ಅಡಿ ಎತ್ತರದ ಕಂಚಿನ ಪ್ರತಿಮೆ ಸ್ಥಾಪಿಸಲು ಸರ್ಕಾರ ಮುಂದಾಗಿದೆ.

ಗುರುವಾರ ಬೆಳಿಗ್ಗೆ 10.50ಕ್ಕೆ ಪ್ರತಿಮೆ ಸ್ಥಾಪನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭೂಮಿ ಪೂಜೆ ನೆರವೇರಿಸಲಿದ್ದಾರೆ. ಕನ್ನಡ ಸಂಸ್ಕೃತಿ ಇಲಾಖೆಯು ಈ ಪ್ರತಿಮೆ ಸ್ಥಾಪಿಸುತ್ತಿದೆ ಎಂದು ಸಚಿವ ಶಿವರಾಜ ತಂಗಡಗಿ ತಿಳಿಸಿದ್ದಾರೆ. ಭುವನೇಶ್ವರಿಯ ಕಂಚಿನ ಪ್ರತಿಮೆ ಈಗಾಗಲೇ ತಯಾರಾಗಿದೆ. ಇದರ ಶಿಲ್ಪಿ ಬೆಂಗಳೂರಿನ ಕೆ.ಶ್ರೀಧರ-ಮೂರ್ತಿ. ಕಂಚಿನ ಪ್ರತಿಮೆಯ ಹಿಂಭಾಗ ಕರ್ನಾಟಕದ ಭೂಪಟ ಇರಲಿದೆ. ಈ ಉಬ್ಬು ಶಿಲ್ಪದ ಎತ್ತರ 30 ಅಡಿ. ಒಟ್ಟಾರೆ ಎತ್ತರ ನೆಲ ಮಟ್ಟದಿಂದ 41 ಅಡಿಗಳು. ಒಟ್ಟು ಯೋಜನೆಗೆ ₹21.24 ಕೋಟಿ ವೆಚ್ಚವಾಗಲಿದೆ. ಪ್ರತಿಮೆ ನಿರ್ಮಾಣವಾಗಲಿರುವ ಜಾಗದ ವಿಸ್ತೀರ್ಣ ಉದ್ಯಾನ ಸೇರಿ 4,500 ಚದರ ಮೀಟರ್ ಇರಲಿದೆ.



ಸ್ಥಾಪನೆಯಾಗಲಿರುವ ನಾಡದೇವಿ ಭುವನೇಶ್ವರಿಯ ಪ್ರತಿಮೆಯ ಮಾದರಿ

ಕಣ್ಗಾವಲಿಗೆ ‘ಎಐ’

ಒಂದನೇ ಪುಟದಿಂದ...

'ಮೊದಲ ದಿನ 8,542 (377 ಕೇಂದ್ರಗಳು), ಎರಡನೇ ದಿನ 9001 ಅಭ್ಯರ್ಥಿಗಳು (377 ಕೇಂದ್ರಗಳು) ಪರೀಕ್ಷೆ ಬರೆಯಲಿದ್ದಾರೆ. ಇದು ಯಶಸ್ವಿ ಆದರೆ ಮತ್ತು ಸರ್ಕಾರ ಅನುಮತಿ ನೀಡಿದರೆ ಈ ವ್ಯವಸ್ಥೆಯನ್ನು ಭವಿಷ್ಯದಲ್ಲಿ ನಡೆಸುವ ಸಿಇಟಿ ಮತ್ತು ಎಲ್ಲ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅಳವಡಿಸಿಕೊಳ್ಳಲು ಉದ್ದೇಶಿಸಿದ್ದೇವೆ’ ಎಂದು ವಿವರಿಸಿದರು.

‘ಎಲ್ಲ ವ್ಯವಸ್ಥೆಗಳನ್ನು ಮೀರಿಯೂ ಅಕ್ರಮವಾಗಿ ನೇಮಕಾತಿಯ ಅವಕಾಶ ಗಿಟ್ಟಿಸಿಕೊಂಡವರನ್ನು ತಡೆಯಲು ಕೂಡ ಕ್ರಮ ತೆಗೆದುಕೊಳ್ಳಲಾಗುವುದು. ಪರೀಕ್ಷಾ ಕೇಂದ್ರಗಳಲ್ಲಿ ಸಂಗ್ರಹಿಸಿದ ಅಭ್ಯರ್ಥಿಗಳ ಹಸ್ತ ಮತ್ತು ಬೆರಳಚ್ಚನ್ನು ಉದ್ಯೋಗದಾತ ಇಲಾಖೆಗೆ ನೀಡಲಾಗುವುದು. ಆಯ್ಕೆಯಾದ ಅಭ್ಯರ್ಥಿಗೆ ನೇಮಕಾತಿ ಆದೇಶ ನೀಡುವ ಸಂದರ್ಭದಲ್ಲಿ, ಪರೀಕ್ಷೆಗೆ ಹಾಜರಾಗುವಾಗ ನೀಡಿದ ಹಸ್ತ ಮತ್ತು ಬೆರಳಚ್ಚಿಗೂ, ಆದೇಶ ಪಡೆಯಲು ಬಂದ ಅಭ್ಯರ್ಥಿಯ ಹಸ್ತ ಮತ್ತು ಬೆರಳಚ್ಚು ಹೊಂದಾಣಿಕೆ ಪರಿಶೀಲನೆಗೂ ತೀರ್ಮಾನಿಸಲಾಗಿದೆ’ ಎಂದರು.

ಸಂಕ್ಷಿಪ್ತ ಸುದ್ದಿ

ಸ್ಥಿತಿವಂತರು ‘ಗ್ಯಾರಂಟಿ’ ಲಾಭ ಕೈಬಿಡಲಿ: ವೈದ್ಯ

ಕಾರವಾರ: ‘ಆರ್ಥಿಕವಾಗಿ ಸ್ಥಿತಿವಂತರಾದವರು ಗ್ಯಾರಂಟಿ ಯೋಜನೆಯ ಸೌಲಭ್ಯ ಪಡೆಯುತ್ತಿದ್ದರೆ, ಅದನ್ನು ನಿರಾಕರಿಸಿ ಬಡವರಿಗೆ ಅನುಕೂಲ ಕಲ್ಪಿಸಿಕೊಡಲಿ’ ಎಂದು ಮೀನುಗಾರಿಕೆ ಸಚಿವ ಮಂಕಾಳ ವೈದ್ಯ ಹೇಳಿದರು.



ಮಂಕಾಳ ವೈದ್ಯ

‘ಬಡವರು, ಅಶಕ್ತರ ನೆರವಿಗೆ ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಯ ಸೌಲಭ್ಯ ಕೆಲ ಸ್ಥಿತಿವಂತರಿಗೂ ಸಿಗುತ್ತಿದೆ. ಅಗತ್ಯ ಇಲ್ಲದಿದ್ದರೂ ಆ ಸೌಲಭ್ಯ ಪಡೆಯುವ ಬದಲು ಬಡವರಿಗೆ ಪರಿಣಾಮಕಾರಿಯಾಗಿ ಸಿಗುವಂತೆ ಅನುಕೂಲ ಮಾಡಿಕೊಡಬೇಕೆಂದು ಜನರಲ್ಲಿ ಕೋರುತ್ತೇನೆ’ ಎಂದು ಅವರು ಬುಧವಾರ ಸುದ್ದಿಗಾರರಿಗೆ ತಿಳಿಸಿದರು.

ಕುದುರೆಮುಖ, ಚಾರಣ: ಆನ್‌ಲೈನ್ ಬುಕ್ಕಿಂಗ್ ವ್ಯವಸ್ಥೆ

ಕಳಸ(ಚಿಕ್ಕಮಗಳೂರು): ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಕುದುರೆಮುಖ ಗಿರಿಶ್ರೇಣಿ ಮತ್ತು ನೇತ್ರಾವತಿ ಪೀಕ್ ಚಾರಣಕ್ಕೆ ಅರಣ್ಯ ಇಲಾಖೆಯು ಆನ್‌ಲೈನ್ ಬುಕ್ಕಿಂಗ್ ಕಡ್ಡಾಯಗೊಳಿಸಿದೆ. ಈ ಹೊಸ ನಿಯಮ ಇದೇ 25ರಿಂದ ಜಾರಿಯಾಗಲಿದೆ.

ಎರಡೂ ಗಿರಿಶ್ರೇಣಿಗೆ ದಿನಕ್ಕೆ ಗರಿಷ್ಠ ತಲಾ 300 ಜನರಿಗೆ ಪ್ರವೇಶಾವಕಾಶ ಇರುತ್ತದೆ. ಒಬ್ಬರು ಮೂರು ಜನರಿಗೆ ಮಾತ್ರ ಆನ್‌ಲೈನ್ ಮೂಲಕ ಬುಕ್ಕಿಂಗ್ ಮಾಡಬಹುದು.

ವಾರಾಂತ್ಯದಲ್ಲಿ 200 ಜನರಿಗೆ ಮಾತ್ರ ಆನ್‌ಲೈನ್ ಬುಕ್ಕಿಂಗ್ ಅವಕಾಶ ಇದೆ. ಸ್ಥಳೀಯ 50 ಜನರಿಗೆ ಪ್ರತ್ಯೇಕ ಬುಕ್ಕಿಂಗ್ ವ್ಯವಸ್ಥೆ ರೂಪಿಸಿದ್ದು, ಕುದುರೆಮುಖ ಅಥವಾ ಬೆಳ್ತಂಗಡಿ ವಲಯ ಅರಣ್ಯಾಧಿಕಾರಿಗಳನ್ನು ಸಂಪರ್ಕಿಸಿ ಬುಕಿಂಗ್ ಲಾಗಿನ್ ಐಡಿ ಪಡೆದು ನೋಂದಾಯಿಸಿಕೊಳ್ಳಬಹುದು.

ಕೊನೆ ಕ್ಷಣದಲ್ಲಿ ಚಾರಣಕ್ಕೆ ಬರುವ ಪ್ರವಾಸಿಗರಿಗೆ ಅನುಕೂಲ ಕಲ್ಪಿಸಲು 50 ಪ್ರವಾಸಿಗರಿಗೆ ತತ್ಕಾಲ್ ರೂಪದಲ್ಲಿ ಬುಕ್ಕಿಂಗ್‌ಗೆ ಅವಕಾಶ ಇರಲಿದೆ. ಪ್ರತಿ ಗುರುವಾರ ಮಧ್ಯಾಹ್ನದ ನಂತರ ತತ್ಕಾಲ್ ಬುಕ್ಕಿಂಗ್ ಮಾಡಬಹುದು ಎಂದು ಕುದುರೆಮುಖ ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಎಂ.ಶಿವರಾಮ ಬಾಬು ತಿಳಿಸಿದ್ದಾರೆ.

ಚಾರಣಕ್ಕೆ ಪ್ರತಿ ತಿಂಗಳ 25ನೇ ತಾರೀಕಿನಂದು ಮುಂದಿನ 30 ದಿನಗಳಿಗೆ ಆನ್‌ಲೈನ್ ತಂತ್ರಾಂಶ (www.kudremukhanationalpark.in) ದಲ್ಲಿ ಬುಕಿಂಗ್ ಮಾಡಲು ಅವಕಾಶ ನೀಡಲಾಗಿದೆ.

ಒಬ್ಬರಿಗೆ ನೇತ್ರಾವತಿ ಚಾರಣಕ್ಕೆ ₹500, ಕುದುರೆಮುಖಕ್ಕೆ ₹575 ದರ ನಿಗದಿ ಮಾಡಲಾಗಿದೆ. ಹೋಂ ಸ್ಟೇ ಮಾಲೀಕರು ಕುದುರೆಮುಖ ಅಥವಾ ಬೆಳ್ತಂಗಡಿ ವಲಯ ಅರಣ್ಯಾಧಿಕಾರಿಗಳ ಬಳಿ ಜೂನ್ ಅಂತ್ಯದ ಒಳಗೆ ಅಗತ್ಯ ದಾಖಲಾತಿ ನೀಡಿ ನೋಂದಾಯಿಸಿಕೊಳ್ಳಬೇಕು ಎಂದು ಅವರು ಸೂಚಿಸಿದ್ದಾರೆ.

ಮೂರು ಭಾರತೀಯ ಕೃತಿಗಳಿಗೆ 'ಮೆಮೊರಿ ಆಫ್ ವರ್ಲ್ಡ್' ಗರಿ

ಚನ್ನಬಸಪ್ಪ ರೊಟ್ಟಿ

ವಿಶ್ವಸಂಸ್ಥೆಯ ಪ್ರಮುಖ ಅಂಗಸಂಸ್ಥೆ UNESCO (United Nations Educational, Scientific and Cultural Organization) ತನ್ನ 'Memory of the World' (MOW) ಅಭಿಯಾನಕ್ಕೆ ಭಾರತದ ಮೂರು ಸಾಹಿತ್ಯ ಕೃತಿಗಳನ್ನು ಸೇರಿಸಿದೆ. 'MOW'ಗೆ ಸೇರ್ಪಡೆಯಾದ ಭಾರತೀಯ ಕೃತಿಗಳೆಂದರೆ; ರಾಮಚರಿತಮಾನಸ, ಪಂಚತಂತ್ರ ಮತ್ತು ಸಹೃದಯಲೋಕ-ಲೋಕನ. ಮಂಗೋಲಿಯಾದ ರಾಜಧಾನಿ ಉಲಾನ್‌ಬಾಟರ್‌ನಲ್ಲಿ ನಡೆದ 'MOW'ನ ಏಷ್ಯಾ ಮತ್ತು ಪೆಸಿಫಿಕ್ ವಿಶ್ವ ಸಮಿತಿಯ (MOWCAP) 10ನೇ ಸಭೆಯಲ್ಲಿ ಈ ಭಾರತೀಯ ಕೃತಿಗಳ ಸೇರ್ಪಡೆಯ ನಿರ್ಣಯ ಕೈಗೊಳ್ಳಲಾಯಿತು.

IGNCA ಮಹತ್ವದ ಪಾತ್ರ: 'ಇಂಟರ್‌ನ್ಯಾಷನಲ್ ಮೆಮೊರಿ ಆಫ್ ದಿ ವರ್ಲ್ಡ್ ರಿಜಿಸ್ಟರ್'ನಲ್ಲಿ ಭಾರತದ ಕೃತಿಗಳನ್ನು ಸೇರಿಸುವಲ್ಲಿ ದೆಹಲಿಯಲ್ಲಿರುವ ಇಂದಿರಾ ಗಾಂಧಿ ನ್ಯಾಷನಲ್ ಸೆಂಟರ್ ಫಾರ್ ದಿ ಆರ್ಟ್ಸ್ (IGNCA) ಮಹತ್ವದ ಪಾತ್ರ ವಹಿಸಿದೆ. IGNCA ಈ ಕುರಿತು MOWCAP ಗೆ ಮುಂಚೆಯೇ ನಾಮನಿರ್ದೇಶನ ಸಲ್ಲಿಸಿತ್ತು. ನಂತರ MOWCAP ನ 10ನೇ ಸಭೆಯಲ್ಲಿ ಉಪಸ್ಥಿತರಿದ್ದ IGNCA ಕಲಾ ನಿಧಿ ವಿಭಾಗದ ಡೀನ್ (ಆಡಳಿತ) ಮತ್ತು ವಿಭಾಗದ ಮುಖ್ಯಸ್ಥ ರಮೇಶ್ ಚಂದ್ರ ಗೌರ್, ರಾಮಚರಿತಮಾನಸ, ಪಂಚತಂತ್ರ ಮತ್ತು ಸಹೃದಯಲೋಕ-ಲೋಕನ ಕೃತಿಗಳನ್ನು 'MOW' ಪಟ್ಟಿಗೆ ಸೇರಿಸುವ ಕುರಿತು ಪ್ರಸ್ತಾಪ ಮಂಡಿಸಿ, ಈ ಕೃತಿಗಳ ಮಹತ್ವವನ್ನು ಸಭೆಗೆ ವಿವರಿಸಿದರು. ತದನಂತರ ಯುನೆಸ್ಕೋದ ಮಹಾನಿರ್ದೇಶಕಿ ಆಡ್ರೆ ಅಜೌಲೆ ನೇತೃತ್ವದಲ್ಲಿ ಸಭೆ ಸೇರಿದ್ದ ಸದಸ್ಯ ರಾಷ್ಟ್ರಗಳ 38 ಪ್ರತಿನಿಧಿಗಳು, 40 ವೀಕ್ಷಕರು ಮತ್ತು ನಾಮನಿರ್ದೇಶಿತರು ಈ ಪ್ರಸ್ತಾವಕ್ಕೆ ಒಪ್ಪಿಗೆ ಸಲ್ಲಿಸಿದರು.

ಈ ಬಾರಿ 56 ದೇಶಗಳು ಮತ್ತು ಸಂಸ್ಥೆಗಳಿಂದ 64 ಹೊಸ ಸಂಗ್ರಹಗಳನ್ನು ಹೊಸದಾಗಿ, 'ಮೆಮೊರಿ ಆಫ್ ದಿ ವರ್ಲ್ಡ್ ರಿಜಿಸ್ಟರ್'ಗೆ ಸೇರಿಸಲು UNESCO ಕಾರ್ಯನಿರ್ವಾಹಕ ಮಂಡಳಿ ಸರ್ವಾನುಮತದ ನಿರ್ಧಾರ ಕೈಗೊಂಡಿದೆ. ಈ 64 ಸಂಗ್ರಹಗಳಲ್ಲಿ ಭಾರತದ ಮೂರು ಕೃತಿಗಳು ಸೇರಿದಂತೆ ಸೂಫಿ ಕವಿ ಮತ್ತು ತತ್ವಜ್ಞಾನಿ ಮಾವ್ಲಾನಾ ಅವರ ಕೃತಿಗಳು, EMI ಆರ್ಕೈವ್ ಟ್ರಸ್ಟ್‌ನ ದಾಖಲೆಗಳು ಮತ್ತು ಧ್ವನಿ ದಾಖಲೆಗಳು (100,000 ಕ್ಕೂ ಹೆಚ್ಚು ರೆಕಾರ್ಡಿಂಗ್‌ಗಳು, ಸಂಗೀತ, ನಗರ ಮತ್ತು ಗ್ರಾಮೀಣ ಸಂಪ್ರದಾಯಗಳು ಮತ್ತು 1897 ರಿಂದ 1914 ರವರೆಗಿನ ಮೌಖಿಕ ರಚನೆಗಳು), ಅಲಿಪ್ತ ಚಳವಳಿ ಅನುಮೋದಿಸಿದ ರಾಷ್ಟ್ರಗಳ ಮೊದಲ ಸಭೆಯ ದಾಖಲೆಗಳು, ಕೆನಡಾದ ಸ್ಥಳೀಯ ಮಕ್ಕಳ ಸಮೀಕರಣ, ಉಕ್ರೇನ್ ಸಲ್ಲಿಸಿದ ಬಾಬಿ ಯಾರ್ ನಾಜಿ ಹತ್ಯಾಕಾಂಡಗಳ ಆರ್ಕೈವ್‌ಗಳು ಮತ್ತು ಕ್ಲೌಡ್ ಲ್ಯಾಂಜ್‌ಮನ್‌ರ ಹತ್ಯಾಕಾಂಡದ ಚಿತ್ರ, ಶೋಹ್ ಮತ್ತು ಅದರ 200 ಗಂಟೆಗಳ ಆರ್ಕೈವಲ್ ದೃಶ್ಯಾವಳಿಗಳು, ಫ್ರಾನ್ಸ್ ಮತ್ತು ಜರ್ಮನಿ ಸಲ್ಲಿಸಿದ ಗುಲಾಮಗಿರಿ ಸ್ಮರಣೆಯ ಚಿತ್ರಗಳು ಪ್ರಮುಖವಾಗಿವೆ.



ಏನಿದು ಮೆಮೊರಿ ಆಫ್ ದಿ ವರ್ಲ್ಡ್?

ಮೆಮೋರಿ ಆಫ್ ದಿ ವರ್ಲ್ಡ್ (MOW) ಕಾರ್ಯಕ್ರಮವು UNESCO 1992 ರಲ್ಲಿ ಪ್ರಾರಂಭಿಸಿದ ಜಾಗತಿಕ ಉಪಕ್ರಮವಾಗಿದೆ. ಏಷ್ಯಾ ಪೆಸಿಫಿಕ್ ಪ್ರದೇಶದಲ್ಲಿನ ದಾಖಲೆಗಳನ್ನು ಸಂರಕ್ಷಿಸಲು 1998 ರಲ್ಲಿ 'ಮೆಮೊರಿ ಆಫ್ ದಿ ವರ್ಲ್ಡ್ ಕಮಿಟಿ ಫಾರ್ ಏಷ್ಯಾ ಮತ್ತು ಪೆಸಿಫಿಕ್' (MOWCAP) ಎಂಬ ನಿರ್ದಿಷ್ಟ ಶಾಖೆ ಸ್ಥಾಪಿಸಲಾಯಿತು. MOWCAP ಯುನೆಸ್ಕೋದ 43 ಸದಸ್ಯ ರಾಷ್ಟ್ರಗಳನ್ನು ಒಳಗೊಂಡಿದೆ. 'ಮೆಮೊರಿ ಆಫ್ ದಿ ವರ್ಲ್ಡ್' (MOW) ಜಾಗತಿಕವಾಗಿ ಮನ್ನಣೆ ಪಡೆದಿರುವ ಮಾನವೀಯ ಪರಂಪರೆಯ ಸಾಕ್ಷ್ಯಚಿತ್ರಗಳು, ಶಾಸನಗಳು, ಕೃತಿಗಳು, ಕಾವ್ಯಗಳು, ಹಸ್ತಪ್ರತಿಗಳು, ಚಿತ್ರಗಳು, ಮತ್ತಿತರ ಅತ್ಯಮೂಲ್ಯ ದಾಖಲೆಗಳನ್ನು ಸಂರಕ್ಷಿಸುವ ಹಾಗೂ ಈ ಹಿರಿದಾದ ಪರಂಪರೆ ಸಾರ್ವಜನಿಕ ಸ್ಮರಣೆಯಿಂದ ಮರೆಯಾಗದೇ ಇರುವಂತೆ ನೋಡಿಕೊಳ್ಳುವ ಗುರಿಯನ್ನು ಹೊಂದಿದೆ. MOW ವಿಶ್ವಾದ್ಯಂತ ಇರುವ ಗ್ರಂಥಾಲಯ ಪ್ರತಿಗಳು, ಸಂಗ್ರಹಣೆಗಳ ಸಂರಕ್ಷಣೆ ಹಾಗೂ ಪ್ರಸರಣವನ್ನು ಉತ್ತೇಜಿಸುತ್ತದೆ. ಅಂತರರಾಷ್ಟ್ರೀಯ, ಪ್ರಾದೇಶಿಕ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಪ್ರಾಮುಖ್ಯತೆ ಪಡೆದಿರುವ ಪರಂಪರಾತ್ಮಕ ದಾಖಲೆಗಳನ್ನು ಗುರುತಿಸಲು, ಸಂರಕ್ಷಿಸಲು ಮತ್ತು ನಿರ್ವಹಿಸಲು MOW ಸಹಾಯ ಮಾಡುತ್ತದೆ. ಇದರಿಂದ ಸಂಶೋಧನೆ, ಶಿಕ್ಷಣಕ್ಕೂ ಅನುಕೂಲವಾಗುತ್ತದೆ. ಇಲ್ಲಿಯವರೆಗೆ, 'Memory of the World'ನ 'ಇಂಟರ್‌ನ್ಯಾಷನಲ್ ಮೆಮೊರಿ ಆಫ್ ದಿ ವರ್ಲ್ಡ್ ರಿಜಿಸ್ಟರ್'ನಲ್ಲಿ 494 ಅತ್ಯಮೂಲ್ಯ ದಾಖಲೆಗಳನ್ನು ನೋಂದಾಯಿಸಲಾಗಿದೆ.

ಡಿಜಿಟಲೀಕರಣದ ಮೂಲಕ ಅಂತರ್ಜಾಲದಲ್ಲಿ ಈ ಅತ್ಯಮೂಲ್ಯ ದಾಖಲೆಗಳನ್ನು ಪ್ರಕಟಿಸುವ ಮೂಲಕ ಅವುಗಳನ್ನು ಸಂರಕ್ಷಿಸುವ ಹಾಗೂ ಅವುಗಳು ಎಲ್ಲರಿಗೂ ಲಭಿಸುವಂತೆ ನೋಡಿಕೊಳ್ಳುವ ಕಾರ್ಯವನ್ನು MOW ಮಾಡುತ್ತದೆ. ಡಿಜಿಟಲೀಕರಣ ಪ್ರಕ್ರಿಯೆ ದುಬಾರಿ ಆಗಿರುವುದರಿಂದ UNESCO ಈ ಕಾರ್ಯಕ್ಕೆ ಸಾಕಷ್ಟು ಹಣಕಾಸು ಬೆಂಬಲವನ್ನು ಒದಗಿಸುತ್ತದೆ. ಈ ನಿಟ್ಟಿನಲ್ಲಿ ಕಳೆದ ಮೂರು ದಶಕಗಳಲ್ಲಿ, UNESCO 94 ರಾಷ್ಟ್ರಗಳಲ್ಲಿ 'ನ್ಯಾಷನಲ್ ಮೆಮೊರಿ ಆಫ್ ದಿ ವರ್ಲ್ಡ್' ಸಮಿತಿಗಳನ್ನು ಸ್ಥಾಪಿಸಿದೆ.

ರಾಮಚರಿತಮಾನಸ

16ನೇ ಶತಮಾನದಲ್ಲಿ ಗೋಸ್ವಾಮಿ ತುಳಸಿದಾಸರಿಂದ ರಚನೆಗೊಂಡಿರುವ 'ರಾಮಚರಿತಮಾನಸ' ಕೃತಿಯನ್ನು ಮೂಲತಃ ಅವಧಿ ಉಪಭಾಷೆಯಲ್ಲಿ ಬರೆಯಲಾಗಿದೆ. ವಾಲ್ಮೀಕಿ ರಾಮಾಯಣಕ್ಕಿಂತ ಭಿನ್ನವಾಗಿ, ಇದು ಶಿವನ ಪರಿಚಾರಕರ ಮೇಲಿನ ಶಾಪದಿಂದ ಪ್ರಾರಂಭವಾಗುತ್ತದೆ. ತುಳಸಿದಾಸರು ಅಕ್ಬರನ ಆಳ್ವಿಕೆ ಕಾಲದಲ್ಲಿ ಇದನ್ನು ರಚಿಸಿದರು. ಈ ಕೃತಿಯು ಏಳು ಕಾಂಡಗಳನ್ನು ಒಳಗೊಂಡಿದೆ. ತುಳಸಿದಾಸರು ತಮ್ಮ ಈ ಕೃತಿಯಲ್ಲಿ ಹನುಮ ಮತ್ತು ಶಿವ ದರ್ಶನಗಳನ್ನು ಪ್ರತಿಬಿಂಬಿಸಿದ್ದು, ಈ ಕೃತಿ ವೇದಾಂತ ಮತ್ತು ಭಕ್ತಿಯ ತತ್ತ್ವಚಿಂತನೆಗಳನ್ನು ಹುದುಗಿಸಿಕೊಂಡಿದೆ ಮತ್ತು ರಾಮಾಯಣ ಮಾದರಿಯ ಚೌಪೈಗಳು ಮತ್ತು ದೋಹಾಗಳಿಂದಾಗಿ ಹೆಸರುವಾಸಿಯಾಗಿದೆ.

ಪಂಚತಂತ್ರ

ವಿಷ್ಣುಶರ್ಮ ವಿರಚಿತ ಕೃತಿ 'ಪಂಚತಂತ್ರ', ಪದ್ಯ ಮತ್ತು ಗದ್ಯ ರೂಪದಲ್ಲಿರುವ ಪ್ರಾಣಿ ಮತ್ತು ಪಕ್ಷಿಗಳ ಪಾತ್ರದ ಮೂಲಕ ನಿರೂಪಿತವಾದ ಪ್ರಾಚೀನ ಭಾರತದ ನೀತಿಕಥೆಗಳ ಸಂಗ್ರಹವಾಗಿದೆ. ಕ್ರಿ.ಪೂ. 3 ನೇ ಶತಮಾನದಲ್ಲಿ ಈ ಕೃತಿ ರಚಿಸಲಾಗಿದೆ. ಈ ಕೃತಿಯನ್ನು ಮಂದಬುದ್ಧಿಯ ರಾಜಕುಮಾರರಿಗೆ ಶಿಕ್ಷಣ ನೀಡಲು ಅನುಕೂಲವಾಗುವಂತೆ ನೀತಿ ಬೋಧಕ ತತ್ವಗಳ ಆಧಾರದ ಮೇಲೆ ಕೈಪಿಡಿಯ ರೂಪದಲ್ಲಿ ರಚಿಸಲಾಗಿದೆ. ಈಗಾಗಲೇ ಪಂಚತಂತ್ರವು 50 ಕ್ಕೂ ಹೆಚ್ಚು ಭಾಷೆಗಳಿಗೆ ಅನುವಾದಿತವಾಗಿದೆ, 60 ಕ್ಕೂ ಹೆಚ್ಚು ಭಾಷೆಗಳಲ್ಲಿ 200 ಕ್ಕೂ ಹೆಚ್ಚು ಆವೃತ್ತಿಗಳಲ್ಲಿ ಪ್ರಕಟಿತವಾಗಿದೆ. ದಿ ಅರೇಬಿಯನ್ ನೈಟ್ಸ್, ದ ಡೆಕಾಮೆರಾನ್, ದಿ ಕ್ಯಾಂಟರ್ಬರಿ ಟೇಲ್ಸ್, ಮತ್ತು ದಿ ಫೇಬಲ್ಸ್ ಆಫ್ ಲಾ ಫಾಂಟೈನ್‌ನಂಥ ವಿಶ್ವಪ್ರಸಿದ್ಧ ಜಾನಪದ ನೀತಿಕತೆಗಳು ಪಂಚತಂತ್ರದಿಂದ ನೇರ ಪ್ರೇರಣೆ ಪಡೆದಿವೆ.

ಸಹೃದಯಲೋಕ-ಲೋಕನ

ಕ್ರಿ.ಶ. 9ನೇ ಶತಮಾನದ ಕಾಶ್ಮೀರಿ ಸಾಹಿತಿ ಆಚಾರ್ಯ ಆನಂದವರ್ಧನ ಅವರಿಂದ ರಚನೆಗೊಂಡಿರುವ 'ಸಹೃದಯಲೋಕ-ಲೋಕನ' ಕೃತಿ ಕಾವ್ಯಮಿಮಾಂಸಾ ಕೃತಿಯಾಗಿದ್ದು, ಸೌಂದರ್ಯ ಸಿದ್ಧಾಂತಗಳ ಸಂಶ್ಲೇಷಣೆಯಿಂದ ಹೆಸರುವಾಸಿಯಾಗಿದೆ. ಈ ಕೃತಿ ಸಂಸ್ಕೃತ ನಾಟಕ ಸಂಪ್ರದಾಯಗಳ ಒಳನೋಟಗಳನ್ನು ಒದಗಿಸುತ್ತದೆ. ನಾಟ್ಯಶಾಸ್ತ್ರದಲ್ಲಿ ಭರತನು ರೂಪಿಸಿದ 'ರಾಸ್' ಸಿದ್ಧಾಂತದ ಸುತ್ತ ಪರಿಕಲ್ಪನೆಗಳನ್ನು ಈ ಕೃತಿ ನಿರ್ಮಿಸುತ್ತದೆ.

❖

ಬಹುಆಯ್ಕೆಯ ಪ್ರಶ್ನೆಗಳು

ಯುಪಿಎಸ್‌ಸಿ ಮತ್ತು ಕೆಪಿಎಸ್‌ಸಿ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದ ಬಹುಆಯ್ಕೆಯ ಪ್ರಶ್ನೋತ್ತರಗಳು ಇಲ್ಲಿವೆ...

1. ಆಫ್ರಿಕಾದಲ್ಲಿ ಜೈವಿಕ ವೈವಿಧ್ಯ ಇರುವ ಪ್ರದೇಶಗಳನ್ನು ಸಂರಕ್ಷಿಸಲು ಐರೋಪ್ಯ ಆಯೋಗ ಕೆಳಗಿನ ಯಾವ ಕಾರ್ಯಕ್ರಮವನ್ನು ಜಾರಿಗೆ ತರುತ್ತಿದೆ?

ಎ. ನೇಚರ್ ಆಫ್ರಿಕಾ.
ಬಿ. ಆಫ್ರಿಕಾ ಎನ್ವಿರಾನ್ಮೆಂಟ್ ಪ್ರೊಟೆಕ್ಷನ್ ಪ್ರೋಗ್ರಾಮ್.
ಸಿ. ಆಫ್ರಿಕಾ-ಏಷ್ಯಾ ಪ್ರೊಟೆಕ್ಷನ್ ಆಫ್ ಎನ್ವಿರಾನ್ಮೆಂಟ್ ಪ್ರೋಗ್ರಾಮ್.
ಡಿ. ಆಫ್ರಿಕಾ ಜೈವಿಕ ವೈವಿಧ್ಯ ಸಂರಕ್ಷಣಾ ಕಾರ್ಯಕ್ರಮ.

ಉತ್ತರ : ಎ

2. ಭಾರತದಲ್ಲಿರುವ ಜೌಗು ಪ್ರದೇಶಗಳಿಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಗಳನ್ನು ಗುರುತಿಸಿ?

1. ರಾಮ್ಸರ್ ಪಟ್ಟಿಯ ಅಡಿಯಲ್ಲಿ ಭಾರತದ ಒಟ್ಟು 82 ಜೌಗು ಪ್ರದೇಶಗಳು ಸ್ಥಾನಮಾನವನ್ನು ಪಡೆದಿವೆ.
2. ಬಿಹಾರದಲ್ಲಿರುವ ಎರಡು ಜೌಗು ಪ್ರದೇಶಗಳಿಗೆ ಈ ಸ್ಥಾನಮಾನವನ್ನು ಕಲ್ಪಿಸಿದ ನಂತರ ಒಟ್ಟು ಸಂಖ್ಯೆ 82ಕ್ಕೆ ಹೆಚ್ಚಳವಾಯಿತು.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1 ಮಾತ್ರ ಬಿ. 2 ಮಾತ್ರ
ಸಿ. 1 ಮತ್ತು 2 ಡಿ. ಮೇಲಿನ ಎರಡು ಹೇಳಿಕೆಗಳು ತಪ್ಪಾಗಿವೆ.

ಉತ್ತರ : ಸಿ

3. ಕೆಳಗಿನ ಯಾವ ಕಾಯ್ದೆಯ ಅನ್ವಯ ರಾಷ್ಟ್ರೀಯ ಮಹಿಳಾ ಆಯೋಗವನ್ನು ಸ್ಥಾಪಿಸಲಾಯಿತು ?

ಎ. ರಾಷ್ಟ್ರೀಯ ಮಹಿಳಾ ಆಯೋಗ ಕಾಯ್ದೆ-1988.
ಬಿ. ರಾಷ್ಟ್ರೀಯ ಮಹಿಳಾ ಆಯೋಗ ಕಾಯ್ದೆ-1990.
ಸಿ. ಸಿಎಂ ಮಹಿಳಾ ಆಯೋಗ ಕಾಯ್ದೆ-1991.
ಡಿ. ರಾಷ್ಟ್ರೀಯ ಮಹಿಳಾ ಹಕ್ಕುಗಳ ಕಾಯ್ದೆ-1990.

ಉತ್ತರ : ಬಿ

4 ಕೆಳಗಿನ ಯಾವ ಕಾಯ್ದೆಗಳು ಮಹಿಳಾ ಹಕ್ಕುಗಳನ್ನು ಸಂರಕ್ಷಿಸುವ ಕಾನೂನಾತ್ಮಕ ಕಾಯ್ದೆಗಳಾಗಿವೆ ?

1. ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ನಿಷೇಧ ಕಾಯ್ದೆ-2013.
2. ಗಣಿಗಾರಿಕೆ ಕಾಯ್ದೆ-1952.
3. ಕಾರ್ಖಾನೆ ಕಾಯ್ದೆ-1948.
4. ಕನಿಷ್ಠ ವೇತನ ಕಾಯ್ದೆ-1948.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1 ಮಾತ್ರ ಬಿ. 1, 2 ಮತ್ತು 4
ಸಿ. 1, 2, 3 ಮತ್ತು 4 ಡಿ. 3 ಮತ್ತು 4

ಉತ್ತರ : ಸಿ

5 ಕೆಳಗಿನ ಯಾವ ಯುದ್ಧದಲ್ಲಿ ಸರ್ಬಿಯಾ ಕೊಸೋವೋ ಮೇಲಿನ ನಿಯಂತ್ರಣವನ್ನು ಕಳೆದುಕೊಂಡಿತ್ತು?

ಎ. ಕೊಸೋವೋ ಯುದ್ಧ - 1389.
ಬಿ. ಕೊಸೋವೋ ಯುದ್ಧ - 1789.
ಸಿ. ಸರ್ಬಿಯಾ ಯುದ್ಧ - 1254.
ಡಿ. ಎರಡನೇ ಮಹಾಯುದ್ಧ - 1939.

ಉತ್ತರ : ಎ

6. ಕೊಸೋವೋ ಪ್ರದೇಶದ ಜನಸಂಖ್ಯೆಯ ಸ್ವರೂಪಕ್ಕೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಗಳನ್ನು ಗುರುತಿಸಿ?

1. ಈ ಪ್ರದೇಶದಲ್ಲಿ ಅಲ್ಬೇನಿಯ ಮೂಲದ ಮುಸಲ್ಮಾನರು ಹೆಚ್ಚಾಗಿ ವಾಸಿಸುತ್ತಿದ್ದಾರೆ.
2. ಈ ಪ್ರದೇಶದಲ್ಲಿ ಕಜಕಸ್ತಾನ ಮೂಲದ ಮುಸಲ್ಮಾನರು ಹೆಚ್ಚಾಗಿ ವಾಸಿಸುತ್ತಿದ್ದಾರೆ.
3. ಈ ಪ್ರದೇಶದಲ್ಲಿ ಅಲ್ಬೇನಿಯ ಮತ್ತು ಕಜಕಸ್ತಾನ ಮೂಲದ ಮುಸಲ್ಮಾನರು ಹೆಚ್ಚಾಗಿ ವಾಸಿಸುತ್ತಿದ್ದಾರೆ.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1, 2 ಮತ್ತು 3 ಬಿ. 1 ಮಾತ್ರ
ಸಿ. 2 ಮಾತ್ರ ಡಿ. 3 ಮಾತ್ರ

ಉತ್ತರ : ಬಿ

8 ಕೆಳಗಿನ ಯಾವ ಅಂಶಗಳನ್ನು ಗುಜರಾಲ್ ಸಿದ್ಧಾಂತದ ಅಂಶಗಳು ಎಂದು ಪರಿಗಣಿಸಬಹುದು?

1. ಯಾವುದೇ ಅಪೇಕ್ಷೆ ಇಲ್ಲದೆ ಸಣ್ಣ ರಾಷ್ಟ್ರಗಳಿಗೆ ಅವಶ್ಯಕ ಬೆಂಬಲವನ್ನು ಕಲ್ಪಿಸುವುದು.
2. ಪ್ರತಿ ರಾಷ್ಟ್ರದ ಸಾರ್ವಭೌಮತೆ ಮತ್ತು ಪ್ರಾದೇಶಿಕ ಸಮಗ್ರತೆಗೆ ಗೌರವವನ್ನು ನೀಡುವುದು.
3. ಆಂತರಿಕ ವಿಚಾರಗಳಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1 ಮಾತ್ರ ಬಿ. 2 ಮಾತ್ರ
ಸಿ. 1, 2 ಮತ್ತು 3 ಡಿ. 1 ಮತ್ತು 3

ಉತ್ತರ : ಸಿ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಇಂಗ್ಲಿಷ್

ಕನ್ನಡ ಮಾಧ್ಯಮ

Second Language ENGLISH

Dr. B. R. Ambedkar

6. Why did Nehru describe Dr. Ambedkar as 'a symbol of revolt'?

Ans: Nehru described Ambedkar as 'a symbol of revolt' because Ambedkar had the courage and conviction to rouse up the depressed classes of society which had suffered for long in the past. By doing this, Ambedkar also ensured that people belonging to the higher classes didnot grow complacent with the idea that with constitutional amendment every thing will be fine for the depressed classes

Think About The Text

1. Ambedkar had a great thirst for books when he was a student, explain.

Ans: Ambedkar was a voracious reader. His hunger for books was never satisfied. What is remarkable is that he bought books by sacrificing other needs. The author cites two instances to show what an avid reader Ambedkar was in New York, where he was a student, he is said to have bought 2000 old books. Later, when he went to London for the Second Round Table Conference he bought so many books that they had to be sent to Indiain 32 boxes. If others would have thought of bringing home attractive foreign goods, Ambedkar's interest was solely in books.

2. How did the fourteenth amendment to the U.S. Constitution and Mahatma Phule influence on Ambedkar?

Ans: Dr. Ambedkar was very much influenced by the fourteenth amendment of the Constitution of the USA which gave freedom to the Black Americans.He saw that there was the same situation of the Depressed Classes in India. On returning home, Babasaheb came to be greatly influenced by the life and work of Mahatma Phule, the votary of a classless society and women's uplift.It was then that Dr.Ambedkar decided to devote all his time and talents for the amelioration of his underprivileged class of the society. He decided to change the social status of the depressed class after getting influenced by the fourteenth amendment of the constitution of the USA.

3.There were great luminaries on the Drafting Committee. Dr. Ambedkar is remembered as the pilot. Give reasons.

Ans:- As a chairman of the Drafting Committee, Dr. Ambedkar followed the examples and experience of other nations and the distinctive needs of our own society. He considered every point one by one and worked hard towards it. Though there were other luminaries on the committee, but it was Dr. Ambedkar who had this strong vision and worked towards it with utmost patience. It is important to note that he explained the most complicated legal concepts in a language which the laymen understood.

4. Write a short note on Dr. Ambedkar's idea/perception of the three pillars of State.

Ans: Dr. Ambedkar had a clear perception of the three pillars of the State. He realized that; the Jurisdiction of each should be clear and not hampered legal bars. He had a sense of the importance of the role of citizens. According to him, the constitution should define the position and powers of the three organs of the State the executive, the Judiciary, and the legislature

5. What are the significant observation of Dr. Ambedkar on the constitution?

Ans: Dr. Ambedkar made significant observations. The Constitution is a fundamental document. It defines the position and power of the three organs viz., the executive, the legislative and the Judiciary. It also defines the powers of the organs against the citizens. Its main purpose is not merely to create the organs but to limit their authority to check, other wise, there will be tyranny or oppression.

6. Nehru chose Dr. Ambedkar as the law minister. What might have prompted Nehru to do so?

Ans: Dr. Ambedkar had talented skills in the field of law and legislation. He had a foresight dvision of Social Justice. Above all, he had succeeded in his own campaigns against social injustice. From all points of view, he deserved a person to choose as the law minister.Therefore Nehru chose him as the first law minister of free India.

7. What made Dr. Ambedkar describe the methods of Civil disobedience, Non-cooperation and Satyagraha as the "Grammar of anarchy"?

Ans: Civil Disobedience, Non-Co-operation, and Satyagraha were not done as constitutional methods. Always the public agitations to achieve social justice through the methods of the constitution. So, According to him, the above agitations were called "Grammar of anarchy"

8. How did Dr. Ambedkar and Mahatma Gandhi try to wipe out caste discrimination from India?

Ans: The efforts of Dr. Ambedkar and Gandhi in wiping out caste discrimination and *(Contd….)*

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC CHEMISTRY

Chapter -3

ELECTROCHEMISTRY

38. What is Conductance of an electrolyte?

Ans:- Conductance of an electrolyte is an ease with which the current flows through the electrolyte.

It is the reciprocal of the resistance of electrolyte and is denoted by C.

$$\text{Conductance } (C) = \frac{1}{R}$$

It is expressed in ohm^{-1} or mho or siemen (S).

39. What is specific resistance of the material?

Ans:- The specific resistance of the material is the resistance of a material whose length is one metre and area of cross – section is one square metre.

40. What is specific conductance?

Ans:- The Specific conductance (k), is defined as the conductance of the material whose length is one metre and the area of cross section in one square metre.

$$C = k\left(\frac{a}{l}\right) \ (or) \ k = C.\left(\frac{l}{a}\right)$$

Where, C is the conductance, l is the length and a is the area of cross section.

Unit of specific conductance is $\text{siemen}(\text{metre})^{-1}$

41. What is molar conductance?

Ans:- The molar conductance (μ) of a solution is defined as the conductance due to all the ions present in a solution which contains one mole of the electrolyte.

42. What is the unit of molar conductance?

Ans:- The unit of molar conductance,

$$\mu = kV = (Sm^{-1})\left(\frac{m^3}{mol}\right) = Sm^2/mol$$

43. How is the molar conductance (μ) of a solution related to the molarity (C')?

Ans:- The molar conductance (μ) of a solution related to the molarity (C') as

$$\mu = \frac{k}{1000C'}$$

44. Why is the alternating current used in the place of direct current in measuring the electrolytic conduction?

Ans:- The alternating current is used in the place of direct current in measuring the electrolytic conduction because direct current results in the electrolysis of the electrolytic solution.

45. A solution is placed in two different cells having cell constant 0.1 and 0.5 cm^{-1} respectively. Which of the two will have the greater value of the specific conductance?

Ans:- The specific conductance of both the cells will be same.

46. State Kohlrausch's law.

Ans:- Kohlrausch's law states that – At infinite dilution when the dissociation is complete, each ion of the electrolyte makes a definite contribution of its own towards the molar conductivity of the electrolyte and it is quite independent of the presence of the other ion of the electrolyte.

47. Mention some important applications of the Kohlrausch's law.

Ans:- The following are the important applications of the Kohlrausch's law –

(a) It is used in the calculation of Molar Conductance at infinite dilution for Weak Electrolytes.


(b) It is used in the calculation of degree of dissociation of Weak Electrolytes.

48. Define electrochemical equivalent?

Ans:- The electrochemical equivalent is defined as the mass of a substance deposited when one ampere current flows for one second.

The unit of electrochemical equivalent is gram per coulomb.

49. Consider the following diagram in which an electrochemical cell is coupled to an electrolytic cell. What will be the polarity of electrodes 'A' and 'B' in the electrolytic cell?



Ans:- In the electrolytic cells coupled with an electrochemical cell, electrode 'A' will have negative polarity since it is connected to copper plate in the electrochemical cell which has positive polarity. At the same time electrode 'B' will have positive polarity.

50. Why is alternating current used for measuring resistance of an electrolytic solution?

Ans:- Alternating current is used for measuring the resistance of an electrolytic solution because direct current (DC) will cause the electrolysis of the electrolyte. As a result, the concentration of the ions in solution will change.

51. A galvanic cell has electrical potential of 1.1V. If an opposing potential of 1.1 V is applied to this cell, what will happen to the cell reaction and current flowing through the cell?

Ans:- The cell reaction will stop and no current will flow through the cell.

52. How will the pH of bring (aq. NaCl solution) be affected when it is electrolysed?

(Contd….)

ಕರಡು ಜ್ಯೇಷ್ಠತಾ ಪಟ್ಟಿ ಬಿಡುಗಡೆ; 1600ಕ್ಕೂ ಅಧಿಕ ಪಿಡಿಒಗಳಿಗೆ ಅನ್ಯಾಯ ಆರೋಪ

16 ಜಿಲ್ಲೆಯ ಪಿಡಿಒಗಳ ಬಡ್ತಿಗೆ ಸಂಚಕಾರ?

• ಮನೋಜಕುಮಾರ್ ಗುದ್ದಿ

ಕಲಬುರಗಿ: ನ್ಯಾಯಾಲಯದಲ್ಲಿನ ಪ್ರಕರಣ, ಮತ್ತಿತರ ಕಾರಣಗಳಿಂದಾಗಿ ತಡವಾಗಿ ಸೇವೆಗೆ ಸೇರಿದ 16 ಜಿಲ್ಲೆಗಳ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ (ಪಿಡಿಒ) ಆಕ್ಷೇಪದ ಮಧ್ಯೆಯೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಇಲಾಖೆಯು 'ಅಧಿಕಾರಿಗಳು ಸೇವೆಗೆ ಸೇರಿದ ದಿನಾಂಕ'ವನ್ನು ಪರಿಗಣಿಸಿ ಇದೇ 13ರಂದು ಜ್ಯೇಷ್ಠತಾ ಪಟ್ಟಿಯನ್ನು ಪ್ರಕಟಿಸಿದೆ.

ಮುಂಬಡ್ತಿಯಿಂದ ವಂಚಿತರಾಗಲಿರುವ ಪಿಡಿಒಗಳು ನಡೆಸಿದ ಹೋರಾಟಕ್ಕೆ ಇಲಾಖೆ ಕಿವಿಗೊಡದೇ ಇದ್ದುದರಿಂದ ಇದನ್ನು ಪ್ರಶ್ನಿಸಿ ಬಡ್ತಿ ವಂಚಿತರಾಗಲಿರುವ ಪಿಡಿಒ ಹಾಗೂ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು ನ್ಯಾಯಾಲಯದ ಮೊರೆ ಹೋಗಲು ಚಿಂತನೆ ನಡೆಸಿದ್ದಾರೆ.

ರಾಜ್ಯದಲ್ಲಿ ಮೊದಲ ಬಾರಿಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಹುದ್ದೆ ಸೃಷ್ಟಿಯಾದ ನಂತರ 2009ರಲ್ಲಿ ನೇಮಕಾತಿಗೆ ಅಧಿಸೂಚನೆ ಹೊರಡಿಸಿ ರಾಜ್ಯದಾದ್ಯಂತ ಸ್ಪರ್ಧಾತ್ಮಕ ಪರೀಕ್ಷೆ ನಡೆಸಲಾಗಿತ್ತು. ಕೆಲವು ಜಿಲ್ಲೆಗಳಲ್ಲಿ ಆಯ್ಕೆ ಪಟ್ಟಿ ಪ್ರಕಟಿಸಲು ತಡೆಯಾಜ್ಞೆ ಇದ್ದುದರಿಂದ ಆಯ್ಕೆ ಪಟ್ಟಿ ಪ್ರಕಟಿಸುವುದು ವಿಳಂಬವಾಯಿತು. ಯಾವ ಜಿಲ್ಲೆಗಳಲ್ಲಿ ನ್ಯಾಯಾಲಯದಲ್ಲಿ ಪ್ರಕರಣ ಇದ್ದಿಲ್ಲವೋ ಅಂತಹ ಜಿಲ್ಲೆಗಳು 2019ರ ಜನವರಿ 8ರಂದು ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಿದವು. ನ್ಯಾಯಾಲಯದಲ್ಲಿ ಪ್ರಕರಣಗಳು ಇದ್ದಂತಹ ಜಿಲ್ಲೆಗಳಲ್ಲಿ ತಡೆಯಾಜ್ಞೆ ತೆರವುಗೊಂಡ ನಂತರ ಹಂತ–ಹಂತವಾಗಿ ತಾತ್ಕಾಲಿಕ ಆಯ್ಕೆ ಪಟ್ಟಿಗಳನ್ನು ಪ್ರಕಟಿಸಲಾಯಿತು. ಕಲಬುರಗಿ, ಉಡುಪಿ, ಚಿತ್ರದುರ್ಗ, ಯಾದಗಿರಿ, ಮಂಡ್ಯ, ಹಾವೇರಿ, ದಾವಣಗೆರೆ, ಚಿಕ್ಕಮಗಳೂರು, ಬೆಂಗಳೂರು ಗ್ರಾಮಾಂತರ, ಮೈಸೂರು, ಚಾಮರಾಜನಗರ, ಚಿಕ್ಕಬಳ್ಳಾಪುರ, ತುಮಕೂರು, ಹಾಸನ, ಕೊಪ್ಪಳ, ರಾಮನಗರ ಸೇರಿದಂತೆ ತಡವಾಗಿ ಸೇವೆಗೆ ಸೇರ್ಪಡೆಯಾದ 1600ಕ್ಕೂ ಅಧಿಕ ಪಿಡಿಒಗಳಿಗೆ ಮುಂಬಡ್ತಿ ಎಂಬುದು ಗಗನ ಕುಸುಮವಾಗಲಿದೆ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಕಲ್ಯಾಣ ಕರ್ನಾಟಕದ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಯೊಬ್ಬರು ಬೇಸರ ವ್ಯಕ್ತಪಡಿಸುತ್ತಾರೆ.

2010 ಹಾಗೂ 2014ರಲ್ಲಿ ನೇಮಕವಾದ ರಾಜ್ಯದ ಎಲ್ಲಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಅವರು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಡೆದಂತಹ ಅಂಕಗಳ ಆಧಾರದ ಮೇಲೆ ಜ್ಯೇಷ್ಠತಾ ಪಟ್ಟಿಯನ್ನು ತಯಾರಿಸಲಾಗಿತ್ತು. ಆದರೆ, ಕೆಲ ಜಿಲ್ಲೆಗಳ ಅಧಿಕಾರಿಗಳ ಲಾಬಿಗಾಗಿ ಜ್ಯೇಷ್ಠತಾ ಪಟ್ಟಿಯನ್ನು ಸೇವೆಗೆ ಸೇರಿದ ದಿನಾಂಕವನ್ನು ಆಧಾರವಾಗಿಟ್ಟುಕೊಂಡು ಪ್ರಕಟಿಸಿದ್ದಾರೆ. ಇದು ತಮ್ಮದಲ್ಲದ ತಪ್ಪಿನಿಂದ ತಡವಾಗಿ ಬೇರೆ ಬೇರೆ ದಿನಾಂಕಗಳಂದು ಸೇವೆಗೆ ಸೇರಿದ ಪಿಡಿಒಗಳಿಗೆ ಮರಣ ಶಾಸನವಾಗಿದೆ ಎನ್ನುತ್ತಾರೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಕಲಬುರಗಿ ಜಿಲ್ಲಾ ಘಟಕದ ಅಧ್ಯಕ್ಷ ಅನಿಲಕುಮಾರ ಮಾನಪಡೆ.

ಆರು ತಿಂಗಳ ಕಾಲಾವಧಿ: ಪಿಡಿಒಗಳ ಜ್ಯೇಷ್ಠತಾ ಪಟ್ಟಿಗೆ ಸಂಬಂಧಿಸಿ ಕರ್ನಾಟಕ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿಗಳು ಸಲ್ಲಿಕೆಯಾಗಿದ್ದವು. ಕೆಲವರು ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿಯ ಮೊರೆ ಹೋಗಿದ್ದರು. 2023ರ ಜೂನ್ 22ರಂದು ಇವುಗಳ ವಿಚಾರಣೆ ನಡೆಸಿದ್ದ ನ್ಯಾಯಪೀಠವು 2014ರಲ್ಲಿ ಪ್ರಕಟಿಸಿದ್ದ ಜ್ಯೇಷ್ಠತಾ ಪಟ್ಟಿಯನ್ನು ರದ್ದುಗೊಳಿಸಿತ್ತು. ಪಂಚಾಯತ್‌ರಾಜ್ ಇಲಾಖೆ ಆಯುಕ್ತರ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿ ಪ್ರಸ್ತುತ ಜಾರಿಯಲ್ಲಿರುವ ನಿಯಮಾವಳಿಗಳ ಅನುಸಾರ ಜ್ಯೇಷ್ಠತಾ ಪಟ್ಟಿಯನ್ನು ತಯಾರಿಸಿ ಮೂರು ವಾರಗಳಲ್ಲಿ ಸರ್ಕಾರಕ್ಕೆ ಸಲ್ಲಿಸಲು ಆದೇಶಿಸಿತ್ತು.

ಇಲಾಖೆಯು ಪಟ್ಟಿ ತಯಾರಿಸುವುದು ಅಗಾಧವಾದ ಪ್ರಕ್ರಿಯೆ ಒಳಗೊಂಡಿರುವುದರಿಂದ ಆರು ತಿಂಗಳ ಕಾಲಾವಧಿ ನೀಡುವಂತೆ ಮಧ್ಯಂತರ ಅರ್ಜಿ ಸಲ್ಲಿಸಿತ್ತು. ಇದನ್ನು ಪರಿಗಣಿಸಿದ್ದ ನ್ಯಾಯಪೀಠವು ಅವಧಿ ವಿಸ್ತರಿಸಿತ್ತು.

ಈಗ ಪ್ರಕಟಿಸಿರುವ ಜ್ಯೇಷ್ಠತಾ ಪಟ್ಟಿಯನ್ನು ಹಿಂದಕ್ಕೆ ಪಡೆಯದಿದ್ದರೆ ತಮ್ಮದಲ್ಲದ ತಪ್ಪಿಗೆ ತಡವಾಗಿ ಸೇವೆಗೆ ಸೇರ್ಪಡೆಯಾದ ಪಿಡಿಒಗಳಿಗೆ ಮುಂದಿನ 20 ವರ್ಷ ಬಡ್ತಿಯೇ ಸಿಗುವುದಿಲ್ಲ

ಹೆಸರು ಹೇಳಲಿಚ್ಛಿಸದ ತಾ.ಪಂ. ಇಒ

ಜಿಲ್ಲೆಯ ಪ್ರಿಯಾಂಕ್ ಖರ್ಗೆ ಅವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಸಚಿವರಾಗಿದ್ದು, ನ್ಯಾಯ ಕೊಡಿಸುವ ನಿರೀಕ್ಷೆ ಇದೆ. ಇಲ್ಲದಿದ್ದರೆ ನ್ಯಾಯಾಲಯದ ಮೊರೆ ಹೋಗುವುದು ಅನಿವಾರ್ಯ

ಅನಿಲಕುಮಾರ ಮಾನಪಡೆ ಜಿಲ್ಲಾ ಅಧ್ಯಕ್ಷ, ಪಿಡಿಒಗಳ ಕ್ಷೇಮಾಭಿವೃದ್ಧಿ ಸಂಘ, ಕಲಬುರಗಿ

'ದಶಕದ ಕಗ್ಗಂಟು ಬಿಡಿಸುವ ಯತ್ನ'


ಪ್ರಿಯಾಂಕ್ ಖರ್ಗೆ

ಪಿಡಿಒಗಳ ಜ್ಯೇಷ್ಠತೆಗೆ ಸಂಬಂಧಿಸಿದಂತೆ ಹಲವರು ನ್ಯಾಯಾಲಯ ಹಾಗೂ ಆಡಳಿತಾತ್ಮಕ ನ್ಯಾಯಮಂಡಳಿಯ ಮೆಟ್ಟಿಲೇರಿದ್ದರು. ಹೈಕೋರ್ಟ್ ಸೂಚನೆ ಮೇರೆಗೆ ಅಡ್ವೊಕೇಟ್ ಜನರಲ್, ಸೇವಾ ನಿಯಮಗಳ ಪರಿಣತರು ಹಾಗೂ ಇಲಾಖೆಯ ಹಿರಿಯ ಅಧಿಕಾರಿಗಳನ್ನೊಳಗೊಂಡ ಸಮಿತಿ ರಚಿಸಿ ಇದೀಗ ಪಟ್ಟಿ ತಯಾರಿಸಲಾಗಿದೆ. ಆ ಮೂಲಕ ದಶಕದ ಹಿಂದಿನ ಕಗ್ಗಂಟನ್ನು ಬಿಡಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇವೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಜ್ಯೇಷ್ಠತಾ ಪಟ್ಟಿಯ ಕರಡು ಪ್ರಕಟವಾಗಿದ್ದಕ್ಕೆ ವ್ಯಕ್ತವಾದ ಭಿನ್ನಾಭಿಪ್ರಾಯಗಳ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯೆ ನೀಡಿದ ಅವರು, 'ಪಿಡಿಒಗಳ ಸಂಘದ ಮುಖಂಡರನ್ನು ಕರೆಸಿ ಅವರೊಂದಿಗೆ ಸಮಾಲೋಚಿಸಿದ ಬಳಿಕ ಎಷ್ಟು ಸಾಧ್ಯವೋ ಅಷ್ಟು ಹೆಚ್ಚು ಅಧಿಕಾರಿಗಳಿಗೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ನಾವು ಕಾರ್ಯಪ್ರವೃತ್ತರಾಗಿದ್ದೇವೆ. ಈ ಪಟ್ಟಿಯಿಂದ ಯಾರಿಗೂ ಹಿಂಬಡ್ತಿಯಾಗುವುದಿಲ್ಲ. ಈ ಪಟ್ಟಿಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಲಾಗಿದೆ. ಆಕ್ಷೇಪಣೆಗಳನ್ನು ನ್ಯಾಯಾಲಯದ ಗಮನಕ್ಕೆ ತಂದು ಇತ್ಯರ್ಥ ಮಾಡುತ್ತೇವೆ. ಹಿಂದೆ ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದ ಕೆ.ಎಸ್. ಈಶ್ವರಪ್ಪ ಅವರು ಈ ಸಮಸ್ಯೆ ಇತ್ಯರ್ಥಪಡಿಸುವ ಗೋಜಿಗೇ ಹೋಗಿರಲಿಲ್ಲ. ಪಿಡಿಒಗಳ ನೇಮಕಾತಿ ಜಿಲ್ಲಾ ಮಟ್ಟದಲ್ಲಿ ಆಗಿದ್ದೇ ಸಮಸ್ಯೆಗೆ ಮೂಲ ಕಾರಣವಾಗಿದೆ. ಈಗ ನಾವು ಸಮಸ್ಯೆ ಪರಿಹರಿಸಲು ಮುಂದಾಗಿದ್ದೇವೆ' ಎಂದರು.

7ನೇ ರ‍್ಯಾಂಕ್ ಪಡೆದಿದ್ದವರಿಗೆ 3200ನೇ ಸ್ಥಾನ!

2000ರಲ್ಲಿ ನಡೆದ ಪಿಡಿಒ ನೇರ ನೇಮಕಾತಿ ಪರೀಕ್ಷೆಯಲ್ಲಿ ರಾಜ್ಯಕ್ಕೆ 7ನೇ ಸ್ಥಾನ ಪಡೆದಿದ್ದ ಅಧಿಕಾರಿ (ಈಗ ಕಾರ್ಯನಿರ್ವಾಹಕ ಅಧಿಕಾರಿ)ಗೆ ಜೂನ್ 13ರಂದು ಪ್ರಕಟಿಸಲಾದ ಜ್ಯೇಷ್ಠತಾ ಪಟ್ಟಿಯಲ್ಲಿ 3200ನೇ ರ‍್ಯಾಂಕಿಂಗ್ ಸಿಕ್ಕಿದೆ. ಹೀಗೆ, ತಡವಾಗಿ ಕರ್ತವ್ಯಕ್ಕೆ ಸೇರ್ಪಡೆಯಾದವರಿಗೆ ಪಟ್ಟಿಯಲ್ಲಿ ಕೊನೆಯ ಸ್ಥಾನಗಳು ಸಿಕ್ಕಿವೆ. ಇದಕ್ಕೆ ಪರಿಹಾರವೆಂದರೆ ನೇಮಕಾತಿ ಅಧಿಸೂಚನೆ ದಿನಾಂಕವನ್ನೇ ಎಲ್ಲ ಜಿಲ್ಲೆಗಳ ಪಿಡಿಒಗಳಿಗೆ ಅನ್ವಯಿಸುವುದು ಎನ್ನುತ್ತಾರೆ ಅನಿಲಕುಮಾರ ಮಾನಪಡೆ.

ಡಿ.ಕೆ. ಶಿವಕುಮಾರ್ ಬೇಷರತ್ ಕ್ಷಮೆಯಾಚಿಸಲಿ: ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಹಿತಿಗಳು ರಾಜಕಾರಣಿಗಳೇ, ಬಾಯಿಬಿಟ್ಟು ಹೇಳಿಕೊಳ್ಳುವುದಿಲ್ಲ ಅಷ್ಟೆ' ಎನ್ನುವ ಮೂಲಕ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಉದ್ಧಟತನ ತೋರಿದ್ದಾರೆ. ಅವರು ಬೇಷರತ್ ಕ್ಷಮೆಯಾಚಿಸಬೇಕು' ಎಂದು ನಾಡಿನ ಲೇಖಕರು ಆಗ್ರಹಿಸಿದ್ದಾರೆ.

ಈ ಕುರಿತು ಬಿಡುಗಡೆ ಮಾಡಿರುವ ಜಂಟಿ ಪತ್ರಿಕಾ ಹೇಳಿಕೆಗೆ ರಹಮತ್ ತರೀಕೆರೆ, ನಟರಾಜ ಬೂದಾಳ್, ನಾ. ದಿವಾಕರ, ಎಚ್.ಎಸ್. ರಾಘವೇಂದ್ರ ರಾವ್, ಕೆ.ಫಣಿರಾಜ್, ಎ. ನಾರಾಯಣ, ಡಾ.ಎಚ್.ಎಸ್. ಅನುಪಮಾ, ಡಾ. ಶ್ರೀನಿವಾಸ ಕಕ್ಕಿಲಾಯ, ಸುನಂದಾ ಕಡಮೆ, ವಿ.ಪಿ. ನಿರಂಜನಾರಾಧ್ಯ, ಡಿ.ಎಸ್. ಚೌಗಲೆ, ಬಸವರಾಜ ಸೂಳಿಭಾವಿ, ಚಂದ್ರಕಾಂತ ವಡ್ಡು, ಬಿ. ಸುರೇಶ, ರಂಗನಾಥ ಕಂಟನಕುಂಟೆ, ಕೆ.ಪಿ. ಸುರೇಶ, ಕೇಸರಿ ಹರವು ಸೇರಿದಂತೆ 50ಕ್ಕೂ ಹೆಚ್ಚು ಲೇಖಕರು ಸಹಿ ಹಾಕಿದ್ದಾರೆ.

'ಕಾಂಗ್ರೆಸ್ ನಾಯಕರಿಗೆ ಈ ಧೈರ್ಯ ಬರಲು, ಓಲೈಸುವ ಮನೋಧರ್ಮದ ನಮ್ಮ ಸಾಹಿತಿಗಳೂ-ಬರಹಗಾರರು ಕಾರಣ ಎಂಬುದನ್ನು ನಾವು ಮರೆಯಬಾರದು. ಕೆಪಿಸಿಸಿ ಕಚೇರಿಯಲ್ಲಿ ಭಾಗವಹಿಸಿದ ವಿವಿಧ ಅಕಾಡೆಮಿಗಳ ಅಧ್ಯಕ್ಷರು, ಸದಸ್ಯರು ಪಕ್ಷ ರಾಜಕಾರಣಕ್ಕೆ ಹೊರತಾಗಿ ತಮ್ಮ ಜವಾಬ್ದಾರಿ ಹಾಗೂ ಘನತೆಯನ್ನು ಎತ್ತಿ ಹಿಡಿಯುವಲ್ಲಿ ಪ್ರಮಾದವೆಸಗಿದ್ದಾರೆ. ಸಾಹಿತಿಗಳು ತಮ್ಮ ಅಂತಃಸಾಕ್ಷಿಗೆ ಓಗೊಟ್ಟು ಇದನ್ನು ಖಂಡಿಸಿ ತಮ್ಮ ಸ್ವಾಯತ್ತ ಮನೋಧರ್ಮವನ್ನು ಸಾರುವ ಕೆಲಸ ಮಾಡಬೇಕು' ಎಂದು ಪ್ರತಿಪಾದಿಸಿದ್ದಾರೆ.

'ಸಾಂಸ್ಕೃತಿಕ ಸ್ವಾಯತ್ತೆ ಅಗತ್ಯ'

ಅಕಾಡೆಮಿ, ಪ್ರಾಧಿಕಾರಗಳು ಸರ್ಕಾರದ ಅಂಗಸಂಸ್ಥೆಗಳೇ ಹೊರತು, ರಾಜಕೀಯ ಪಕ್ಷಗಳ ಅಂಗಸಂಸ್ಥೆಗಳಲ್ಲ. ಅಧ್ಯಕ್ಷರು, ಸದಸ್ಯರ ನೇಮಕಕ್ಕೆ ಪಕ್ಷ ನಿಷ್ಠೆ ಮಾನದಂಡವಲ್ಲ. ಹಾಗಾಗಿ, ಅವುಗಳಿಗೆ ಸಾಂಸ್ಕೃತಿಕ ಸ್ವಾಯತ್ತೆ ಅಗತ್ಯ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಹೇಳಿದ್ದಾರೆ.

'2005ಕ್ಕೂ ಮೊದಲು ಸರ್ಕಾರದ ಮಧ್ಯಪ್ರವೇಶ ಕಡಿಮೆ ಇತ್ತು. ಅಕಾಡೆಮಿಗಳ ನಿಯಮಾವಳಿ ಮರು ರಚನೆ ಮಾಡಿದ ನಂತರ ಕೆಲ ಅಂಶಗಳಲ್ಲಿ ಅಧಿಕಾರಿಗಳ ನಿಯಂತ್ರಣಕ್ಕೆ ಅವಕಾಶ ಕಲ್ಪಿಸಲಾಗಿತ್ತು. ನಂತರ ನನ್ನ ನೇತೃತ್ವದ ಸಮಿತಿ ಸಂಪೂರ್ಣ ಸ್ವಾಯತ್ತೆಗೆ ಶಿಫಾರಸು ಮಾಡಿತ್ತು. ಇಂದು ಅಕಾಡೆಮಿ, ಪ್ರಾಧಿಕಾರಗಳಿಗೆ ಶಾಸನಬದ್ಧ ಅಧಿಕಾರವಿದೆ. ಇದನ್ನು ಆಳುವ ಸರ್ಕಾರ, ಪಕ್ಷಗಳು ಅರ್ಥಮಾಡಿಕೊಳ್ಳಬೇಕು' ಎಂದಿದ್ದಾರೆ.

'ಗ್ಲಾಸ್ ವೇರ್' ಛಾಯಾಗ್ರಹಣ ಕಮ್ಮಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಗರ ಫೋಟೋಗ್ರಾಫಿಕ್ ಸೊಸೈಟಿ'ಯು 'ನೀನಾಸಂ' ಸಹಯೋಗದಲ್ಲಿ ಜುಲೈ 13-14ರಂದು 'ಗ್ಲಾಸ್ ವೇರ್ ಛಾಯಾಗ್ರಹಣ' ಕಮ್ಮಟವನ್ನು ಹಮ್ಮಿಕೊಂಡಿದೆ.

ಹೆಗ್ಗೋಡಿನ 'ನೀನಾಸಂ' ಆವರಣದಲ್ಲಿ ಈ ಕಮ್ಮಟ ನಡೆಯಲಿದೆ. ಅಂತರರಾಷ್ಟ್ರೀಯ ಖ್ಯಾತಿಯ ಛಾಯಾಚಿತ್ರಕಾರ ಬೆಂಗಳೂರಿನ ಗಿರೀಶ್ ಮಾಯಾಚಾರಿ ಅವರು ಸಂಪನ್ಮೂಲ ತಜ್ಞರಾಗಿರಲಿದ್ದಾರೆ. ನಿಯಮಿತ ಸ್ಥಳಾವಕಾಶವಿದ್ದು, ಮೊದಲು ಹೆಸರು ನೋಂದಾಯಿಸಿದವರಿಗೆ ಆದ್ಯತೆ ಸಿಗಲಿದೆ ಎಂದು ಸಾಗರ ಫೋಟೋಗ್ರಾಫಿಕ್ ಸೊಸೈಟಿಯ ಸಂಚಾಲಕ ಕೆ.ಎಸ್. ರಾಜಾರಾಮ್ ತಿಳಿಸಿದ್ದಾರೆ.

ಊಟ- ವಸತಿ ಖರ್ಚಿನ ವಿವರಗಳಿಗೆ- ಜಿ.ಆರ್.ಪಂಡಿತ್ ಅವರ ವಾಟ್ಸ್‌ಆ್ಯಪ್ ಸಂಖ್ಯೆಗೆ 9448627878 ಸಂದೇಶ ಕಳುಹಿಸಬಹುದು.

ದರ್ಶನ್, ಪವಿತ್ರಾಗೌಡಗೆ ಡಿಎನ್‌ಎ ಪರೀಕ್ಷೆ

ವಿಚಾರಣೆ ವೇಳೆ ಭಾವುಕರಾದ ನಟನ ಪತ್ನಿ ವಿಜಯಲಕ್ಷ್ಮಿ; 5 ತಾಸು ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಆರೋಪಿಗಳ ಡಿಎನ್‌ಎ ಪರೀಕ್ಷೆಗೆ ತನಿಖಾಧಿಕಾರಿಗಳು ಮುಂದಾಗಿದ್ದು, ದರ್ಶನ್ ಹಾಗೂ ಅವರ ಆಪ್ತೆ ಪವಿತ್ರಾಗೌಡ ಸೇರಿ 9 ಮಂದಿಯ ರಕ್ತ, ಕೂದಲು ಮಾದರಿಯನ್ನು ಬುಧವಾರ ಸಂಗ್ರಹಿಸಿದರು.

ವಿಕ್ಟೋರಿಯಾ ಆಸ್ಪತ್ರೆಗೆ ಆರೋಪಿಗಳನ್ನು ಕರೆದೊಯ್ದು ಮಾದರಿ ಸಂಗ್ರಹಿಸಲಾಗಿದ್ದು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ಕಳುಹಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

ಕೃತ್ಯ ನಡೆದ ಪಟ್ಟಣಗೆರೆ ಶೆಡ್‌ನಲ್ಲಿ ರಕ್ತದ ಮಾದರಿ ಹಾಗೂ ಕೂದಲು ದೊರೆತಿದ್ದು, ಎಫ್‌ಎಸ್‌ಎಲ್ ತಜ್ಞರು ಅದನ್ನು ಪರಿಶೀಲಿಸಿದ್ದರು. ಸ್ಥಳದಲ್ಲಿದ್ದ ರಕ್ತದ ಮಾದರಿ ಹಾಗೂ ಕೂದಲು ಯಾರದ್ದು ಎಂಬುದರ ಬಗ್ಗೆ ನಿಖರವಾಗಿ ತಿಳಿಯಲು ತನಿಖಾಧಿಕಾರಿಗಳು ಡಿಎನ್‌ಎ ಪರೀಕ್ಷೆಯ ಮೊರೆ ಹೋಗಿದ್ದಾರೆ.

'ಕೃತ್ಯದ ನಡೆದ ಸ್ಥಳದಲ್ಲಿ ಸಿಕ್ಕಿದ ರಕ್ತ ಹಾಗೂ ಕೂದಲಿಗೂ ಹೋಲಿಕೆ ನಡೆಯಲಿದೆ. ಕೂದಲು ಆರೋಪಿಗಳದ್ದೇ ಎಂದು ದೃಢಪಟ್ಟರೆ ಪ್ರಕರಣದಲ್ಲಿ ಪ್ರಮುಖ ಸಾಕ್ಷ್ಯ ಆಗಲಿದೆ. ಶೆಡ್ ಒಳಕ್ಕೆ ತೆರಳದೇ ಕೆಲವು ಆರೋಪಿಗಳು ಹೊರಗೆ ಇದ್ದರು. ಅವರನ್ನು ಈ ಪರೀಕ್ಷೆಗೆ ಒಳಪಡಿಸುತ್ತಿಲ್ಲ' ಎಂದು ಪೊಲೀಸರು ಹೇಳಿದರು.

ಇದೇ ಪ್ರಕರಣದ ಸಂಬಂಧ ಬಂಧಿತ ಆರೋಪಿ ದರ್ಶನ್ ಅವರ ಪತ್ನಿ ವಿಜಯಲಕ್ಷ್ಮಿ ಅವರನ್ನು ತನಿಖಾಧಿಕಾರಿಗಳು ಬುಧವಾರ ಐದು ತಾಸು ವಿಚಾರಣೆಗೆ ಒಳಪಡಿಸಿದರು.

ಅನ್ನಪೂರ್ಣೇಶ್ವರಿ ನಗರ ಠಾಣೆಗೆ ಬಂದ ಅವರನ್ನು ಪ್ರಕರಣದ ವಿಚಾರವಾಗಿ ಪೊಲೀಸರು ಹಲವು ಪ್ರಶ್ನೆಗಳನ್ನು ಕೇಳಿದರು ಎಂದು ಗೊತ್ತಾಗಿದೆ.

'ನಿಮ್ಮ ಫ್ಲ್ಯಾಟ್‌ನಲ್ಲಿ ದೊರೆತ ಶೂ ಯಾರದ್ದು, ಯಾವಾಗ ತಂದು ಕೊಡಲಾಯಿತು, ರೇಣುಕಸ್ವಾಮಿ ಹತ್ಯೆ ಬಗ್ಗೆ ನಿಮಗೆ ಏನು ಗೊತ್ತು? ಹತ್ಯೆ ನಡೆದ ಬಳಿಕ ದರ್ಶನ್ ಅವರು ನಿಮ್ಮ ಬಳಿ ಚರ್ಚಿಸಿದ್ದರೇ ಎಂಬುದರ ಬಗ್ಗೆ ಪ್ರಶ್ನೆ ಕೇಳಲಾಯಿತು. ಅವರಿಂದ ವಿವರಣೆಪಡೆಯಲಾಗಿದ್ದು ವಿಡಿಯೊ ರೆಕಾರ್ಡ್ ಮಾಡಲಾಗಿದೆ' ಎಂದು ಮೂಲಗಳು ಹೇಳಿವೆ.

'ಕೊಲೆ ಅಥವಾ ರೇಣುಕಸ್ವಾಮಿ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಆತ ಯಾರೆಂಬುದೂ ಗೊತ್ತಿಲ್ಲ. ಶೂ ಹಾಗೂ ಬಟ್ಟೆಗಳನ್ನು ದರ್ಶನ್ ಅವರ ಸಹಾಯಕರು ತಂದು ಇಟ್ಟಿದ್ದರು. ಈ ವಿಚಾರದ ಬಗ್ಗೆ ಹೆಚ್ಚಿನ ಮಾಹಿತಿಯೂ ಇಲ್ಲ' ಎಂದು ಹೇಳುತ್ತಾ ಅವರು ಭಾವುಕರಾದರು ಎಂದು ಗೊತ್ತಾಗಿದೆ.

'ಕೃತ್ಯ ನಡೆದ ವೇಳೆ ದರ್ಶನ್ ಧರಿಸಿದ್ದ ಶೂಗಳನ್ನು ವಿಜಯಲಕ್ಷ್ಮಿ ಅವರು ವಾಸ ಇರುವ ಹೊಸಕೆರೆಹಳ್ಳಿಯ 3ನೇ ಹಂತದ ಪ್ರೆಸ್ಟೀಜ್ ಸೌತ್ ಅಪಾರ್ಟ್‌ಮೆಂಟ್‌ನಲ್ಲಿ ಇಟ್ಟಿರುವುದಾಗಿ ಆರೋಪಿ ರಾಜು ಹೇಳಿಕೆ ನೀಡಿದ್ದರು. ಮನೆಯಲ್ಲಿ ಪುತ್ರನಿದ್ದು ಮಹಜರ್‌ಗೆ ಬಾರದಂತೆ ವಿಜಯಲಕ್ಷ್ಮಿ ಪೊಲೀಸರಲ್ಲಿ ಮನವಿ ಮಾಡಿದ್ದರು. ಶೂ ಅನ್ನು ಸೆಕ್ಯೂರಿಟಿ ಕೊಠಡಿಯಲ್ಲಿ ಇಟ್ಟಿರುವುದಾಗಿ ಪೊಲೀಸರಿಗೆ ತಿಳಿಸಿದ್ದರು. ಆ ಕೊಠಡಿಯಿಂದ ದರ್ಶನ್ ಧರಿಸಿದ್ದ ಶೂ ಜಪ್ತಿ ಮಾಡಲಾಗಿತ್ತು' ಎಂದು ನ್ಯಾಯಾಲಯಕ್ಕೆ ತನಿಖಾಧಿಕಾರಿಗಳು ಸಲ್ಲಿಸಿರುವ ವರದಿಯಲ್ಲಿ ತಿಳಿಸಲಾಗಿದೆ.


ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಆರೋಪಿ ದರ್ಶನ್ ಅವರನ್ನು ಬುಧವಾರ ವೈದ್ಯಕೀಯ ಪರೀಕ್ಷೆಗೆ ಪೊಲೀಸರು ಕರೆದೊಯ್ದರು – ಪ್ರಜಾವಾಣಿ ಚಿತ್ರ

ಪೊಲೀಸ್ ಕಸ್ಟಡಿ ಅಂತ್ಯ

ಆರೋಪಿಗಳ ಪೊಲೀಸ್ ಕಸ್ಟಡಿ ಗುರುವಾರಕ್ಕೆ ಅಂತ್ಯ ಆಗಲಿದೆ. ಎಲ್ಲ ಆರೋಪಿಗಳನ್ನು ಗುರುವಾರ ನ್ಯಾಯಾಲಯಕ್ಕೆ ಹಾಜರು ಪಡಿಸುವ ಸಾಧ್ಯತೆಯಿದೆ.'ತನಿಖೆ, ಸ್ಥಳ ಮಹಜರು, ಆರೋಪಿಗಳ ವಿಚಾರಣೆ, ಸಾಕ್ಷ್ಯಾಧಾರ ಸಂಗ್ರಹ ಬಹುತೇಕ ಮುಕ್ತಾಯವಾಗಿದೆ. ಆರೋಪಿಗಳನ್ನು ಮತ್ತೆ ಪೊಲೀಸ್ ಕಸ್ಟಡಿಗೆ ಕೇಳುವ ಸಾಧ್ಯತೆ ತೀರ ಕಡಿಮೆ. ನ್ಯಾಯಾಲಯ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದರೆ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಗುವುದು. ಈ ಪ್ರಕರಣದಲ್ಲಿ 118ಕ್ಕೂ ಹೆಚ್ಚು ಸಾಕ್ಷ್ಯ ಸಂಗ್ರಹಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಇದುವರೆಗೂ ಪೊಲೀಸ್ ತನಿಖೆ ಹೇಗಿತ್ತು?

- ದರ್ಶನ್, ಪವಿತ್ರಾಗೌಡ ಸೇರಿ ಪ್ರಮುಖ ಆರೋಪಿಗಳ ಸಮ್ಮುಖದಲ್ಲಿ ಪಟ್ಟಣಗೆರೆ ಶೆಡ್‌ನಲ್ಲಿ ಸ್ಥಳ ಮಹಜರು
- ಗಿರಿನಗರದಲ್ಲಿರುವ ಪ್ರದೂಷ್ ಮನೆಯಲ್ಲಿ ಹಣ ಜಪ್ತಿ
- ಶವ ಎಸೆದಿದ್ದ ಸತ್ವ ಅನುಗ್ರಹ ಅಪಾರ್ಟ್‌ಮೆಂಟ್ ಬಳಿ ಸ್ಥಳ ಮಹಜರು
- ಆರ್.ಆರ್.ನಗರದ ಐಡಿಯಲ್ ಹೋಮ್ಸ್ ಖಾಲಿ ಪ್ರದೇಶದಲ್ಲಿ ರಾಘವೇಂದ್ರ ಎಸೆದಿದ್ದ ಬಟ್ಟೆ ಸಂಗ್ರಹ
- ಚಿತ್ರದುರ್ಗದಿಂದ ಅಪಹರಣಕ್ಕೆ ಬಳಸಿದ್ದ ಕಾರು ಪರಿಶೀಲನೆ, ಕಾರಿನೊಳಗೆ ರಕ್ತ, ಕೂದಲು ಪತ್ತೆ
- ಸುಮನಹಳ್ಳಿಯ ರಾಜಕಾಲುವೆಯಲ್ಲಿ ಮೊಬೈಲ್‌ಗಾಗಿ ಹುಡುಕಾಟ, ಪತ್ತೆಯಾಗದ ಮೊಬೈಲ್
- ಆರ್.ಆರ್. ನಗರದ ದರ್ಶನ್ ನಿವಾಸದಲ್ಲಿ ಕೃತ್ಯದ ದಿನ ದರ್ಶನ್ ಧರಿಸಿದ್ದ ಬಟ್ಟೆ, ಶೂ ಜಪ್ತಿ
- ಪವಿತ್ರಾಗೌಡ ಕರೆದೊಯ್ದು ಆರ್.ಆರ್.ನಗರದ ನಿವಾಸದಲ್ಲಿ ಪರಿಶೀಲನೆ
- ಆರೋಪಿ ವಿನಯ್ ಕರೆದೊಯ್ದು ಸ್ಟೋನಿ ಬ್ರೂಕ್ ರೆಸ್ಟೋಬಾರ್‌ನಲ್ಲಿ ಮಹಜರು
- ಹಲವು ಸ್ಥಳದಲ್ಲಿ ಸಿಸಿ ಟಿವಿ ಕ್ಯಾಮೆರಾ ದೃಶ್ಯಾವಳಿ ಸಿಡಿಆರ್ ಜಪ್ತಿ
- ಕಾರು, ಬೈಕ್ ಹಾಗೂ ಆಟೋಗಳ ಜಪ್ತಿ

ಸಾಮಾಜಿಕ ಮಾಧ್ಯಮದ ಮೇಲೆ ನಿಗಾ

ದರ್ಶನ್ ಅಭಿಮಾನಿಗಳ ಸಂಘದ ಸದಸ್ಯರು ಸಾಮಾಜಿಕ ಮಾಧ್ಯಮ ಮೂಲಕ ಕೆಲವರಿಗೆ ಬೆದರಿಕೆ ಹಾಕುತ್ತಿದ್ದು, ನಿಗಾ ವಹಿಸಲಾಗಿದೆ ಎಂದು ಪೊಲೀಸರು ಹೇಳಿದರು.

'ದರ್ಶನ್ ಅಭಿಮಾನಿಗಳು ಹಾಗೂ ಸಂಘದ ಸದಸ್ಯರು ಬೆದರಿಕೆ ಹಾಕುತ್ತಿರುವುದು ಗೊತ್ತಾಗಿದೆ. ಇಂಥವರ ಮೇಲೆ ಕಣ್ಣಿಡಲು ಪೊಲೀಸ್ ಅಧಿಕಾರಿ ಒಬ್ಬರಿಗೆ ಸೂಚಿಸಲಾಗಿದೆ' ಎಂದು ಮೂಲಗಳು ಹೇಳಿವೆ.

ನಟ ಪ್ರಥಮ್‌ಗೆ ಬೆದರಿಕೆ: ನಟ ಪ್ರಥಮ್ ಅವರಿಗೆ ದರ್ಶನ್ ಅಭಿಮಾನಿಗಳು ಬೆದರಿಕೆ ಹಾಕಿದ್ದಾರೆ ಎನ್ನಲಾಗಿದ್ದು, ಈ ಸಂಬಂಧ ಜ್ಞಾನಭಾರತಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಬುಧವಾರ ಮಧ್ಯಾಹ್ನ ಪ್ರಥಮ್ ಅವರೇ ಠಾಣೆಗೆ ತೆರಳಿ ದೂರು ನೀಡಿದ್ದಾರೆ.

ಮತ್ತೆ ₹30 ಲಕ್ಷ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಅಕ್ರಮ ಹಣ ವರ್ಗಾವಣೆ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಎಸ್‌ಐಟಿ ತನಿಖಾಧಿಕಾರಿಗಳು ಮತ್ತೊಬ್ಬ ಆರೋಪಿಯಿಂದ ಹಣ ಹಾಗೂ ಚಿನ್ನಾಭರಣ ಜಪ್ತಿ ಮಾಡಿಕೊಂಡಿದ್ದಾರೆ.

ಪ್ರದೂಷ್‌ಗೆ ₹30 ಲಕ್ಷ: ದರ್ಶನ್ ಸ್ವಇಚ್ಛಾ ಹೇಳಿಕೆ

'ಮೃತದೇಹದ ವಿಲೇವಾರಿ ಮಾಡಿ ತನ್ನ ಹೆಸರು ಎಲ್ಲಿಯೂ ಬಹಿರಂಗ ಆಗದಂತೆ ಪೊಲೀಸರು, ವಕೀಲರು ಹಾಗೂ ಶವ ಸಾಗಿಸುವ ವ್ಯಕ್ತಿಗಳಿಗೆ ಕೊಡಲು ₹30 ಲಕ್ಷ ಹಣವನ್ನು ಪ್ರದೂಷ್ ಎಂಬಾತನಿಗೆ ನೀಡಿದ್ದೆ' ಎಂದು ದರ್ಶನ್ ಸ್ವಇಚ್ಛಾ ಹೇಳಿಕೆ ನೀಡಿದ್ದು, ಆ ಹಣವನ್ನು ಪ್ರದೂಷ್ ಮನೆಯಿಂದ ಜಪ್ತಿ ಮಾಡಿಕೊಳ್ಳಲಾಗಿದೆ' ಎಂದು 24ನೇ ಎಸಿಎಂಎಂ ನ್ಯಾಯಾಲಯಕ್ಕೆ ತನಿಖಾಧಿಕಾರಿಗಳು ಸಲ್ಲಿಸಿರುವ ರಿಮಾಂಡ್ ಅರ್ಜಿಯಲ್ಲಿ ಉಲ್ಲೇಖಿಸಿದ್ದಾರೆ.

'ಪಟ್ಟಣಗೆರೆಯಲ್ಲಿ ಜಯಣ್ಣ ಎಂಬವರಿಗೆ ಸೇರಿದ ಇನ್‌ಟ್ಯಾಕ್ ಆಟೊಪಾರ್ಕ್ ಇಂಡಿಯಾ ಲಿಮಿಟೆಡ್‌ನ ಶೆಡ್‌ನಲ್ಲಿ ಕೃತ್ಯ ನಡೆದಿತ್ತು. ಇಲ್ಲಿ 5ರಿಂದ 6 ಎಕರೆ ಜಾಗವಿದೆ. ಆ ಪ್ರದೇಶದ ಒಂದು ಬದಿಯಲ್ಲಿ ಆರೋಪಿಗಳು ಕೃತ್ಯ ಎಸಗಿದ್ದಾರೆ. ಕೃತ್ಯ ನಡೆದ ಸ್ಥಳದಲ್ಲಿ ಲಾಠಿ, ಮರದ ಕೊಂಬೆಗಳು, ನೀರಿನ ಬಾಟಲಿ, ಸ್ಥಳದಲ್ಲಿ ರಕ್ತದ ಮಾದರಿಯನ್ನು ಸಂಗ್ರಹಿಸಲಾಗಿದೆ. ಸೆಕ್ಯೂರಿಟಿ ಗಾರ್ಡ್ ಕೊಠಡಿಯಲ್ಲಿ ಮೃತದೇಹ ಇಡಲಾಗಿತ್ತು. ಅಲ್ಲಿ ಬಿದ್ದಿದ್ದ ರಕ್ತ ಹಾಗೂ ಕೂದಲು ಮಾದರಿಯನ್ನು ಎಫ್‌ಎಸ್‌ಎಲ್ ತಜ್ಞರು ಸಂಗ್ರಹಿಸಿದ್ದಾರೆ. ಶೆಡ್‌ನಲ್ಲಿದ್ದ ಸಿಸಿ ಟಿವಿ ಕ್ಯಾಮೆರಾ ದೃಶ್ಯಾವಳಿಗೆ ಸಂಬಂಧಿಸಿದ ಡಿವಿಆರ್ ಅನ್ನು ಜಪ್ತಿ ಮಾಡಲಾಗಿದೆ' ಎಂದು ವರದಿಯಲ್ಲಿ ಹೇಳಲಾಗಿದೆ.

ರಕ್ತದ ಕಲೆ ಪತ್ತೆ: ಮೃತದೇಹ ಸಾಗಿಸಿದ ಸ್ಕಾರ್ಪಿಯೊ ವಾಹನವನ್ನು ಎಫ್‌ಎಸ್‌ಎಲ್ ತಜ್ಞರು ಪರಿಶೀಲಿಸಿದ್ದು ರಕ್ತದ ಕಲೆಗಳು ಹಾಗೂ ಭೌತಿಕ ಕುರುಹುಗಳು ಪತ್ತೆಯಾಗಿವೆ ಎಂದು ಪೊಲೀಸರು ಹೇಳಿದ್ದಾರೆ.

ಪ್ರದೂಷ್ ಪ್ರಯತ್ನ: ಮೃತದೇಹವನ್ನು ಸುಮನಹಳ್ಳಿಯ ರಾಜಕಾಲುವೆಗೆ ಎಸೆಯಲಾಗಿತ್ತು. ಕೊಲೆಯಾದ ವ್ಯಕ್ತಿಯ ಮೊಬೈಲ್, ಆರೋಪಿ ರಾಘವೇಂದ್ರ ಅವರ ಮೊಬೈಲ್ ಅನ್ನು ಪ್ರದೋಷ್ ಕಾಲುವೆಗೆ ಎಸೆದು ಸಾಕ್ಷ್ಯನಾಶಕ್ಕೆ ಪ್ರಯತ್ನಿಸಿದ್ದಾರೆ. ಮೊಬೈಲ್‌ಗಳು ದೊರೆತಿಲ್ಲ. ರಾಘವೇಂದ್ರ ಹೊಸ ಬಟ್ಟೆ ಖರೀದಿಸಿ ಕೃತ್ಯ ನಡೆದ ಸ್ಥಳದಲ್ಲಿ ಧರಿಸಿದ್ದ ಬಟ್ಟೆಗಳನ್ನು ಆರ್‌ಆರ್ ನಗರದ ಐಡಿಯಲ್ ಹೋಮ್ಸ್ ಶಿಪ್ ಬಳಿಯ ಖಾಲಿ ಪ್ರದೇಶದಲ್ಲಿ ಎಸೆದಿದ್ದರು' ಎಂದು ವಿವರಿಸಲಾಗಿದೆ.

'ಮೃತದೇಹ ಎಸೆದ ಬಳಿಕ ಕಾರ್ತಿಕ್, ಕೇಶವ, ನಿಖಿಲ್ ಅವರು ಆರ್‌ಆರ್ ನಗರದ ಟ್ರೋಬ್ರೊ ಹೋಟೆಲ್‌ನಲ್ಲಿ ಕೊಠಡಿ ಪಡೆದು ಉಳಿದುಕೊಂಡಿದ್ದರು. ಅವರು ಹೊಸ ಹೊಸಬಟ್ಟೆ ಧರಿಸಿ ಹಳೇ ಬಟ್ಟೆಯನ್ನು ಕೊಠಡಿಯಲ್ಲಿ ಬಿಟ್ಟು ತೆರಳಿದ್ದರು. ಕೊಠಡಿ ಪರಿಶೀಲಿಸಿದಾಗ ಬಟ್ಟೆ ಇರಲಿಲ್ಲ. ಎರಡು ದಿನಗಳ ಬಳಿಕ ಹೋಟೆಲ್ ಸಿಬ್ಬಂದಿ ಬಿಬಿಎಂಪಿ ಕಸದ ಲಾರಿಗೆ ಆ ಬಟ್ಟೆಗಳನ್ನು ಹಾಕಿದ್ದರು' ಎಂದು ವಿವರಿಸಲಾಗಿದೆ.

ವಿದ್ಯುತ್ ಶಾಕ್, ಪ್ರಬಲ ಹೊಡೆತಗಳಿಂದ ಸಾವು

ಆರೋಪಿಗಳ ಹಲ್ಲೆಯಿಂದ ರೇಣುಕಸ್ವಾಮಿ ಅವರ ಸಾವು ಸಂಭವಿಸಿದೆ ಎಂಬ ಅಂಶ ಮರಣೋತ್ತರ ಪರೀಕ್ಷಾ ವರದಿಯಲ್ಲಿ ತಿಳಿಸಲಾಗಿದ್ದು, ವೈದ್ಯರ ಅಂತಿಮ ವರದಿ ತನಿಖಾಧಿಕಾರಿಗಳ ಕೈ ಸೇರಿದೆ. ವಿದ್ಯುತ್ ಶಾಕ್ ಹಾಗೂ ಪ್ರಬಲವಾದ ಹೊಡೆತಗಳ ಕಾರಣದಿಂದ ರಕ್ತಸ್ರಾವವಾಗಿ ಸಾವು ಸಂಭವಿಸಿದೆ. ಈ ವರದಿಯನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೂ ರವಾನೆ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

'ಚನ್ನಪಟ್ಟಣದಿಂದ ಹೊಸ ಅಧ್ಯಾಯ'

ಒಂದನೇ ಪುಟದಿಂದ...

'ನಾನು ಎಷ್ಟೇ ದೊಡ್ಡವನಾದರೂ ನಿಮ್ಮ ಮನೆಯ ಮಗ. ಆ ಕಾರಣಕ್ಕೆ ನಿಮ್ಮ ಋಣ ತೀರಿಸಲು ಇಲ್ಲಿಗೆ ಬಂದಿರುವೆ. ನನಗೆ ನೀವು ಕೊಟ್ಟಿರುವ ಅಧಿಕಾರದಿಂದ ಚನ್ನಪಟ್ಟಣದಲ್ಲಿ ಏನೇನು ಬದಲಾವಣೆ ತರಬೇಕು ಎಂಬ ಕುರಿತು ರೂಪುರೇಷೆ ಸಿದ್ಧ ಮಾಡಿಕೊಳ್ಳುತ್ತಿದ್ದೇನೆ' ಎಂದು ಹೇಳಿದರು.

'ಚನ್ನಪಟ್ಟಣ ತಾಲ್ಲೂಕಿನ ಎಲ್ಲಾ ಕಡೆ ಪ್ರವಾಸ ಮಾಡುವೆ. ತಾಲ್ಲೂಕಿನ ಪ್ರಮುಖ ದೇವಸ್ಥಾನಗಳಿಗೆ ಭೇಟಿ ನೀಡಿ ಆಶೀರ್ವಾದ ಪಡೆಯುವೆ. ಚರ್ಚ್ ಮತ್ತು ಮಸೀದಿಗಳಿಗೂ ಭೇಟಿ ನೀಡುವೆ. ಮುಂದಿನ ದಿನಗಳಲ್ಲಿ ಪಂಚಾಯಿತಿ ಮಟ್ಟದಲ್ಲಿ ಪ್ರವಾಸ ಮಾಡುವೆ' ಎಂದರು.

ಆ ಮೂಲಕ ಎಚ್.ಡಿ. ಕುಮಾರಸ್ವಾಮಿ ರಾಜೀನಾಮೆಯಿಂದ ತೆರವಾಗಿರುವ ಚನ್ನಪಟ್ಟಣಕ್ಕೆ ನಡೆಯಲಿರುವ ಉಪ ಚುನಾವಣೆಯಲ್ಲಿ ಸ್ಪರ್ಧಿಸುವ ಪರೋಕ್ಷ ಇಂಗಿತ ವ್ಯಕ್ತಪಡಿಸಿದರು.

ರಾಜಕೀಯ ತಿರುವು ನೀಡಿದ ಕ್ಷೇತ್ರ: 'ನಾನು ರಾಜಕಾರಣ ಆರಂಭಿಸಿದಾಗ ಚನ್ನಪಟ್ಟಣದ ಎರಡು, ಮೂರು ಹೋಬಳಿಯವರು ನನ್ನ ಬೆಂಬ ಲಕ್ಕೆ ನಿಂತು ಬೆಳೆಸಿದರು. ಕ್ಷೇತ್ರ ಮರುವಿಂಗಡಣೆಯಾಗಿ ಚನ್ನಪಟ್ಟಣ ಬಿಡುವಾಗ ನೋವಾಗಿತ್ತು. ಆದರೂ, ಇಲ್ಲಿಯ ಜನ ಅಂದಿನಂತೆಯೇ ಪ್ರೀತಿಯಿಂದ ಕಾಣುತ್ತಾರೆ. ಎಲ್ಲಾ ಜಾತಿ ಮತ್ತು ಧರ್ಮಗಳ ಪ್ರಜ್ಞಾವಂತ ಜನರಿರುವ ಕ್ಷೇತ್ರವಿದು' ಎಂದು ಬಣ್ಣಿಸಿದರು.

'ಹಿಂದೆ ರಾಮನಗರ ಮತ್ತು ಚನ್ನಪಟ್ಟಣದಲ್ಲಿ ಕೋಮುಗಲಭೆಯಾದಾಗ ರಾಜೀವ್ ಗಾಂಧಿ ಅವರೊಂದಿಗೆ ಇದೇ ಮಾರ್ಗದಲ್ಲಿ ಕಾರಿನಲ್ಲಿ ಹೋಗಿದ್ದೆ. ಬದಲಾದ ಸಂದರ್ಭದಲ್ಲಿ ಮುಖ್ಯಮಂತ್ರಿ ವೀರೇಂದ್ರ ಪಾಟೀಲ ಅವರು ಅಂದು ರಾಜೀನಾಮೆ ಕೊಟ್ಟಿದ್ದರು. ನಂತರ ಮುಖ್ಯಮಂತ್ರಿಯಾಗಿದ್ದ ಎಸ್. ಬಂಗಾರಪ್ಪ ಸಂಪುಟದಲ್ಲಿ ನಾನು ಕಿರಿಯ ವಯಸ್ಸಿನಲ್ಲೇ ಸಚಿವನಾದೆ. ನನ್ನ ರಾಜಕೀಯ ಜೀವನದಲ್ಲಿ ದೊಡ್ಡ ಬದಲಾವಣೆ, ತಿರುವು ದೊರೆತಿರುವುದೇ ಚನ್ನಪಟ್ಟಣದಿಂದ' ಎಂದು ಪಟ್ಟಣದ ಜತೆಗಿನ ತಮ್ಮ ಬಾಂಧವ್ಯ ಮೆಲುಕು ಹಾಕಿದರು.

'ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಕೇವಲ 16 ಸಾವಿರ ಮತಗಳಷ್ಟೇ ಬಂದಿದ್ದರಿಂದ ನನಗೆ ನೋವಾಗಿತ್ತು. ಆದರೂ, ಜಿಲ್ಲೆಯ ಜನ ಸ್ವಇಚ್ಛೆಯಿಂದ ತೀರ್ಮಾನಿಸಿ ನಾಲ್ಕು ಕ್ಷೇತ್ರಗಳ ಪೈಕಿ ಮೂರರಲ್ಲಿ ನಮ್ಮ ಅಭ್ಯರ್ಥಿಗಳನ್ನು ಗೆಲ್ಲಿಸಿದರು. ರಾಜ್ಯದಲ್ಲಿ 136 ಸೀಟು ಕೊಟ್ಟು ನಾನು ಉಪ ಮುಖ್ಯಮಂತ್ರಿಯಾಗಲು ಕಾರಣವಾದರು' ಎಂದು ಕೃತಜ್ಞತೆ ಸಲ್ಲಿಸಿದರು.

'ಲೋಕಸಭಾ ಚುನಾವಣೆಯಲ್ಲಿ ಚನ್ನಪಟ್ಟಣ ಕ್ಷೇತ್ರದಲ್ಲಿ 85 ಸಾವಿರ ಮತ ಕೊಟ್ಟಿದ್ದೀರಿ. ಜೆಡಿಎಸ್, ಬಿಜೆಪಿ, ರೈತ ಸಂಘ ಸೇರಿದಂತೆ ಎಲ್ಲಾ ಪಕ್ಷದವರೂ ನಮಗೆ ಸಹಾಯ ಮಾಡಿದ್ದೀರಿ. ಆ ಋಣ ತೀರಿಸುವುದಕ್ಕಾಗಿ ಚನ್ನಪಟ್ಟಣದಲ್ಲಿ ಬದಲಾವಣೆ ತರಬೇಕಿದೆ' ಎಂದರು.

'ಮದ್ದೂರು ಗಡಿಯಿಂದ ಆರಂಭಗೊಂಡು ಸಂಗಮ, ನಂದಿ ಬೆಟ್ಟ, ಕೋಲಾರದ ಗಡಿ, ಹುಲಿಯೂರುದುರ್ಗದ ಗಡಿವರೆಗೆ ಇರುವ ನಾವೆಲ್ಲರೂ ಬೆಂಗಳೂರು ಜಿಲ್ಲೆಯವರು. ಮುಂದೆ ಜಿಲ್ಲೆಗೆ ಹೊಸದಾಗಿ ನಾಮಕರಣ ಆಗುತ್ತದೆ. ಆ ಕುರಿತು ಈಗಲೇ ಮಾತನಾಡಲಾರೆ' ಎಂದರು.

ವಿಧಾನ ಪರಿಷತ್ ಸದಸ್ಯ ಎಸ್. ರವಿ, ಬಿಎಂಐಸಿಪಿ ಅಧ್ಯಕ್ಷ ರಘುನಂದನ್, ಮಾಜಿ ಶಾಸಕ ಸಿ.ಎಂ. ಲಿಂಗಪ್ಪ ಹಾಗೂ ಇತರರು ಇದ್ದರು.

'ತರಲೆ ಮಾಡಬೇಡಿ... ಸುಮ್ನಿರಿ'

ಭಾಷಣದ ಶುರುವಿನಲ್ಲಿ ಶಿವಕುಮಾರ್ ಅವರು, 'ಇಲ್ಲಿಂದ ರಾಜಕೀಯದ ಹೊಸ ಅಧ್ಯಾಯ ಶುರುವಾಗಿದೆ' ಎಂದಾಗ, ನೆರೆದಿದ್ದ ಮುಖಂಡರು, 'ಮುಂದಿನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಜಯವಾಗಲಿ' ಎಂದು ಘೋಷಣೆ ಕೂಗಿದರು. ಆಗ ಶಿವಕುಮಾರ್, 'ಏನೇನೊ ಕೂಗಿ, ತರಲೆ ಮಾಡಬೇಡಿ. ಸುಮ್ಮನಿರಿ' ಎಂದು ಗದರಿದರು.

ಇಂದು ಬಿಜೆಪಿಯಿಂದ ಸೈಕಲ್ ಜಾಥಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೆಟ್ರೋಲ್- ಡಿಸೇಲ್ ಮಾರಾಟ ತೆರಿಗೆ ಏರಿಕೆ ಮತ್ತು ಇತರ ಬೆಲೆ ಏರಿಕೆ ನೀತಿ ವಿರೋಧಿಸಿ ಗುರುವಾರ ಬಿಜೆಪಿ ಕಚೇರಿ ಜಗನ್ನಾಥ ಭವನದಿಂದ ವಿಧಾನಸೌಧದವರೆಗೆ ಸೈಕಲ್ ಜಾಥಾ ನಡೆಸಲಾಗುವುದು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದ್ದಾರೆ.

'ಎಕ್ಸ್' ಮೂಲಕ ಈ ವಿಷಯ ತಿಳಿಸಿರುವ ಅವರು, ಸರ್ಕಾರದ ಜನವಿರೋಧಿ ನೀತಿ ಖಂಡಿಸಲು ಸಾರ್ವಜನಿಕರೂ ಸೈಕಲ್ ಜಾಥಾದಲ್ಲಿ ಭಾಗವಹಿಸಬೇಕು ಎಂದು ಅವರು ಮನವಿ ಮಾಡಿದ್ದಾರೆ.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ವಿವರ ನೀಡಿರುವ ವಿಧಾನಪರಿಷತ್ ಸದಸ್ಯ ಎನ್.ರವಿಕುಮಾರ್, ಪೆಟ್ರೋಲ್-ಡಿಸೇಲ್ ಬೆಲೆ ಏರಿಕೆ ವಿರೋಧಿಸಿ ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಲ್ಲಿ ಎರಡನೇ ಹಂತದ ಹೋರಾಟ ನಡೆಸಲಾಗುತ್ತಿದೆ. ರಸ್ತೆ ತಡೆ ಮತ್ತು ಸೈಕಲ್ ಜಾಥಾ ನಡೆಸಲಾಗುವುದು ಎಂದರು.

ವಿವಿಧ ರೀತಿಯ ತೆರಿಗೆ, ಶುಲ್ಕಗಳ ದರವನ್ನು ಏರಿಸಿದೆ. ಇನ್ನು ಮುಂದೆ ಬಸ್ ಪ್ರಯಾಣದ ದರ ಮತ್ತು ನೀರಿನ ದರವನ್ನೂ ಹೆಚ್ಚಿಸಲು ಮುಂದಾಗಿದೆ. ಈ ಮೂಲಕ ಕಾಂಗ್ರೆಸ್ ರಾಜ್ಯದ ಜನರ ಜೀವನವನ್ನೇ ದುಸ್ತರವಾಗಿಸಿದೆ ಎಂದು ಅವರು ಟೀಕಿಸಿದರು.

ಆಸ್ತಿ ತೆರಿಗೆಯನ್ನು ಶೇ 20ರಿಂದ ಶೇ 120ರವರೆಗೆ ಹೆಚ್ಚಿಸಲಾಗಿದೆ. ಮೋಟಾರು ವಾಹನ ತೆರಿಗೆಯನ್ನು ಶೇ 40 ರಿಂದ ಶೇ 80ರಷ್ಟು ಹೆಚ್ಚಿಸಲಾಗಿದೆ. ಮದ್ಯದ ಮೇಲಿನ ತೆರಿಗೆ ಶೇ 20ರಿಂದ ಶೇ 400ರವರೆಗೆ ಹೆಚ್ಚಿಸಲಾಗಿದೆ. ಹೆಣ್ಣು ಮಕ್ಕಳಿಗೆ ಬಸ್ ಪ್ರಯಾಣದ ದರ ಉಚಿತ ಎಂದು ಹೇಳುತ್ತಲೇ ಪುರುಷರ ಬಸ್ ಪ್ರಯಾಣ ದರವನ್ನೂ ಏರಿಸಿದ್ದಾರೆ ಎಂದು ಅವರು ವಿವರಿಸಿದರು.

ವಿದ್ಯುತ್ ಶುಲ್ಕ ಹೆಚ್ಚಿಸಿದ್ದಾರೆ. ಇದರಿಂದ ಕೈಗಾರಿಕಾ ಉತ್ಪನ್ನಗಳ ದರ ಏರಿಕೆ ಆಗಿದೆ. ರೈತರಿಗೆ ಕೊಡುತ್ತಿದ್ದ ಹಾಲಿನ ಪ್ರೋತ್ಸಾಹ ಧನವನ್ನು ನಿಲ್ಲಿಸಿದ್ದಾರೆ. ಪ್ರತಿ ಲೀಟರ್ ಹಾಲಿನ ದರ ಏರಿಸಿದ್ದಾರೆ. ಇದರಿಂದ ಹಾಲು, ಮೊಸರು, ತುಪ್ಪ ಮತ್ತಿತರ ಉತ್ಪನ್ನಗಳ ದರವೂ ಏರಿಕೆಯಾಗಿದೆ ಎಂದು ಅವರು ಹೇಳಿದರು.

ಜೆಎಸ್‌ಎಸ್ ವೈದ್ಯಕೀಯ ಕಾಲೇಜಿಗೆ ದೇಹದಾನ

ರಂಗಕರ್ಮಿ ನ.ರತ್ನ ಇನ್ನಿಲ್ಲ

ಪ್ರಜಾವಾಣಿ ವಾರ್ತೆ


ನ.ರತ್ನ

ಮೈಸೂರು: ಇಲ್ಲಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ (ಆಯಿಷ್) ಮೊದಲ ನಿರ್ದೇಶಕ ಹಾಗೂ ರಂಗಕರ್ಮಿ ನ.ರತ್ನ (89) ಅವರು ಬೆಂಗಳೂರಿನ ಬೈಯಪ್ಪನಹಳ್ಳಿಯ ಮಗನ ಮನೆಯಲ್ಲಿ ಬುಧವಾರ ಬೆಳಿಗ್ಗೆ ಹೃದಯಾಘಾತದಿಂದ ನಿಧನರಾದರು.

ಪತ್ನಿ ಲತಾ, ಪುತ್ರ ಅಜಿತ್, ಪುತ್ರಿ ಕವಿತಾ ಇದ್ದಾರೆ. ಸಿಂಗಪುರದಲ್ಲಿ ಎಂಎಸ್‌ಸಿ ಪದವಿ ಪಡೆದ ಮೊಮ್ಮಗನ ಘಟಿಕೋತ್ಸವಕ್ಕೆ ತೆರಳಿದ್ದ ಅವರು, ಮೂರು ದಿನಗಳ ಹಿಂದಷ್ಟೇ ವಾಪಸಾಗಿದ್ದರು.

ತಮಿಳುನಾಡಿನ ಚಿದಂಬರಂನಲ್ಲಿ ಡಾ.ಎ.ಎಂ.ನಟೇಶ್– ವಿಠೋಬಾಯಿ ಅಮ್ಮಾಳ್ ದಂಪತಿಯ ಮಗನಾಗಿ 1934ರ ಡಿ.12ರಂದು ಜನಿಸಿದ್ದ ಅವರು, ಮೈಸೂರು ಹಾಗೂ ಅಮೆರಿಕದಲ್ಲಿ ಶಿಕ್ಷಣ ಪಡೆದಿದ್ದರು. ವಿಮರ್ಶಕ ಎ.ಕೆ.ರಾಮಾನುಜನ್, ಲೇಖಕ ಯು.ಆರ್.ಅನಂತಮೂರ್ತಿ ಅವರ ಒಡನಾಡಿಯಾಗಿದ್ದರು.

ಮಹಾರಾಜ ಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ (1950), ಯುವರಾಜ ಕಾಲೇಜಿನಲ್ಲಿ ಇಂಟರ್‌ಮೀಡಿಯಟ್ (1952), ಮಹಾರಾಜ ಕಾಲೇಜಿನಲ್ಲಿ ಬಿ.ಎ. ಇಂಗ್ಲಿಷ್ ಆನರ್ಸ್ (1955), ಇನ್‌ಸ್ಟಿಟ್ಯೂಟ್ ಆಫ್ ಎಜುಕೇಶನ್‌ನಲ್ಲಿ ಬಿ.ಇಡಿ ಪದವಿ ಪಡೆದ ನಂತರ ಉನ್ನತ ಶಿಕ್ಷಣಕ್ಕೆ ಅಮೆರಿಕಕ್ಕೆ ತೆರಳಿದ್ದರು. ನ್ಯೂಯಾರ್ಕ್‌ನ ಹಂಟರ್ ವಿಶ್ವವಿದ್ಯಾಲಯ, ಇಂಡಿಯಾನಾ ವಿಶ್ವವಿದ್ಯಾಲಯದಲ್ಲಿ ವಾಕ್ ಮತ್ತು ಶ್ರವಣದಲ್ಲಿ ಎಂ.ಎಸ್ ಹಾಗೂ ಡಾಕ್ಟರೇಟ್ ಪದವಿ ಪಡೆದು, ಅಲ್ಲಿಯೇ ಅಧ್ಯಾಪಕರಾಗಿದ್ದರು.

1966ರಲ್ಲಿ ಆಯಿಷ್ ಸ್ಥಾಪನೆಯಾದಾಗ ಮೊದಲ ನಿರ್ದೇಶಕರಾಗಿ ನೇಮಕಗೊಂಡ ಅವರು 1989ರವರೆಗೂ ಸೇವೆ ಸಲ್ಲಿಸಿ, ದೇಶದ ಮಾದರಿ ಸಂಸ್ಥೆಯನ್ನಾಗಿ ರೂಪಿಸಿದರು. ಹಳ್ಳಿಗಳಿಗೆ ತೆರಳಿ ಶ್ರವಣ ಹಾಗೂ ವಾಕ್ ಸಮಸ್ಯೆ ಇದ್ದವರನ್ನು ಗುರುತಿಸಿ ಚಿಕಿತ್ಸೆ ಹಾಗೂ ಸಾಧನಗಳನ್ನು ನೀಡಿದ್ದರು.

ರಂಗಭೂಮಿಯ ರತ್ನ: ಕಾಲೇಜು ದಿನಗಳಲ್ಲಿ 'ಮಿತ್ರ ಮೇಳ' ತಂಡದ ಮೂಲಕ ರಂಗಭೂಮಿಯಲ್ಲಿ ಸಕ್ರಿಯರಾಗಿದ್ದರು. 'ಸಮತೆಂತೋ' (ಸರಸ್ವತಿಪುರಂ ಮಧ್ಯದ ತೆಂಗಿನ ತೋಟ) ರಂಗತಂಡವನ್ನು ಎಚ್.ಎಂ.ಚನ್ನಯ್ಯ, ಮಿರ್ಲೆ ವಿಶ್ವನಾಥ, ಸಿಂಧುವಳ್ಳಿ ಅನಂತಮೂರ್ತಿ ಅವರೊಂದಿಗೆ ಸ್ಥಾಪಿಸಿ, ರಂಗಭೂಮಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ಅವರು ಹವ್ಯಾಸಿ ರಂಗ ತಂಡಗಳಿಗೆ ಪ್ರೋತ್ಸಾಹ ನೀಡಿದ್ದರು. 'ರಂಗಭೂಮಿ ರತ್ನ' ಎಂದೇ ಪ್ರಸಿದ್ಧರಾಗಿದ್ದರು.

'ಎಲ್ಲಿಗೆ', 'ಬೊಂತೆ', 'ಗೋಡೆ ಬೇಕೆ ಗೋಡೆ', 'ಪುನರ್ಜನ್ಮ', 'ಭಿನ್ನ ಬೆನಕ', 'ಬೋಳಾಚಾರಿಗೆ ನಮನ' ಸೇರಿದಂತೆ ಹತ್ತಾರು ನಾಟಕಗಳನ್ನು ರಚಿಸಿದ್ದಾರೆ. ನವ್ಯ ಹಾಗೂ ಅಸಂಗತ ನಾಟಕಗಳನ್ನು ರಂಗಭೂಮಿಗೆ ಪರಿಚಯಿಸಿದ ರತ್ನ ಅವರು 50ಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಇದೇ ಏಪ್ರಿಲ್‌ನಲ್ಲಿ ಪ್ರದರ್ಶನಗೊಂಡ 'ಅಯಾನ್ ಶಾಂತಿ ಕುಟೀರ' ನಾಟಕದಲ್ಲೂ ವ್ಹೀಲ್‌ಚೇರ್‌ನಲ್ಲಿ ಕೂತು ಪಾತ್ರ ನಿರ್ವಹಿಸಿದ್ದರು.

'ಋಷ್ಯಶೃಂಗ' ಚಲನಚಿತ್ರದ ಅಭಿನಯಕ್ಕೆ ರಾಜ್ಯ ಸರ್ಕಾರದಿಂದ ಉತ್ತಮ ಪೋಷಕ ನಟ ಪ್ರಶಸ್ತಿ ಸಂದಿತ್ತು. ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ (2005), ರಾಜ್ಯೋತ್ಸವ (2013), ಎಂ.ಎನ್.ರಾಯ್ ಪ್ರಶಸ್ತಿ, ಬಿ.ವಿ. ಕಾರಂತ ಪ್ರಶಸ್ತಿ (2015), ಹೆಲನ್ ಕೆಲರ್ ಪ್ರಶಸ್ತಿ ಸೇರಿದಂತೆ ಹತ್ತಾರು ಪ್ರಶಸ್ತಿಗೆ ಭಾಜನರಾಗಿದ್ದರು.

ನಗರದ ಸರಸ್ವತಿಪುರಂನ ವಿಶ್ವಮಾನವ ಜೋಡಿ ರಸ್ತೆಯ ನಿವಾಸ 'ಮಹಾಮನೆ' ಹಾಗೂ ಕಲಾಮಂದಿರದ ಕಿಂದರಿಜೋಗಿ ಆವರಣದಲ್ಲಿ ಅಭಿಮಾನಿಗಳು, ಕಲಾವಿದರು ಹಾಗೂ ಆಯಿಷ್ ವಿದ್ಯಾರ್ಥಿಗಳು ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದರು. ನಂತರ ಕುಟುಂಬಸ್ಥರು ಅವರಿಷ್ಟದಂತೆ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿಗೆ ದೇಹದಾನ ಮಾಡಿದರು.




❦ ಸುಭಾಷಿತ ❦

ತನಗೂ ಒಂದು ದಿನ ಸಾವಿದೆ ಎಂಬುದನ್ನು ಅರಿತವನು ಇನ್ನೊಬ್ಬರಿಗೆ ಎಂದೂ ತೊಂದರೆ ಕೊಡುವುದಿಲ್ಲ.

–ಗೌತಮ ಬುದ್ಧ

ಬಿಜೆಪಿ ಸಿದ್ಧಾಂತಕ್ಕೆ ಅನುಗುಣವಾಗಿ ಎನ್‌ಸಿಇಆರ್‌ಟಿ ಪಠ್ಯ ಪರಿಷ್ಕರಣೆ ಸರಿಯಲ್ಲ

ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಮಂಡಳಿಯು (ಎನ್‌ಸಿಇಆರ್‌ಟಿ) ಪಠ್ಯಪುಸ್ತಕಗಳಲ್ಲಿ ಮತ್ತಷ್ಟು ಬದಲಾವಣೆಗಳನ್ನು ತಂದಿದೆ; ಹಲವು ಸುಳ್ಳು ಸಂಗತಿಗಳನ್ನು ಸೇರಿಸಲಾಗಿದೆ, ಕೆಲವು ವಿಚಾರಗಳನ್ನು ತಪ್ಪಾಗಿ ಬಿಂಬಿಸಲಾಗಿದೆ ಮತ್ತು ಕೆಲವು ವಿಚಾರಗಳನ್ನು ಕೈಬಿಡಲಾಗಿದೆ. ಬಿಜೆಪಿಯು ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಬಳಿಕ, ಇತಿಹಾಸವನ್ನು ತಿದ್ದಿಬರೆಯುವ ಪ್ರಕ್ರಿಯೆಯನ್ನು ಆರಂಭಿಸಲಾಗಿದೆ ಮತ್ತು ಚಾರಿತ್ರಿಕ ವ್ಯಕ್ತಿಗಳಿಗೆ ಹೊಸ ರೂಪ ಕೊಡುವ ಪ್ರಯತ್ನ ನಡೆಸಲಾಗಿದೆ. ಸಮಾಜವನ್ನು ಮರುವ್ಯಾಖ್ಯಾನಿಸುವ ಕೆಲಸವೂ ನಡೆದಿದೆ. ಈ ಬಾರಿಯ ಪರಿಷ್ಕರಣೆಯಲ್ಲಿ ಸಮತೋಲನವಿಲ್ಲ ಎಂಬುದು ಎದ್ದು ಕಾಣುವ ಅಂಶ. 12ನೇ ತರಗತಿಯ ರಾಜಕೀಯಶಾಸ್ತ್ರ ಪಠ್ಯಪುಸ್ತಕದಲ್ಲಿ ಗುಜರಾತ್ ಗಲಭೆಗಳು ಮತ್ತು ಬಾಬರಿ ಮಸೀದಿ ಧ್ವಂಸದ ನಂತರ ನಡೆದ ಹಿಂಸಾಚಾರದ ಉಲ್ಲೇಖವೇ ಇಲ್ಲ. ‘ಆಯ್ದ ಕೆಲವು ಗಲಭೆಗಳನ್ನು ಉಲ್ಲೇಖಿಸುವುದು ಸರಿಯಲ್ಲ’ ಎಂದು ಪರಿಣತರ ಸಮಿತಿ ಹೇಳಿರುವುದು ಈ ಪರಿಷ್ಕರಣೆಗೆ ಕಾರಣ ಎಂದು ಹೇಳಲಾಗಿದೆ. ‘ನಾವು ರೂಪಿಸಬೇಕಿರುವುದು ಸಕಾರಾತ್ಮಕ ಮನಃಸ್ಥಿತಿಯ ಪೌರರನ್ನೇ ವಿನಾ ಹಿಂಸಾತ್ಮಕ ಮತ್ತು ನಿರುತ್ಸಾಹಿ ಮನಃಸ್ಥಿತಿಯ ಪೌರರನ್ನಲ್ಲ. ಆದುದರಿಂದ ಗಲಭೆಗಳ ಕುರಿತು ವಿದ್ಯಾರ್ಥಿಗಳಿಗೆ ಕಲಿಸುವ ಅಗತ್ಯ ಇಲ್ಲ’ ಎಂದು ಎನ್‌ಸಿಇಆರ್‌ಟಿ ಅಧ್ಯಕ್ಷ ದಿನೇಶ್ ಸಕ್ಲಾನಿ ಹೇಳಿದ್ದಾರೆ. ಹಾಗಿದ್ದರೆ, ವಿದ್ಯಾರ್ಥಿಗಳನ್ನು ಸಕಾರಾತ್ಮಕ ಮನಃಸ್ಥಿತಿಯ ಪೌರರನ್ನಾಗಿ ರೂಪಿಸಲು ದೇಶ ವಿಭಜನೆಯ ಸಂದರ್ಭದ ಗಲಭೆಯೂ ಸೇರಿ ಇತಿಹಾಸದ ಎಲ್ಲ ಸಂಘರ್ಷಗಳನ್ನೂ ಪಠ್ಯಪುಸ್ತಕದಿಂದ ಹೊರಗೆ ಇರಿಸಲಾಗುವುದೇ?



ಶಿಕ್ಷಣವು ಏನನ್ನೂ ಅಡಗಿಸಿಡಬಾರದು, ತಿರುಚಬಾರದು ಮತ್ತು ಹುಸಿ ಚಿತ್ರಣವನ್ನು ಸೃಷ್ಟಿಸಬಾರದು

ಭಾರತ ಮತ್ತು ಜಗತ್ತಿನ ಭೂತಕಾಲವು ಹೇಗಿತ್ತೋ ಅದನ್ನು ತೋರಿಸುವ ಬದಲಿಗೆ ಅದು ಹೇಗಿರಬೇಕು ಎಂದು ಬಿಜೆಪಿ ಬಯಸುತ್ತದೆಯೋ ಆ ರೀತಿಯಲ್ಲಿ ಚಿತ್ರಿಸುವುದು ಉದ್ದೇಶವಾಗಿದೆ. ಅದಕ್ಕಾಗಿ ಇತಿಹಾಸಕ್ಕೆ ಬಿಜೆಪಿಗೆ ಬೇಕಾದ ಬಣ್ಣ ಬಳಿಯಲಾಗುತ್ತಿದೆ. ಬಾಬರಿ ಮಸೀದಿಯನ್ನು ಅದರ ಹೆಸರಿನಿಂದ ಉಲ್ಲೇಖಿಸಲಾಗಿಲ್ಲ, ಬದಲಿಗೆ ‘ಮೂರು ಗುಮ್ಮಟಗಳಿರುವ ಕಟ್ಟಡ’ ಎಂದು ಕರೆಯಲಾಗಿದೆ. ಬಾಬರಿ ಮಸೀದಿ ಧ್ವಂಸದಲ್ಲಿ ಕರಸೇವಕರ ಪಾತ್ರ ಮತ್ತು ಅದರ ನಂತರದ ಕೋಮು ಹಿಂಸಾಚಾರದ ಉಲ್ಲೇಖವೇ ಇಲ್ಲ. ಮಸೀದಿ ನಾಶಗೊಳಿಸಿದ ನಂತರ ಬಿಜೆಪಿ ನೇತೃತ್ವದ ಸರ್ಕಾರದ ವಜಾ ಹಾಗೂ ಅಯೋಧ್ಯೆಯಲ್ಲಿ ನಡೆದುದಕ್ಕೆ ಬಿಜೆಪಿ ವ್ಯಕ್ತಪಡಿಸಿದ್ದ ವಿಷಾದವನ್ನು ಪಠ್ಯದಿಂದ ಕೈಬಿಡಲಾಗಿದೆ. ಈ ಹಿಂದೆಯೂ ಹಲವು ಬಾರಿ ವಿವಿಧ ರೀತಿಯಲ್ಲಿ ಪಠ್ಯಪುಸ್ತಕಗಳ ಪರಿಷ್ಕರಣೆ ನಡೆದಿದೆ. ಆರ್ಯನ್ನರ ವಲಸೆ, ಮೊಘಲ್ ಯುಗವೂ ಸೇರಿದಂತೆ ಭಾರತದಲ್ಲಿ ಮುಸ್ಲಿಂ ರಾಜರ ಆಳ್ವಿಕೆ, ಗಾಂಧೀಜಿ ಹತ್ಯೆಯಂತಹ ಚಾರಿತ್ರಿಕ ವಿಚಾರಗಳನ್ನು ಬಿಜೆಪಿಯ ಸಂಕಥನಕ್ಕೆ ಹೊಂದುವ ರೀತಿಯಲ್ಲಿ ಪ್ರಸ್ತುತಪಡಿಸಲಾಗಿದೆ. ಎಲ್ಲ ಮೊಘಲ್ ದೊರೆಗಳೂ ಶೋಷಕರು ಮತ್ತು ಹಿಂದೂ ರಾಜರೆಲ್ಲರೂ ಒಳ್ಳೆಯವರು ಎಂದು ಚಿತ್ರಿಸಲಾಗಿದೆ. ಪ್ರಾಚೀನ ಭಾರತವು ಸುವರ್ಣ ಯುಗವಾಗಿದ್ದು ಜಗತ್ತನ್ನು ಎಲ್ಲ ಕ್ಷೇತ್ರಗಳಲ್ಲಿಯೂ ಮುನ್ನಡೆಸಿದೆ ಎಂದು ಹೇಳಲಾಗಿದೆ. ಮಕ್ಕಳ ಮುಂದೆ ಅವಾಸ್ತವಿಕ ಮತ್ತು ತಿರುಚಿದ ಭಾರತದ ಚಿತ್ರಣವನ್ನು ಇರಿಸಲಾಗಿದೆ.

ಶಿಕ್ಷಣವನ್ನು ಒಂದು ಸಾಧನವಾಗಿ ಬಳಸಿಕೊಂಡು ಯುವ ಮನಸ್ಸುಗಳ ಮೇಲೆ ಒಂದು ಸಿದ್ಧಾಂತವನ್ನು ಹೇರುವ ಪ್ರಯತ್ನ ನಡೆಸಲಾಗುತ್ತಿದೆ. ‘ವಿದ್ಯಾರ್ಥಿಗಳಲ್ಲಿ ವಿಮರ್ಶಾತ್ಮಕ ಚಿಂತನೆ ಹೆಚ್ಚಳ’ ಮಾಡುವುದು ಹೊಸ ಶಿಕ್ಷಣ ನೀತಿಯ ಗುರಿಯಾಗಿದೆ. ಎನ್‌ಸಿಇಆರ್‌ಟಿ ಒಂದು ಸ್ವಾಯತ್ತ ಸಂಸ್ಥೆಯೇ ವಿನಾ ಬಿಜೆಪಿಯ ಅಂಗಸಂಸ್ಥೆ ಅಲ್ಲ. ಒಂದು ದೇಶವು ಆ ದೇಶದ ಭೂತಕಾಲ ಮತ್ತು ವರ್ತಮಾನದ ಇತಿಹಾಸದಿಂದ ರೂಪುಗೊಳ್ಳುತ್ತದೆ. ಭೂತಕಾಲದಲ್ಲಿ ಮಾರ್ಗದರ್ಶಕವಾಗಿದ್ದ ಮೌಲ್ಯಗಳು ಭವಿಷ್ಯಕ್ಕೂ ಊರುಗೋಲಾಗುತ್ತವೆ. ದೇಶದ ಕುರಿತು ಹುಸಿಯಾದ ಚಿತ್ರಣವನ್ನು ವಿದ್ಯಾರ್ಥಿಗಳ ಮನದಲ್ಲಿ ಸೃಷ್ಟಿಸಿದರೆ, ಅದಕ್ಕೆ ಅನುಗುಣವಾದ ಚಿತ್ರಣವನ್ನು ಅವರು ರೂಪಿಸಿಕೊಳ್ಳುತ್ತಾರೆ. ಹುಸಿ ಮತ್ತು ಅವಾಸ್ತವಿಕವಾದ ಜಗತ್ತನ್ನು ಕಟ್ಟಿಕೊಳ್ಳುತ್ತಾರೆ. ಶಿಕ್ಷಣವು ವಿದ್ಯಾರ್ಥಿಗಳಲ್ಲಿ ಪ್ರಶ್ನಿಸುವ ಮತ್ತು ಸಂವಾದ ನಡೆಸುವ ಮನಃಸ್ಥಿತಿಯನ್ನು ಉತ್ತೇಜಿಸಬೇಕು. ಶಿಕ್ಷಣವು ಏನನ್ನೂ ಅಡಗಿಸಿಡಬಾರದು, ತಿರುಚಬಾರದು ಮತ್ತು ಹುಸಿ ಚಿತ್ರಣವನ್ನು ಸೃಷ್ಟಿಸಬಾರದು. ವಿದ್ಯಾರ್ಥಿಗಳ ಮೇಲೆ ಉತ್ತರಗಳು ಮತ್ತು ನಿರ್ಧಾರಗಳನ್ನು ಹೇರಬಾರದು.

ದಿನದ ಟ್ವೀಟ್

ಶಿಸ್ತು ಮೂಡುವುದು ಎಂದು?

ಪ್ರವಾಸಿ ತಾಣವನ್ನು ಮಲಿನ ಮಾಡದಂತೆ ಪ್ರವಾಸಿಗರಲ್ಲಿ ಶಿಸ್ತು ಮೂಡಿಸುವ ಬಗ್ಗೆ ಯಾರೂ ತಲೆಕೆಡಿಸಿಕೊಳ್ಳುತ್ತಿಲ್ಲ. ಗಗನಚುಕ್ಕಿ ಮತ್ತು ಭರಚುಕ್ಕಿ ಜಲಪಾತಕ್ಕೆ ನಿನ್ನೆ ಭೇಟಿ ನೀಡಿದ್ದೆ. ಇಲ್ಲೂ ಅದೇ ಕತೆ. ನದಿ ದಂಡೆಯ ಮಾರ್ಗದುದ್ದಕ್ಕೂ ಕಸ, ಜಲಪಾತ ವೀಕ್ಷಣಾ ಸ್ಥಳ ಮತ್ತು ಬೆಟ್ಟದ ಬದಿಯೂ ಬಾಟಲಿಗಳು ಮತ್ತು ಕಸದಿಂದ ತುಂಬಿವೆ.



ಪ್ರದೀಪ್

ಕಿಡಿನುಡಿ

ಹೆಣ್ಣು ಭ್ರೂಣಹತ್ಯೆ ತಡೆಗೆ ಆರೋಗ್ಯ ಇಲಾಖೆಯ ಸಿಬ್ಬಂದಿ ಹಾಗೂ ಪೊಲೀಸ್ ಇಲಾಖೆಯವರು ಹದ್ದಿನ ಕಣ್ಣಿಟ್ಟಿದ್ದಾರೆ. ಪ್ರಕರಣ ಕಂಡುಬಂದ ಕಡೆಯೆಲ್ಲಾ ದಾಳಿ ನಡೆಸಿ ಆರೋಪಿಗಳನ್ನು ಹಿಡಿದಿದ್ದೇವೆ. ನಮ್ಮ ಸಿಬ್ಬಂದಿ ತಪ್ಪು ಮಾಡುತ್ತಿದ್ದರೆ, ಅವರನ್ನೂ ಪತ್ತೆ ಹಚ್ಚುತ್ತೇವೆ.



ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

25 ವರ್ಷಗಳ ಹಿಂದೆ

ಭಾನುವಾರ, 20-6-1999

● **ಭಾರತ– ಬಾಂಗ್ಲಾ: ಹೊಸ ಅಧ್ಯಾಯ ಸಾರಿದ ‘ಸೌಹಾರ್ದ’**

ಢಾಕಾ, ಜೂನ್ 19 (ಯುಎನ್‌ಐ, ಪಿಟಿಐ)– ಕಲ್ಕತ್ತಾ ನಗರದಿಂದ ಹೊರಟ ಮೊತ್ತಮೊದಲ ಬಸ್ ‘ಸೌಹಾರ್ದ’ ಇಂದು ಸಂಜೆ ಇಲ್ಲಿಗೆ ಬಂದು ಸೇರುವುದರೊಂದಿಗೆ ಭಾರತ– ಬಾಂಗ್ಲಾದೇಶ ಸಂಬಂಧದ ಇತಿಹಾಸಕ್ಕೆ ಹೊಸದೊಂದು ಅಧ್ಯಾಯ ಸೇರ್ಪಡೆಯಾಯಿತು.

ರಾಜಧಾನಿಯ ಓಸ್ಮಾನಿ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಭಾರತದ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಹಾಗೂ ಬಾಂಗ್ಲಾದೇಶದ ಪ್ರಧಾನಿ ಶೇಖ್ ಹಸೀನಾ ಅವರು ಸುಮಾರು 380 ಕಿ. ಮೀ. ಕ್ರಮಿಸಿದ, ಪಶ್ಚಿಮ ಬಂಗಾಳ ಸಾರಿಗೆ ಸಂಸ್ಥೆಗೆ ಸೇರಿದ ಹವಾನಿಯಂತ್ರಿತ ಬಸ್ಸನ್ನು ಬರಮಾಡಿಕೊಂಡರು.

‘ಭಾರತ– ಬಾಂಗ್ಲಾ ಎರಡು ದೇಶಗಳಿಗೂ ಇದೊಂದು ಸಂತಸದ ಸಮಾರಂಭ’ ಎಂದು ವಾಜಪೇಯಿ ತಿಳಿಸಿದರು.

ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಜ್ಯೋತಿ ಬಸು, ವಿದೇಶಾಂಗ ಸಚಿವ ಜಸ್ವಂತ್ ಸಿಂಗ್, ರೈಲ್ವೆ ಸಚಿವ ನಿತೀಶ್ ಕುಮಾರ್ ಹಾಗೂ ಹಸೀನಾ ಸಂಪುಟ ಸಹೋದ್ಯೋಗಿಗಳು ಸಮಾರಂಭದಲ್ಲಿ ಹಾಜರಿದ್ದರು.

● **ಜರ್ಮನಿ: ಭಾರತದ ರೈತರ ಬಂಧನ**

ನವದೆಹಲಿ, ಜೂನ್ 19 (ಯುಎನ್‌ಐ)– ವಿಶ್ವ ವಾಣಿಜ್ಯ ಸಂಘಟನೆ (ಡಬ್ಲುಟಿಒ) ಪ್ರತಿಪಾದಿಸುತ್ತಿರುವ ನೀತಿಗಳನ್ನು ವಿರೋಧಿಸಿ ಜಿ–8 ರಾಷ್ಟ್ರಗಳ ಶೃಂಗಮೇಳ ನಡೆಯುತ್ತಿರುವ ಜರ್ಮನಿಯ ಕಲೋನ್ ನಗರದಲ್ಲಿ ಪ್ರತಿಭಟನೆ ನಡೆಸಲು ಯತ್ನಿಸಿದ ಭಾರತದ ರೈತರನ್ನು ಪೊಲೀಸರು ಬಂಧಿಸಿದ್ದಾರೆ.

ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಸುಮಾರು 500 ಮಂದಿ ರೈತರು ನಗರದ ಕೇಂದ್ರ ಸ್ಥಾನಕ್ಕಿರುವ ಉಪರಸ್ತೆಯನ್ನು ಪ್ರವೇಶಿಸುತ್ತಿದ್ದಂತೆ ಪೊಲೀಸರು ತಡೆದರು. ಬಂಧಿತರಲ್ಲಿ ಆರು ಮಂದಿ ಇನ್ನೂ ಪೊಲೀಸರ ವಶದಲ್ಲಿದ್ದಾರೆ.

50 ವರ್ಷಗಳ ಹಿಂದೆ

ಗುರುವಾರ, 20-6-1974

● **ಎರಡು ವರ್ಷಗಳಲ್ಲಿ ಮತ್ಸ್ಯ ಬಂದರಾಗಿ ಹೊನ್ನಾವರ**

ಬೆಂಗಳೂರು, ಜೂನ್ 19– ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ಬಂದರನ್ನು 46 ಲಕ್ಷ ರೂಪಾಯಿ ವೆಚ್ಚದಲ್ಲಿ ಮತ್ಸ್ಯ ಬಂದರನ್ನಾಗಿ ಅಭಿವೃದ್ಧಿಗೊಳಿಸುವ ಕಾರ್ಯ ಎರಡು ವರ್ಷಗಳಲ್ಲಿ ಮುಗಿಯಲಿದೆ.

ಈ ಯೋಜನೆಯ ತ್ವರಿತ ಅನುಷ್ಠಾನದ ಕಾರ್ಯಕ್ರಮ ರೂಪಿಸಲು ಇಂದು ಮೀನುಗಾರಿಕೆ ಇಲಾಖೆ ಸಚಿವ ಶ್ರೀ ಕೆ.ಟಿ. ರಾಥೋಡ್ ಅವರ ಕೊಠಡಿಯಲ್ಲಿ ನಡೆದ ವರಿಷ್ಠ ಅಧಿಕಾರಿಗಳ ಸಭೆಯಲ್ಲಿ ಈ ವರ್ಷ ಕನಿಷ್ಠ ಹತ್ತು ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವ ರೂಪುರೇಷೆ ತಯಾರಿಸಲಾಯಿತು.

ಮೀನುಗಾರಿಕೆ ದೋಣಿಗಳು ಲಂಗರುಹಾಕುವ ಸ್ಥಳದ ನಿರ್ಮಾಣ, ನೀರು ಪೂರೈಕೆ, ದೋಣಿಗಳ ಆಗಮನ, ನಿರ್ಗಮನ ಸೌಲಭ್ಯಗಳ ನಿರ್ಮಾಣ ಕಾರ್ಯವನ್ನು ಈ ವರ್ಷ ಎತ್ತಿಕೊಳ್ಳಲಾಗುವುದು ಎಂದು ಶ್ರೀ ರಾಥೋಡ್ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

ಬಂದರು ನಿರ್ಮಾಣಕ್ಕೆ ಬೇಕಾದ ಜಮೀನನ್ನು ಈಗಾಗಲೇ ಸ್ವಾಧೀನಪಡಿಸಿಕೊಳ್ಳಲಾಗಿದ್ದು, ಇನ್ನಿತರ ಚಿಕ್ಕಪುಟ್ಟ ಅಡೆತಡೆಗಳ ನಿವಾರಣೆಗೆ ತುರ್ತು ಕ್ರಮ ಕೈಗೊಳ್ಳಲು ಸಭೆಯಲ್ಲಿ ನಿರ್ಧರಿಸಲಾಯಿತು.

● **ನ್ಯಾಷನಲ್ ಕಾಲೇಜಿಗೆ ಅತ್ಯಧಿಕ ರ್‍ಯಾಂಕ್**

ಬೆಂಗಳೂರು, ಜೂನ್ 19– ಪಿಯುಸಿ ಶಿಕ್ಷಣ ಮಂಡಳಿ ಆಶ್ರಯದಲ್ಲಿ ಈ ಸಲ ಜರುಗಿದ ಪ್ರಥಮ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ನಗರದ ನ್ಯಾಷನಲ್ ಕಾಲೇಜು ಅತ್ಯಧಿಕ ರ್‍ಯಾಂಕುಗಳನ್ನು ಗಳಿಸಿಕೊಂಡಿದೆ.

ಈ ಎರಡೂ ಪರೀಕ್ಷೆಗಳಲ್ಲಿ (ಆರ್ಟ್ಸ್, ಸೈನ್ಸ್, ಕಾಮರ್ಸ್) ಬಂದಿರುವ ಒಟ್ಟು 60 ರ್‍ಯಾಂಕ್‌ಗಳ ಪೈಕಿ 12 ರ್‍ಯಾಂಕ್‌ಗಳನ್ನು ನ್ಯಾಷನಲ್ ಕಾಲೇಜು ಪಡೆದುಕೊಂಡಿದೆ.

ಲೋಕಸಭಾ ಚುನಾವಣೆಯ ಮತದಾನದಲ್ಲಿ ಜನರ ಹೊಟ್ಟೆ ಮಾತನಾಡಿತು

ಮೋದಿ: ಎಂತಹ ನೆನಪು ಸೂಕ್ತ?



ವಿಶ್ಲೇಷಣೆ

ಕ್ಯಾಪ್ಟನ್ ಜಿ.ಆರ್. ಗೋಪಿನಾಥ್

ಮೈತ್ರಿಕೂಟದ ಅನಿವಾರ್ಯಗಳು ಅಥವಾ ಹಿಂದೆ ಅಟಲ್ ಬಿಹಾರಿ ವಾಜಪೇಯಿ ಅವರು ಹೇಳಿದ್ದರು ಎನ್ನಲಾದ ‘ಮೈತ್ರಿಧರ್ಮ’ ಪಾಲಿಸಬೇಕಾದ ಅನಿವಾರ್ಯವು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಆರ್ಥಿಕ ವಿಚಾರಗಳಲ್ಲಿ ದೇಶವನ್ನು ಮಧ್ಯಮಪಂಥದಲ್ಲಿ ಒಯ್ಯಲು ಸುವರ್ಣಾವಕಾಶವೊಂದನ್ನು ಒದಗಿಸಿದೆ. ಅದಕ್ಕಿಂತ ಮುಖ್ಯವಾಗಿ, ಕೋಮು ಸೌಹಾರ್ದದ ಹೊಸ ಯುಗಕ್ಕೆ ಚಾಲನೆ ನೀಡಲು ಅವಕಾಶ ಮಾಡಿಕೊಡುತ್ತದೆ.

ಮೋದಿ ಅವರು ಪಕ್ಷದ ಒಳಗಿನಿಂದ ಎದುರಾಗುವ ಒತ್ತಡಗಳನ್ನು, ಆರ್‌ಎಸ್‌ಎಸ್ ಹಾಗೂ ಇತರ ಹಿಂದುತ್ವವಾದಿ ಸಂಘಟನೆಗಳಿಂದ ಬರುವ ಒತ್ತಡಗಳನ್ನು ಈಗ ಸುಲಭವಾಗಿ ನಿಭಾಯಿಸಬಹುದು. ಏಕೆಂದರೆ, ಮೋದಿ ನೇತೃತ್ವದ ಸರ್ಕಾರದ ಉಳಿವಿಗೆ ‘ಸೆಕ್ಯುಲರ್’ ಪಕ್ಷಗಳಾದ ಜೆಡಿಯು ಮತ್ತು ಟಿಡಿಪಿ ಬೆಂಬಲ ಅನಿವಾರ್ಯ ಎಂಬುದು ಅವರಿಗೆ ಗೊತ್ತಿದೆ.

ಕ್ರಿಯಾಶೀಲ, ಜನರನ್ನು ಸೂಜಿಗಲ್ಲಿನಂತೆ ಸೆಳೆಯಬಲ್ಲ ಹಾಗೂ ಸಮರ್ಥನಾದ ನಾಯಕನೊಬ್ಬನಿಗೆ ಯಾವುದೇ ನಿಯಂತ್ರಣ ಇಲ್ಲದಿದ್ದರೆ, ಆತ ತಪ್ಪುದಾರಿಯಲ್ಲಿ ಇದ್ದಾನೆ ಎಂದಾದರೆ, ಆತ ಬೇರೆ ಬೇರೆ ಆಲೋಚನೆಗಳಿಗೆ ಬೆಲೆ ಕೊಡುತ್ತಿಲ್ಲ ಎಂದಾದರೆ, ಆತ ಅತ್ಯುನ್ನತ ಆಶಯಗಳೊಂದಿಗೆ ಕೆಲಸ ಮಾಡಿದರೂ ದೇಶಕ್ಕೆ ಹಾಗೂ ಸಮಾಜಕ್ಕೆ ಹೆಚ್ಚು ಹಾನಿಯನ್ನು ಉಂಟುಮಾಡುತ್ತಾನೆ. ‘ಅಧಿಕಾರದ ಮದ ಏರಿದವರು ಮನಃಪೂರ್ವಕವಾಗಿ ಅಧಿಕಾರವನ್ನು ಬಿಡುವುದು ಎಂದಿಗೂ ಆಗದ ಕೆಲಸ’ ಎಂದು ಎಡ್ಮಂಡ್ ಬರ್ಕ್ ಹೇಳಿದ್ದ. ಅತಿಯಾದ ಅಧಿಕಾರವು ಅತಿಯಾಗಿ ಮದವೇರುವಂತೆ ಮಾಡುತ್ತದೆ.

ಇದಕ್ಕಿರುವ ಒಂದೇ ಮದ್ದು, ಅಧಿಕಾರವನ್ನು ಹಿಂಪಡೆಯುವುದು. ಮೋದಿ ಅವರಿಗೆ 2014 ಹಾಗೂ 2019ರಲ್ಲಿ ಸ್ಪಷ್ಟ ಬಹುಮತದೊಂದಿಗೆ ಅಧಿಕಾರ ನೀಡಿದ ಜನರು, ಈ ಬಾರಿ ಸ್ಪಷ್ಟ ಬಹುಮತ ನೀಡಲು ಒಲ್ಲೆ ಎನ್ನುವ ಮೂಲಕ ಆ ಅಧಿಕಾರವನ್ನು ಹಿಂಪಡೆದರು. ಹೀಗಿದ್ದರೂ, ವಿರೋಧ ಪಕ್ಷಗಳ ಸಾಲಿನಲ್ಲಿ ಒಳ್ಳೆಯ ನಾಯಕನಿಲ್ಲ, ಆ ಪಕ್ಷಗಳಲ್ಲಿ ಒಗ್ಗಟ್ಟಿಲ್ಲ ಎಂಬ ಕಾರಣಕ್ಕೆ ಮೋದಿ ಅವರೇ ಒಳ್ಳೆಯ ಆಯ್ಕೆ ಎಂದು ತೀರ್ಮಾನಿಸಿದರು. ಮೋದಿ ಅವರಿಗೆ ಸರ್ಕಾರ ನಡೆಸಲು ಮಿತ್ರಪಕ್ಷಗಳ ಬೆಂಬಲ ಅಗತ್ಯ ಎಂಬುದು ಪರೋಕ್ಷವಾಗಿ ಒಂದು ವರ. ಮೋದಿ ಅವರು ಈಗ ಅನಿಯಂತ್ರಿತವಾಗಿ ವರ್ತಿಸಲು ಅವಕಾಶವಿಲ್ಲ.

ಮೋದಿ ಅವರು ತಮ್ಮ ಹೊಸ ಮಿತ್ರಪಕ್ಷಗಳ ಮಾತುಗಳಿಗೆ ಕಿವಿಗೊಟ್ಟರೆ, ಅವರ ಜೊತೆಗೆ ಹಾಗೂ ವಿರೋಧ ಪಕ್ಷಗಳ ಜೊತೆಗೆ ಮಾತುಕತೆಗೆ ಮನಸ್ಸು ಮಾಡಿದರೆ, ನೀತಿಗಳನ್ನು ಅಂತಿಮಗೊಳಿಸುವ ಮೊದಲು ಸಹಮತ ರೂಪಿಸಲು ಅವರಿಂದ ಸಾಧ್ಯವಾದರೆ ಅವರು ಇನ್ನಷ್ಟು ಉತ್ತಮ ನಾಯಕ ಆಗುತ್ತಾರೆ. ಈಗ, ಮೈತ್ರಿಕೂಟ ಸರ್ಕಾರದ ನೇತೃತ್ವ ವಹಿಸಿರುವ ಮೋದಿ ಅವರ ಹೊಸ ಅವತಾರ ಹೇಗಿರಲಿದೆ?

ಮೋದಿ ಅವರನ್ನು ಬೆಂಬಲಿಸುವ ಹಲವರ ಪ್ರಕಾರ ಅವರು ನಿಜಕ್ಕೂ ಒಬ್ಬ ಅವತಾರ ಪುರುಷ. ದಿವ್ಯ ಶಕ್ತಿಯ ವ್ಯಕ್ತರೂಪ ತಾವು ಎಂದು ಮೋದಿ ಅವರೂ ಹೇಳಿಕೊಂಡಿದ್ದಿದೆ. ಆದರೆ ಭಾರತದ ಹಾಗೂ ಪಶ್ಚಿಮದ ದೇಶಗಳ ಉದಾರವಾದಿಗಳು, ಎಡಪಂಥೀಯರು ಹಾಗೂ ಬುದ್ಧಿಜೀವಿಗಳು ಮೋದಿ ಅವರನ್ನು ಸರ್ವಾಧಿಕಾರಿ ಎಂದು ಹೇಳುತ್ತಾರೆ. ಮೋದಿ ಅವರು ತಮ್ಮನ್ನು ಬಲಿಷ್ಠ ನಾಯಕ ಎಂದು ಚಿತ್ರಿಸಿಕೊಂಡಿದ್ದು, 2014ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಎಲ್ಲರ ಅಭಿವೃದ್ಧಿಯನ್ನು ಪ್ರಚಾರದ ಧ್ಯೇಯವಾಗಿಸಿಕೊಂಡಿದ್ದು ದೇಶದ ಮನವನ್ನು ಸೆಳೆಯಿತು. ಮನಮೋಹನ್ ಸಿಂಗ್ ಅವರನ್ನು ಆಗ ಹಲವರು ದುರ್ಬಲ ಪ್ರಧಾನಿ ಎಂದು, ಕಾಂಗ್ರೆಸ್ ಹೈಕಮಾಂಡ್‌ನ ಕೈಗೊಂಬೆ ಎಂದು ಭಾವಿಸಿದ್ದರು. ಈ ಪರಿಸ್ಥಿತಿಯು ಮೋದಿ ಅವರ ಏಳ್ಗೆಗೆ ನೆರವಾಗಿ ಬಂತು. ದಿನಗಳು ಕಳೆದಂತೆ ಮೋದಿ ಅವರು ಒಂದು ಕೈಯಲ್ಲಿ ಸಾವರ್ಕರ್ ಚಿಂತನೆಗಳನ್ನು, ಇನ್ನೊಂದು ಕೈಯಲ್ಲಿ ಮಹಾತ್ಮ ಗಾಂಧಿಯ ಚಿಂತನೆಗಳನ್ನು ಹಿಡಿಯಲಾರಂಭಿಸಿದರು. ಆದರೆ ಈ ಇಬ್ಬರು ನಾಯಕರು ಪ್ರತಿಪಾದಿಸಿದ್ದು ಬಹಳ ಭಿನ್ನ ಚಿಂತನೆಗಳನ್ನು. ಹಲವು ಮುಖವಾಡಗಳ ಹಿಂದಿನ ನಿಜವಾದ ಮೋದಿ ಯಾರು ಎಂದು ಕೆಲವರು ಚಕಿತರಾಗಿ ಕೇಳಲಾರಂಭಿಸಿದರು.

2023ರಲ್ಲಿಯೂ ಮೋದಿ ಅವರು ಹಲವು ವ್ಯಕ್ತಿತ್ವಗಳನ್ನು ತಮ್ಮದಾಗಿಸಿಕೊಂಡು ಪರಿವರ್ತನೆಯ ಹಾದಿಯಲ್ಲಿ ಹೆಜ್ಜೆ ಇರಿಸಿದ್ದರು. ಜಿ–20 ದೇಶಗಳ ಸಭೆಯ ಸಂದರ್ಭದಲ್ಲಿ ಮುತ್ಸದ್ದಿಯಾಗಿ ಜಾಗತಿಕ ವೇದಿಕೆಯಲ್ಲಿ ಕಾಣಿಸಿಕೊಂಡರು. ವಿಶೇಷವಾಗಿ ದೊಡ್ಡ ಉದ್ಯಮಗಳ ಪಾಲಿಗೆ ಸುಧಾರಕನಂತೆ, ಆಧುನಿಕ ತಂತ್ರಜ್ಞಾನವನ್ನು ಅಪ್ಪಿಕೊಂಡ ನಾಯಕನಂತೆ, ಸಂಪ್ರದಾಯವಾದಿ ಹಿಂದೂ ಶ್ರೇಷ್ಠತೆಯನ್ನು ಪ್ರತಿಪಾದಿಸುವವರ ಪಾಲಿಗೆ, ಅಯೋಧ್ಯೆಯಲ್ಲಿ ರಾಮಮಂದಿರವನ್ನು ನಿರ್ಮಿಸಲು ದೇವರೇ ಕಳುಹಿಸಿದ ವ್ಯಕ್ತಿಯಂತೆ ಕಾಣಿಸಿಕೊಂಡರು.

ಆದರೆ, ಕೇಸರಿ ನಿಲುವಂಗಿ ಧರಿಸಿದ ಯೋಗಿಯ ಆಡಳಿತ ಇರುವ, ಕೋಮು ನೆಲೆಯಲ್ಲಿ ಅತ್ಯಂತ ಹೆಚ್ಚು ಧ್ರುವೀಕರಣ ಕಂಡಿರುವ ಉತ್ತರಪ್ರದೇಶದಲ್ಲಿ ಮೋದಿ ಅವರು ಬಿರುಸಿನ ಪ್ರಚಾರ ಕೈಗೊಂಡಿದ್ದರೂ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯು ‘ಇಂಡಿಯಾ’ ಮೈತ್ರಿಕೂಟದ ಎದುರು ಸೋಲನ್ನು ಅನುಭವಿಸಬೇಕಾಯಿತು. ರಾಮನ ಜನ್ಮಸ್ಥಾನವಾಗಿರುವ ಅಯೋಧ್ಯೆಯನ್ನು ಒಳಗೊಳ್ಳುವ ಫೈಜಾಬಾದ್ ಕ್ಷೇತ್ರದಲ್ಲಿಯೇ ಬಿಜೆಪಿಯ ಅಭ್ಯರ್ಥಿಯು ಸಮಾಜವಾದಿ ಪಕ್ಷದ ಅಭ್ಯರ್ಥಿಯ ಎದುರು ಸೋತರು.



ಇದು ಬಹಳ ದೊಡ್ಡ ವ್ಯಂಗ್ಯ. ಸಮಾಜವಾದಿ ಪಕ್ಷದ ನಾಯಕ ಅಖಿಲೇಶ್ ಯಾದವ್ ಅವರು ಮುಸ್ಲಿಮರನ್ನೂ ಸೇರಿಸಿಕೊಂಡು ಹಲವು ಜಾತಿ, ಸಮುದಾಯಗಳ ಒಕ್ಕೂಟವನ್ನು ಕಟ್ಟಿದ್ದರು. ಮತದಾನ ಮಾಡುವ ಸಂದರ್ಭದಲ್ಲಿ ಜನರ ಹೊಟ್ಟೆ ಮಾತನಾಡಿತು.

2014ರಲ್ಲಿ ಮೋದಿ ಅವರು ಅಭಿವೃದ್ಧಿ ಹಾಗೂ ಉತ್ತಮ ಆಡಳಿತದ ಆಧಾರದಲ್ಲಿ ಅಧಿಕಾರ ಹಿಡಿದರು, ಆಗ ಅವರಿಗೆ ಪ್ರಾಮಾಣಿಕ, ದಕ್ಷ ಆಡಳಿತಗಾರ ಎಂಬ ಖ್ಯಾತಿ ಇತ್ತು, ಅವರ ಆಡಳಿತದ ಮಾದರಿಗೆ ದೇಶದೆಲ್ಲೆಡೆ ಆದರ ಇತ್ತು. ಮೋದಿ ಅವರು ಮುಖ್ಯಮಂತ್ರಿಯಾಗಿ ಮಾಡಿದ್ದ ಸಾಧನೆಗಳನ್ನು ರಾಷ್ಟ್ರಮಟ್ಟದಲ್ಲಿಯೂ ತೋರಲಿ ಎಂದು ಜನ ಬಯಸಿದ್ದಾಗ, ಮೋದಿ ಅವರು ಧ್ರುವೀಕರಣದ ಹಾಗೂ ಮುಸ್ಲಿಮರನ್ನು ಕೆಟ್ಟವರು ಎಂದು ಬಿಂಬಿಸುವ ಹಿಂದುತ್ವದ ರಾಜಕಾರಣವನ್ನು ಮುನ್ನೆಲೆಗೆ ತರುವ ಅಗತ್ಯ ಏನಿತ್ತು? ಸಾಮಾಜಿಕ ಅಶಾಂತಿ, ಕೋಮು ಸಂಘರ್ಷ ನಿರಂತರವಾಗಿದ್ದರೆ ಅವರಿಗೆ ಅಭಿವೃದ್ಧಿ ಸಾಧಿಸಲು ಸಾಧ್ಯವೇ?

ಅರ್ಥ ವ್ಯವಸ್ಥೆಯ ಬಗ್ಗೆ ಗಮನಹರಿಸುವುದು, ಉದ್ಯೋಗ ಸೃಷ್ಟಿಸುವುದು ಮತ್ತು ಜನರ ಜೀವನಮಟ್ಟವನ್ನು ಸುಧಾರಿಸುವುದು ಯಾವತ್ತಿಗೂ ಜನರ ಗಮನವನ್ನು ಸೆಳೆಯುವ ಚುನಾವಣಾ ವಿಷಯ. ಮೋದಿ ಅವರಿಗೆ ಚರಿಷ್ಮಾ ಇದೆ, ಮಾತಿನ ಕೌಶಲ ಅವರಿಗೆ ಸಿದ್ಧಿಸಿದೆ, ಅವರಲ್ಲಿ ಶಕ್ತಿ ಇದೆ, ಸಾಮರ್ಥ್ಯವೂ ಇದೆ. ಅಲ್ಲದೆ, ಸಮಾನ ಅವಕಾಶಗಳೊಂದಿಗೆ ದೇಶದ ಬೆಳವಣಿಗೆ ಸಾಧಿಸುವ ಹಾಗೂ ಸಮಸಮಾಜದ ಕಡೆ ದೇಶವನ್ನು ಒಯ್ಯುವ ಜನಾದೇಶ ಅವರಿಗೆ ಇತ್ತು. ಈ ಜನಾದೇಶವನ್ನು ಅವರು ವಿಷಯವೇ ಅಲ್ಲದ ಸಂಗತಿಗಳ ಮೇಲೆ, ಕಲ್ಪಿತ ಶತ್ರುಗಳ ಮೇಲೆ ಗಮನಹರಿಸಲು ಬಳಸಿದರೇ?

ಉಕ್ರೇನ್ ಮೇಲೆ ರಷ್ಯಾ ಸಮರ ಸಾರಿದ ನಂತರ, ಅಧ್ಯಕ್ಷ ಪುಟಿನ್ ಅವರಿಗೆ ‘ಇದು ಯುದ್ಧಗಳ ಕಾಲವಲ್ಲ’ ಎಂದು ಮೋದಿ ಅವರು ಹೇಳಿದಾಗ ವಿಶ್ವದ ನಾಯಕರು ಮೋದಿ ಅವರನ್ನು ಶ್ಲಾಘಿಸಿದ್ದರು. ಸಂಘರ್ಷಗಳಲ್ಲಿ ಸಿಲುಕಿರುವ ಜಗತ್ತು ಶಾಂತಿ, ಸೌಹಾರ್ದದ ಕಡೆ ಸಾಗುವಂತೆ ಮಾಡುವಲ್ಲಿ ಮೋದಿ ಅವರು ಮುಖ್ಯ ಪಾತ್ರ ವಹಿಸಬಲ್ಲರು. ಆದರೆ, ದೇಶದಲ್ಲಿ ನಿರಂಕುಶ ವ್ಯಕ್ತಿಯಾಗಿ ಕಂಡವನು ಜಾಗತಿಕವಾಗಿ ಮುತ್ಸದ್ದಿಯಂತೆ ಕಾಣಿಸಲಾರ.

ಈಗ ಎನ್‌ಡಿಎ ಸರ್ಕಾರವು ಆರಂಭದಲ್ಲಿಯೇ ಒಂದು ತಪ್ಪು ಮಾಡಿದೆ. ಕೇಂದ್ರ ಸಂಪುಟದಲ್ಲಿ ಮುಸ್ಲಿಂ ಸಮುದಾಯದ ಯಾರಿಗೂ ಪ್ರಾತಿನಿಧ್ಯ ಇಲ್ಲ. ಇಲ್ಲಿ ಆಗಿರುವ ತಪ್ಪನ್ನು ತಕ್ಷಣ ಸರಿಪಡಿಸಿಕೊಳ್ಳಬೇಕು.

ಈಗಿನ ಅವಧಿ ಮುಗಿಯುವ ಹೊತ್ತಿಗೆ ಮೋದಿ ಅವರಿಗೆ 79 ವರ್ಷ ವಯಸ್ಸಾಗಿರುತ್ತದೆ. ಆ ವಯಸ್ಸಿನಲ್ಲಿ, ತಾವು ಸಂಪಾದಿಸಬೇಕಿರುವ ಹೆಸರು ಯಾವ ಬಗೆಯದ್ದು ಎಂಬ ಬಗ್ಗೆ ಮನಸ್ಸು ಸಹಜವಾಗಿಯೇ ಆಲೋಚಿಸುತ್ತದೆ. ದೇಶವನ್ನು ಒಗ್ಗೂಡಿಸಿದ, ಆಧುನಿಕ ಭಾರತವನ್ನು ನಿರ್ಮಿಸಲು ಗಮನಹರಿಸಿ ಹೆಚ್ಚು ಜನರನ್ನು ಬಡತನದಿಂದ ಮೇಲಕ್ಕೆತ್ತಿದ ಮುತ್ಸದ್ದಿಯಾಗಿ ಜನ ತಮ್ಮನ್ನು ನೆನಪಿನಲ್ಲಿ ಇರಿಸಿಕೊಳ್ಳಲಿ ಎಂದು ಮೋದಿ ಬಯಸುವರೇ? ಅಥವಾ ಹಿಂದೂ ರಾಷ್ಟ್ರವನ್ನು ಸೃಷ್ಟಿಸಿ, ಅದನ್ನು ಗಾಯ– ವಿಭಜನೆಗಳಿಂದ ಬಿಟ್ಟುಹೋದ ಹಿಂದೂ ನಾಯಕನನ್ನಾಗಿ ನೆನಪಿಟ್ಟುಕೊಳ್ಳಲಿ ಎಂದು ಬಯಸುವರೇ?

ಮೈತ್ರಿಕೂಟದ ಪಾಲುದಾರರು ಮೋದಿ ಅವರನ್ನು ಸರಿದಾರಿಯಲ್ಲಿ ಕರೆದೊಯ್ಯುವರು ಎಂದು ಆಶಿಸಬಹುದು.

ಚುರುಮುರಿ



ಪಾಸಿಟಿವ್ ಥಿಂಕಿಂಗ್!

● ಗುರು ಪಿ.ಎಸ್.

‘ಥತ್, ಯಾವಾಗಲೂ ಇದೇ ಆಯ್ತು ಇವರದು’ ಬೈಯುತ್ತಾ ಟಿ.ವಿ. ಆಫ್ ಮಾಡಿದಳು ಹೆಂಡತಿ.

‘ಯಾಕ್ ಮಾರಾಯ್ತಿ ಏನಾಯ್ತು?’ ಕೇಳಿದೆ.

‘ಅಪರೂಪಕ್ಕೊಮ್ಮೆ ನ್ಯೂಸ್ ನೋಡೋಣ ಅಂದ್ರೆ ಏನ್ರೀ ಇದು, ಮೂರು ಹೊತ್ತೂ ಕೊಲೆ, ಕಿಡ್ನ್ಯಾಪ್, ರೇಪ್, ಡಿವೋರ್ಸ್... ಇಂಥ ನೆಗೆಟಿವ್ ಸುದ್ದಿಗಳನ್ನೇ ತೋರಿಸ್ತಿದ್ದಾರೆ, ಒಳ್ಳೆ ನ್ಯೂಸ್‌ಗಳೇ ಇಲ್ಲ. ಇದನ್ನೆಲ್ಲ ನೋಡಿ ನೋಡಿ ಮನಸ್ಸಲ್ಲಿ ಏನೋ ಒಂಥರಾ ತೊಳಲಾಟ’.

‘ಅಯ್ಯೋ, ಇಷ್ಟಕ್ಕೆಲ್ಲ ಯಾಕೆ ಸಂಕಟಪಡ್ತೀಯ? ಯಾವಾಗಲೂ ಪಾಸಿಟಿವ್ ಥಿಂಕಿಂಗ್ ಇರಬೇಕು. ಜೀವನದಲ್ಲಿ ಎಲ್ಲಾ ತಪ್ಪುಗಳನ್ನು ನಾವೇ ಮಾಡಿ ತಿದ್ದಿಕೊಳ್ಳೋಣ ಅಂದ್ರೆ ಅಷ್ಟೊಂದು ಟೈಮ್ ಇರಲ್ಲ, ಬೇರೆಯವರ ತಪ್ಪುಗಳನ್ನ ನೋಡಿ ನೋಡಿ, ನಾವೂ ಅಂಥ ತಪ್ಪು ಮಾಡಬಾರದು ಅಂತ ದೃಢಸಂಕಲ್ಪ ಮಾಡಿಕೊಳ್ಳಬೇಕು’ ವೇದಾಂತಿಯಂತೆ ಹೇಳಿದೆ.

‘ಹಂಗೆಲ್ಲ ಯೋಚನೆ ಮಾಡಿದ್ರೆ ನಿಮ್ಮನ್ನ ಮದುವೆ ಆಗೋ ತಪ್ಪೇ ಮಾಡ್ತಿರಲಿಲ್ಲ ನಾನು’ ಎಂದು ನಕ್ಕ ಹೆಂಡತಿ ನ್ಯೂಸ್‌ಪೇಪರ್ ಹಿಡಿದುಕೊಂಡು, ‘ನೋಡ್ರೀ, ಪೆಟ್ರೋಲ್ ರೇಟ್ ಕೂಡ ಜಾಸ್ತಿ ಮಾಡಿದಾರಂತೆ, ಇಲ್ಲೂ ನೆಗೆಟಿವ್ ಸುದ್ದಿ’.

‘ಅವರು 14 ಸಲ ಜಾಸ್ತಿ ಮಾಡಿದ್ರು, ಇವರಿನ್ನೂ ಈಗ ಒಂದು ಸಲ ಜಾಸ್ತಿ ಮಾಡಿದಾರೆ, ಇರಲಿ ಬಿಡು ಪರವಾಗಿಲ್ಲ’ ಎನ್ನುತ್ತಾ ಕುಡಿಯಲು ನೀರು ಕೇಳಿದೆ.

‘ಮುಂದಿನ ತಿಂಗಳಿಂದ ವಾಟರ್ ಬಿಲ್ ಕೂಡ ಜಾಸ್ತಿ ಮಾಡ್ತಾರಂತ್ರೀ’ ಮತ್ತೆ ನೆಗೆಟಿವ್ ಸುದ್ದಿ ಹೇಳಿದಳು ಹೆಂಡತಿ!

‘ನೀರು ಕೊಡ್ತಿರೋದೇ ದೊಡ್ಡದು, ಬಿಲ್ ಜಾಸ್ತಿ ಮಾಡಿದ್ರೂ ತೊಂದರೆ ಇಲ್ಲ ಬಿಡು’ ಎನ್ನುತ್ತಾ ಹೊರಟು ನಿಂತೆ.

‘ಎಲ್ಲಿಗೆ ಹೊರಟ್ರಿ?’

‘ಕವಿಗೋಷ್ಠಿಗೆ’.

‘ಯಾವ ಸಮುದಾಯ ಭವನದಲ್ಲಿದೆರೀ ಕವಿಗೋಷ್ಠಿ?’

‘ನಮ್ ಪಾರ್ಟಿ ಆಫೀಸ್‌ನಲ್ಲಿದೆಯಮ್ಮ, ಬೇಗ ಹೊರಡಬೇಕು, ಇಲ್ಲದಿದ್ದರೆ ಎಮ್ಮೆಲ್ಲೆ, ಎಮ್ಮೆಲ್ಸಿ, ಪಾರ್ಟಿ ಲೀಡರ್ಸ್, ಕಾರ್ಯಕರ್ತರೆಲ್ಲ ಜಾಗ ಹಿಡ್ಕೊಂಡ್‌ಬಿಡ್ತಾರೆ’ ಸರಸರನೆ ಹೊರಟೆ.

ಸಂಗತ

ಮಹಿಳಾ ಸಬಲೀಕರಣಕ್ಕಾಗಿ ಯೋಗ!

‘ಸಂತರ ಕಾಯಿಲೆ’ಯಿಂದ ಬಳಲುವವರಿಗೆ ಯೋಗ ಮದ್ದಾಗಬಲ್ಲದು

● ಡಾ. ವೀಣಾ ಭಟ್

ಅಂತರರಾಷ್ಟ್ರೀಯ ಯೋಗ ದಿನಾಚರಣೆಯ (ಜೂನ್ 21) ಈ ಬಾರಿಯ ಘೋಷವಾಕ್ಯ ‘ಮಹಿಳಾ ಸಬಲೀಕರಣಕ್ಕಾಗಿ ಯೋಗ’. ಇಲ್ಲಿ ‘ಸಬಲೀಕರಣ’ ಎಂಬ ಪದವು ಲಿಂಗಸಮಾನತೆಯನ್ನು ಸೂಚಿಸಿ, ಮಹಿಳಾ ಹಕ್ಕುಗಳನ್ನು ಬೆಂಬಲಿಸುತ್ತದೆಯಾದರೂ, ಮಹಿಳೆ ತನ್ನ ಸ್ಥಾನಮಾನವನ್ನು ಉತ್ತಮಪಡಿಸಿಕೊಳ್ಳಲು, ತನ್ನ ಮೇಲೆ ಆಗಬಹುದಾದ ಯಾವುದೇ ಬಗೆಯ ದೌರ್ಜನ್ಯಗಳನ್ನು ಮೆಟ್ಟಿ ನಿಲ್ಲಲು, ಬದುಕಿನಲ್ಲಿ ಬರುವ ಸವಾಲುಗಳನ್ನು ಎದುರಿಸಲು ಸಶಕ್ತಳಾಗುವುದು, ಅಂದರೆ ಈ ದಿಸೆಯಲ್ಲಿ ದೈಹಿಕವಾಗಿ, ಮಾನಸಿಕವಾಗಿ ಸಬಲಳಾಗುವುದು ಎಂದು ಅರ್ಥ.

ಆರೋಗ್ಯ ಕ್ಷೇತ್ರದಲ್ಲಿನ ಅತ್ಯುನ್ನತ ವೈಜ್ಞಾನಿಕ ಆವಿಷ್ಕಾರಗಳ ನಡುವೆಯೂ ಉತ್ತಮ ಆರೋಗ್ಯ ಸಾಧನೆ ಇನ್ನೂ ಕಷ್ಟಸಾಧ್ಯವೇ ಎನಿಸಿದೆ. ಹೆಚ್ಚಿನ ಮಹಿಳೆಯರಿಗೆ ಉತ್ತಮ ಆರೋಗ್ಯ ಹೊಂದುವುದಿರಲಿ ತಮ್ಮ ಅನಾರೋಗ್ಯದ ಹಿಂದೆ ಆನುವಂಶೀಯತೆ, ಆಹಾರ ಸೇವನೆಯಲ್ಲಿ ಅಸಮತೋಲನ, ವೈಯಕ್ತಿಕ ಹಾಗೂ ಪರಿಸರ ಸ್ವಚ್ಛತೆಯ ಕೊರತೆ, ರೋಗಾಣುಗಳ ದಾಳಿ, ಒತ್ತಡಮಯ ಜೀವನಶೈಲಿ, ನೆಲ, ಜಲ, ವಾಯುಮಾಲಿನ್ಯದಂತಹ ಕಾರಣಗಳಿವೆ ಎಂಬ ವಿಷಯವೇ ತಿಳಿದಿರುವುದಿಲ್ಲ.

ವೈದ್ಯಕೀಯ ಆವಿಷ್ಕಾರಗಳಿಂದ ಇಂದು ಸಾಂಕ್ರಾಮಿಕ ರೋಗಗಳನ್ನು ಜಯಿಸುತ್ತಿದ್ದೇವೆ ಅಂದುಕೊಂಡಿದ್ದರೂ ಅಸಾಂಕ್ರಾಮಿಕ ಕಾಯಿಲೆಗಳಾದ ಮಧುಮೇಹ, ಹೃದ್ರೋಗ, ಬೊಜ್ಜು, ಏರುರಕ್ತದೊತ್ತಡ, ಕ್ಯಾನ್ಸರ್‌ನಂತಹ ಕಾಯಿಲೆಗಳು ಮಹಿಳೆಯರಲ್ಲೂ ಹೆಚ್ಚುತ್ತಿವೆ. ಎಷ್ಟೋ ಹೆಣ್ಣುಮಕ್ಕಳಿಗೆ ತಮ್ಮ ಹೆಣ್ತನವನ್ನೇ ಕಸಿಯುತ್ತಿರುವ ‘ಪಾಲಿಸಿಸ್ಟಿಕ್ ಓವೇರಿಯನ್ ಡಿಸೀಸ್’ (ಪಿಸಿಓಡಿ) ಇರುವುದರ ಬಗ್ಗೆ ಅರಿವೇ ಇರುವುದಿಲ್ಲ. ಸಾಮಾನ್ಯ ಎನಿಸಿದರೂ ಗುರುತರವಾದ ದುಷ್ಪರಿಣಾಮ ಬೀರುವ ರಕ್ತಹೀನತೆಯಂತಹ ಸಮಸ್ಯೆಯಿಂದ ಬಹಳಷ್ಟು ಮಹಿಳೆಯರು ಬಳಲುತ್ತಿದ್ದಾರೆ.

ಮಹಿಳೆಯರಿಗೆ ಜೈವಿಕ ಜವಾಬ್ದಾರಿಗಳಾದ ಋತುಚಕ್ರ ನಿರ್ವಹಣೆ, ಗರ್ಭಧಾರಣೆ, ಸ್ತನ್ಯಪಾನ, ಮಗುವಿನ ಲಾಲನೆ ಪಾಲನೆ, ಋತುಬಂಧದ ಜೊತೆಗೆ ಕೌಟುಂಬಿಕ, ಸಾಮಾಜಿಕ, ಆರ್ಥಿಕ ಒತ್ತಡದ ನಡುವೆ ಸಮತೋಲನ ಸಾಧಿಸುವುದು ಕಷ್ಟಕರವಾಗಿದೆ. ದಿನೇ ದಿನೇ ಹೆಚ್ಚುವ ಸಂದಿನೋವು, ಕುಂದಿದ ಉತ್ಸಾಹ, ಬೆನ್ನುನೋವು, ಮೂಳೆನೋವು, ನಿಶ್ಶಕ್ತಿ, ಸದಾ ಸುಸ್ತಿನ ಅನುಭವದಂತಹ ಸಮಸ್ಯೆಗಳು ಅವರನ್ನು ಹೈರಾಣಾಗಿಸುತ್ತಿವೆ. ಅಷ್ಟಾದರೂ ತಮ್ಮ ಬಗ್ಗೆ ಹೆಚ್ಚು ಕಾಳಜಿ ವಹಿಸದ ಹೆಚ್ಚಿನ ಮಹಿಳೆಯರು ಸ್ಥೂಲಕಾಯ, ಉಬ್ಬಿದ ಹೊಟ್ಟೆ, ಊದಿದ ಕಾಲು, ಕುಂದುತ್ತಿರುವ ದೃಷ್ಟಿಯ ಬಗ್ಗೆ ಲಕ್ಷಿಸದೆ ಸದಾ ಸಂಸಾರ, ಉದ್ಯೋಗ, ಗಂಡ, ಮಕ್ಕಳ ಆರೈಕೆಗಷ್ಟೇ ಪ್ರಾಮುಖ್ಯ ಕೊಟ್ಟು ತಮ್ಮ ಆರೋಗ್ಯವನ್ನು ಕಡೆಗಣಿಸುತ್ತಿದ್ದಾರೆ. ಕುಟುಂಬದ ಪುರೋಭಿವೃದ್ಧಿಯಷ್ಟೇ ತಮ್ಮ ಧ್ಯೇಯ ಎಂದು ತಿಳಿಯುವ ‘ಸಂತರ ಕಾಯಿಲೆ’ಯಿಂದ (ಸೇಂಟ್ ಸಿಂಡ್ರೋಮ್) ಬಳಲುತ್ತಿದ್ದಾರೆ ಎನ್ನುವುದು ಅಧ್ಯಯನಗಳಿಂದ ತಿಳಿದುಬರುತ್ತದೆ.ಖಿನ್ನತೆ, ಆತಂಕದಂತಹ ಒಂದಿಲ್ಲೊಂದು ಮಾನಸಿಕ ಸಮಸ್ಯೆಯಿಂದ ಅವರು ಬಳಲುತ್ತಿರುತ್ತಾರೆ.

ಮನೆಯ ದೈನಂದಿನ ಚಟುವಟಿಕೆಗಳು ಇಂದು ಹೆಚ್ಚಿನ ದೈಹಿಕ ಶ್ರಮ ಬೇಡುವುದಿಲ್ಲ. ತಂತ್ರಜ್ಞಾನ ಬಳಕೆ ನಮ್ಮ ಜೀವನವನ್ನು ಸುಗಮಗೊಳಿಸಿದೆ ಅನಿಸಿದರೂ ಕೆಲವೊಮ್ಮೆ ಬದುಕನ್ನು ದುರ್ಗಮಗೊಳಿಸುತ್ತಿದೆ. ಸಕಲ ಅಂಗಾಂಗಗಳಿಗೂ ಸೂಕ್ತ ದೈಹಿಕಶ್ರಮ ದೊರೆಯದಿರುವುದು, ಜಂಕ್‌ಫುಡ್ ಸೇವನೆ, ಜೈವಿಕ ಗಡಿಯಾರಕ್ಕೆ ಬೆಲೆ ಕೊಡದಿರುವಂತಹ ಕಾರಣಗಳು ಜೀವನಶೈಲಿ ಸಂಬಂಧದ ಕಾಯಿಲೆಗಳನ್ನು ಹೆಚ್ಚಿಸುತ್ತಿವೆ. ಹಾಗಾದರೆ ಪುರಾತನ ಜೀವನಶೈಲಿಗೇ ಮರಳುವುದೆ? ಅದು ಸಾಧ್ಯವಾಗದ ಮಾತು. ನಿರಾಸೆಯ ಕಡಲಲ್ಲೂ ಆಸೆಯ ಮುತ್ತು ಎಂಬಂತೆ, ಉತ್ತಮ ದೈಹಿಕ ಹಾಗೂ ಮಾನಸಿಕ ಆರೋಗ್ಯಕ್ಕಾಗಿ, ಆ ಮೂಲಕ ಮಹಿಳಾ ಸಬಲೀಕರಣಕ್ಕಾಗಿ ಯೋಗವೇ ತಕ್ಕ ಉತ್ತರ ಎನಿಸುತ್ತದೆ.

ಹಲವು ಯೋಗಾಸನಗಳನ್ನು ಮಹಿಳೆಯರು ಸಂತಾನೋತ್ಪತ್ತಿ ವಯಸ್ಸಿನಲ್ಲಿ ಹಾಗೂ ನಂತರವೂ ನಿಯಮಿತವಾಗಿ ಮಾಡುವುದು ಬಹಳಷ್ಟು ಉಪಯುಕ್ತಕರ. ಹದಿವಯಸ್ಸಿನಲ್ಲಿ ಹಾರ್ಮೋನಿನ ಅಸಮತೋಲನದಿಂದ ಉಂಟಾಗುವ ಪಿಸಿಓಡಿ ಸಮಸ್ಯೆಯ ನಿಯಂತ್ರಣ, ಸಹಜ ಹೆರಿಗೆ, ಸ್ನಾಯುಗಳ ಬಲವರ್ಧನೆ, ಲೈಂಗಿಕ ಸಾಮರ್ಥ್ಯ ಹೆಚ್ಚಳ, ಬೆನ್ನುನೋವು, ಋತುಬಂಧದಂತಹ ಸಮಸ್ಯೆಗಳನ್ನು ಎದುರಿಸಲು ವಿವಿಧ ಆಸನಗಳು ಸಹಾಯಕ.

ಆದರೆ ಕೆಲವು ಆಸನಗಳನ್ನು ಕಲಿತು ಪ್ರದರ್ಶಿಸುವುದಕ್ಕಷ್ಟೇ ಯೋಗವನ್ನು ಸೀಮಿತಗೊಳಿಸದೆ,



ಪತಂಜಲಿ ಮಹರ್ಷಿ ಹೇಳಿದ ಅಷ್ಟಾಂಗ ಯೋಗ ಸೂತ್ರಗಳನ್ನು ಅಳವಡಿಸಿಕೊಳ್ಳುವುದು ಯೋಗ್ಯ. ಬದಲಿಸಲು ಸಾಧ್ಯವಾಗದ ಆನುವಂಶೀಯತೆ ಮತ್ತು ಬದಲಾಯಿಸಬಲ್ಲ ಜೀವನಶೈಲಿ ಎರಡೂ ಇಂದಿನ ಅನಾರೋಗ್ಯದ ಸ್ಥಿತಿಗೆ ಪ್ರಮುಖ ಕಾರಣಗಳಾಗಿವೆ. ಜೀವನಶೈಲಿ ಎನ್ನುವುದು ನಮ್ಮ ಆಹಾರಕ್ರಮ, ತೊಡಗಿಕೊಳ್ಳುವ ವ್ಯಾಯಾಮ, ನಮ್ಮ ಕೆಟ್ಟನಡತೆಗಳು, ಭಾವೋದ್ವೇಗ ಎಲ್ಲವನ್ನೂ ಒಳಗೊಂಡಿರುತ್ತದೆ. ನಾವು ನಮ್ಮ ಮನಸ್ಸಿನ ಮೇಲೆ ಪ್ರಭುತ್ವ ಸಾಧಿಸಿ ಒತ್ತಡ, ಭಾವೋದ್ವೇಗವನ್ನು ನಿರ್ವಹಣೆ ಮಾಡುವುದು ಬಹಳ ಮುಖ್ಯ. ಇಲ್ಲದಿದ್ದರೆ ದೀರ್ಘಾವಧಿಯ ಆರೋಗ್ಯ ಸಮಸ್ಯೆಗಳು ಉಂಟಾಗುತ್ತವೆ.

ಸಮಸ್ಯೆಯ ಮೂಲ ಅರಿತು ಭಾವೋದ್ವೇಗವನ್ನು ನಿಯಂತ್ರಿಸಲು ಯೋಗಿಕ ಜೀವನಶೈಲಿ ಅನುಸರಿಸುವುದು ಉತ್ತಮ ಪರಿಹಾರ. ಅದಕ್ಕಾಗಿ ನಮ್ಮ ಶರೀರವನ್ನು ಮೊದಲು ಯೋಗಿಕ ರೀತಿಯಲ್ಲಿ ಅರ್ಥೈಸಿಕೊಳ್ಳಬೇಕು. ಅಂದರೆ ನಮ್ಮ ಪಂಚಕೋಶಗಳ ಮೇಲೆ ಪರಿಣಾಮ ಬೀರುವ ವಿಧಿವಿಧಾನಗಳನ್ನು ಅಳವಡಿಸಿಕೊಳ್ಳುವುದರಿಂದ ಅನಾರೋಗ್ಯದಿಂದ ದೂರವಿರಬಹುದು. ಹೀಗಿದ್ದಾಗ ನಮ್ಮ ಪಯಣ ಸದಾ ದೈಹಿಕ ಹಾಗೂ ಮಾನಸಿಕ ಸ್ವಾಸ್ಥ್ಯ ಸಾಧಿಸುವೆಡೆಗೆ ಇರುತ್ತದೆ. ಆ ಮೂಲಕವೇ ಮಹಿಳಾ ಸಬಲೀಕರಣ ಸಾಧ್ಯ.

ವಾಚಕರ ವಾಣಿ

ಸಿಗ್ನಲ್ ಅವಾಂತರ: ಬೇಕು ಎಚ್ಚರ

ಪಶ್ಚಿಮ ಬಂಗಾಳದ ಡಾರ್ಜಿಲಿಂಗ್ ಜಿಲ್ಲೆಯಲ್ಲಿ ಕಾಂಚನ್‌ಜುಂಗಾ ಎಕ್ಸ್‌ಪ್ರೆಸ್ ಪ್ರಯಾಣಿಕ ರೈಲಿಗೆ ಸರಕು ಸಾಗಣೆ ರೈಲೊಂದು ಇತ್ತೀಚೆಗೆ ಡಿಕ್ಕಿ ಹೊಡೆದು ಸಂಭವಿಸಿದ ಸಾವು– ನೋವಿನ ದುರಂತದ ಸುದ್ದಿಯನ್ನು ಓದಿದಾಗ, ನನ್ನ ಜೀವನದಲ್ಲಿ ನಡೆದ ರೈಲು ದುರಂತವೊಂದರಲ್ಲಿ ಕೂದಲೆಳೆಯ ಅಂತರದಲ್ಲಿ ನಾನು ಬದುಕಿಬಂದದ್ದು ನೆನಪಾಗಿ ಮೈ ಝುಂ ಎಂದಿತು. ಹಂಪಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಬೆಂಗಳೂರಿಗೆ ಪ್ರಯಾಣಿಸುತ್ತಿದ್ದೆ. ಆಂಧ್ರಪ್ರದೇಶದ ಪೆನುಕೊಂಡ ಬಳಿ, ನಿಂತಿದ್ದ ಸರಕು ಸಾಗಣೆ ರೈಲಿಗೆ ಇದೇ ರೀತಿ ನಮ್ಮ ರೈಲು ಡಿಕ್ಕಿ ಹೊಡೆಯಿತು. ಆಗ ಮೂರನೇ ಬೋಗಿಯಲ್ಲಿ ಕುಳಿತಿದ್ದ ಬಹುತೇಕರು ಮೃತರಾಗಿದ್ದರು. ಅದೇ ಬೋಗಿಯಲ್ಲಿದ್ದ ನಾನು, ಒಳಗಿದ್ದ ಫ್ಯಾನ್‌ನಲ್ಲಿ ಬೆಂಕಿಯ ಕಿಡಿ ಹಾರುತ್ತಿದ್ದುದನ್ನು ಕಂಡು ಕೂಡಲೇ ಬೋಗಿಯಿಂದ ಹೊರಕ್ಕೆ ಜಿಗಿದೆ. ಕೆಲವೇ ಸೆಕೆಂಡುಗಳಲ್ಲಿ ನಮ್ಮ ಬೋಗಿಯು ಹೊತ್ತಿ ಉರಿಯತೊಡಗಿತು.

ಯಾರದೋ ನಿಷ್ಕಾಳಜಿಯಿಂದ ಅಮಾಯಕ ಪ್ರಯಾಣಿಕರು ಪ್ರಾಣ ಕಳೆದುಕೊಂಡರು. ನಂತರ ನಮಗೆ ಬಸ್ ವ್ಯವಸ್ಥೆ ಮಾಡಿ ಬೆಂಗಳೂರಿಗೆ ಕಳಿಸಿಕೊಟ್ಟರು. ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ, ಸಿಗ್ನಲ್ ಅವಾಂತರ. ಇಂತಹ ಪ್ರಕರಣಗಳು ಮರುಕಳಿಸದಂತೆ ಎಚ್ಚರ ವಹಿಸುವ ಕೆಲಸ ಆಗಬೇಕಾಗಿದೆ.

ಕಾಶೀನಾಥ ಪಿ. ಸಾಲಿಮಠ, ನರೇಗಲ್

ಮಶ್ರೂಮ್...ಮಶ್ರೂಮ್!

ಮನೆ ಮುಂದಿನ ರಸ್ತೆಯಲ್ಲಿ ಬೆಳಿಗ್ಗೆ ‘ಮಶ್ರೂಮ್, ಮಶ್ರೂಮ್...’ ಎಂಬ ಕೂಗು ಕೇಳಿತು. ಹೋಗಿ ನೋಡಿದರೆ ಪರಿಚಯದ ಈರಪ್ಪ ‘ಕೋಲ್ ಅಣಬೆ, ಕೊಡೆ ಅಣಬೆ ಕೊಡ್ಲಾ ಸಾರ್?’ ಎಂದ. ಮುಂಗಾರಿನ ಹದವಾದ ಮಳೆಗೆ ಮಲೆನಾಡಿನಲ್ಲಿ ಹಳೆಯ ಮರಗಳ ಕೆಳಗೆ, ಸಡಿಲ ಮಣ್ಣಿನ ಆಸರೆಯಲ್ಲಿ ಪುಟಿದೇಳುವ ಅಣಬೆಗಳು ಕೆಲವೇ ಗಂಟೆ ಜೀವಿಸಿರುತ್ತವೆ! ಇವುಗಳಿಂದ ಮಾಡುವ ಖಾದ್ಯ ತುಂಬಾ ರುಚಿ. ‘ನೀನೇನು ಅಣಬೆ ಅನ್ನುವುದು ಬಿಟ್ಟು ಮಶ್ರೂಮ್ ಅನ್ನುತ್ತಿದ್ದೀಯಲ್ಲ?’ ಎಂದೆ. ‘ಕಾಲ ಬದಲಾದಂತೆ ನಾವೂ ಅದಕ್ಕೆ ತಕ್ಕಂತೆ ಬದಲಾಗಬೇಕು ತಾನೇ?!’ ಎಂದನಾತ. ದರ ಕೇಳಿದರೆ ಕೆ.ಜಿ.ಗೆ ‘ನಾನೂರು’ ಅಂದ. ಚೌಕಾಸಿ ಮಾಡಿ ಕೊನೆಗೆ ₹ 240ಕ್ಕೆ ಕೊಂಡೆ. ಇದು ಬೇಕೆಂದಾಗಲೆಲ್ಲ ಸಿಗುವುದಿಲ್ಲ. ಮಳೆಗಾಲದ ಶುರುವಿನಲ್ಲಿ ವರ್ಷಕ್ಕೆ ಒಮ್ಮೆ ಮಾತ್ರ ಸಿಗುವ ಅಣಬೆ; ಅಲ್ಲ, ಅಲ್ಲ... ಮಶ್ರೂಮ್!

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

ಸ್ವಾಯತ್ತತೆ ಇಲ್ಲದ ಸಂಸ್ಥೆಗಳಲ್ಲಿ...

ಸಾಹಿತ್ಯ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಅಕಾಡೆಮಿಗಳು, ಸಂಸ್ಥೆಗಳ ಕುರಿತು ಪ್ರಭುತ್ವದ ನಿಲುವು ಅಚ್ಚರಿ ಮೂಡಿಸದು. ಕುಮಾರವ್ಯಾಸ ಬಹಳ ಹಿಂದೆಯೇ ಹೇಳಿದಂತೆ ‘ಅರಸು ರಾಕ್ಷಸ, ಮಂತ್ರಿಯೆಂಬುವ ಮೊರೆವ ಹುಲಿ, ಪರಿವಾರ ಹದ್ದಿನ ನೆರವಿ...’ ಎಂಬ ಮಾತು ಸಾರ್ವಕಾಲಿಕ ಸತ್ಯ. ಯಾವುದೇ ಪಕ್ಷದ ಅಥವಾ ಯಾವುದೇ ವ್ಯವಸ್ಥೆಯ ಪ್ರಭುತ್ವ ಇರಲಿ ಅದು ಬಯಸುವುದು ವಿಧೇಯತೆಯನ್ನು ಮಾತ್ರ. ಪ್ರಶ್ನಿಸುವ, ಪ್ರತಿಭಟಿಸುವ, ಸ್ವತಂತ್ರ ವಿಚಾರಧಾರೆಯನ್ನು ಪ್ರಭುತ್ವ ಸಹಿಸದು. ಇತ್ತೀಚಿನ ವರ್ಷಗಳಲ್ಲಿ, ಸಾಹಿತ್ಯಕ, ಬೌದ್ಧಿಕ ವಲಯದ ಕುರಿತು ರಾಜಕೀಯ ವಲಯದಲ್ಲಿ ಅಸಹನೆ ಇನ್ನೂ ಹೆಚ್ಚಾಗಿದೆ. ಆದರೆ ಇದೆಲ್ಲವನ್ನೂ ಸಾಹಿತ್ಯ ಮತ್ತು ಸಾಹಿತಿ ಆದವನು ಮೀರಬೇಕು. ಸಾಹಿತ್ಯದಿಂದ ದೂರವಾಗಿರುವ ರಾಜಕಾರಣ ಮತ್ತು ರಾಜಕಾರಣಿ, ರಾಜಕಾರಣಕ್ಕೆ ಹತ್ತಿರವಾಗಿರುವ ಸಾಹಿತಿ ಮತ್ತು ಸಾಹಿತ್ಯದ ಪರಿಸರದಲ್ಲಿ ಇದೆಲ್ಲ ನಿರೀಕ್ಷಿತವೇ. ಸಾಹಿತಿಗಳ ನೆರವಿ ರಾಜಕಾರಣಿಗಳ ಸುತ್ತ ಠಳಾಯಿಸುತ್ತಿರುವಾಗ ಮತ್ತು ‘ದಣಿ ಹೇಳುವ ಮೊದಲೇ ಕಾಲೊತ್ತುವ’ ಜನರಿರುವಾಗ ಇದೆಲ್ಲ ಸಹಜವಾಗುತ್ತಿದೆ. ಸಾಹಿತ್ಯ, ಸಾಂಸ್ಕೃತಿಕ ವಲಯದ ಸಂಸ್ಥೆಗಳನ್ನು ವೃತ್ತಿಪರ ರಾಜಕಾರಣಿಗಳೇ ಆಕ್ರಮಿಸಿಕೊಂಡು ಮೆರೆವ, ಮೊರೆವ ದಿನಗಳು ದೂರವಿಲ್ಲ. ಅದಾಗಲೇ ಆರಂಭಗೊಂಡಿದೆ. ಆಗಲಿ ಬಿಡಿ. ಹಾಗಾದರೂ ಅವರ ಅಧಿಕಾರಲಾಲಸೆ ತಣಿಯಲಿ ಅಥವಾ ಉಪಮುಖ್ಯಮಂತ್ರಿಯವರ ಊಹೆಯಂತೆ ಸಾಹಿತಿಗಳೇ ವೃತ್ತಿಪರ ರಾಜಕಾರಣಿಗಳಾಗಲೂಬಹುದು.

ಕುವೆಂಪು ಆದಿಯಾಗಿ ನಮ್ಮ ಸಾಹಿತ್ಯ ಲೋಕದ ಪೂರ್ವಸೂರಿಗಳು ಪ್ರಭುತ್ವದ ಕುರಿತು ತಾಳಿದ ಮತ್ತು ತಾಳಬೇಕೆಂದು ಹೇಳಿದ ನಿಲುವು, ನಡೆ-ನುಡಿಗಳು ಎಂದಿಗೂ ಎಲ್ಲ ಕಾಲಕ್ಕೂ ಸಾಹಿತಿಗಳಿಗೆ ಒದಗಿಬರುವ ನಿದರ್ಶನಗಳಾಗಬೇಕು. ಸ್ವಾಯತ್ತತೆ ಇಲ್ಲದ ಸಂಸ್ಥೆಗಳಲ್ಲಿ ಸ್ವಾಭಿಮಾನ ಒತ್ತೆ ಇಟ್ಟು ಸಾಧಿಸುವುದಾದರೂ ಏನನ್ನು?

ವೆಂಕಟೇಶ ಮಾಚಕನೂರ, ಧಾರವಾಡ

ಕೆ–ಸೆಟ್: ಬದಲಾಗಲಿ ಸಮಯದ ಅವಧಿ

ಇತ್ತೀಚೆಗೆ ನಡೆಸಿದ ಯುಜಿಸಿ-ನೆಟ್ ಪರೀಕ್ಷೆಯಲ್ಲಿ ಓಎಂಆರ್ ಪದ್ಧತಿಯನ್ನು ತಂದಿದ್ದರಿಂದ ಅಭ್ಯರ್ಥಿಗಳಿಗೆ ಅನುಕೂಲವಾಯಿತು. ಈ ಹಿಂದೆ ನೆಟ್ ಪರೀಕ್ಷೆಯನ್ನು ಕಂಪ್ಯೂಟರ್ ವ್ಯವಸ್ಥೆ ಮೂಲಕ ನಡೆಸಲಾಗುತ್ತಿತ್ತು. ಇದರಿಂದ ಅಭ್ಯರ್ಥಿಗಳಿಗೆ ಅದರಲ್ಲೂ ಕಂಪ್ಯೂಟರ್ ಜ್ಞಾನ ಇಲ್ಲದವರಿಗೆ ತುಂಬಾ ಕಷ್ಟವಾಗುತ್ತಿತ್ತು. ಆದರೆ ಈಗ ಓಎಂಆರ್ ಪದ್ಧತಿ ತಂದಿರುವುದರಿಂದ ಮತ್ತು ಪತ್ರಿಕೆ-1 ಹಾಗೂ ಪತ್ರಿಕೆ-2ರಿಂದ ಒಟ್ಟಿಗೆ 3 ಗಂಟೆಯ ಸಮಯ ನಿಗದಿಪಡಿಸಿರುವುದರಿಂದ ಎಲ್ಲಾ ಅಭ್ಯರ್ಥಿಗಳಿಗೆ ಅನುಕೂಲವಾಗಿದೆ.

ಆದರೆ ರಾಜ್ಯದಲ್ಲಿ ಕೆ–ಸೆಟ್ ಪರೀಕ್ಷೆಯ ಪೇಪರ್-1 ಸಾಮಾನ್ಯ ಪತ್ರಿಕೆಗೆ 1 ಗಂಟೆ ಸಮಯ ನಿಗದಿಗೊಳಿಸಲಾಗಿದೆ. ಈ ಪತ್ರಿಕೆಯಲ್ಲಿ ಲೆಕ್ಕ ಮಾಡಬೇಕಾಗಿ ಬರುವುದರಿಂದ ಸಮಯದ ಅಭಾವ ತಲೆದೋರಿ, ಎಲ್ಲಾ ಪ್ರಶ್ನೆಗಳಿಗೆ ಸಂಪೂರ್ಣವಾಗಿ ಉತ್ತರಿಸಲು ಸಾಧ್ಯವಾಗುತ್ತಿಲ್ಲ. ನಂತರದಲ್ಲಿ ಒಂದು ಗಂಟೆ ಸಮಯ ವಿರಾಮ ಇರುತ್ತದೆ. ಆನಂತರ ಆಯಾ ವಿಷಯಕ್ಕೆ ಸಂಬಂಧಿಸಿದ ಪೇಪರ್- 2ಕ್ಕೆ 2 ಗಂಟೆ ಸಮಯವಿರುತ್ತದೆ. ಹೀಗೆ ಕೆ–ಸೆಟ್ ಪರೀಕ್ಷೆಯ ಸಮಯವನ್ನು ಪ್ರತ್ಯೇಕವಾಗಿ ನಿಗದಿಗೊಳಿಸಲಾಗಿದೆ. ಯುಜಿಸಿ-ನೆಟ್ ಪರೀಕ್ಷೆಯಂತೆ ಮುಂಬರುವ ಕೆ–ಸೆಟ್ ಪರೀಕ್ಷೆಯಲ್ಲಿ ಸಾಮಾನ್ಯ ಪತ್ರಿಕೆ ಮತ್ತು ಆಯಾ ವಿಷಯದ ಪತ್ರಿಕೆಯ ಸಮಯವನ್ನು ಪ್ರತ್ಯೇಕಗೊಳಿಸದೆ ಒಟ್ಟಿಗೆ 3 ಗಂಟೆ ಸಮಯವನ್ನು ನಿಗದಿಗೊಳಿಸಿ ಅಭ್ಯರ್ಥಿಗಳಿಗೆ ಅನುಕೂಲ ಕಲ್ಪಿಸಿಕೊಡಬೇಕು.

ಮಹೇಶ್ ಕೂದುವಳ್ಳಿ, ಚಿಕ್ಕಮಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.




ರೇಣುಕಸ್ವಾಮಿ ಹತ್ಯೆ ಪ್ರಕರಣ

ಆರೋಪಿಗಳ ಪಾತ್ರ ಏನು...?

ರೇಣುಕಸ್ವಾಮಿ ಅವರನ್ನು ಅಪಹರಿಸಿ, ವಿದ್ಯುತ್ ಶಾಕ್, ಹಲ್ಲೆಯಂತಹ ಚಿತ್ರಹಿಂಸೆ ನೀಡಿ ಕೊಲೆ ಮಾಡಿದ್ದ ಪ್ರಕರಣದಲ್ಲಿ ಆರೋಪಿಗಳು ಒಂದೊಂದು ರೀತಿಯ ಪಾತ್ರ ವಹಿಸಿರುವುದು ಪೊಲೀಸ್ ತನಿಖೆಯಿಂದ ಬಯಲಾಗಿದೆ. ಆರೋಪಿಗಳು ನೆಲೆಸಿದ್ದ ಸ್ಥಳ, ಹಿನ್ನೆಲೆ, ದರ್ಶನ್‌ಗೆ ಇವರು ಹೇಗೆ ಪರಿಚಯ ಎಂಬ ವಿವರ ಇಲ್ಲಿದೆ

ಪವಿತ್ರಾಗೌಡ (33)



ಎ-1

ಬೆಂಗಳೂರಿನ ಆರ್.ಆರ್. ನಗರದಲ್ಲಿ ವಾಸ. ಮಾಡೆಲ್ ಹಾಗೂ ನಟಿ. ಛತ್ರಿಗಳು ಸಾರ್ ಛತ್ರಿಗಳು, ಅಗಮ್ಯ, ಸಾಗುವ ದಾರಿ, ಪ್ರೀತಿ ಕಿತಾಬು... ಸೇರಿ ಕೆಲವು ಸಿನಿಮಾಗಳಲ್ಲಿ ನಟಿಸಿದ್ದರು. ಆದರೆ, ಚಿತ್ರರಂಗದಲ್ಲಿ ಯಶಸ್ಸು ಲಭಿಸಲಿಲ್ಲ. ಹೀಗಾಗಿ, ಉದ್ಯಮದತ್ತ ಮುಖ ಮಾಡಿದ್ದರು. ರೆಡ್ ಕಾರ್ಪೆಟ್ ಸ್ಟುಡಿಯೊ-777 ಹೆಸರಿನ ಫ್ಯಾಷನ್ ಬುಟಿಕ್ ನಡೆಸುತ್ತಿದ್ದಾರೆ.

ಉತ್ತರ ಪ್ರದೇಶದ ಸಂಜಯ್ ಸಿಂಗ್ ಅವರು ಬೆಂಗಳೂರಿನಲ್ಲಿ ಐ.ಟಿ ಕಂಪನಿಯೊಂದರಲ್ಲಿ ಉದ್ಯೋಗದಲ್ಲಿದ್ದರು. ಆಗ ಸಂಜಯ್‌ಸಿಂಗ್ ಹಾಗೂ ಪವಿತ್ರಾ ಪ್ರೀತಿಸಿ ಮದುವೆ ಆಗಿದ್ದರು. 2013ರಲ್ಲಿ ಇಬ್ಬರು ವಿಚ್ಛೇದನ ಪಡೆದುಕೊಂಡಿದ್ದರು. ನಂತರ, ಪವಿತ್ರಾಗೆ ಸಿನಿಮಾ ಸೆಟ್‌ವೊಂದರಲ್ಲಿ ದರ್ಶನ್ ಪರಿಚಯ ಆಗಿತ್ತು. ಹತ್ತು ವರ್ಷದಿಂದ ಆಪ್ತರಾಗಿದ್ದರು. ಕೃತ್ಯಕ್ಕೆ ಸಂಚು ರೂಪಿಸಿದ್ದೇ ಪವಿತ್ರಾ ಎಂಬ ಆರೋಪ ಇದೆ.

ದರ್ಶನ್ ಅಲಿಯಾಸ್ ಡಿ ಬಾಸ್ (47)



ಎ-2

ರಾಜರಾಜೇಶ್ವರಿ ನಗರದ ಐಡಿಯಲ್ ಹೋಮ್ ಟೌನ್‌ಶಿಪ್‌ನಲ್ಲಿ ವಾಸ. ಕನ್ನಡ ಚಿತ್ರರಂಗದ ಪ್ರಸಿದ್ಧ ನಟ. ತನ್ನ ಆಪ್ತ ಗೆಳತಿಗೆ ಅಶ್ಲೀಲ ಸಂದೇಶ ಕಳುಹಿಸುತ್ತಿದ್ದ ಮಾಹಿತಿ ತಿಳಿದ ಮೇಲೆ ರೇಣುಕಸ್ವಾಮಿ ಅವರನ್ನು ಅಪಹರಿಸಲು ಸಂಚು ರೂಪಿಸಿದ್ದರು ಎಂಬ ವಿಷಯ ಪೊಲೀಸ್ ತನಿಖೆಯಿಂದ ಗೊತ್ತಾಗಿದೆ. ಪಟ್ಟಣಗೆರೆಯ ಶೆಡ್‌ನಲ್ಲಿ ಕೊಲೆಯಾದ ವ್ಯಕ್ತಿಗೆ ಕಾಲಿನಿಂದ ಒದ್ದಿದ್ದರು. ಅಲ್ಲದೇ ಕೊಲೆ ಪ್ರಕರಣ ಮುಚ್ಚಿ ಹಾಕಲು ನಾಲ್ಕು ಮಂದಿಯನ್ನು ಪೊಲೀಸರಿಗೆ ಶರಣಾಗುವಂತೆ ಹೇಳಿ ₹30 ಲಕ್ಷಕ್ಕೆ ಡೀಲ್ ನೀಡಿದ್ದರು ಎಂಬುದು ಇವರ ಮೇಲಿರುವ ಆರೋಪ.

ಪುಟ್ಟಸ್ವಾಮಿ ಅಲಿಯಾಸ್ ಕೆ.ಪವನ್ (29)



ಎ-3

ರಾಮನಗರ ಜಿಲ್ಲೆ ಚನ್ನಪಟ್ಟಣ ತಾಲ್ಲೂಕು ಅಕ್ಕೂರು ಗ್ರಾಮದ ಪವನ್, ಆರ್.ಆರ್.ನಗರದ ಕೆಂಚೇನಹಳ್ಳಿಯ 24ನೇ ಕ್ರಾಸ್‌ನಲ್ಲಿ ಬಾಡಿಗೆ ಮನೆ ಪಡೆದು ನೆಲೆಸಿದ್ದರು. ದರ್ಶನ್ -ಪವಿತ್ರಾಗೌಡ ಅವರಿಗೆ ಸಹಾಯಕರು. ರೇಣುಕಸ್ವಾಮಿ ಅಶ್ಲೀಲ ಸಂದೇಶ ಕಳುಹಿಸುತ್ತಿದ್ದ ವಿಚಾರವನ್ನು ದರ್ಶನ್ ಗಮನಕ್ಕೆ ತಂದಿದ್ದರು. ರೇಣುಕಸ್ವಾಮಿ ಮೃತಪಟ್ಟ ಬಳಿಕ ಮೃತದೇಹ ಎಸೆಯಲು ಹಾಗೂ ಕೇಶವ, ನಿಖಿಲ್, ಕಾರ್ತಿಕ್ ಶರಣಾಗುವಂತೆ ಯೋಜನೆ ರೂಪಿಸಿದ್ದರು ಎನ್ನುವ ಆರೋಪ ಇವರ ಮೇಲಿದೆ.

ರಾಘವೇಂದ್ರ ಅಲಿಯಾಸ್ ನಾಗರಾಜ (43)



ಎ-4

ಅಖಿಲ ಕರ್ನಾಟಕ ದರ್ಶನ್ ತೂಗುದೀಪ ಸೇನಾ ಅಧ್ಯಕ್ಷ ರಾಘವೇಂದ್ರ ಚಿತ್ರದುರ್ಗದ ಕೋಳಿ ಬುರುಜಿನಹಟ್ಟಿ ನಿವಾಸಿ. ನಟ ದರ್ಶನ್ ಅಭಿಮಾನಿ ಆಗಿದ್ದ ಇವರು 'ಡಿ ಬಾಸ್' ಹೆಸರಿನಲ್ಲಿ ವಿವಿಧ ಚಟುವಟಿಕೆ ನಡೆಸುತ್ತಿದ್ದರು. ಚಿತ್ರದುರ್ಗ ಭಾಗಕ್ಕೆ ದರ್ಶನ್ ಬಂದಾಗಲೆಲ್ಲಾ ಅವರ ಜೊತೆಯಲ್ಲಿ ಇರುತ್ತಿದ್ದ ರಾಘವೇಂದ್ರ, ದರ್ಶನ್ ಏನೇ ಹೇಳಿದರೂ ಚಾಚೂ ತಪ್ಪದೇ ಮಾಡುತ್ತಿದ್ದರು. ರೇಣುಕಸ್ವಾಮಿ ಅವರನ್ನು ಬೆಂಗಳೂರಿಗೆ ಕರೆದೊಯ್ಯುವ ವಿಚಾರದಲ್ಲೂ ರಾಘವೇಂದ್ರ ಹಿಂದೆ ಮುಂದೆ ಯೋಚನೆ ಮಾಡದೇ ದರ್ಶನ್ ಹೇಳಿದಂತೆ ಮಾಡಿದ್ದಾರೆ ಎನ್ನಲಾಗಿದೆ. ವೃತ್ತಿಯಿಂದ ಆಟೊ ಚಾಲಕ.

ನಂದೀಶ (28)



ಎ-5

ಮಂಡ್ಯ ಜಿಲ್ಲೆಯ ಚಾಮಲಾಪುರ ಗ್ರಾಮದ ನಂದೀಶ್, ಆರ್.ಆರ್. ನಗರದ ಕೃಷ್ಣಪ್ಪ ಲೇಔಟ್‌ನ 2ನೇ ಮುಖ್ಯರಸ್ತೆಯ ಮನೆಯೊಂದರಲ್ಲಿ ನೆಲೆಸಿದ್ದರು. ಹಿಂದಿನ ಲೋಕಸಭೆ ಚುನಾವಣೆ ಪ್ರಚಾರದ ವೇಳೆ ದರ್ಶನ್‌ಗೆ ಮಂಡ್ಯದಲ್ಲಿ ಪರಿಚಯ. ನಂತರ, ದರ್ಶನ್ ಜತೆಗೆ ಸೇರಿಕೊಂಡು ಕೆಲಸ ಮಾಡುತ್ತಿದ್ದರು. ರೇಣುಕಸ್ವಾಮಿ ಮೇಲೆ ಹಲ್ಲೆ ಹಾಗೂ ವಿದ್ಯುತ್ ಶಾಕ್ ನೀಡಿದ್ದ ಆರೋಪದ ಮೇಲೆ ಇವರನ್ನು ಬಂಧಿಸಲಾಗಿದೆ.

ಜಗದೀಶ್ ಅಲಿಯಾಸ್ ಜಗ್ಗ (36)



ಎ-6

ಜಗದೀಶ ಅಲಿಯಾಸ್ ಜಗ್ಗ ಚಿತ್ರದುರ್ಗದಲ್ಲಿ ಆಟೊ ಚಾಲಕರು. ಅಗಸನಕಲ್ಲು ಬಡಾವಣೆ ನಿವಾಸಿ. ರಾಘವೇಂದ್ರ ಅವರಿಗೂ ಮೊದಲು ಈತ ದರ್ಶನ್ ತೂಗುದೀಪ ಸೇನಾ ಅಧ್ಯಕ್ಷ. ಸ್ಥಳೀಯವಾಗಿ ದರ್ಶನ್ ಹೆಸರಿನಲ್ಲಿ ಕಾರ್ಯಕ್ರಮ ಆಯೋಜಿಸುತ್ತಿದ್ದರು. ದರ್ಶನ್ ಭೇಟಿ ಮಾಡಲು ರಾಘವೇಂದ್ರ ಕರೆದಾಗ ಈತ ನೇರವಾಗಿ ತೆರಳಿದ್ದಲ್ಲದೇ, ರೇಣುಕಸ್ವಾಮಿಯನ್ನು ಕರೆದೊಯ್ಯಲು ಸಹಾಯ ಮಾಡಿದ್ದರು. ಹಲವು ಸಂದರ್ಭಗಳಲ್ಲಿ ದರ್ಶನ್ ಭೇಟಿ ಮಾಡಿ ಫೋಟೊ ತೆಗೆಸಿಕೊಂಡಿದ್ದರು. ಮನೆ ತುಂಬೆಲ್ಲಾ ದರ್ಶನ್ ಜೊತೆಯಿರುವ ಚಿತ್ರಗಳನ್ನು ಹಾಕಿಕೊಂಡಿರುವ ಇವರು ಕಟ್ಟಾ ಅಭಿಮಾನಿ.

ಅನುಕುಮಾರ್ (25)



ಎ-7

ಚಿತ್ರದುರ್ಗದ ಸಿಹಿನೀರು ಹೊಂಡ ಬಡಾವಣೆಯಲ್ಲಿ ಸಣ್ಣ ಮನೆಯಲ್ಲಿ ವಾಸಿಸುತ್ತಿದ್ದು ವೃತ್ತಿಯಲ್ಲಿ ಆಟೊ ಚಾಲಕರು. ರೇಣುಕಸ್ವಾಮಿ ಅಪಹರಣದಲ್ಲಿ ಈತ ರಾಘವೇಂದ್ರನಿಗೆ ಸಹಾಯ ಮಾಡಿದ್ದರು. ರೇಣುಕಸ್ವಾಮಿ ಜೊತೆ ಪಟ್ಟಣಗೆರೆ ಶೆಡ್‌ಗೆ ತೆರಳಿದ್ದ ಇವರನ್ನು ಅಲ್ಲಿ ಶೆಡ್‌ನೊಳಗೆ ಬಿಟ್ಟಿರಲಿಲ್ಲ. ರೇಣುಕಸ್ವಾಮಿ ಕೊಲೆಯಾದ ನಂತರ ಕೊಲೆ ತಪ್ಪು ಒಪ್ಪಿಕೊಳ್ಳುವಂತೆ ದರ್ಶನ್‌ನ ಇತರ ಸಹಚರರು ಒತ್ತಾಯ ಮಾಡಿದ್ದರು. ಅದಕ್ಕೆ ಒಪ್ಪದ ಈತ ಜೂನ್ 8ರ ರಾತ್ರಿಯೇ ಚಿತ್ರದುರ್ಗಕ್ಕೆ ವಾಪಸ್ ಹೋಗಿದ್ದರು. ಇವರು ಕೊಲೆಯಲ್ಲಿ ಭಾಗಿಯಾಗಿದ್ದಾರೆ ಎಂಬ ಸುದ್ದಿ ತಿಳಿದ ಇವರ ತಂದೆ ಚಂದ್ರಣ್ಣ ಹೃದಯಾಘಾತದಿಂದ ಮೃತಪಟ್ಟರು.



ಕೃತ್ಯ ನಡೆಯಿತು ಎನ್ನಲಾದ ಪಟ್ಟಣಗೆರೆಯ ಶೆಡ್

ಪ್ರದೂಷ್ (40)



ಎ-14

ಬೆಂಗಳೂರಿನ ಗಿರಿನಗರದ ನಿವಾಸಿ. ದರ್ಶನ್ ಅಭಿಮಾನಿ. ಕೊಲೆ ಪ್ರಕರಣದಲ್ಲಿ ದರ್ಶನ್ ರಕ್ಷಣೆ ಮಾಡಲು ₹30 ಲಕ್ಷ ಪಡೆದಿದ್ದ ಇವರು, ಶರಣಾದವರಿಗೆ ಸಂದಾಯ ಮಾಡಿದ್ದರು. ಈ ಹಣವನ್ನು ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ಜಪ್ತಿ ಮಾಡಿದ್ದಾರೆ.

ಕಾರ್ತಿಕ್ ಅಲಿಯಾಸ್ ಕಪ್ಪೆ (27)



ಎ-15

ಗಿರಿನಗರದ ಜಿ.ಬ್ಲಾಕ್‌ನಲ್ಲಿ ಕಾರ್ತಿಕ್ ನೆಲೆಸಿದ್ದರು. ಪಟ್ಟಣಗೆರೆಯ ಶೆಡ್‌ನಲ್ಲಿ ಕೂಲಿ ಕೆಲಸ ಮಾಡಿಕೊಂಡಿದ್ದರು. ಇವರ ವಿರುದ್ಧ ತಲಘಟ್ಟಪುರ ಪೊಲೀಸ್ ಠಾಣೆಯಲ್ಲಿ ಗಲಾಟೆಗೆ ಸಂಬಂಧಿಸಿದ ಪ್ರಕರಣ ದಾಖಲಾಗಿದೆ. ಕೊಲೆ ಆರೋಪ ಹೊತ್ತು ದರ್ಶನ್ ಪರವಾಗಿ ಜೈಲಿಗೆ ಹೋಗಲು ಸಿದ್ಧವಾಗಿದ್ದರು. ಪೊಲೀಸ್ ವಿಚಾರಣೆಯಲ್ಲಿ ದರ್ಶನ್ ಹೆಸರು ಹೇಳುವುದಿಲ್ಲ ಎಂದು ಒಪ್ಪಿಕೊಂಡು ವಿನಯ್‌ನಿಂದ ₹5 ಲಕ್ಷ ಪಡೆದುಕೊಂಡಿದ್ದಾರೆ ಎಂಬ ಆರೋಪವಿದೆ.

ಕೇಶವಮೂರ್ತಿ(27)



ಎ-16

ಬೆಂಗಳೂರಿನ ಗಿರಿನಗರದ ಹೀರಣ್ಣಗುಡ್ಡದಲ್ಲಿ ನೆಲೆಸಿದ್ದರು. ಸಣ್ಣಪುಟ್ಟ ಕೆಲಸ ಮಾಡಿಕೊಂಡಿದ್ದ ಇವರು ದರ್ಶನ್ ಅಭಿಮಾನಿ. ಕೊಲೆ ಪ್ರಕರಣದಲ್ಲಿ ಆರೋಪ ಹೊತ್ತು ಜೈಲಿಗೆ ಹೋಗಲು ಸಿದ್ಧರಾಗಿದ್ದರು. ಶೆಡ್‌ನಿಂದ ಸುಮನಹಳ್ಳಿ ರಾಜಕಾಲುವೆಗೆ ಮೃತದೇಹ ಸಾಗಿಸಿ ಎಸೆಯುವ ಕೃತ್ಯದಲ್ಲಿ ಭಾಗಿಯಾಗಿದ್ದರು ಎನ್ನಲಾಗಿದೆ. ಪೊಲೀಸರಿಗೆ ಶರಣಾದ ಮೇಲೆ ವಿಚಾರಣೆ ವೇಳೆ ಕೊಲೆ ರಹಸ್ಯ ಬಾಯ್ಬಿಟ್ಟಿದ್ದರು. ಇವರ ಹೇಳಿಕೆ ಆಧಾರದಲ್ಲಿಯೇ ಪೊಲೀಸರು ಕಾರ್ಯಾಚರಣೆಗೆ ಇಳಿದಿದ್ದರು. ನಂತರ, ತನಿಖೆಯ ದಿಕ್ಕೇ ಬದಲಾಯಿತು.

ರವಿಶಂಕರ್



ಎ-8

ಚಿತ್ರದುರ್ಗ ತಾಲ್ಲೂಕಿನ ಐನಳ್ಳಿ ಕುರುಬರಹಟ್ಟಿ ಗ್ರಾಮದ ನಿವಾಸಿಯಾದ ರವಿಶಂಕರ್, ದರ್ಶನ್ ಅಭಿಮಾನಿಯಲ್ಲ. ರಾಘವೇಂದ್ರ ತನ್ನ ಸ್ನೇಹಿತನೊಬ್ಬನ ಕಡೆಯಿಂದ ಕಾರು ಬಾಡಿಗೆಗೆ ಪಡೆದಿದ್ದರು, ಆ ಕಾರಿನ ಚಾಲಕರಾಗಿ ರವಿ ಬಂದಿದ್ದರು. ಬೆಂಗಳೂರಿಗೆ ಬಾಡಿಗೆಗೆ ಹೋಗುವುದಷ್ಟೇ ಇವರಿಗೆ ಗೊತ್ತಿತ್ತು. ರಾತ್ರಿ ರೇಣುಕಸ್ವಾಮಿ ಕೊಲೆಯಾದ ನಂತರ ಕೊಲೆ ಮಾಡಿದ್ದಾಗಿ ಒಪ್ಪಿಕೊಳ್ಳುವಂತೆ ಇವರಲ್ಲೂ ಮನವಿ ಮಾಡಲಾಗಿತ್ತು. ನಿರಾಕರಿಸಿದ್ದ ಇವರು ಕಾರಿನ ಬಾಡಿಗೆ ಪಡೆದು ಊರಿಗೆ ಹಿಂತಿರುಗಿದ್ದರು. ಪ್ರಕರಣದ ಗಂಭೀರತೆ ಅರಿತು ಚಿತ್ರದುರ್ಗದ ಡಿವೈಎಸ್‌ಪಿ ಕಚೇರಿಯಲ್ಲಿ ಶರಣಾಗಿದ್ದರು.

ಧನರಾಜ್ ಅಲಿಯಾಸ್ ರಾಜು(27)



ಎ-9

ಬೆಂಗಳೂರಿನ ಗಿರಿನಗರದ ನಿವಾಸಿ ಧನರಾಜ್ ಅಲಿಯಾಸ್ ರಾಜು, ದರ್ಶನ್ ತಂಡದಲ್ಲಿ ಗುರುತಿಸಿಕೊಂಡಿದ್ದವರು. ಪವಿತ್ರಾ ಅವರ ಬುಟಿಕ್ ಶಾಪ್ ನಿರ್ವಹಣೆ ಮಾಡುತ್ತಿದ್ದ ಅವರು ಪವಿತ್ರಾ ಜತೆಗೆ ಶೆಡ್‌ಗೆ ಬಂದಿದ್ದರು. ಹಲ್ಲೆ ನಡೆಸಿದ್ದಲ್ಲದೇ, ಮೃತದೇಹ ಸಾಗಿಸಲು ಸಹಾಯ ಮಾಡಿದ್ದರು. ಕೊಲೆಯಾದ ವ್ಯಕ್ತಿಗೆ ವಿದ್ಯುತ್ ಶಾಕ್ ನೀಡಿದ್ದರು ಎನ್ನುವ ಆರೋಪ ಇವರ ಮೇಲಿದೆ.


ವಿ.ವಿನಯ್ (38)

ಬೆಂಗಳೂರಿನ ರಾಜರಾಜೇಶ್ವರಿ ನಗರದಲ್ಲಿರುವ ಸ್ಟೋನಿ ಬ್ರೂಕ್ ಬಾರ್ ಆ್ಯಂಡ್ ರೆಸ್ಟೋರೆಂಟ್ ಮಾಲೀಕರು. ದರ್ಶನ್ ಆಪ್ತರು. ತಮ್ಮ ಮಾವ ಪಟ್ಟಣಗೆರೆ ಜಯಣ್ಣಗೆ ಸೇರಿದ ಶೆಡ್ ಅನ್ನು ನಿರ್ವಹಣೆ ಮಾಡುತ್ತಿದ್ದರು. ಕೃತ್ಯಕ್ಕೂ ಮೊದಲು ದರ್ಶನ್ ಹಾಗೂ ಪವಿತ್ರಾಗೌಡ, ವಿನಯ್ ಅವರ ಪಬ್‌ನಲ್ಲಿ ಪಾರ್ಟಿ ನಡೆಸಿದ್ದರು. ಕೊಲೆ ನಡೆದ ಮೇಲೆ ಪ್ರಕರಣ ಮುಚ್ಚಿ ಹಾಕಲು ಪ್ರಯತ್ನಿಸಿದ್ದ ಆರೋಪ ಇವರ ಮೇಲಿದೆ.



ಎ-10

ನಾಗರಾಜ್ (41)



ಎ-11

ಮೈಸೂರು ರಾಮಕೃಷ್ಣ ನಗರದ ನಿವಾಸಿ. ಮೈಸೂರು ಸ್ಥಳೀಯ ರಾಜಕೀಯದಲ್ಲಿ ಗುರುತಿಸಿಕೊಂಡಿದ್ದರು. ಕಳೆದ 15 ವರ್ಷಗಳಿಂದ ದರ್ಶನ್ ಜತೆಗೆ ಕೆಲಸ ಮಾಡುತ್ತಿದ್ದಾರೆ. ದರ್ಶನ್ ಅವರ ವೈಯಕ್ತಿಕ ಕೆಲಸಗಳನ್ನು ಮಾಡಿಕೊಡುತ್ತಿದ್ದರು. ಮೈಸೂರಿನಲ್ಲಿರುವ ದರ್ಶನ್ ಅವರ ಫಾರಂ ಹೌಸ್‌ನಲ್ಲಿ ಇರುತ್ತಿದ್ದರು. ಪ್ರಕರಣ ಮುಚ್ಚಿ ಹಾಕಲು ಪ್ರಯತ್ನಿಸಿದ್ದರು.

ಲಕ್ಷ್ಮಣ್ (54)



ಎ-12

ದರ್ಶನ್ ಅವರ ಕಾರು ಚಾಲಕ. ಬೆಂಗಳೂರಿನ ಆರ್‌ಪಿಸಿ ಲೇಔಟ್‌ನಲ್ಲಿ ನೆಲೆಸಿದ್ದ ಇವರು ಕೃತ್ಯ ನಡೆದ ಸ್ಥಳದಲ್ಲಿದ್ದರು. ಕೊಲೆ ಪ್ರಕರಣದಲ್ಲಿ ದರ್ಶನ್ ರಕ್ಷಣೆಗೆ ಮುಂದಾಗಿದ್ದ ಇವರು, ಕೊಲೆ ಪ್ರಕರಣದಲ್ಲಿ ದರ್ಶನ್ ಅವರ ಹೆಸರು ಬರದೇ ಇರುವಂತೆ ನೋಡಿಕೊಳ್ಳಲು ನಾಲ್ವರಿಗೆ ಹಣದ ಆಸೆ ತೋರಿಸಿದ್ದಾರೆ ಎಂಬ ಆರೋಪ ಇವರ ಮೇಲಿದೆ.

ದೀಪಕ್ (39)



ಎ-13

ಬೆಂಗಳೂರಿನ ರಾಜರಾಜೇಶ್ವರಿ ನಗರದ ಬಿಇಎಂಎಲ್ ಲೇಔಟ್ ನಿವಾಸಿ. ದರ್ಶನ್ ಆಪ್ತ ಬಳಗದ ಸದಸ್ಯರು. ಬೆಂಗಳೂರಿನ ಪ್ರಭಾವಿ ಬಿಜೆಪಿ ಶಾಸಕ, ಮಾಜಿ ಸಚಿವರೊಬ್ಬರ ಸಂಬಂಧಿ. ಈತ ರಿಯಲ್ ಎಸ್ಟೇಟ್, ಫೈನಾನ್ಸ್ ವ್ಯವಹಾರ ನಡೆಸುತ್ತಿದ್ದಾರೆ. ಪಟ್ಟಣಗೆರೆಯ ಶೆಡ್ ಅನ್ನು ಪಾಲುದಾರಿಕೆಯಲ್ಲಿ ನಡೆಸುತ್ತಿದ್ದರಲ್ಲದೇ, ಕೊಲೆ ಪ್ರಕರಣದಲ್ಲಿ ಇವರು ಸಹ ಭಾಗಿ ಆಗಿರುವುದಕ್ಕೆ ಪೊಲೀಸರಿಗೆ ಪುರಾವೆಗಳು ಸಿಕ್ಕಿವೆ.

ನಿಖಿಲ್‌ನಾಯಕ್ (21)



ಎ-17

ಬನ್ನೇರುಘಟ್ಟ ಮುಖ್ಯರಸ್ತೆಯ ಕೆಂಬತಹಳ್ಳಿಯಲ್ಲಿ ವಾಸ. ದರ್ಶನ್ ಅವರಿಂದ ದುಡ್ಡು ಪಡೆದು ಪೊಲೀಸರಿಗೆ ಶರಣಾದ ಆರೋಪಿಗಳಲ್ಲಿ ಒಬ್ಬರು. ಕೃತ್ಯ ನಡೆದ ಸ್ಥಳಕ್ಕೆ ಬಂದಿದ್ದರು. ಪವಿತ್ರಾಗೌಡ ಅವರ ಸಹಾಯಕ ಪವನ್ ಸೂಚನೆ ಮೇರೆಗೆ ಸ್ಥಳಕ್ಕೆ ಬಂದಿದ್ದರು. ಮೃತದೇಹ ಎಸೆದು ಸಾಕ್ಷ್ಯನಾಶ ಮಾಡಲು ಒಪ್ಪಿಕೊಂಡಿದ್ದ ಆರೋಪ ಇವರ ಮೇಲಿದೆ. ಈ ಕೃತ್ಯಕ್ಕೆ ₹5 ಲಕ್ಷಕ್ಕೆ ಒಪ್ಪಂದ ಆಗಿತ್ತು. ಶರಣಾದ ಮೇಲೆ ವಿಚಾರಣೆಯಲ್ಲಿ ದರ್ಶನ್ ಆಪ್ತ ವಿನಯ್, ನಾಗರಾಜ್, ಪವನ್ ಹೆಸರು ಬಾಯ್ಬಿಟ್ಟಿದ್ದರು. ಈ ಹೇಳಿಕೆ ಆಧಾರದಲ್ಲಿ ಪೊಲೀಸರು ತನಿಖೆ ಚುರುಕುಗೊಳಿಸಿದ್ದರು.

*ಎ-13, ಎ-14 ಮತ್ತು ಎ-16 ಆರೋಪಿಗಳ ಅಧಿಕೃತ ಚಿತ್ರಗಳು ಲಭ್ಯವಿಲ್ಲ

ಆಧಾರ: ಪೊಲೀಸ್ ತನಿಖಾ ಮೂಲಗಳು

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

✗ **'ನೋಡಿ, ಈಕೆ** ಕುಲ್ವಿಂದರ್ ಕೌರ್. ಚಂಡೀಗಢ ವಿಮಾನ ನಿಲ್ದಾಣದಲ್ಲಿ ಬಿಜೆಪಿ ಸಂಸದೆ ಮತ್ತು ನಟಿ ಕಂಗನಾ ರನೌತ್‌ನ ಕೆನ್ನೆಗೆ ಬಾರಿಸಿದ ಸಿಐಎಸ್‌ಎಫ್ ಯೋಧೆ' ಎಂಬ ವಿವರ ಇರುವ ಪೋಸ್ಟ್ ಒಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಪೋಸ್ಟ್‌ನಲ್ಲಿ ಮಹಿಳೆಯೊಬ್ಬರು ಕಾಂಗ್ರೆಸ್‌ನ ರಾಹುಲ್ ಗಾಂಧಿ, ಸೋನಿಯಾ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ಜತೆಗೆ ನಿಂತಿರುವ ಚಿತ್ರವೂ ಇದೆ. ಜತೆಗೆ ಕೆಲವರು, 'ಪ್ರೀತಿಯ ಅಂಗಡಿಯನ್ನು ತೆರೆಯಲು ಹೊರಟಿರುವವರ ಜತೆ ಕುಲ್ವಿಂದರ್ ಕೌರ್ ಚಿತ್ರ ತೆಗೆಸಿಕೊಂಡಿದ್ದಾರೆ. ಈ ಚಿತ್ರವನ್ನು ನೋಡಿದ ಮೇಲೆ, ಕಂಗನಾ ಮೇಲಿನ ಹಲ್ಲೆಯ ಒಳಹೊರಗುಗಳೆಲ್ಲಾ ಅರ್ಥವಾಗುತ್ತಿವೆ' ಎಂಬ ವಿವರ ಇರುವ ಪೋಸ್ಟ್‌ಗಳೂ ಹಂಚಿಕೆಯಾಗುತ್ತಿವೆ. ಆದರೆ ಇದು ಸುಳ್ಳು ಸುದ್ದಿ.

✓ **ಸಾಮಾಜಿಕ ಜಾಲತಾಣಗಳಲ್ಲಿ** ಹರಿದಾಡುತ್ತಿರುವ ಚಿತ್ರದಲ್ಲಿ ಸೋನಿಯಾ, ರಾಹುಲ್ ಮತ್ತು ಪ್ರಿಯಾಂಕಾ ಗಾಂಧಿ ಜತೆಗೆ ಇರುವುದು ಕುಲ್ವಿಂದರ್ ಕೌರ್ ಅಲ್ಲ. ಬದಲಿಗೆ ಇವರು ರಾಜಸ್ಥಾನ ಕಾಂಗ್ರೆಸ್‌ನ ನಾಯಕಿ ದಿವ್ಯ ಮಹಿಪಾಲ್ ಮದೇರಣಾ. 2024ರ ಫೆಬ್ರುವರಿ 14ರಂದು ಅವರು ರಾಜ್ಯಸಭೆ ಚುನಾವಣೆಗೆ ನಾಮಪತ್ರ ಸಲ್ಲಿಸಿದ್ದರು. ಆ ವೇಳೆ ಪಕ್ಷದ ನಾಯಕರ ಜತೆಗೆ ತೆಗೆಸಿಕೊಂಡಿದ್ದ ಚಿತ್ರವನ್ನು ಅವರು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದರು. ಈಗ ಅದೇ ಚಿತ್ರವನ್ನು ಸುಳ್ಳು ಸುದ್ದಿ ಹರಡಲು ಬಳಸಿಕೊಳ್ಳಲಾಗಿದೆ. ಈ ಬಗ್ಗೆ ಟ್ವೀಟ್ ಮಾಡಿರುವ ದಿವ್ಯ ಅವರು, 'ನನ್ನ ಚಿತ್ರವನ್ನು ಕುಲ್ವಿಂದರ್ ಕೌರ್ ಅವರ ಚಿತ್ರ ಎಂದು ಹಂಚಿಕೊಳ್ಳುವ ಮೂಲಕ ಸೋನಿಯಾ ಗಾಂಧಿ ಅವರ ಕುಟುಂಬಕ್ಕೆ ಕೆಟ್ಟ ಹೆಸರು ತರಲು ಯತ್ನಿಸಲಾಗುತ್ತಿದೆ. ಇದು ಸುಳ್ಳು ಸುದ್ದಿ. ಇದರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳುತ್ತೇನೆ' ಎಂದು ಇದೇ ಜೂನ್ 14ರಂದು ಸ್ಪಷ್ಟನೆ ನೀಡಿದ್ದರು.


ಗುಂಡಣ್ಣ



ಮಾನವೀಯತೆಯ ಸ್ಪರ್ಶ

ನುಡಿ ಬೆಳಗು





ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

ಡಾ ಅಬ್ದುಲ್ ಕಲಾಂ ಅವರು ವಿಜ್ಞಾನಿಯಾಗಿ ಕೆಲಸ ಮಾಡುತ್ತಿದ್ದ ಸಂದರ್ಭ. ಹೈದರಾಬಾದಿನಲ್ಲಿ ಡಿಆರ್‌ಡಿಓ ಮುಖ್ಯಸ್ಥರಾಗಿದ್ದ ಕಲಾಮ್ ಅವರ ಪ್ರಯೋಗಾಲಯದಲ್ಲಿ ಅವರನ್ನು ಭೇಟಿಯಾಗಲು ಪ್ರೊಫೆಸರ್ ಪ್ರಸಾದ್ ಎಂಬ ಮೂಳೆತಜ್ಞರು ಬಂದರು. ಹೊರಗಿನ ಅತ್ಯಧಿಕ ಉಷ್ಣವನ್ನು ತಡೆಯಲು ಅಗ್ನಿ ಕ್ಷಿಪಣಿಯಲ್ಲಿ ಬಳಸಿದ್ದ ಕಾರ್ಬನ್ ಕಾರ್ಬೈಡ್‌ನ ಹೀಟ್ ಶೀಲ್ಡ್ ನೋಡಿ ವೈದ್ಯರು ಅಚ್ಚರಿಪಟ್ಟರು. ಅದನ್ನು ಮುಟ್ಟಿ, ಎತ್ತಿ ನೋಡಿ ಅಚ್ಚರಿಯಿಂದ ಇದು ಎಷ್ಟು ಹಗುರವಾಗಿದೆ ಆದರೆ ಅಷ್ಟೇ ಬಲಿಷ್ಠವಾಗಿದೆ ಎಂದು ಪದೇ ಪದೇ ಹೇಳಿದ ಪ್ರಸಾದ್ ಅವರು ಕಲಾಂರನ್ನು ತಮ್ಮ ಆಸ್ಪತ್ರೆಗೆ ಬರುವಂತೆ ಕೋರಿದರು.

ಕಲಾಂ ಅಲ್ಲಿಗೆ ಹೋದಾಗ ಅವರಿಗೆ ಸುಮಾರು ನಲವತ್ತು ಮಂದಿ ಹದಿನೈದು ವರ್ಷದೊಳಗಿನ ಮಕ್ಕಳನ್ನು ತೋರಿಸಿದರು ವೈದ್ಯರು. ಆ ಮಕ್ಕಳೆಲ್ಲ ಸುಮಾರು ನಾಲ್ಕು ಕೆಜಿ ತೂಕದ ಕ್ಯಾಲಿಪರ್ಸ್ ಅನ್ನು ಧರಿಸಿದ್ದರು (ಕ್ಯಾಲಿಪರ್ಸ್ ಎಂದರೆ ನಡೆಯಲು ತೊಂದರೆಯಿರುವವರು ಆಧಾರಕ್ಕಾಗಿ ಕಾಲಿಗೆ ಕಟ್ಟಿಕೊಳ್ಳುವ ಲೋಹದ ಸಲಕರಣೆ. ಇದನ್ನು ಬ್ರೇಸ್ ಎಂದೂ ಕರೆಯುತ್ತಾರೆ). ಕೆಲವು ಮಕ್ಕಳು ಭಾರದ ಕಾರಣದಿಂದ ಕಿರಿಕಿರಿಯಾಗಿ ಕ್ಯಾಲಿಪರ್ಸ್ ಅನ್ನು ಧರಿಸಿರಲಿಲ್ಲ. ವೈದ್ಯರನ್ನು ನೋಡಿದವರೇ ಗಡಿಬಿಡಿಯಿಂದ ಧರಿಸಲು ಶುರುಮಾಡಿದಾಗ ವೈದ್ಯರೆಂದರು, 'ಸರ್, ಈ ಮಕ್ಕಳು ಕ್ಯಾಲಿಪರ್ಸ್‌ನ ಭಾರದಿಂದ ಬಹಳ ಸಂಕಟ ಪಡುತ್ತಿದ್ದಾರೆ, ಇವನ್ನು ಧರಿಸಿ ನಡೆಯುವುದು ಅವರಿಗೆ ಬಹುದೊಡ್ಡ ಸಮಸ್ಯೆ. ಈಗ ನಾವು ನಿಮ್ಮ ಪ್ರಯೋಗಾಲಯದಲ್ಲಿನ ವಸ್ತು ಬಹಳ ಹಗುರವಾಗಿ ಗಟ್ಟಿಯಾಗಿದೆ, ಈ ಮಕ್ಕಳಿಗೆ ಸಹಾಯ ಮಾಡಲು ನೀವು ಏನಾದರೂ ಮಾಡಬಹುದೇ?'

ಮುಂದೆ ಒಂದು ವಾರದಲ್ಲಿ ಕ್ಯಾಲಿಪರ್ಸ್‌ನ ಅಚ್ಚುಗಳು ತಯಾರಾದವು. ಮರುವಾರವೇ ಕೇವಲ ನಾನೂರು ಗ್ರಾಮಿನ ಕ್ಯಾಲಿಪರ್ಸ್‌ಗಳು ತಯಾರಾದವು. ಈ ಹಗುರ ಕ್ಯಾಲಿಪರ್ಸ್ ಧರಿಸಿದ ಮಕ್ಕಳು ಹತ್ತೇ ದಿನಗಳೊಳಗೆ ಆರಾಮವಾಗಿ ನಡೆಯುವುದು ಮಾತ್ರವಲ್ಲ ಓಡಲೂ ಪ್ರಾರಂಭಿಸಿದರು. ಅವರ ತಂದೆತಾಯಿಯರ ಕಣ್ಣುಗಳಲ್ಲಿ ನೀರು. ಆ ಕಣ್ಣೀರೇ ತಾವು ಜೀವನದಲ್ಲಿ ಪಡೆದ ಅತ್ಯುನ್ನತ ಪುರಸ್ಕಾರ ಎಂದಿದ್ದರು ಅಬ್ದುಲ್ ಕಲಾಂ.

ವಿಜ್ಞಾನ, ತಂತ್ರಜ್ಞಾನ, ಕಲೆ, ಸಾಹಿತ್ಯ, ಇವೆಲ್ಲವಕ್ಕೂ ಮಾನವೀಯತೆಯ ಸ್ಪರ್ಶವಿದ್ದಾಗ ಅದ್ಭುತಗಳು ಸೃಷ್ಟಿಯಾಗುತ್ತವೆ. ಅದಕ್ಕೆ ಈ ಘಟನೆ ಅತ್ಯುತ್ತಮ ಉದಾಹರಣೆ. ನಮ್ಮ ಉದ್ಯೋಗದ ಕ್ಷೇತ್ರ ಯಾವುದೇ ಇರಲಿ, ನಮ್ಮ ವ್ಯಾಪ್ತಿಯೊಳಗೇ ಕೊಂಚ ಸಮಾಜಮುಖಿಯಾಗಿ ಯೋಚಿಸಿದರೆ, ಸ್ವಲ್ಪ ಸಹಾನುಭೂತಿ, ಚೂರು ಕರುಣೆ ಎದೆಯಲ್ಲಿದ್ದರೆ ಇಂತಹ ಅದೆಷ್ಟೋ ಕೆಲಸಗಳು ಸಾಧ್ಯವಾಗುತ್ತವೆ. ಮತ್ತು ಇವೆಲ್ಲ ಸಂಗತಿಗಳು ಸೇರಿ ಸಮಾಜದಲ್ಲಿ ದೊಡ್ಡ ಬದಲಾವಣೆ ಸಾಧ್ಯವಾಗುತ್ತದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಜೂನ್ 20, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ತ್ರಯೋದಶಿ ಗಂ. 7-51 ನಕ್ಷತ್ರ: ಅನುರಾಧ ಗಂ. 18-10 ಯೋಗ: ಸಾಧ್ಯ ಗಂ. 20-12 ಕರಣ: ತೈತಿಲ ಗಂ. 07-51, ಮಿಥುನ ಮಾಸದ ನೇ 06 ದಿನ, ಮಳೆನಕ್ಷತ್ರ: ಮೃಗಶಿರ 4.

ರಾಹುಕಾಲ : ಮಧ್ಯಾಹ್ನ 01-30 – 03-00

ಸೂರ್ಯೋದಯ : 06-09 ಸೂರ್ಯಾಸ್ತ : 06-56

ಮುಸ್ಲಿಂ ದಿನಾಂಕ : 13 ಜುಲ್‌ಹಿಜಾ

ಅದೃಷ್ಟ ಸಂಖ್ಯೆ : 2, 9

ಮೇಷ: ಸ್ನೇಹಿತರಲ್ಲಿ ಹಣಕಾಸಿನ ವಿಚಾರಕ್ಕೆ ಮನಸ್ತಾಪ ಬರದಂತೆ ಜಾಗರೂಕರಾಗಿರಿ. ದನ ಕರುಗಳ ಅಥವಾ ಮನೆಯಲ್ಲಿ ಸಾಕಿರುವ ಪ್ರಾಣಿಗಳ ಆರೋಗ್ಯ ತಪಾಸಣೆ ಮಾಡಿಸುವಿರಿ. ವಿರೋಧಿಗಳು ರಾಜಿಯಾಗುವ ಸಾಧ್ಯತೆ.

ವೃಷಭ: ಹಳೆಯ ಶಾಲೆಗೆ ಭೇಟಿ ನೀಡುವುದರ ಜತೆಗೆ ಈಗಿನ ವಿದ್ಯಾರ್ಥಿಗಳ ಜತೆ ಸಂವಾದ ನಡೆಸುವ ಮೂಲಕ ಅವರಿಗೆ ಮಾರ್ಗದರ್ಶನ ಮಾಡುವಿರಿ. ಕೆಲವು ಮೂಲಭೂತ ಬದಲಾವಣೆಗಳಾಗುವ ಸಾಧ್ಯತೆ ಇದೆ.

ಮಿಥುನ: ವಿದೇಶ ಪ್ರಯಾಣ ಕೈಗೊಳ್ಳುವ ಕಾರ್ಯಕ್ರಮವಿರುವುದರಿಂದ ಎಲ್ಲಾ ತಯಾರಿಯನ್ನು ಮಾಡಿಕೊಳ್ಳುವಿರಿ. ಮನೆಯಲ್ಲಿ ಶುಭ ಕಾರ್ಯಗಳ ತಯಾರಿ ಉತ್ತಮವಾಗಿ ನಡೆಯುವುದು. ಸಂಸಾರ ನಿರ್ವಹಣೆ ಸುಲಭವೆನಿಸುವುದಿಲ್ಲ.

ಕರ್ಕಾಟಕ: ಕಟ್ಟಡ ನಿರ್ಮಾಣದವರು ಹೊರ ಊರಿನಲ್ಲಿ ಗುತ್ತಿಗೆ ಪಡೆಯುವಲ್ಲಿ ಯಶಸ್ವಿಯಾಗುವಿರಿ. ಮಕ್ಕಳ ಮಾತುಗಳು ಗೊಂದಲಗಳನ್ನು ಸೃಷ್ಟಿಸಬಹುದು. ವಿದ್ಯಾರ್ಥಿಗಳಿಗೆ ಉತ್ತಮ ನೆನಪಿನಶಕ್ತಿ, ಜ್ಞಾನ ದೊರೆತು ಆನಂದವಾಗಲಿದೆ.

ಸಿಂಹ: ಮಾಡುವ ತಪ್ಪಿನಿಂದಾಗಿ ಜೀವನ ಪರ್ಯಂತ ನೆನಪಿಟ್ಟುಕೊಳ್ಳುವ ಪಾಠವನ್ನು ಕಲಿಯುವಂತಾಗಲಿದೆ. ವ್ಯವಹಾರಸ್ಥರಿಗೆ ಲಾಭ ಸಿಗಲಾರದು ಹಾಗೆಯೇ ನಷ್ಟವೂ ಇರಲಾರದು. ಸಂಗಾತಿಯ ಸಲಹೆಗಳಿಗೆ ಗಮನ ಕೊಡಿ.

ಕನ್ಯಾ: ಮನೆಯ ಹಿರಿಯರ ಆಶೀರ್ವಾದದ ಮೇರೆಗೆ ವೈದ್ಯ ವೃತ್ತಿಯನ್ನು ಆರಂಭಿಸುವ ಸಲುವಾಗಿ ಸ್ನೇಹಿತರೊಂದಿಗೆ ಸ್ಥಳದ ಅನ್ವೇಷಣೆ ಮಾಡುವಿರಿ. ಬಹುದಿನದ ನಿವೇಶನ ಕೊಳ್ಳುವ ಕನಸು ನನಸಾಗಲಿದೆ.

ತುಲಾ: ಬಿಡುವಿಲ್ಲದ ದಿನಚರಿಯ ನಂತರ ಸ್ವಲ್ಪ ಬಿಡುವಿನ ದಿನ ಇಂದಾಗುವುದು. ಕಡೆಯ ಸಮಯದಲ್ಲಿ ಅಪಾಯದಿಂದ ಪಾರಾಗುವುದು ದೊಡ್ಡ ನಿರಾಳತೆ ಆಗುತ್ತದೆ. ವಿವಾಹ ಅಪೇಕ್ಷಿಗಳಿಗೆ ಶುಭ.

ವೃಶ್ಚಿಕ: ಮುಜುಗರವನ್ನು ಮೀರಿ ಭಾವಿ ಜೀವನ ಸಂಗಾತಿಯಲ್ಲಿ ನಿಮ್ಮ ಮನಸ್ಸಿನ ಮಾತನ್ನು ಆಡುವುದರಿಂದ ಉತ್ತಮ ಜೀವನದ ಅಡಿಪಾಯ ನಿಮ್ಮದಾಗುವುದು. ಔಷಧಿ ಮಾರಾಟಗಾರರಿಗೆ ಹೆಚ್ಚಿನ ಲಾಭ.

ಧನು: ಸ್ತ್ರೀ ಸಂಬಂಧಿ ಕೋರ್ಟು ಕಚೇರಿಗಳ ಮೆಟ್ಟಿಲನ್ನು ಹತ್ತುವಂತೆ ಮಾಡುವುದು. ಸಂತುಷ್ಟವಾಗಿ ಜೀವಿಸುತ್ತಿರುವ ನೀವು ಬೇರೆಯವರ ಮಾತಿಗೆ ಬೆಲೆ ಕೊಡದಿರಿ. ನರಸಿಂಹ ದೇವರ ಸೇವೆಯಿಂದ ಉತ್ತಮ ಫಲ.

ಮಕರ: ಸಣ್ಣ ಮಗುವಿನ ಜತೆಗೆ ದೂರದ ಪ್ರಯಾಣವನ್ನು ಯೋಚಿಸಿದ್ದರೆ ಆದಷ್ಟು ಅದನ್ನು ಬಿಡುವ ಪ್ರಯತ್ನ ಮಾಡಿ. ಕೆಲಸ ಕಾರ್ಯಗಳಲ್ಲಿ ಹೆಚ್ಚಿನ ಜವಾಬ್ದಾರಿ ವಹಿಸ ಬೇಕಾಗುವುದು. ಮನೆ ದೇವರ ದರ್ಶನ ಶುಭ ತರುತ್ತದೆ.

ಕುಂಭ: ಕಣ್ಣೆದುರೇ ದುಷ್ಕರ್ಮಗಳು ನಡೆಯುತ್ತಿದ್ದರೂ ಏನೂ ಮಾಡಲಾಗದ ದುಃಸ್ಥಿತಿ ನಿಮ್ಮದಾಗಬಹುದು. ಸಹಭಾಗಿಗೆ ಅಥವಾ ಮಕ್ಕಳಿಗೆ ಸಹಾಯ ಮಾಡುವುದರಲ್ಲಿ ಹೆಚ್ಚು ಆನಂದ ಸಿಗಬಹುದು.

ಮೀನ: ಸಂಗೀತಗಾರರಿಗೆ ಕಂಠ ಸಿರಿಗೆ ಉತ್ತಮ ಪ್ರಶಂಸೆಗಳು ಕೇಳಿಬರುತ್ತವೆ. ನಡೆಯಲಿರುವ ಮದುವೆಯ ಪ್ರಯುಕ್ತ ವಿಲಾಸಿ ಸಾಮಗ್ರಿಗಳನ್ನು ಖರೀದಿಸುವಿರಿ. ಮನೆಯ ಖರ್ಚಿನ ಮೇಲೆ ಹಿಡಿತವಿರಲಿ.

ಪದಬಂಧ 5717


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಸಾಧಕನಿಗುಂಟಾದ ಅಡ್ಡಿ! (3)
3.ಅರಳೆಯ ಸಮೀಪ! (3)
5.ಪದಾತಿಯಲ್ಲಿರುವ ಗಂಡ (2)
6.ಆತುರ ತೋರಿದರೂ ಈತ ಕುಶಾಗ್ರಮತಿ (3)
7.ನೆನಪಲ್ಲೇ ಇರುವ ಕಾರಣ (2)
9.ಹರಕೆ ಹೊತ್ತಿರುವವನ ಮೆಟ್ಟು (2)
11.ಹೆಣ್ಣಿಗೆ ಬೇಕಾಗಿರುವ ಬಾಚಣಿಕೆ (3)
13.ತೊನೆಯುತ್ತಿರುವ ಧಾನ್ಯದ ಹೊಡೆ (2)
14.ಪೈರು ಕೊಯ್ಯುವುದು (3)
15.ತಿಳಿವಳಿಕೆಯಿಂದ ಪಡೆದಿರುವ ಸತ್ವ! (3)

ಮೇಲಿಂದ ಕೆಳಕ್ಕೆ

1.ಹೆರಿಗೆಯಾದ ಹೆಂಗಸು(3)
2.ಉಕ್ಕಿನ ಅಂಗಿಯಿದು(3)
3.ಹರನಿಂದ ವರ ಪಡೆದಿರುವ ಶೂರ(3)
4.ಸಾಗಿಸುವಿಕೆಗೊಂದು ಪರ್ಯಾಯ ಪದ(3)
5.ಹಿಂದಿನಿಂದ ಉಳಿದು ಬಂದ ಪ್ರಾಣಿಪಕ್ಷಿಗಳ ಅವಶೇಷ(5)
8.ಕೂಲಂಕಷವಾಗಿ ಯೋಚಿಸುವಿಕೆ(5)
10.ಈತ ಕಾಪಾಡುವವನು(3)
11.ಧಾನ್ಯಗಳನ್ನು ತುಂಬಿಡುವ ಕಣಜ(3)
12.ಸ್ನೇಹಿತೆ ಇಲ್ಲಿದ್ದಾಳೆ(3)
13.ಹೊಗಳು ಪದದ ವಿರುದ್ಧ ಪದ(3)



5716ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸ್ವಾವಲಂಬನೆ 3.ಬವಣೆ
5.ಪದವೀದಾನ 7.ನಿಕಷ
9.ಸಂದೂಕ 11.ಮಂಟಪ
13.ನರೆದೆಲೆಗ 15.ಕಸುವು
16.ಸ್ಥಳಪುರಾಣ

ಮೇಲಿಂದ ಕೆಳಕ್ಕೆ:
1.ಸ್ವಾಭಿಮಾನಿ 2.ಬಳಪ
4.ವಸನ 6.ವೀಕ್ಷ
8.ಕರಿ 9.ಸಂವಾದ
10.ಹೂಟ 12.ಪಡುವಣ
13.ನಪಾಸು 14.ಗರಳ

ಸುಡೊಕು 6102

	9			5			2	1
3		5	2		1	7		
	1			9			3	5
5		7				1		
	6			2			8	
9		8			4	5		2
1		2		8				
			5		6	2		3
6		3		4			5	


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6101 ಸುಡೊಕು

6	3	4	2	9	7	1	5	8
9	1	2	5	3	8	4	6	7
8	5	7	4	6	1	3	2	9
2	9	3	7	8	4	6	1	5
1	4	8	9	5	6	7	3	2
5	7	6	1	2	3	8	9	4
3	6	9	8	4	5	2	7	1
7	8	5	6	1	2	9	4	3
4	2	1	3	7	9	5	8	6

ಷೇರುಪೇಟೆ ವಹಿವಾಟು ▲36



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,557
ಇಂದಿನ ಅಂತ್ಯ	23,516
▼	41
ದಿನದ ಕನಿಷ್ಠ	23,412

ವಿನಿಮಯ ದರ

$ ಡಾಲರ್	83.44
£ ಪೌಂಡ್	106.24
€ ಯುರೊ	89.61
¥ ಯೆನ್ (100ಕ್ಕೆ)	53

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹555
12 ಕ್ಕೆ	₹75
ಮೈಸೂರು	
100ಕ್ಕೆ	₹557

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1490 (1490)
ಸೋಯಾ (ರಿಫೈನ್ಡ್)	₹975 (970)
ಸೂರ್ಯಕಾಂತಿ (ರಿಫೈನ್ಡ್)	₹975 (975)
ಪಾಮೋಲಿನ್	₹927 (921)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹300-472
ದ್ವಿತಳಿ (ಬಿ.ವಿ)	₹322-618

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹200
ಆರ್‌ಎಸ್‌ಎಸ್-5	₹192
ಗುಡ್ ಲಾಟ್ (ಪ್ರತಿ ಕೆ.ಜಿಗೆ)	₹180

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹8500-8500
ಕೆ.ಆರ್.ಪೇಟೆ	₹9403-9422
ಮಧುಗಿರಿ	₹8000-9000
ತಿಪಟೂರು	₹8500-10450
ತುರುವೇಕೆರೆ	₹8500-8800



ನವದೆಹಲಿಯಲ್ಲಿ ಬುಧವಾರ ನಡೆದ ಬಜೆಟ್ ಪೂರ್ವ ಸಮಾಲೋಚನಾ ಸಭೆಯಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು, ಅರ್ಥಶಾಸ್ತ್ರಜ್ಞರ ಜೊತೆಗೆ ಚರ್ಚಿಸಿದರು —ಪಿಟಿಐ ಚಿತ್ರ

ಬಜೆಟ್ ಪೂರ್ವ ಸಭೆ: ಅರ್ಥಶಾಸ್ತ್ರಜ್ಞರ ಜೊತೆ ಚರ್ಚೆ

‘ವಿತ್ತೀಯ ಕೊರತೆ ತಗ್ಗಿಸಿ’

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಅಧ್ಯಕ್ಷತೆಯಲ್ಲಿ ಬುಧವಾರ ಬಜೆಟ್ ಪೂರ್ವ ಸಮಾಲೋಚನೆ ಕುರಿತ ಪ್ರಥಮ ಸಭೆ ನಡೆಯಿತು.

ದೇಶದ ಪ್ರಮುಖ ಅರ್ಥಶಾಸ್ತ್ರಜ್ಞರೊಟ್ಟಿಗೆ ನಿರ್ಮಲಾ ಅವರು, ಜುಲೈನಲ್ಲಿ ಮಂಡಿಸಲಿರುವ ಬಜೆಟ್ ಕುರಿತಂತೆ ಚರ್ಚಿಸಿದರು.

ಕೇಂದ್ರವು ಬಂಡವಾಳ ವೆಚ್ಚವನ್ನು ಹೆಚ್ಚಿಸುವ ಜೊತೆಗೆ ವಿತ್ತೀಯ ಕೊರತೆ ತಗ್ಗಿಸಲು ಕ್ರಮವಹಿಸಬೇಕು ಎಂದು ಅರ್ಥಶಾಸ್ತ್ರಜ್ಞರು ಸಲಹೆ ನೀಡಿದರು.

ಹಣಕಾಸು ಖಾತೆಯ ರಾಜ್ಯ ಸಚಿವ ಪಂಕಜ್ ಚೌಧರಿ, ಹಣಕಾಸು ಸಚಿವಾಲಯದ ಕಾರ್ಯದರ್ಶಿ ಹಾಗೂ ಮುಖ್ಯ ಆರ್ಥಿಕ ಸಲಹೆಗಾರರು ಪಾಲ್ಗೊಂಡಿದ್ದರು.

₹11.11 ಲಕ್ಷ ಕೋಟಿ
ಸರ್ಕಾರದ ಬಂಡವಾಳ ವೆಚ್ಚದ ಗುರಿ

‘ಸಭೆಯಲ್ಲಿ ಪಾಲ್ಗೊಂಡಿದ್ದ ಅರ್ಥಶಾಸ್ತ್ರಜ್ಞರು ಬಜೆಟ್ ಸಿದ್ಧಪಡಿಸುವುದಕ್ಕೆ ಸಂಬಂಧಿಸಿದಂತೆ ಅಗತ್ಯ ಸಲಹೆಗಳನ್ನು ನೀಡಿದ್ದಾರೆ’ ಎಂದು ಅರ್ಥ ಶಾಸ್ತ್ರಜ್ಞ ಅಶ್ವನಿ ಮಹಾಜನ್ ತಿಳಿಸಿದ್ದಾರೆ.

ವಿತ್ತೀಯ ಕೊರತೆ ಎಷ್ಟು?: ವರಮಾನ ಮತ್ತು ವೆಚ್ಚದ ನಡುವಣ ಅಂತರವಾದ ವಿತ್ತೀಯ ಕೊರತೆಯು 2023–24ನೇ ಆರ್ಥಿಕ ವರ್ಷದಲ್ಲಿ ಜಿಡಿಪಿಯ ಶೇ 5.8ರಷ್ಟಿತ್ತು. ಇದನ್ನು 2024–25ರಲ್ಲಿ ಶೇ 5.1ಕ್ಕೆ ಹಾಗೂ 2025–26ನೇ ಆರ್ಥಿಕ ವರ್ಷದಲ್ಲಿ ಶೇ 4.5ಕ್ಕೆ ಇಳಿಸಲು ಫೆಬ್ರುವರಿಯಲ್ಲಿ ಮಂಡಿಸಿದ್ದ ಮಧ್ಯಂತರ ಬಜೆಟ್‌ನಲ್ಲಿ ನಿರ್ಮಲಾ ಪ್ರಸ್ತಾಪಿಸಿದ್ದರು.

ಕೇಂದ್ರವು ಬಂಡವಾಳ ವೆಚ್ಚಕ್ಕೆ ಉತ್ತೇಜನ ನೀಡಿದ್ದು, ವಿತ್ತೀಯ ಕೊರತೆಯ ನಿಯಂತ್ರಣಕ್ಕೆ ಕ್ರಮವಹಿಸಿದೆ. 2023–24ನೇ ಆರ್ಥಿಕ ವರ್ಷದಲ್ಲಿ ಸರ್ಕಾರದ ಬಂಡವಾಳ ವೆಚ್ಚ ₹9.5 ಲಕ್ಷ ಕೋಟಿ ಆಗಿದ್ದು, 2024–25ನೇ ಆರ್ಥಿಕ ವರ್ಷದಲ್ಲಿ ₹11.11 ಲಕ್ಷ ಕೋಟಿಗೆ ಗುರಿ ನಿಗದಿಪಡಿಸಲಾಗಿದೆ.

ಅಲ್ಲದೆ, ಭಾರತೀಯ ರಿಸರ್ವ್ ಬ್ಯಾಂಕ್ ಕೇಂದ್ರಕ್ಕೆ ₹2.11 ಲಕ್ಷ ಕೋಟಿ ಲಾಭಾಂಶ ನೀಡಿರುವುದು, ಬಂಡವಾಳ ವೆಚ್ಚ ಹೆಚ್ಚಳಕ್ಕೆ ಸಹಕಾರಿಯಾಗಿದೆ. ಇದು ವಿತ್ತೀಯ ಕೊರತೆ ಪ್ರಮಾಣವನ್ನು ತಗ್ಗಿಸಲು ನೆರವಾಗಲಿದೆ ಎಂದು ಆರ್ಥಿಕ ತಜ್ಞರು ಹೇಳಿದ್ದಾರೆ.

ಜೂನ್ 20ರಂದು ದೇಶದ ಕೈಗಾರಿಕಾ ಒಕ್ಕೂಟಗಳ ಜೊತೆಗೆ ನಿರ್ಮಲಾ ಅವರು ಸಭೆ ನಡೆಸುವ ಸಾಧ್ಯತೆಯಿದೆ.

ಬಜೆಟ್ ಮಂಡನೆ ದಾಖಲೆ: ಹಣಕಾಸು ಸಚಿವರಾಗಿದ್ದ ಮೊರಾರ್ಜಿ ದೇಸಾಯಿ ಅವರು 1959–1964ರ ನಡುವೆ ಐದು ಬಾರಿ ವಾರ್ಷಿಕ ಹಾಗೂ ಒಂದು ಮಧ್ಯಂತರ ಬಜೆಟ್ ಮಂಡಿಸಿದ ಹೆಗ್ಗಳಿಕೆ ಹೊಂದಿದ್ದಾರೆ. ನಿರ್ಮಲಾ ಅವರು ಸತತ ಆರು ಬಾರಿ ಬಜೆಟ್ ಮಂಡಿಸುವ ಮೂಲಕ ಈ ದಾಖಲೆ ಸರಿಗಟ್ಟಿದ್ದಾರೆ.

2024–25ನೇ ಆರ್ಥಿಕ ಸಾಲಿನ ಬಜೆಟ್ ಮಂಡನೆ ಮೂಲಕ ಸತತ ಏಳನೇ ಬಾರಿಗೆ ಬಜೆಟ್ ಮಂಡಿಸಿದ ಮೊದಲ ಹಣಕಾಸು ಸಚಿವೆ ಎಂಬ ಚಾರಿತ್ರಿಕ ದಾಖಲೆ ಬರೆಯಲಿದ್ದಾರೆ.

ಜಾಗತಿಕ ಸೂಚ್ಯಂಕ: ಭಾರತಕ್ಕೆ 63ನೇ ಸ್ಥಾನ

ಶಕ್ತಿ ಪರಿವರ್ತನೆ ಸುಧಾರಣೆ

ನವದೆಹಲಿ (ಪಿಟಿಐ): ಜಾಗತಿಕ ಶಕ್ತಿ ಪರಿವರ್ತನೆ ಸೂಚ್ಯಂಕದಲ್ಲಿ ಭಾರತವು 63ನೇ ಸ್ಥಾನ ಪಡೆದಿದೆ.

ಯುರೋಪ್ ದೇಶಗಳು ಈ ಪಟ್ಟಿಯಲ್ಲಿ ಮುಂಚೂಣಿ ಸ್ಥಾನ ಕಾಯ್ದುಕೊಂಡಿವೆ. ಸ್ವೀಡನ್ ಅಗ್ರಸ್ಥಾನ ಪಡೆದಿದ್ದು ಡೆನ್ಮಾರ್ಕ್, ಫಿನ್ಲೆಂಡ್, ಸ್ವಿಟ್ಜರ್ಲೆಂಡ್ ಹಾಗೂ ಫ್ರಾನ್ಸ್ ಆ ನಂತರದ ಸ್ಥಾನದಲ್ಲಿವೆ. ಚೀನಾ 20ನೇ ಸ್ಥಾನದಲ್ಲಿದೆ.

ವಿಶ್ವ ಆರ್ಥಿಕ ವೇದಿಕೆ ಸಿದ್ಧಪಡಿಸಿರುವ ಈ ಸೂಚ್ಯಂಕದ ವರದಿ ಬುಧವಾರ ಬಿಡುಗಡೆಯಾಗಿದೆ. ಎನರ್ಜಿ ನೀತಿ, ಭದ್ರತೆ ಹಾಗೂ ಸುಸ್ಥಿರತೆಯಲ್ಲಿ ಭಾರತವು ಗಣನೀಯ ಸುಧಾರಣೆ ಕಂಡಿದೆ ಎಂದು ಹೇಳಿದೆ.

ನೀತಿ, ಭದ್ರತೆ ಹಾಗೂ ಸುಸ್ಥಿರತೆ ವ್ಯವಸ್ಥೆಯಲ್ಲಿ ಅಭಿವೃದ್ಧಿಶೀಲ ರಾಷ್ಟ್ರಗಳು ಸುಧಾರಣೆ ಕಂಡಿವೆ. ಚೀನಾ ಹಾಗೂ ಬ್ರೆಜಿಲ್‌ನಲ್ಲೂ ಸುಧಾರಣೆ ಹೆಚ್ಚಿದೆ. ಆದರೆ, ಶೇ 83ರಷ್ಟು ರಾಷ್ಟ್ರಗಳು ಈ ಮೂರು ವ್ಯವಸ್ಥೆಯ ಪೈಕಿ ಒಂದರಲ್ಲಿ ನಿರೀಕ್ಷಿತ ಸುಧಾರಣೆ ಕಾಣುವಲ್ಲಿ ಹಿಂದುಳಿದಿವೆ ಎಂದು ಹೇಳಿದೆ.

ಭಾರತದಲ್ಲಿ ಶಕ್ತಿ ಪರಿವರ್ತನೆಗೆ ಸಂಬಂಧಿಸಿದಂತೆ ಸರ್ಕಾರವು ಜಾಗೃತಿ ಮೂಡಿಸುತ್ತಿದೆ. ಉತ್ಪಾದನಾ ಸಾಮರ್ಥ್ಯ ಹೆಚ್ಚಳಕ್ಕೆ ಮಾರ್ಗಸೂಚಿಗಳನ್ನು ರೂಪಿಸುತ್ತಿದೆ. ವ್ಯವಸ್ಥೆಯ ಮರುಹೊಂದಾಣಿಕೆಗೆ ಪೂರಕವಾದ ವಾತಾವರಣದ ಸೃಷ್ಟಿಗೆ ಒತ್ತು ನೀಡಿದೆ ಎಂದು ವರದಿ ತಿಳಿಸಿದೆ.

120 ರಾಷ್ಟ್ರಗಳ ಪೈಕಿ 107 ದೇಶಗಳು ಕಳೆದ ಒಂದು ದಶಕದ ಅವಧಿಯಲ್ಲಿ ಶಕ್ತಿ ಪರಿವರ್ತನೆಯಲ್ಲಿ ಪ್ರಗತಿ ಪ್ರದರ್ಶಿಸಿವೆ. ಆದರೆ, ಒಟ್ಟಾರೆ ಪ್ರದರ್ಶನವು ಮಂದಗತಿಯಲ್ಲಿದೆ. ಸಮತೋಲನ ಕಾಯ್ದುಕೊಳ್ಳುವುದು ಅವುಗಳಿಗೆ ಸವಾಲಾಗಿದೆ ಎಂದು ತಿಳಿಸಿದೆ.

₹8 ಲಕ್ಷ ಕೋಟಿ ಹೂಡಿಕೆ: ಅದಾನಿ



ಗೌತಮ್ ಅದಾನಿ

ನವದೆಹಲಿ (ಪಿಟಿಐ): ದೇಶದಲ್ಲಿ ಶಕ್ತಿ ಪರಿವರ್ತನೆಯ ಯೋಜನೆಗಳಲ್ಲಿ ₹8.24 ಲಕ್ಷ ಕೋಟಿ ಬಂಡವಾಳ ಹೂಡಲು ಅದಾನಿ ಸಮೂಹ ನಿರ್ಧರಿಸಿದೆ ಎಂದು ಸಮೂಹದ ಮುಖ್ಯಸ್ಥ ಗೌತಮ್ ಅದಾನಿ ತಿಳಿಸಿದ್ದಾರೆ.

ಕ್ರೆಡಿಟ್ ರೇಟಿಂಗ್ ಸಂಸ್ಥೆ ಕ್ರಿಸಿಲ್ ಬುಧವಾರ ‘ಮೂಲಸೌಕರ್ಯ–ಭಾರತದ ಭವಿಷ್ಯಕ್ಕೆ ವೇಗವರ್ಧಕ’ ಎಂಬ ವಿಷಯ ಕುರಿತು ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಹಸಿರು ಶಕ್ತಿ ಉತ್ಪಾದನಾ ಘಟಕಗಳಿಗೆ ಅಗತ್ಯವಿರುವ ಪರಿಕರಗಳ ತಯಾರಿಕೆಗೂ ಒತ್ತು ನೀಡಲಾಗುವುದು ಎಂದರು.

ಪವನ ಮತ್ತು ಸೌರ ವಿದ್ಯುತ್ ಪಾರ್ಕ್‌ಗಳನ್ನು ನಿರ್ಮಿಸಲಾಗುವುದು. ಹಸಿರು ಜಲಜನಕ ಶಕ್ತಿ ಉತ್ಪಾದನೆಗೆ ಅಗತ್ಯವಿರುವ ವಿದ್ಯುದ್ವಿಭಜಕಗಳು, ಸೌರ ಫಲಕಗಳು ಹಾಗೂ ವಿಂಡ್ ಟರ್ಬೈನ್‌ಗಳನ್ನು ತಯಾರಿಸಲಾಗುವುದು ಎಂದು ತಿಳಿಸಿದರು.

ಶಕ್ತಿ ಪರಿವರ್ತನೆ ವಲಯದಲ್ಲಿ ಮುಂದಿನ ಹತ್ತು ವರ್ಷಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬಂಡವಾಳ ಹೂಡಿಕೆಯಾಗಲಿದೆ. ಇದರಿಂದ ನವೀಕರಿಸಬಹುದಾದ ಇಂಧನ ಸರಪಳಿಯನ್ನು ವಿಸ್ತರಿಸಲಿದೆ. ಈಗಾಗಲೇ, ಹಸಿರು ಶಕ್ತಿ ಉತ್ಪಾದನೆಗೆ ಅಗತ್ಯವಿರುವ ಪರಿಕರಗಳ ತಯಾರಿಕೆಗೆ ಚಾಲನೆ ಸಿಕ್ಕಿದೆ ಎಂದರು.

ಮಾರುಕಟ್ಟೆ ಧಾರಣೆ (₹ಗಳಲ್ಲಿ)

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	1450-1550
ನಡುಗೋಲು	1600-1700
ರಾಶಿ	1750-1800
ರಾಶಿ ಉತ್ತಮ	1900-1950
ಹೆರಕಿದ್ದು	2400-2500
ಹಸಿರು ಸಾಧಾರಣ	2100-2200
ಹಸಿರು ಉತ್ತಮ	2400-2500
ಹಸಿರು ಅತಿ ಉತ್ತಮ	2700-2800
ಕಾಳು ಮೆಣಸು	670
ಅಡಿಕೆ	
ಶಿವಮೊಗ್ಗ	
ಬೆಟ್ಟೆ	42009-55400
ಗೊರಬಲು	17069-37009
ರಾಶಿ	33269-53299
ಸರಕು	56000-83896
ಸಿದ್ದಾಪುರ	
ಬಿಳಿಗೋಟು	25899-29119
ಚಾಲಿ	34209-36099
ಕೋಕ	25699-27989
ಕೆಂಪುಗೋಟು	27099-28389
ರಾಶಿ	40600-48899
ತಟ್ಟಿಬೆಟ್ಟೆ	34811-39319
ಶಿರಸಿ	
ಬೆಟ್ಟೆ	35299-44839
ಬಿಳಿಗೋಟು	23200-29689
ಚಾಲಿ	32639-37000
ಕೆಂಪುಗೋಟು	20899-25600
ರಾಶಿ	43099-48689
ಕುಮಟ	
ಚಿಪ್ಪು	25999-29019
ಕೋಕ	14099-24569
ಫ್ಯಾಕ್ಟರಿ	11019-19999
ಹಳೆಚಾಲಿ	35369-38599

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15,400	15,400	-	226.30 ಸೆಂಟ್ಸ್
ಎಸಿ	9,100	325 on OT	-	
ಆರ್‌ಪಿ	16,650	15,500	-	ಲಂಡನ್
ಆರ್‌ಸಿ	9,620	380 on OT	-	4,108 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

19-6-2024

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1500 (1500)
ಒಂದು ವಾರದ ಡೆಲಿವರಿ	1495 (1495)
ಸೋಯಾ ಕಚ್ಚಾ	922 (923)
ಪಾಮ್ ವಾರದ ಡೆಲಿವರಿ	925 (919)
ಸೂರ್ಯಕಾಂತಿ ಎಣ್ಣೆ ಕಚ್ಚಾ	930 (930)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ ₹71,400 (71,100)

ಬೆಳ್ಳಿ ಕೆ.ಜಿ ₹88,200 (87,650)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸುದ್ದಿ 2 ನಿಮಿಷ

ಆಹಾರ ಪದಾರ್ಥಗಳ ಬೆಲೆ ಏರಿಕೆ: ಆರ್‌ಬಿಐ ಕಳವಳ

ಮುಂಬೈ (ಪಿಟಿಐ): ದೇಶದಲ್ಲಿ ಚಿಲ್ಲರೆ ಹಣದುಬ್ಬರವು ಕ್ರಮೇಣವಾಗಿ ಇಳಿಕೆಯ ಪಥದಲ್ಲಿ ಸಾಗುತ್ತಿದೆ. ಆದರೆ, ಆಹಾರ ಪದಾರ್ಥಗಳ ಬೆಲೆ ಏರಿಕೆಯು ಹಣದುಬ್ಬರದ ಇಳಿಕೆಗೆ ಅಡ್ಡಿಯಾಗುತ್ತಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ತಿಳಿಸಿದೆ.

ಪ್ರಸಕ್ತ ವರ್ಷದ ಮೊದಲ ತ್ರೈಮಾಸಿಕದಲ್ಲಿ ಜಾಗತಿಕ ಬೆಳವಣಿಗೆಯು ಚೇತರಿಕೆ ಕಂಡಿದೆ.



ವಿಶ್ವದ ಪ್ರಮುಖ ದೇಶಗಳಲ್ಲಿ ಚಿಲ್ಲರೆ ಹಣದುಬ್ಬರವು ಇಳಿಕೆಯ ಹಾದಿಗೆ ಮರಳಿದೆ. ಹಾಗಾಗಿ, ಆ ರಾಷ್ಟ್ರಗಳು ಹಣಕಾಸು ನೀತಿಗಳಲ್ಲಿ ಕೊಂಚ ಸಡಿಲಿಕೆಯತ್ತ ಮುಖ ಮಾಡಿವೆ ಎಂದು ಹೇಳಿದೆ.

2024–25ನೇ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆಯು ಹಿಂದಿನ ತ್ರೈಮಾಸಿಕದಲ್ಲಿ ದಾಖಲಿಸಿದ್ದಕ್ಕಿಂತ ಹೆಚ್ಚು ಪ್ರಗತಿ ಕಾಣಲಿದೆ. ನೈರುತ್ಯ ಮಾನ್ಸೂನ್ ಮಾರುತಗಳ ಉತ್ತಮ ಆರಂಭದಿಂದಾಗಿ ಕೃಷಿ ಚಟುವಟಿಕೆಗಳಿಗೂ ಅನುಕೂಲಕರ ವಾತಾವರಣ ಸೃಷ್ಟಿಯಾಗಿದೆ ಎಂದು ಹೇಳಿದೆ.

ಚಿಲ್ಲರೆ ಹಣದುಬ್ಬರವನ್ನು ಶೇ 4ರ ಮಿತಿಯಲ್ಲಿ ಕಾಯ್ದುಕೊಳ್ಳುವುದು ಆರ್‌ಬಿಐನ ಗುರಿಯಾಗಿದೆ.

ಕ್ರೋಮಾ ಮಳಿಗೆ ಲೋಕಾರ್ಪಣೆ

ಚೆನ್ನೈ (ಪಿಟಿಐ): ಟಾಟಾ ಸಮೂಹದ ಇನ್ಫಿನಿಟಿ ರಿಟೇಲರ್ ‘ಕ್ರೋಮಾ’ದ 500ನೇ ಮಳಿಗೆಯು ಚೆನ್ನೈನ ಕಟ್ಟುಪಾಕ್ಕಂನಲ್ಲಿ ಬುಧವಾರ ಕಾರ್ಯಾರಂಭ ಮಾಡಿದೆ.

ಹೊಸ ಮಳಿಗೆಯಲ್ಲಿ 550 ಬ್ರ್ಯಾಂಡ್‌ಗಳ 16 ಸಾವಿರಕ್ಕೂ ಹೆಚ್ಚು ಉತ್ಪನ್ನಗಳು ಗ್ರಾಹಕರಿಗೆ ದೊರೆಯಲಿವೆ. ಮಳಿಗೆ ಉದ್ಘಾಟನೆ ಅಂಗವಾಗಿ ಜೂನ್ 23ರ ವರೆಗೆ ಉತ್ಪನ್ನಗಳ ಖರೀದಿ ಮೇಲೆ ಶೇ 10ರಷ್ಟು ರಿಯಾಯಿತಿ ಸೌಲಭ್ಯ ಪ್ರಕಟಿಸಲಾಗಿದೆ. ‘ಹ್ಯಾಪಿ 500 ಟು ಯೂ’ ಅಭಿಯಾನದ ಮೂಲಕ ಉದ್ಘಾಟಿಸಲಾಗಿದೆ ಎಂದು ಕಂಪನಿ ತಿಳಿಸಿದೆ.

‘ಈ ಮಳಿಗೆ ಆರಂಭದ ಮೂಲಕ ಗ್ರಾಹಕರಿಗೆ ಮತ್ತಷ್ಟು ಹತ್ತಿರವಾಗಿದ್ದೇವೆ. ಅಲ್ಲದೆ, ದೇಶದ ಎಲ್ಲ ಭಾಗಕ್ಕೂ ತಲುಪಿದ್ದೇವೆ. ನಮ್ಮ ಹೆಜ್ಜೆಯನ್ನು ಇನ್ನಷ್ಟು ವಿಸ್ತರಿಸಬೇಕಿದೆ’ ಎಂದು ‘ಕ್ರೋಮಾ’ದ ಡೆಪ್ಯುಟಿ ಸಿಇಒ ಶಿಬಾಶಿಷ್ ರಾಯ್ ಹೇಳಿದ್ದಾರೆ.

ಟಾಟಾ ವಾಣಿಜ್ಯ ವಾಹನ ಬೆಲೆ ಏರಿಕೆ

ನವದೆಹಲಿ (ಪಿಟಿಐ): ಟಾಟಾ ಮೋಟರ್ಸ್ ತನ್ನ ವಾಣಿಜ್ಯ ವಾಹನಗಳ ಬೆಲೆಯನ್ನು ಶೇ 2ರಷ್ಟು ಏರಿಕೆ ಮಾಡಿದ್ದು, ಜುಲೈ 1ರಿಂದ ಜಾರಿಗೆ ಬರಲಿದೆ.

ಎಲ್ಲಾ ಶ್ರೇಣಿಯ ವಾಹನಗಳ ಬೆಲೆ ಹೆಚ್ಚಿಸಲಾಗಿದೆ. ಸರಕುಗಳ ದರ ಏರಿಕೆಯನ್ನು ಸರಿದೂಗಿಸಲು ಈ ನಿರ್ಧಾರ ಕೈಗೊಳ್ಳಲಾಗಿದೆ. ವಾಹನಗಳ ಮಾದರಿ ಹಾಗೂ ಆವೃತ್ತಿಗೆ ಅನುಗುಣವಾಗಿ ಬೆಲೆಯಲ್ಲಿ ಬದಲಾವಣೆಯಾಗಲಿದೆ ಎಂದು ಕಂಪನಿ ತಿಳಿಸಿದೆ.

ಟ್ರಕ್ ಹಾಗೂ ಬಸ್‌ಗಳ ತಯಾರಿಕೆಯಲ್ಲಿ ಟಾಟಾ ಮೋಟರ್ಸ್ ದೇಶದ ಮುಂಚೂಣಿ ಕಂಪನಿಯಾಗಿದೆ.

ರೇಮಂಡ್ ಮಂಡಳಿಯಿಂದ ಗೌತಮ್ ದೂರವಿಡಿ: ಐಐಎಎಸ್



ಗೌತಮ್ ಸಿಂಘಾನಿಯಾ

ನವದೆಹಲಿ (ಪಿಟಿಐ): ರೇಮಂಡ್ ಸಮೂಹದ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕರಾಗಿ ಪುನರಾಯ್ಕೆ ಬಯಸಿರುವ ಗೌತಮ್ ಸಿಂಘಾನಿಯಾ ವಿರುದ್ಧ ಷೇರುದಾರರು ಮತ ಚಲಾಯಿಸಬೇಕು ಎಂದು ಸಾಂಸ್ಥಿಕ ಹೂಡಿಕೆದಾರರ ಸಲಹಾ ಸೇವಾ ಸಂಸ್ಥೆ (ಐಐಎಎಸ್) ಕೋರಿದೆ.

ಗೌತಮ್ ಅವರು ಮುಂದಿನ ಐದು ವರ್ಷ ಕಾಲ ಆಡಳಿತ ಮಂಡಳಿಯ ನಿರ್ದೇಶಕ ಸ್ಥಾನಕ್ಕೆ ಮರು ಆಯ್ಕೆ ಬಯಸಿದ್ದಾರೆ. ಇದಕ್ಕೆ ಕಂಪನಿಯ ಆಡಳಿತ ಮಂಡಳಿಯು ಒಪ್ಪಿಗೆ ನೀಡಿದೆ.

ಜೂನ್ 27ರಂದು ಕಂಪನಿಯ ವಾರ್ಷಿಕ ಸಭೆ ನಡೆಯಲಿದೆ. ಸಭೆಯಲ್ಲಿ ಷೇರುದಾರರು ಒಪ್ಪಿಗೆ ನೀಡಿದರೆ ಆಡಳಿತ ಮಂಡಳಿಯ ನಿರ್ದೇಶಕ ಹಾಗೂ ಮೂರು ವರ್ಷಗಳ ಕಾಲ ಮುಖ್ಯ ಪ್ರಧಾನ ವ್ಯವಸ್ಥಾಪಕರಾಗಿ ಅವರು ಮುಂದುವರಿಯಲಿದ್ದಾರೆ.

ಗೌತಮ್ ಸಿಂಘಾನಿಯಾ ನನ್ನ ಮೇಲೆ ದೌರ್ಜನ್ಯ ಎಸಗಿದ್ದಾರೆ ಎಂದು ಅವರ ಪತ್ನಿ ನವಾಜ್ ಮೋದಿ ದೂರಿದ್ದಾರೆ. ಈ ಇಬ್ಬರ ವಿಚ್ಛೇದನ ಪ್ರಕ್ರಿಯೆ ಇನ್ನೂ ಪೂರ್ಣಗೊಂಡಿಲ್ಲ ಎಂದು ಸಂಸ್ಥೆ ಹೇಳಿದೆ.

ಅಲ್ಲದೆ, ಗೌತಮ್ ಅವರು ಕಂಪನಿಯು ಹಣವನ್ನು ವೈಯಕ್ತಿಕ ಉದ್ದೇಶಕ್ಕೆ ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ಪತ್ನಿಯೇ ಆರೋಪಿಸಿದ್ದಾರೆ. ಆಡಳಿತ ಮಂಡಳಿಯು ಈ ಬಗ್ಗೆ ಸ್ಪಷ್ಟನೆ ನೀಡಿಲ್ಲ. ನಿಯಮ ಉಲ್ಲಂಘಿಸಿ ವಾರ್ಷಿಕ ಸಂಬಳವನ್ನು ₹35 ಕೋಟಿಗೆ ಹೆಚ್ಚಿಸಿಕೊಳ್ಳಲು ನಿರ್ಧರಿಸಿದ್ದಾರೆ ಎಂದು ಹೇಳಿದೆ. ವಿಚ್ಛೇದನ ಪ್ರಕರಣ ಇತ್ಯರ್ಥವಾಗಬೇಕು. ಹಣ ದುರ್ಬಳಕೆಗೆ ಸಂಬಂಧಿಸಿದಂತೆ ಸ್ವತಂತ್ರವಾಗಿ ತನಿಖೆ ನಡೆಸಬೇಕು. ಅಲ್ಲಿಯವರೆಗೂ ಷೇರುದಾರರು ಈ ಇಬ್ಬರನ್ನೂ ಆಡಳಿತ ಮಂಡಳಿಯಿಂದ ಹೊರಗಿಡಬೇಕು ಎಂದು ಹೇಳಿದೆ.

ವರ್ಜೀನಿಯಾದಿಂದ ಬೆಂಗಳೂರು ಮೂಲದ ಸುಹಾಸ್ ಸ್ಪರ್ಧೆ

ವಾಷಿಂಗ್ಟನ್ (ಪಿಟಿಐ): ಬೆಂಗಳೂರು ಮೂಲದ ಅಮೆರಿಕದ ಪ್ರಜೆ ಸುಹಾಸ್ ಸುಬ್ರಮಣ್ಯಂ ಅವರು ವರ್ಜೀನಿಯಾದಿಂದ ಪ್ರಾಥಮಿಕ ಸುತ್ತಿನ ಚುನಾವಣೆಯಲ್ಲಿ ಜಯ ಗಳಿಸಿದ್ದಾರೆ. ಇವರು ಭಾರತೀಯ–ಅಮೆರಿಕ ಪ್ರಜೆ ಕ್ರಿಸ್ಟಲ್ ಕೌಲ್ ಸೇರಿದಂತೆ 11 ಅಭ್ಯರ್ಥಿಗಳ ವಿರುದ್ಧ ಜಯ ಸಾಧಿಸುವ ಮೂಲಕ ನವೆಂಬರ್‌ನಲ್ಲಿ ನಡೆಯಲಿರುವ ಸಾರ್ವತ್ರಿಕ ಚುನಾವಣೆಗೆ ಡೆಮಾಕ್ರಟಿಕ್ ಪಕ್ಷದಿಂದ ಸ್ಪರ್ಧಿಸಲು ಅರ್ಹತೆ ಗಿಟ್ಟಿಸಿದ್ದಾರೆ.

ವರ್ಜೀನಿಯಾ ಕ್ಷೇತ್ರದಲ್ಲಿ ಭಾರತೀಯ–ಅಮೆರಿಕ ಪ್ರಜೆಗಳೇ ಹೆಚ್ಚಾಗಿದ್ದು, ಈ ಕ್ಷೇತ್ರದಿಂದ ಸುಹಾಸ್ ಸುಬ್ರಮಣ್ಯಂ ಅವರು ಮೊದಲ ಬಾರಿಗೆ ಆಯ್ಕೆ ಬಯಸಿದ್ದಾರೆ.

2019ರಲ್ಲಿ ವರ್ಜೀನಿಯಾದ ಸಾಮಾನ್ಯ ಸಭೆಗೆ ಆಯ್ಕೆಯಾಗುವ ಮೂಲಕ ಈ ಸ್ಥಾನಕ್ಕೆ ಆಯ್ಕೆಯಾದ ಮೊದಲ ಭಾರತೀಯ ಸಂಜಾತ, ದಕ್ಷಿಣ ಏಷ್ಯಾದ ಮತ್ತು ಹಿಂದೂ ವ್ಯಕ್ತಿ ಎಂಬ ಖ್ಯಾತಿಗೆ ಭಾಜನರಾಗಿದ್ದರು.

ಸುಬ್ರಮಣ್ಯಂ ಅವರು ಹ್ಯೂಸ್ಟನ್‌ನಲ್ಲಿ ಜನಿಸಿದ್ದು, ಅವರ ಪೋಷಕರು ಬೆಂಗಳೂರು ಮತ್ತು ಚೆನ್ನೈ ಮೂಲದವರಾಗಿದ್ದಾರೆ. ಮಾಜಿ ಅಧ್ಯಕ್ಷ ಬರಾಕ್ ಒಬಾಮ ಅವರ ಆಡಳಿತಾವಧಿಯಲ್ಲಿ ಸುಬ್ರಮಣ್ಯಂ ಅವರು ಶ್ವೇತಭವನದ ತಂತ್ರಜ್ಞಾನ ನೀತಿಯ ಸಲಹೆಗಾರರಾಗಿ ಸೇವೆ ಸಲ್ಲಿಸಿದ್ದರು.

ಹಜ್ ಯಾತ್ರೆ: ಮೆಕ್ಕಾದಲ್ಲಿ ಸೇರಿರುವ ಲಕ್ಷಾಂತರ ಯಾತ್ರಿಗಳು

ಅಧಿಕ ತಾಪಮಾನ; 900 ಜನರ ಸಾವು

ರಿಯಾದ್/ಮೀನಾ (ರಾಯಿಟರ್ಸ್/ಎಎಫ್‌ಪಿ): ಈ ಸಲದ ಹಜ್ ವಾರ್ಷಿಕ ಯಾತ್ರೆ ಸಂದರ್ಭದಲ್ಲಿ ಅಧಿಕ ತಾಪಮಾನದಿಂದ 900ಕ್ಕೂ ಅಧಿಕ ಮಂದಿ ಮೃತಪಟ್ಟಿದ್ದಾರೆ ಎಂದು ವಿವಿಧ ದೇಶಗಳ ವಿದೇಶಾಂಗ ಸಚಿವಾಲಯಗಳು ತಿಳಿಸಿವೆ.

‘ಹಜ್ ಯಾತ್ರೆಯಲ್ಲಿ 900 ಮಂದಿ ಮೃತಪಟ್ಟಿದ್ದಾರೆ’ ಎಂದು ರಾಯಭಾರಿಯೊಬ್ಬರು ತಿಳಿಸಿದ್ದಾರೆ ಎಂದು ಎಎಫ್‌ಪಿ ಸುದ್ದಿಸಂಸ್ಥೆ ಮಂಗಳವಾರ ತಿಳಿಸಿದೆ. ತಾಪಮಾನ ಹಾಗೂ ವಿವಿಧ ಕಾರಣಗಳಿಂದ 323 ಮಂದಿ ಈಜಿಪ್ಟಿಯನ್ನರು ಮೃತಪಟ್ಟಿದ್ದಾರೆ ಎಂದು ಇಬ್ಬರು ಅರಬ್ ರಾಯಭಾರಿ ಹೇಳಿಕೆ ಆಧರಿಸಿ ಖಚಿತಪಡಿಸಿದೆ.

ಸಾವಿನ ಸಂಖ್ಯೆ ಕುರಿತಂತೆ ರಾಯಿಟರ್ಸ್ ಖಚಿತಪಡಿಸಿಲ್ಲ. ಕೇರಳದ 13 ಮಂದಿ ಸಾವಿಗೀಡಾಗಿದ್ದಾರೆ ಎಂದು ನ್ಯೂಯಾರ್ಕ್ ಟೈಮ್ಸ್ ವರದಿ ತಿಳಿಸಿದೆ.

ಕಾಲ್ತುಳಿತ, ಟೆಂಟ್‌ಗಳಲ್ಲಿ ಬೆಂಕಿ ಹೊತ್ತಿಕೊಂಡ ಪ್ರಕರಣ, ಇತರೆ ಅಪಘಾತ ಕಾರಣದಿಂದ ಕಳೆದ 30 ವರ್ಷಗಳಿಂದ ಹಜ್ ಯಾತ್ರೆ ವೇಳೆ ನೂರಾರು ಮಂದಿ ಸಾವಿಗೀಡಾಗಿದ್ದಾರೆ.

ಮೆಕ್ಕಾದ ಬೃಹತ್ ಮಸೀದಿ ಆವರಣದಲ್ಲಿ ಸೋಮವಾರ 51.8 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿತ್ತು ಎಂದು ಸೌದಿಯ ಸರ್ಕಾರಿ ಸುದ್ದಿವಾಹಿನಿ ವರದಿ ಮಾಡಿತ್ತು. ಜಾಗತಿಕ ತಾಪಮಾನದಿಂದ ಸೌದಿ ಅರೇಬಿಯಾದಲ್ಲಿ ತಾಪಮಾನ ತೀವ್ರ ಏರಿಕೆಯಾಗಲಿದೆ ಎಂದು ‘ಟ್ರಾವೆಲ್ ಆ್ಯಂಡ್ ಮೆಡಿಸಿನ್’ ನಿಯತಕಾಲಿಕೆಯು 2024ರಲ್ಲಿ ನಡೆಸಿದ ಅಧ್ಯಯನದಲ್ಲಿ ತಿಳಿಸಿತ್ತು.

ಹಜ್ ವೇಳೆ ಟ್ಯುನಿಷಿಯಾದ 35 ಮಂದಿ ಮೃತಪಟ್ಟಿದ್ದರು ಎಂದು ಟ್ಯುನಿಷಿಯನ್ ಸುದ್ದಿಸಂಸ್ಥೆ ತಿಳಿಸಿದೆ. ತಮ್ಮವರ ಕಳೆದುಕೊಂಡವರನ್ನು ಕುಟುಂಬದ ಸದಸ್ಯರು ಆಸ್ಪತ್ರೆಯಲ್ಲಿ ಹುಡುಕಾಡುತ್ತಿದ್ದ ದೃಶ್ಯ ಕಂಡುಬಂತು.

ವಿವಿಧ ಕಾರಣಗಳಿಂದ ಮೃತಪಟ್ಟಿದ್ದ ಜೋರ್ಡಾನ್‌ನ 41 ಮಂದಿ ಯಾತ್ರಾರ್ಥಿಗಳ ಮೃತದೇಹಗಳ ಅಂತಿಮಸಂಸ್ಕಾರ ನಡೆಸಲು ಅನುಮತಿ ನೀಡಲಾಗಿದೆ ಎಂದು ಜೋರ್ಡಾನ್ ಸರ್ಕಾರ ತಿಳಿಸಿದೆ.

‘ಯಾತ್ರೆ ವೇಳೆ 11 ಮಂದಿ ಇರಾನಿಯನ್ನರು ಮೃತಪಟ್ಟಿದ್ದು, 24 ಮಂದಿ ಆಸ್ಪತ್ರೆಗೆ ದಾಖಲಾಗಿದ್ದಾರೆ’ ಎಂದು ಇರಾನ್‌ನ ಸರ್ಕಾರಿ ಸುದ್ದಿಸಂಸ್ಥೆ ‘ಐಆರ್‌ಎನ್’ ತಿಳಿಸಿದೆ. ಸೆನೆಗಲ್‌ನ ಮೂವರು ಮೃತಪಟ್ಟಿದ್ದಾರೆ. ಯಾತ್ರೆ ವೇಳೆ 144 ಮಂದಿ ಇಂಡೋನೇಷ್ಯಾ ನಿವಾಸಿಗಳು ಮೃತಪಟ್ಟಿದ್ದಾರೆ’ ಎಂದು ಇಂಡೋನೇಷ್ಯಾದ ಆರೋಗ್ಯ ಇಲಾಖೆ ತಿಳಿಸಿದೆ.

ಬಿತ್ತನೆ ಬೀಜ ತರಲಿದ್ದಾನೆ ಅಂಚೆಯಣ್ಣ

ಒಂದನೇ ಪುಟದಿಂದ....

ಬಿತ್ತನೆ ಬೀಜಗಳ ದರ ಅತಿ ದುಬಾರಿಯಾಗಿರುವುದು, ಅಧಿಕೃತ ಮಾರಾಟಗಾರರೂ ಬೀಜಗಳ ಕೃತಕ ಅಭಾವ ಸೃಷ್ಟಿಸಿ, ದುಬಾರಿ ದರಕ್ಕೆ ಮಾರಾಟ ಮಾಡುವುದು ಮತ್ತಿತರ ಕಾರಣಗಳಿಂದ ಬಹುತೇಕರು ಅನಧಿಕೃತ ಮಾರಾಟಗಾರರಿಂದ ಕಡಿಮೆ ದರಕ್ಕೆ ಖರೀದಿಸಿ, ಬಿತ್ತನೆ ಮಾಡುತ್ತಿದ್ದಾರೆ.

ಕಳಪೆ ಬೀಜಗಳ ಬಿತ್ತನೆಯಿಂದಾಗಿ ಪ್ರತಿವರ್ಷ ಲಕ್ಷಾಂತರ ಹೆಕ್ಟೇರ್ ಬೆಳೆ ನಷ್ಟವಾಗುತ್ತಿದೆ. ಸಾಲ ಮಾಡಿ ಬಿತ್ತನೆ ಮಾಡಿದ್ದ ಕೆಲ ರೈತರು ನಷ್ಟದಿಂದ ಕಂಗಾಲಾಗಿ ಆತ್ಮಹತ್ಯೆ ಮಾಡಿಕೊಂಡ ಉದಾಹರಣೆಗಳೂ ಸಾಕಷ್ಟಿವೆ. ಕಳಪೆ ಬಿತ್ತನೆ ಬೀಜಗಳನ್ನು ಪೂರೈಸುವಲ್ಲಿ ಮಧ್ಯವರ್ತಿಗಳೇ ಸಾಕಷ್ಟು ಸಂಖ್ಯೆಯಲ್ಲಿ ಕಾರ್ಯನಿರ್ವಹಿಸುವ ಕಾರಣ ಅವರ ವಿರುದ್ಧ ವಿಚಾರಣೆ ನಡೆಸಿ, ಕ್ರಮ ಕೈಗೊಳ್ಳುವಲ್ಲಿ ವಿಳಂಬವಾಗುತ್ತಿದೆ. ಅಧಿಕೃತ ಪರವಾನಗಿ ಪಡೆದವರು ಕೃತಕ ಅಭಾವ ಸೃಷ್ಟಿಸಿ, ಅಧಿಕ ಬೆಲೆಗೆ ಮಾರಾಟ ಮಾಡಿದ ಪ್ರಕರಣಗಳಲ್ಲಿ ಪರವಾನಗಿ ರದ್ದು ಮಾಡಲಾಗುತ್ತಿದೆ. ಆದರೆ, ಶಿಕ್ಷೆಯಂತಹ ಕ್ರಮಗಳೇ ಆಗುತ್ತಿಲ್ಲ. ಅತ್ತ ರೈತರಿಗೆ ಸೂಕ್ತ ಪರಿಹಾರವೂ ದೊರಕಿಲ್ಲ ಎನ್ನುವುದನ್ನು ಕೃಷಿ ಇಲಾಖೆಯ ಅಂಕಿಅಂಶಗಳೇ ಹೇಳುತ್ತವೆ.

ಇಂತಹ ಹತ್ತು ಹಲವು ಕಾರಣಗಳಿಂದ ನಲುಗಿದ್ದ ರೈತರಿಗೆ ಬಿತ್ತನೆ ಬೀಜಗಳನ್ನು ಸರ್ಕಾರ ಮನೆ ಬಾಗಿಲಿಗೇ ತಲುಪಿಸಲು ಕ್ರಮ ಕೈಗೊಂಡಿರುವುದು ಬಿತ್ತನೆ ಬೀಜದ ಸಮಸ್ಯೆಗಳಿಗೆ ಪರಿಹಾರ ದೊರಕಿಸುವಲ್ಲಿ ಮಹತ್ವ ಹೆಜ್ಜೆಯಾಗಲಿದೆ ಎನ್ನುವುದು ರಾಜ್ಯ ಸರ್ಕಾರದ ಆಶಯ.

ಕೃಷಿ ಇಲಾಖೆ ಈಗಾಗಲೇ 6.04 ಲಕ್ಷ ಕ್ವಿಂಟಲ್ ಬಿತ್ತನೆ ಬೀಜಗಳನ್ನು ಸಂಗ್ರಹ ಮಾಡಿದೆ. ಬೇಡಿಕೆಗೆ ಅನುಗುಣವಾಗಿ ಅಂಚೆ ಕಚೇರಿ ಮೂಲಕ ರೈತರಿಗೆ ಪೂರೈಕೆ ಮಾಡಲಿದೆ.

ರೈತರು ಹೇಗೆ ಬೇಡಿಕೆ ಸಲ್ಲಿಸಬೇಕು?

ಒಂದನೇ ಪುಟದಿಂದ...

ನಂತರ ಸಂದಾಯ ಮಾಡಬೇಕಿರುವ ಮೊತ್ತ ಮೂಡುತ್ತದೆ. ಅಷ್ಟು ಹಣವನ್ನು ಆನ್‌ಲೈನ್ ಮೂಲಕ ಪಾವತಿಸಬೇಕು. ಪಾವತಿಸಿದ ಎರಡು–ಮೂರು ದಿನಗಳಲ್ಲಿ ಅಂಚೆ ಸಿಬ್ಬಂದಿ ಮನೆ ಬಾಗಿಲಿಗೆ ತಲುಪಿಸುವರು.

ಅಂಚೆ ಸಿಬ್ಬಂದಿ ತಲುಪಿಸುವ ಎಲ್ಲ ಬಿತ್ತನೆ ಬೀಜಗಳು ಕರ್ನಾಟಕ ರಾಜ್ಯ ಬೀಜ ಮತ್ತು ಸಾವಯವ ಪ್ರಮಾಣನ ಸಂಸ್ಥೆಯ ಮೊಹರು ಹೊಂದಿದ್ದು, ಗುಣಮಟ್ಟದಿಂದ ಕೂಡಿರುತ್ತವೆ ಎನ್ನುತ್ತಾರೆ ಕೃಷಿ ಇಲಾಖೆ ಅಧಿಕಾರಿಗಳು.

ಮೃತರ ಕುಟುಂಬಕ್ಕೆ ಕುವೈತ್ ₹12 ಲಕ್ಷ ಪರಿಹಾರ

ದುಬೈ/ಕುವೈತ್ (ಪಿಟಿಐ): ಕುವೈತ್ ಅಗ್ನಿ ದುರಂತದಲ್ಲಿ ಸಾವಿಗೀಡಾದ 46 ಭಾರತೀಯರು ಸೇರಿದಂತೆ ಒಟ್ಟು 50 ಜನರ ಕುಟುಂಬಗಳಿಗೆ ಸರ್ಕಾರವು ತಲಾ ₹12.50 ಲಕ್ಷ ಪರಿಹಾರ ನೀಡಲಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ಜೂನ್ 12ರಂದು ಕುವೈತ್‌ನ ಮಂಗಾಫ್ ನಗರದಲ್ಲಿ 7ನೇ ಅಂತಸ್ತಿನ ಕಟ್ಟಡದಲ್ಲಿ ಸಂಭವಿಸಿದ ಬೃಹತ್ ಅಗ್ನಿ ಅವಘಡದಲ್ಲಿ 50 ಜನ ಸಾವಿಗೀಡಾಗಿದ್ದರು. 196 ವಲಸೆ ಕಾರ್ಮಿಕರು ವಾಸವಿದ್ದ ಈ ಕಟ್ಟಡದಲ್ಲಿ ಭಾರತೀಯರೇ ಹೆಚ್ಚಾಗಿ ನೆಲೆಸಿದ್ದರು.

ಅಗ್ನಿ ಅವಘಡದಲ್ಲಿ ಕೇರಳದ 23, ತಮಿಳುನಾಡಿನ 7 ಮತ್ತು ಕರ್ನಾಟಕದ ಒಬ್ಬರು ಸಾವಿಗೀಡಾಗಿದ್ದಾರೆ.

ಮೃತರ ಕುಟುಂಬಗಳಿಗೆ ಭಾರತ ಸರ್ಕಾರ ತಲಾ ₹2 ಲಕ್ಷ ಹಾಗೂ ತನ್ನ ರಾಜ್ಯದವರಿಗೆ ಕೇರಳ ಸರ್ಕಾರವು ತಲಾ ₹5 ಲಕ್ಷ ಪರಿಹಾರ ಘೋಷಿಸಿದೆ.

‘ಕಾನಿಷ್ಕ’ ಬಾಂಬ್ ಸ್ಫೋಟಕ್ಕೆ 39ನೇ ವರ್ಷ: 23ಕ್ಕೆ ಸ್ಮರಣೆ

ಒಟ್ಟಾವಾ (ಪಿಟಿಐ): ಕೆನಡಾದ ಮಾಂಟ್ರಿಯಲ್‌ನಿಂದ ನವದೆಹಲಿಗೆ ಸಂಚರಿಸುತ್ತಿದ್ದ ಏರ್ ಇಂಡಿಯಾದ ‘ಕಾನಿಷ್ಕ’ ವಿಮಾನವನ್ನು ಸಿಖ್ ಉಗ್ರಗಾಮಿಗಳು ಸ್ಫೋಟಿಸಿ ಇದೇ 23ಕ್ಕೆ 39 ವರ್ಷಗಳಾಗಲಿವೆ. ಉಗ್ರರ ಈ ದಾಳಿಯಲ್ಲಿ ಅಗಲಿದವರನ್ನು ಸ್ಮರಿಸುವ ಉದ್ದೇಶದಿಂದ ಕೆನಡಾದ ವ್ಯಾಂಕೋವರ್‌ನಲ್ಲಿರುವ ಭಾರತದ ಕಾನ್ಸುಲೇಟ್ ಜನರಲ್ ಇದೇ 23ರಂದು ಕಾರ್ಯಕ್ರಮ ಹಮ್ಮಿಕೊಂಡಿದೆ.

1985ರ ಜೂನ್ 23ರಂದು ವಿಮಾನವು ಲಂಡನ್‌ನ ಹೀಥ್ರೂ ವಿಮಾನ ನಿಲ್ದಾಣದಲ್ಲಿ ಇಳಿಯುವ 45 ನಿಮಿಷಗಳ ಮುನ್ನ ಸ್ಫೋಟಿಸಲಾಗಿತ್ತು. ವಿಮಾನದಲ್ಲಿದ್ದ 89 ಮಕ್ಕಳು ಸೇರಿ ಎಲ್ಲ 329 ಜನರು ಮೃತಪಟ್ಟಿದ್ದರು. ಅವರಲ್ಲಿ ಹೆಚ್ಚಿನವರು ಭಾರತೀಯ ಮೂಲದ ಕೆನಡಾದವರು.

ವ್ಯಾಂಕೋವರ್‌ನಲ್ಲಿ ಇರುವ ಸ್ಟಾನ್ಲಿ ಪಾರ್ಕ್‌ನ ಸೆಪರ್ಲಿ ಮೈದಾನದ ಏರ್ ಇಂಡಿಯಾ ಸ್ಮಾರಕದಲ್ಲಿ ಸ್ಮರಣಾ ಕಾರ್ಯಕ್ರಮವನ್ನು ನಿಗದಿಪಡಿಸಲಾಗಿದೆ.

ಕೆನಡಾ ನಿವಾಸಿ, ಖಾಲಿಸ್ತಾನಿ ಪ್ರತ್ಯೇಕತಾವಾದಿ ಹರ್ದೀಪ್ ಸಿಂಗ್ ನಿಜ್ಜರ್ ಹತ್ಯೆಯಾಗಿ ಒಂದು ವರ್ಷವಾದ (ಜೂನ್ 18ಕ್ಕೆ) ಹಿನ್ನೆಲೆಯಲ್ಲಿ ಕೆನಡಾದ ಸಂಸತ್ತಿನ ಹೌಸ್ ಆಫ್ ಕಾಮನ್ಸ್‌ನಲ್ಲಿ ಮಂಗಳವಾರ ಸದಸ್ಯರು ಒಂದು ಕ್ಷಣ ಮೌನ ಆಚರಿಸಿದ್ದರು.

14 ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ನಿಗದಿ

ಒಂದನೇ ಪುಟದಿಂದ...

‘ಭತ್ತಕ್ಕೆ ನೀಡುವ ಕನಿಷ್ಠ ಬೆಂಬಲ ಬೆಲೆಯನ್ನು ₹117ರಷ್ಟು ಹೆಚ್ಚಿಸಲಾಗಿದೆ. 14 ಬೆಳೆಗಳಿಗೆ ನೀಡಲಾಗುವ ಕನಿಷ್ಠ ಬೆಂಬಲ ಬೆಲೆಯು ಉತ್ಪಾದನೆ ವೆಚ್ಚದ ಒಂದೂವರೆ ಪಟ್ಟು ಇರಲಿದೆ. 2018ರಲ್ಲಿ ಮಂಡಿಸಿದ ಬಜೆಟ್‌ನಲ್ಲಿ ಈ ಕುರಿತ ಸ್ಪಷ್ಟ ನಿರ್ಧಾರವನ್ನು ಕೇಂದ್ರ ಸರ್ಕಾರ ಕೈಗೊಂಡಿತ್ತು. ಆ ನೀತಿಗೆ ಅನುಗುಣವಾಗಿ ಇಂದಿನ ಸಭೆಯಲ್ಲಿ ನಿರ್ಧಾರ ತೆಗೆದುಕೊಳ್ಳಲಾಗಿದೆ’ ಎಂದು ತಿಳಿಸಿದ್ದಾರೆ.

‘ಕೃಷಿ ವೆಚ್ಚಗಳು ಮತ್ತು ದರಗಳು ಕುರಿತ ಆಯೋಗವು (ಸಿಎಸಿಪಿ) ದೇಶದ ವಿವಿಧ ಜಿಲ್ಲೆಗಳು ಮತ್ತು ತಹಸೀಲ್ ಮಟ್ಟದಲ್ಲಿ ಕೈಗೊಂಡಿದ್ದ ಅಧ್ಯಯನದ ಆಧಾರದಲ್ಲಿ ಇದನ್ನು ನಿರ್ಧರಿಸಲಾಗಿದೆ ಎಂದು ತಿಳಿಸಿದ್ದಾರೆ.

ಯಾವ ಬೆಳೆಗೆ ಎಷ್ಟು ಎಂಎಸ್‌ಪಿ: ಭತ್ತಕ್ಕೆ ನೀಡುವ ಎಂಎಸ್‌ಪಿಯನ್ನು ಶೇ 5.35ರಷ್ಟು ಅಥವಾ ₹117ರಷ್ಟು ಹೆಚ್ಚಿಸಲಾಗಿದೆ. ಇದರೊಂದಿಗೆ ಪ್ರತಿ ಕ್ವಿಂಟಲ್ ಭತ್ತಕ್ಕೆ ನೀಡುವ ಎಂಎಸ್‌ಪಿ ₹2,300 ಆಗಲಿದೆ. 2013–14ರಲ್ಲಿ ಈ ದರ ₹ 1,310 ಇತ್ತು ಎಂದು ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

ಪ್ರತಿ ಕ್ವಿಂಟಲ್ ‘ಎ’ ಗ್ರೇಡ್ ತಳಿ ಭತ್ತಕ್ಕೆ ನೀಡುವ ಎಂಎಸ್‌ಪಿಯನ್ನು ₹2,320ಕ್ಕೆ ಹೆಚ್ಚಿಸಲಾಗಿದೆ ಎಂದು ತಿಳಿಸಿದ್ದಾರೆ.

ಪ್ರತಿ ಕ್ವಿಂಟಲ್ ಸಾಮಾನ್ಯ ತಳಿಯ ಹತ್ತಿಗೆ ನೀಡುವ ಎಂಎಸ್‌ಪಿಯನ್ನು ₹7,121ಕ್ಕೆ ಹಾಗೂ ಮತ್ತೊಂದು ತಳಿ ಹತ್ತಿ ಎಂಎಸ್‌ಪಿಯನ್ನು ₹7,521ಕ್ಕೆ ಹೆಚ್ಚಿಸಲಾಗಿದೆ. ಇದರೊಂದಿಗೆ ಹತ್ತಿಗೆ ನೀಡುವ ಎಂಎಸ್‌ಪಿಯನ್ನು ಕಳೆದ ಬಾರಿಗಿಂತ ₹510 ರಷ್ಟು ಹೆಚ್ಚಿಸಿದಂತಾಗಿದೆ.

ಜೋಳಕ್ಕೆ ₹3,371(ಹೈಬ್ರಿಡ್),₹3,421 (ಮಾಲದಂಡಿ), ರಾಗಿ–₹4,290, ಸಜ್ಜೆ–₹2,625 ಹಾಗೂ ಮೆಕ್ಕೆಜೋಳಕ್ಕೆ ₹2,225 ಎಂಎಸ್‌ಪಿ ನಿಗದಿ ಮಾಡಲಾಗಿದೆ.

ಹೆಸರು ಕಾಳಿಗೆ ₹8,682 ನಿಗದಿ ಮಾಡಲಾಗಿದ್ದರೆ, ತೊಗರಿ–₹7,550 ಹಾಗೂ ಉದ್ದಿಗೆ ₹7,400 ನಿಗದಿ ಮಾಡಲಾಗಿದೆ. ಪ್ರತಿ ಕ್ವಿಂಟಲ್‌ಗೆ ಕಳೆದ ವರ್ಷ ನಿಗದಿ ಮಾಡಿದ್ದ ದರಕ್ಕಿಂತ ₹550 ಹೆಚ್ಚಳ ಮಾಡಿದಂತಾಗಿದೆ.

ಶೇಂಗಾ–₹6,783, ಸೂರ್ಯಕಾಂತಿ ಬೀಜ–₹7,280, ಸೋಯಾಬೀನ್–₹4,892, ಎಳ್ಳು–₹9,267, ಹುಚ್ಚೆಳ್ಳು–₹8,717 ನಿಗದಿ ಮಾಡಲಾಗಿದೆ.

ದೆಹಲಿಯಲ್ಲಿ ಬಿಸಿಲಾಘಾತ ತೀವ್ರ: ಒಂದು ತಿಂಗಳಲ್ಲಿ 20 ಜನರು ಮೃತ

ಬಿಸಿಗಾಳಿ: ಒಂದೇ ದಿನ ಐವರು ಸಾವು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಸ್ಥಿತಿ ಅವಲೋಕಿಸಿದ ನಡ್ಡಾ
- ಆಸ್ಪತ್ರೆಗಳಲ್ಲಿ ಪ್ರತ್ಯೇಕ ವಿಭಾಗಕ್ಕೆ ಸೂಚನೆ
- ಬೆಳಿಗ್ಗೆ 7 ಗಂಟೆಯ ಹೊತ್ತಿಗೆ ಬಿಸಿಲು ತೀವ್ರ

ನವದೆಹಲಿ: ರಾಜಧಾನಿ ದೆಹಲಿಯಲ್ಲಿ ಬಿಸಿಗಾಳಿ ತೀವ್ರತೆ ಮತ್ತಷ್ಟು ಹೆಚ್ಚಾಗಿದ್ದು, ಬುಧವಾರ ಒಂದೇ ದಿನ ಬಿಸಿಲಾಘಾತದಿಂದಾಗಿ ಐವರು ಕೊನೆಯುಸಿರೆಳೆದಿದ್ದಾರೆ.

ಕಳೆದ ತಿಂಗಳಾಂತ್ಯದಲ್ಲಿ ಬಿಸಿಗಾಳಿಯ ಹಾವಳಿ ಆರಂಭಗೊಂಡ ನಗರದ ಮೂರು ಆಸ್ಪತ್ರೆಗಳಲ್ಲಿ 20 ಮಂದಿ ಮೃತಪಟ್ಟಿದ್ದಾರೆ. 12 ಮಂದಿ ಕೃತಕ ಉಸಿರಾಟ ವ್ಯವಸ್ಥೆಯಲ್ಲಿದ್ದಾರೆ.

'ಬಿಸಿಗಾಳಿಯಿಂದ ಬಾಧಿತರಾಗಿ ಆಸ್ಪತ್ರೆ ಸೇರಿರುವವರಿಗೆ ಚಿಕಿತ್ಸೆ ನೀಡಲು ಆದ್ಯತೆ ನೀಡಬೇಕು' ಎಂದು ಕೇಂದ್ರ ಆರೋಗ್ಯ ಸಚಿವ ಜೆ.ಪಿ. ನಡ್ಡಾ ಅವರು ಬುಧವಾರ ಎಲ್ಲ ಆಸ್ಪತ್ರೆಗಳಿಗೂ ಸೂಚನೆ ನೀಡಿದ್ದಾರೆ.

ಜನರಿಗೆ ಎಚ್ಚರಿಕೆ: ಬಿಸಿಲಾಘಾತ ಮತ್ತು ಬಿಸಿಗಾಳಿಯಿಂದ ಸ್ವಯಂ ರಕ್ಷಣೆ ಪಡೆಯಲು ದೆಹಲಿಯ ವಿಪತ್ತು ನಿರ್ವಹಣಾ ಪ್ರಾಧಿಕಾರವು ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದೆ. ಮಕ್ಕಳು, ವೃದ್ಧರು ಬಿಸಿಲಿಗೆ ಹೋಗದಂತೆ ಸಲಹೆ ನೀಡಿದೆ.

ಇದಲ್ಲದೇ, ಬಿಸಿಗಾಳಿಯ ತೀವ್ರತೆ ಹೆಚ್ಚಿರುವ ಉತ್ತರ ಭಾರತಕ್ಕೆ ಸಂಬಂಧಿಸಿದಂತೆ ಆರೋಗ್ಯ ಸಚಿವಾಲಯ ಸಲಹಾ ಪತ್ರ ಸಿದ್ಧಪಡಿಸುತ್ತಿದೆ.

ದೆಹಲಿ, ಗಾಜಿಯಾಬಾದ್ ಮತ್ತು ನೊಯಿಡಾ ಸೇರಿದಂತೆ ರಾಜಧಾನಿಯ ಬಹುತೇಕ ಕಡೆಗಳಲ್ಲಿ ಗುಡುಗು, ಮಿಂಚಿನ ಸಹಿತ ಪ್ರಬಲ ಗಾಳಿ ಬೀಸಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದ್ದು, ಆರೆಂಜ್ ಅಲರ್ಟ್ ಘೋಷಿಸಿದೆ.

ಕಳೆದ ತಿಂಗಳ ಅಂತ್ಯದಲ್ಲಿ ಬಿಸಿಗಾಳಿ ಬೀಸಲು ಆರಂಭಿಸಿದ್ದು, ರಾಮ್ ಮನೋಹರ ಲೋಹಿಯಾ ಆಸ್ಪತ್ರೆ ಮತ್ತು ಸಫ್ದರ್‌ಜಂಗ್ ಆಸ್ಪತ್ರೆಗಳಲ್ಲಿ ತಲಾ ಒಂಬತ್ತು ಮಂದಿ ಮೃತಪಟ್ಟಿದ್ದಾರೆ. ಈ ಪೈಕಿ ಏಳು ಸಾವುಗಳು ಎರಡು ದಿನಗಳ ಅವಧಿಯಲ್ಲಿ ಸಂಭವಿಸಿವೆ. ಲೋಕ ನಾಯಕ ಆಸ್ಪತ್ರೆಯಲ್ಲಿ ಕಳೆದ ವಾರ ಇಬ್ಬರು ಅಸುನೀಗಿದ್ದಾರೆ.

ಪ್ರತ್ಯೇಕ ವಿಭಾಗ ಆರಂಭಕ್ಕೆ ಆದೇಶ: ಈ ಮಧ್ಯೆ ದೆಹಲಿ ಸೇರಿದಂತೆ ದೇಶದ ವಿವಿಧ ಕಡೆಗಳಲ್ಲಿ ಬಿಸಿಗಾಳಿ ಹಾವಳಿಯ ಸದ್ಯದ ಪರಿಸ್ಥಿತಿಯನ್ನು ಕೇಂದ್ರ ಆರೋಗ್ಯ ಸಚಿವ ಜೆ.ಪಿ.ನಡ್ಡಾ ಬುಧವಾರ ಪರಿಶೀಲಿಸಿದರು. ಪರಿಸ್ಥಿತಿಯನ್ನು ಎದುರಿಸಲು ಕೇಂದ್ರದ ಆಸ್ಪತ್ರೆಗಳಲ್ಲಿ ಮಾಡಿಕೊಂಡಿರುವ ಸಿದ್ಧತೆಗಳನ್ನೂ ಪರಾಮರ್ಶಿಸಿದರು.

ಬಿಸಿಗಾಳಿಯ ಪ್ರಭಾವಕ್ಕೆ ತುತ್ತಾದವರ ಆರೈಕೆಗೆ ಕೇಂದ್ರದ ನಿಯಂತ್ರಣದಲ್ಲಿರುವ ಆಸ್ಪತ್ರೆಗಳಲ್ಲಿ ಪ್ರತ್ಯೇಕ ವಿಭಾಗ ಆರಂಭಿಸಲೂ ಅವರು ಆದೇಶಿಸಿದರು.



ಬಿಸಿಲಾಘಾತದಿಂದ ಅಸ್ವಸ್ಥರಾದವರೊಬ್ಬರನ್ನು ದೆಹಲಿಯ ಎಸ್‌ಎನ್‌ಜೆಪಿ ಆಸ್ಪತ್ರೆಗೆ ಕರೆತರಲಾಯಿತು —ಪಿಟಿಐ ಚಿತ್ರ

12 ವರ್ಷಗಳಲ್ಲೇ ಅತ್ಯಂತ 'ಬಿಸಿ' ರಾತ್ರಿ

ದೆಹಲಿಯ ಜನರು ಮಂಗಳವಾರ ರಾತ್ರಿ 12 ವರ್ಷಗಳಲ್ಲೇ ಅತ್ಯಂತ ಬಿಸಿಯಾದ ರಾತ್ರಿಯನ್ನು ಅನುಭವಿಸಿದರು. ಮಂಗಳವಾರ ಕನಿಷ್ಠ ಉಷ್ಣಾಂಶ 35.2 ಡಿಗ್ರಿ ಸೆಲ್ಸಿಯಸ್‌ನಷ್ಟು ದಾಖಲಾಗಿತ್ತು. ಇದು ವಾತಾವರಣದ ಸಾಮಾನ್ಯ ಉಷ್ಣಾಂಶಕ್ಕಿಂತ ಎಂಟು ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚು. ಈ ಮೊದಲು 2012ರ ಜೂನ್ ತಿಂಗಳಲ್ಲಿ 34 ಡಿಗ್ರಿ ಸೆಲ್ಸಿಯಸ್ ಕನಿಷ್ಠ ಉಷ್ಣಾಂಶ ದಾಖಲಾಗಿತ್ತು.

ಈ ವರ್ಷ ದೆಹಲಿಯಲ್ಲಿ ಬಿಸಿಗಾಳಿ ತೀವ್ರವಾಗಿದ್ದು, ಗರಿಷ್ಠ ಉಷ್ಣಾಂಶ 49 ಡಿಗ್ರಿ ಸೆಲ್ಸಿಯಸ್‌ವರೆಗೂ ತಲುಪಿದೆ. ಬೆಳಿಗ್ಗೆ 7 ಗಂಟೆಯ ಹೊತ್ತಿಗೆ ವಾತಾವರಣದ ತಾಪಮಾನ 44 ಡಿಗ್ರಿ ಸೆಲ್ಸಿಯಸ್‌ನಷ್ಟು ದಾಖಲಾಗುತ್ತಿದೆ.

ಹವಾಮಾನ ಇಲಾಖೆಯು ಉತ್ತರ ಭಾರತಕ್ಕೆ ರೆಡ್ ಅಲರ್ಟ್ ಘೋಷಿಸಿದ್ದು, ಗುರುವಾರದ ಹೊತ್ತಿಗೆ ಪರಿಸ್ಥಿತಿ ಸುಧಾರಿಸಬಹುದು ಎಂದು ಹೇಳಿದೆ.

'ದೇಶವು ಜ್ಞಾನ ಕೇಂದ್ರವಾಗಲಿ'

ನಳಂದ ವಿಶ್ವವಿದ್ಯಾಲಯದ ಹೊಸ ಕ್ಯಾಂಪಸ್ ಉದ್ಘಾಟನೆ



ರಾಜಗೀರ್ (ಬಿಹಾರ) (ಪಿಟಿಐ): ಮುಂದುವರಿದ ಹಾಗೂ ಸಂಶೋಧನೆಯನ್ನು ಆಧರಿಸಿದ ಉನ್ನತ ಶಿಕ್ಷಣ ವ್ಯವಸ್ಥೆಯನ್ನು ಹೊಂದಿ, ವಿಶ್ವದ ಅತ್ಯಂತ ಪ್ರಮುಖ ಜ್ಞಾನ ಕೇಂದ್ರವಾಗಿ ಭಾರತವು ಮತ್ತೆ ಪ್ರವರ್ಧಮಾನಕ್ಕೆ ಬರಬೇಕು ಎಂಬುದು ತಮ್ಮ ಬಯಕೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ಹೇಳಿದರು.

ನಳಂದ ವಿಶ್ವವಿದ್ಯಾಲಯದ ಹೊಸ ಕ್ಯಾಂಪಸ್ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಯಾವಾಗಲೂ ಕೌತುಕ ಹೊಂದಿರಬೇಕು, ಧೈರ್ಯಶಾಲಿಗಳಾಗಿರಬೇಕು ಎಂದು ಕರೆ ನೀಡಿದರು.

'ಜ್ಞಾನವನ್ನು ಬೆಂಕಿಯಿಂದ ನಾಶಪಡಿಸಲು ಸಾಧ್ಯವಿಲ್ಲ ಎಂಬ ಸತ್ಯಕ್ಕೆ ನಿದರ್ಶನವಾಗಿ ನಳಂದ ಇದೆ. 2047ಕ್ಕೆ ಮುನ್ನ ಅಭಿವೃದ್ಧಿ ಹೊಂದಿದ ದೇಶವಾಗಲು ಭಾರತ ಕಾಯುತ್ತಿದೆ' ಎಂದರು.

'ಉನ್ನತ ಕಲಿಕೆಯ ನಳಂದ ಮತ್ತು ವಿಕ್ರಮಶಿಲಾದಂತಹ ತಾಣಗಳು ಬೆಳೆಯುತ್ತಿದ್ದ ಕಾಲದಲ್ಲಿ ನಮ್ಮ ದೇಶ ಕೂಡ ಇಂತಹ ಸ್ಥಾನದಲ್ಲಿತ್ತು' ಎಂದು ನೆನಪಿಸಿದರು. ಒಂದು ದಶಕದ ಹಿಂದೆ ದೇಶದಲ್ಲಿ 100 ನವೋದ್ಯಮಗಳಷ್ಟೇ ಇದ್ದವು. ಈಗ ಈ ಸಂಖ್ಯೆಯು 1.30 ಲಕ್ಷವನ್ನು ಮೀರಿದೆ ಎಂದು ಅವರು ಹೇಳಿದರು.

ವಿಶೇಷ ಸ್ಥಾನ ಏಕಿಲ್ಲ: ಕಾಂಗ್ರೆಸ್ ಪ್ರಶ್ನೆ

ನವದೆಹಲಿ (ಪಿಟಿಐ): ಪ್ರಧಾನಿ ಮೋದಿ ಅವರು ಬಿಹಾರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿಯೇ ಕಾಂಗ್ರೆಸ್ ಪಕ್ಷವು, 'ಭರವಸೆ ನೀಡಿದ್ದಕ್ಕೆ ಅನುಗುಣವಾಗಿ ಬಿಹಾರ ರಾಜ್ಯಕ್ಕೆ ವಿಶೇಷ ಸ್ಥಾನಮಾನವನ್ನು ಏಕೆ ನೀಡಿಲ್ಲ' ಎಂದು ಪ್ರಶ್ನಿಸಿದೆ.

ಪಟ್ನಾ ವಿವಿಗೆ ಕೇಂದ್ರೀಯ ವಿವಿ ಸ್ಥಾನಮಾನ ನಿರಾಕರಿಸಿದ್ದು ಏಕೆ ಎಂದು ಕೂಡ ಅದು ಪ್ರಶ್ನಿಸಿದೆ.

2014ರ ಚುನಾವಣಾ ಪ್ರಚಾರದ ವೇಳೆ ಮೋದಿ ಬಿಹಾರಕ್ಕೆ ವಿಶೇಷ ಸ್ಥಾನಮಾನ ನೀಡುವ ಭರವಸೆ ಇತ್ತಿದ್ದರು. ಕೇಂದ್ರದ ವರದಿಯ ಪ್ರಕಾರ ಬಿಹಾರವು ದೇಶದ ಅತ್ಯಂತ ಬಡ ರಾಜ್ಯವಾಗಿದೆ. ಹತ್ತು ವರ್ಷಗಳು ಕಳೆದಿದ್ದರೂ ಕೇಂದ್ರವು ಕಾಯುತ್ತಿರುವುದು ಯಾವುದಕ್ಕೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ್ ಅವರು ಪ್ರಶ್ನಿಸಿದ್ದಾರೆ.

ಅಕ್ರಮ ಮದ್ಯ ಕುಡಿದು 20 ಜನರ ಸಾವು

ಚೆನ್ನೈ: ತಮಿಳುನಾಡಿನ ಕಲ್ಲಕುರಿಚಿ ಜಿಲ್ಲೆಯಲ್ಲಿ ಅಕ್ರಮ ಮದ್ಯ ಕುಡಿದು 20 ಜನರು ಮೃತಪಟ್ಟಿದ್ದು, 30 ಮಂದಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಕಲ್ಲಕುರಿಚಿ ತಾಲ್ಲೂಕಿನ ಕರುಣಾಪುರಂ ಕಾಲೊನಿಯ ಸುಮಾರು 50 ಜನರು ಮಂಗಳವಾರ ರಾತ್ರಿ ಪ್ಯಾಕೆಟ್‌ಗಳಲ್ಲಿ ಮಾರಾಟ ಮಾಡುತ್ತಿದ್ದ ನಕಲಿ ಮದ್ಯವನ್ನು ಸೇವಿಸಿ ಅಸ್ವಸ್ಥಗೊಂಡಿದ್ದು, ಬುಧವಾರ ಮುಂಜಾನೆ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಘಟನೆಯ ನಂತರ ಸರ್ಕಾರವು ವಿಶೇಷ ವೈದ್ಯಕೀಯ ತಂಡಗಳನ್ನು ಕಲ್ಲಕುರಿಚಿ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿದೆ. ಆದರೆ, ತೀವ್ರವಾಗಿ ಅಸ್ವಸ್ಥರಾದ ರೋಗಿಗಳನ್ನು ಸೇಲಂ, ತಿರುವಣ್ಣಾಮಲೈ ಮತ್ತು ಪುದುಚೇರಿಯ ಆಸ್ಪತ್ರೆಗಳಿಗೆ ವರ್ಗಾಯಿಸಲಾಗಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ತಮಿಳುನಾಡು ಸರ್ಕಾರವು ಜಿಲ್ಲಾಧಿಕಾರಿ ಶ್ರವಣ್ ಕುಮಾರ್ ಜಾತಾವತ್ ಮತ್ತು ಪೊಲೀಸ್ ವರಿಷ್ಠಾಧಿಕಾರಿ ಸಮಯ್ ಸಿಂಗ್ ಮೀನಾ ಅವರನ್ನು ಅಮಾನತುಗೊಳಿಸಿದೆ ಮತ್ತು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಪ್ರಕರಣವನ್ನು ಸಿಬಿ-ಸಿಐಡಿ ತನಿಖೆಗೆ ಆದೇಶಿಸಿದ್ದಾರೆ. ಜಾತಾವತ್ ಸ್ಥಾನಕ್ಕೆ ಎಂ.ಎಸ್. ಪ್ರಶಾಂತ್ ನೇಮಕಗೊಂಡರೆ, ರಜತ್ ಚತುರ್ವೇದಿ ನೂತನ ಎಸ್ಪಿಯಾಗಲಿದ್ದಾರೆ.

ಅಸ್ವಸ್ಥರಾದವರಲ್ಲಿ ಹೆಚ್ಚಿನವರು ದಿನಗೂಲಿ ಕಾರ್ಮಿಕರಾಗಿದ್ದು, ಬಂಧಿತ ಗೋವಿಂದರಾಜ್ ಅವರಿಂದ ಮದ್ಯವನ್ನು ಖರೀದಿಸಿದ್ದಾರೆ ಎಂದು ನಂಬಲಾಗಿದೆ.

ನೀರಿನ ಸಮಸ್ಯೆ ಬಗೆಹರಿಯದಿದ್ದರೆ ನಾಳೆಯಿಂದ ನಿರಶನ: ಆತಿಶಿ

ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಎದುರಾಗಿರುವ ನೀರಿನ ಅಭಾವದ ಪರಿಸ್ಥಿತಿಯನ್ನು ಸರಿಪಡಿಸಬೇಕು ಎಂದು ಕೋರಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿರುವುದಾಗಿ ಸಚಿವೆ ಆತಿಶಿ ಬುಧವಾರ ತಿಳಿಸಿದ್ದಾರೆ. ಅಲ್ಲದೆ, ಇನ್ನೆರಡು ದಿನಗಳಲ್ಲಿ ನೀರಿನ ಸಮಸ್ಯೆ ಬಗೆಹರಿಯದೆ ಇದ್ದರೆ ಜೂನ್ 21ರಿಂದ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ಕೈಗೊಳ್ಳುವುದಾಗಿ ಅವರು ಎಚ್ಚರಿಕೆ ನೀಡಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 'ದೆಹಲಿ ಪಾಲಿನ ನೀರನ್ನು ಹರಿಯಾಣ ಬಿಡುಗಡೆ ಮಾಡದ ಕಾರಣ ನೀರಿನ ಅಭಾವ ಎದುರಾಗಿದೆ. ಮಂಗಳವಾರ ದೆಹಲಿಗೆ ಬಿಡುಗಡೆಯಾಗಬೇಕಿದ್ದ 613 ಎಂಜಿಡಿ (ದಿನಕ್ಕೆ ದಶಲಕ್ಷ ಗ್ಯಾಲೋನ್) ಪ್ರಮಾಣದಷ್ಟು ನೀರಿನ ಪೈಕಿ ಹರಿಯಾಣವು 513 ಎಂಜಿಡಿಯಷ್ಟು ನೀರನ್ನು ಮಾತ್ರ ಬಿಡುಗಡೆ ಮಾಡಿದೆ. 28,500 ಜನರಿಗೆ ಒಂದು ಎಂಜಿಡಿಯಷ್ಟು ನೀರಿನ ಅಗತ್ಯವಿದೆ. ಈ ಪ್ರಕಾರ ದೆಹಲಿಯ 28 ಲಕ್ಷಕ್ಕೂ ಹೆಚ್ಚು ಜನರಿಗೆ ನೀರು ಸಿಕ್ಕಿಲ್ಲ' ಎಂದು ದೂರಿದರು.

ನ್ಯಾಯಾಂಗ ಬಂಧನ ಜುಲೈ 3ರವರೆಗೆ ವಿಸ್ತರಣೆ

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣ ಸಂಬಂಧ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ನ್ಯಾಯಾಂಗ ಬಂಧನದ ಅವಧಿಯನ್ನು ಇಲ್ಲಿನ ನ್ಯಾಯಾಲಯವು ಜುಲೈ 3ರವರೆಗೆ ವಿಸ್ತರಿಸಿದೆ.

ಕೇಜ್ರಿವಾಲ್ ಅವರ ನ್ಯಾಯಾಂಗ ಬಂಧನದ ಅವಧಿಯು ಬುಧವಾರ ಮುಕ್ತಾಯವಾದ ಕಾರಣ, ಅವರನ್ನು ವಿಡಿಯೊ ಕಾನ್ಫರೆನ್ಸ್ ಮೂಲಕ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ಈ ವೇಳೆ ವಿಚಾರಣೆ ನಡೆಸಿದ ವಿಶೇಷ ನ್ಯಾಯಾಲಯವು, ಕೇಜ್ರಿವಾಲ್ ಅವರನ್ನು ಮತ್ತೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿತು.

18,799 ಸಹಾಯಕ ಲೋಕೋ ಪೈಲಟ್ ನೇಮಕಕ್ಕೆ ನಿರ್ಧಾರ

ನವದೆಹಲಿ: ರೈಲ್ವೆ ಸುರಕ್ಷತೆ ಹೆಚ್ಚಿಸಲು ಮುಂದಿನ ಆರರಿಂದ ಎಂಟು ತಿಂಗಳಲ್ಲಿ 18,799 ಸಹಾಯಕ ಲೋಕೋ ಪೈಲಟ್‌ಗಳನ್ನು ನೇಮಕ ಮಾಡಿಕೊಳ್ಳಲು ಭಾರತೀಯ ರೈಲ್ವೆ ನಿರ್ಧರಿಸಿದೆ.

ಈ ಹಿಂದೆ 5,696 ಹುದ್ದೆಗಳ ಭರ್ತಿಗೆ ಅಧಿಸೂಚನೆ ಹೊರಡಿಸಲಾಗಿತ್ತು. ಮಂಗಳವಾರ ಇದನ್ನು ಪರಿಷ್ಕರಿಸಿ, 18,799 ಸಹಾಯಕ ಲೋಕೋ ಪೈಲಟ್‌ಗಳ ನೇಮಕಕ್ಕೆ ನಿರ್ಧರಿಸಲಾಗಿದೆ.

ಪಶ್ಚಿಮ ಬಂಗಾಳದಲ್ಲಿ ಸರಕು ಸಾಗಣೆ ರೈಲು ಡಿಕ್ಕಿ ಹೊಡೆದ ಪರಿಣಾಮ ಪ್ರಯಾಣಿಕ ರೈಲಿನ ನಾಲ್ಕು ಬೋಗಿಗಳು ಹಾನಿಯಾಗಿದ್ದವು. ಈ ಅಪಘಾತದಲ್ಲಿ ಒಟ್ಟು 10 ಮಂದಿ ಮೃತಪಟ್ಟಿದ್ದರು. ಈ ಘಟನೆಯ ಬೆನ್ನಲ್ಲೇ ರೈಲ್ವೆ ಇಲಾಖೆಯು ಹೆಚ್ಚಿನ ಸಂಖ್ಯೆಯಲ್ಲಿ ಲೋಕೋ ಪೈಲಟ್‌ಗಳ ನೇಮಕಕ್ಕೆ ಮುಂದಾಗಿದೆ.

ನೇಮಕ ಪ್ರಕ್ರಿಯೆಗೆ ತಕ್ಷಣವೇ ಚಾಲನೆ ನೀಡುವಂತೆ ರೈಲ್ವೆ ಮಂಡಳಿಯು ವಲಯ ರೈಲ್ವೆಗಳಿಗೆ ಸೂಚನೆ ನೀಡಿದೆ. ಈ ಹುದ್ದೆಗಳ ಭರ್ತಿಗೆ ಕನಿಷ್ಠ ಆರು ತಿಂಗಳ ಕಾಲಾವಕಾಶ ಬೇಕಾಗುತ್ತದೆ ಎಂದು ನಿರೀಕ್ಷಿಸಲಾಗಿದೆ.

'ಇಂಡಿಯಾ' ಒಕ್ಕೂಟದ ನಾಯಕರಿಂದ ಶುಭಾಶಯ

54ಕ್ಕೆ ಕಾಲಿಟ್ಟ ರಾಹುಲ್ ಗಾಂಧಿ

ನವದೆಹಲಿ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಬುಧವಾರ 54 ವರ್ಷಗಳು ತುಂಬಿದ್ದು, ಪಕ್ಷದ ನಾಯಕರು ಸೇರಿದಂತೆ ಹಲವರು ಶುಭಾಶಯಗಳನ್ನು ಕೋರಿ, ಅವರನ್ನು ಹೊಗಳಿದ್ದಾರೆ.

'ಸಂವಿಧಾನದಲ್ಲಿ ಉಲ್ಲೇಖಿಸಿರುವ ಮೌಲ್ಯಗಳ ವಿಷಯದಲ್ಲಿ ರಾಹುಲ್ ಗಾಂಧಿ ಅವರದು ಅಚಲವಾದ ಬದ್ಧತೆ. ಧ್ವನಿ ಇಲ್ಲದ ಲಕ್ಷಾಂತರ ಜನರ ಪರ ಹೊಂದಿರುವ ಸಹಾನುಭೂತಿಯಿಂದಾಗಿ ಅವರು ಭಿನ್ನವಾಗಿ ನಿಲ್ಲುತ್ತಾರೆ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಶುಭಾಶಯ ಸಂದೇಶದಲ್ಲಿ ಹೇಳಿದ್ದಾರೆ.

ಅವರು 'ಎಕ್ಸ್'ನಲ್ಲಿ ತಮ್ಮ ಸಂದೇಶವನ್ನು ಪೋಸ್ಟ್ ಮಾಡಿದ್ದಾರೆ.

'ಕಾಂಗ್ರೆಸ್ ಪಕ್ಷ ಪಾಲಿಸುತ್ತಿರುವ ವಿವಿಧತೆಯಲ್ಲಿ ಏಕತೆ, ಸೌಹಾರ್ದ ಮತ್ತು ಸಹಾನುಭೂತಿ ಎಂಬ ಮೌಲ್ಯಗಳು ನಿಮ್ಮ ನಡೆಯಲ್ಲಿ ಕಾಣುತ್ತವೆ. ಸಮಾಜದ ಕಟ್ಟಕಡೆಯ ವ್ಯಕ್ತಿಯ ಕಣ್ಣೀರು ಒರೆಸುವ ನೀವು, ಆ ಮೂಲಕ ಅಧಿಕಾರಸ್ಥರಿಗೆ ಅವರ ಸತ್ಯದರ್ಶನ ಮಾಡಿಸುತ್ತಿದ್ದೀರಿ' ಎಂದೂ ಖರ್ಗೆ ಹೇಳಿದ್ದಾರೆ.

ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ, ತಮಿಳುನಾಡು ಮುಖ್ಯಮಂತ್ರಿ ಹಾಗೂ ಡಿಎಂಕೆ ಮುಖ್ಯಸ್ಥ ಎಂ.ಕೆ. ಸ್ಟಾಲಿನ್, ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್, ಎನ್‌ಸಿಪಿ (ಶರದ್ ಪವಾರ್ ಬಣ) ಮುಖ್ಯಸ್ಥ ಶರದ್ ಪವಾರ್, ಶಿವಸೇನಾ (ಯುಬಿಟಿ) ನಾಯಕ ಆದಿತ್ಯ ಠಾಕ್ರೆ, ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಸಹ ರಾಹುಲ್ ಗಾಂಧಿ ಅವರಿಗೆ ಜನ್ಮದಿನದ ಶುಭಾಶಯಗಳನ್ನು ಕೋರಿದ್ದಾರೆ.

ಸರಳ ಆಚರಣೆ: ಇಲ್ಲಿನ ಎಐಸಿಸಿ ಕೇಂದ್ರ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ, ರಾಹುಲ್ ಗಾಂಧಿ ಅವರು ಕೇಕ್ ಕತ್ತರಿಸುವ ಮೂಲಕ ತಮ್ಮ ಜನ್ಮದಿನವನ್ನು ಸರಳವಾಗಿ ಆಚರಿಸಿಕೊಂಡರು.



ರಾಹುಲ್ ಗಾಂಧಿ ಅವರಿಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಜನ್ಮದಿನದ ಶುಭಾಶಯ ಕೋರಿದರು. ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಮತ್ತಿತರರು ಜೊತೆಗಿದ್ದರು —ಪಿಟಿಐ ಚಿತ್ರ

ಚೀನಾ: ಮೋದಿ ಮೌನ ಮುರಿಯಲಿ–ಕಾಂಗ್ರೆಸ್ ಆಗ್ರಹ

ಪ್ರಜಾವಾಣಿ ವಾರ್ತೆ

ನವದೆಹಲಿ: ಚೀನಾ ಕುರಿತಂತೆ ಪ್ರಧಾನಿ ನರೇಂದ್ರ ಮೋದಿ ತಮ್ಮ ಮೌನ ಮುರಿಯಬೇಕು ಎಂದು ಕಾಂಗ್ರೆಸ್ ಪಕ್ಷ ಬುಧವಾರ ಆಗ್ರಹಿಸಿದೆ.

'ನಮ್ಮ ಗಡಿಯಲ್ಲಿ ಯಾರೂ ಪ್ರವೇಶಿಸಿಲ್ಲ ಇಲ್ಲವೇ ನಮ್ಮ ಗಡಿ ಒಳಗೆ ಯಾರೂ ಇಲ್ಲ' ಎಂಬುದಾಗಿ ಪ್ರಧಾನಿ ನರೇಂದ್ರ ಮೋದಿ ನೀಡಿದ್ದ ಹೇಳಿಕೆಗೆ ನಾಲ್ಕು ವರ್ಷಗಳು ತುಂಬಿದ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷ ಈ ಮಾತು ಹೇಳಿದೆ.

ಈ ಕುರಿತು ಪ್ರಕಟಣೆ ನೀಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, 2020ರ ಜೂನ್ 15ರಂದು ಗಾಲ್ವಾನ್ ಕಣಿವೆಯಲ್ಲಿ ನಡೆದ ಘರ್ಷಣೆಯಲ್ಲಿ ಭಾರತದ 20 ಯೋಧರ ಹತ್ಯೆಯಾದ ನಾಲ್ಕು ದಿನಗಳ ನಂತರ ಪ್ರಧಾನಿ ಮೋದಿ ಈ ರೀತಿ ಹೇಳಿಕೆ ನೀಡಿದ್ದರು ಎಂದಿದ್ದಾರೆ.

'ಮೋದಿ ಅವರ ಈ ಹೇಳಿಕೆಯು ಚೀನಾ ಪಾಲಿಗೆ ವರವಾಗಿದೆ. ತಾನು ಅತಿಕ್ರಮಣ ಮಾಡಿ ವಶಪಡಿಸಿಕೊಂಡಿರುವ ಭಾರತದ ಭೂಭಾಗದ ಮೇಲೆ ತನ್ನ ಹಕ್ಕು ಸಾಧಿಸಲು ಚೀನಾಕ್ಕೆ ಅನುಕೂಲವಾಗಿದೆ' ಎಂದು ಕಾಂಗ್ರೆಸ್ ಹೇಳುತ್ತಿದೆ.

'ಮೋದಿ ಈಗಲೂ ತಮ್ಮ ಮಾತಿನಲ್ಲಿ ನಂಬಿಕೆ ಹೊಂದಿದ್ದಾರೆಯೇ? ಭವಿಷ್ಯದ ದೃಷ್ಟಿಯಿಂದ ಡೆಪ್ಸಂಗ್ ಮತ್ತು ಡೆಮ್‌ಚೋಕ್‌ನಲ್ಲಿ ಸಾವಿರಾರು ಚದರ ಕಿ.ಮೀ.ನಷ್ಟು ಪ್ರದೇಶದ ಮೇಲಿನ ನಿಯಂತ್ರಣವನ್ನು ಚೀನಾಕ್ಕೆ ಮೋದಿ ಬಿಟ್ಟುಕೊಟ್ಟಿದ್ದಾರಾ? ಹಲವು ದಶಕಗಳ ಅವಧಿಯಲ್ಲಿ ಆಗಿರುವ ಭಾರತದ ಗುಪ್ತಚರ ಸಂಸ್ಥೆ ಮತ್ತು ವ್ಯೂಹಾತ್ಮಕ ವೈಫಲ್ಯಕ್ಕೆ ಯಾರಾನ್ನಾದರೂ ಉತ್ತರದಾಯಿಯನ್ನಾಗಿ ಮಾಡಲಾಗುತ್ತದೆಯೇ' ಎಂದು ಜೈರಾಮ್ ರಮೇಶ್ ಪ್ರಶ್ನಿಸಿದ್ದಾರೆ.

'ಈ ವಿದ್ಯಮಾನವು ನಮ್ಮ ಹುತಾತ್ಮ ಯೋಧರಿಗೆ ಅವಮಾನಿಸಿದಂತೆ. ಪೂರ್ವ ಲಡಾಖ್‌ನಲ್ಲಿನ 2,000 ಚದರಡಿ ಕಿ.ಮೀ.ನಷ್ಟು ಭಾರತೀಯ ಭೂಭಾಗದ ಮೇಲೆ ಚೀನಾ ಹೊಂದಿರುವ ನಿಯಂತ್ರಣವನ್ನು ಒಪ್ಪಿಕೊಂಡಂತಾಗಲಿದೆ. ಈ ಪ್ರದೇಶಗಳಿಗೆ ಭಾರತೀಯ ಯೋಧರು ಹೋಗಲು ಆಗುತ್ತಿಲ್ಲ. ಡೆಪ್ಸಂಗ್ ಪ್ರದೇಶದಲ್ಲಿನ ಐದು ಗಸ್ತು ಠಾಣೆಗಳತ್ತ ಭಾರತೀಯ ಯೋಧರು ಹೋಗುವುದಕ್ಕೆ ಚೀನಾ ಪಡೆಗಳು ತಡೆ ಒಡ್ಡುತ್ತಿವೆ' ಎಂದೂ ಅವರು ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಬಾಂಬ್ ಸ್ಫೋಟ: ವೃದ್ಧ ಸಾವು

ತಿರುವನಂತಪುರ: ಕಣ್ಣೂರು ಜಿಲ್ಲೆಯ ತಲಶ್ಶೇರಿಯಲ್ಲಿ ಮಂಗಳವಾರ ಕಚ್ಚಾ ಬಾಂಬ್ ಸ್ಫೋಟಿಸಿ ವೇಲಾಯುಧನ್ (86) ಎಂಬುವವರು ಮೃತಪಟ್ಟಿದ್ದಾರೆ. ಘಟನೆ ಬೆನ್ನಲ್ಲೇ ಆಡಳಿತಾರೂಢ ಸಿಪಿಐ(ಎಂ) ಪಕ್ಷದ ವಿರುದ್ಧ ತಿರುಗಿಬಿದ್ದಿರುವ ಬಿಜೆಪಿ ಹಾಗೂ ಕಾಂಗ್ರೆಸ್, ಜಿಲ್ಲೆಯಲ್ಲಿರುವ ಶಾಂತಿಯುತ ವಾತಾವರಣ ಕೆಡಿಸಲು ಉದ್ದೇಶಪೂರ್ವಕವಾಗಿಯೇ ಮಾರ್ಕಿಸ್ಟ್ ಪಕ್ಷವು ಈ ಸ್ಫೋಟ ಎಸಗಿದ್ದು, ಬಾಂಬ್ ಸಂಸ್ಕೃತಿ ಪರಿಚಯಿಸಿದೆ ಎಂದು ಆರೋಪಿಸಿದೆ.

'ಜನವಸತಿರಹಿತ ಖಾಲಿ ಜಾಗದಲ್ಲಿ ತೆಂಗಿನಕಾಯಿ ಹೆಕ್ಕಲು ಹೋದ ವೇಳೆ, ಸ್ಟೀಲ್ ಡಬ್ಬಿ ತೆರೆದಾಗ ಬಾಂಬ್ ಸ್ಫೋಟಗೊಂಡಿದೆ. ತೀವ್ರವಾಗಿ ಗಾಯಗೊಂಡಿದ್ದ ಅವರನ್ನು ತಕ್ಷಣವೇ ತಲಶ್ಶೇರಿ ಕೋ-ಆಪರೇಟಿವ್ ಆಸ್ಪತ್ರೆಗೆ ದಾಖಲಿಸಿದರೂ ಬದುಕಿ ಉಳಿಯಲಿಲ್ಲ. ಪ್ರಾಥಮಿಕ ತನಿಖೆ ವರದಿ ಪ್ರಕಾರ, ಸ್ಫೋಟಗೊಂಡಿರುವುದು ಕಚ್ಚಾ ಬಾಂಬ್' ಎಂದು ಕಣ್ಣೂರು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಜೈಲು ಅವಧಿ ವಿಸ್ತರಣೆ

ಚಂಡೀಗಢ (ಪಿಟಿಐ): ಅಸ್ಸಾಂನ ಡಿಬ್ರೂಗಢದಲ್ಲಿ ಜೈಲುವಾಸ ಅನುಭವಿಸುತ್ತಿರುವ ಸಿಖ್ ಪ್ರತ್ಯೇಕತಾವಾದಿ ನಾಯಕ ಹಾಗೂ ಖದೂರ್ ಸಾಹಿಬ್ ಕ್ಷೇತ್ರದ ಸಂಸದ ಅಮೃತ್‌ಪಾಲ್ ಸಿಂಗ್ ಅವರ ಜೈಲು ವಾಸದ ಅವಧಿಯನ್ನು ಒಂದು ವರ್ಷ ವಿಸ್ತರಿಸಲಾಗಿದೆ.

ಲೋಕಸಭಾ ಚುನಾವಣೆಯ ಫಲಿತಾಂಶ ಪ್ರಕಟವಾಗುವುದಕ್ಕೂ ಒಂದು ದಿನ ಮುಂಚೆ– ಜೂನ್ 3ರಂದು – ಪಂಜಾಬ್ ಸರ್ಕಾರದ ಗೃಹ ವ್ಯವಹಾರ ಮತ್ತು ನ್ಯಾಯ ಇಲಾಖೆಯು ಅಮೃತ್ ಪಾಲ್ ಸಿಂಗ್ ಅವರ ಜೈಲು ವಾಸದ ಅವಧಿಯನ್ನು ವಿಸ್ತರಿಸಿ ಆದೇಶ ಹೊರಡಿಸಿದೆ. ಈ ಕುರಿತ ವಿವರಗಳು ಮಾಧ್ಯಮಗಳಿಗೆ ಬುಧವಾರ ಲಭ್ಯವಾಗಿವೆ.

ಸಂಸದನ ಪುತ್ರಿ ಬಂಧನ

ಚೆನ್ನೈ (ಪಿಟಿಐ): ರಸ್ತೆ ಬದಿ ಮಲಗಿದ್ದ ವ್ಯಕ್ತಿಯ ಮೇಲೆ ಕಾರು ಹರಿಸಿದ ಆರೋಪದ ಮೇಲೆ ವೈಎಸ್‌ಆರ್ ಕಾಂಗ್ರೆಸ್‌ನ ರಾಜ್ಯಸಭಾ ಸಂಸದ ಬೀದ ಮಸ್ತಾನ್ ರಾವ್ ಅವರ ಪುತ್ರಿ ಬೀದ ಮಾಧುರಿ ಅವರನ್ನು ಬಂಧಿಸಲಾಯಿತು. ನಂತರ ಜಾಮೀನಿನ ಮೇಲೆ ಅವರನ್ನು ಬಿಡುಗಡೆ ಮಾಡಲಾಗಿದೆ ಎಂದು ಪೊಲೀಸರು ಬುಧವಾರ ತಿಳಿಸಿದ್ದಾರೆ.

ಕಾರು ಚಾಲನೆ ಮಾಡುತ್ತಿದ್ದ ಮಾಧುರಿ ಅವರು ಚೆನ್ನೈನ ಬೆಸೆಂಟ್ ನಗರದ ಡೌನ್‌ಟೌನ್ ರಸ್ತೆಯ ಪಾದಚಾರಿ ಮಾರ್ಗದಲ್ಲಿ ಮಲಗಿದ್ದ ವ್ಯಕ್ತಿಯ ಮೇಲೆ ಕಾರು ಹರಿಸಿದ್ದಾರೆ. ಗಂಭೀರವಾಗಿ ಗಾಯಗೊಂಡಿದ್ದ ವ್ಯಕ್ತಿಯು ಆಸ್ಪತ್ರೆಯಲ್ಲಿ ಸಾವಿಗೀಡಾಗಿದ್ದಾರೆ.

ಬಳಿಕ ಕಾರಿನಲ್ಲಿ ತನ್ನೊಂದಿಗೆ ಇದ್ದ ಇನ್ನೊಬ್ಬ ಮಹಿಳೆಯೊಂದಿಗೆ ಮಾಧುರಿ ಸ್ಥಳದಿಂದ ಪರಾರಿಯಾಗಿದ್ದಾರೆ ಎನ್ನಲಾಗಿದೆ. ಜೂನ್ 17ರ ರಾತ್ರಿ ಈ ಘಟನೆ ನಡೆದಿದೆ.

ಮೃತ ವ್ಯಕ್ತಿಯನ್ನು ಸೂರ್ಯ (21) ಎಂದು ಗುರುತಿಸಲಾಗಿದ್ದು, ಆತ ಪೇಂಟರ್ ಆಗಿದ್ದರು ಎಂದು ತಿಳಿದುಬಂದಿದೆ.

ಇಬ್ಬರು ಉಗ್ರರ ಹತ್ಯೆ

ಶ್ರೀನಗರ (ಪಿಟಿಐ): ಜಮ್ಮು–ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯಲ್ಲಿ ಬುಧವಾರ ನಡೆದ ಎನ್‌ಕೌಂಟರ್‌ನಲ್ಲಿ ಭದ್ರತಾ ಪಡೆಗಳು ಇಬ್ಬರು ಉಗ್ರರನ್ನು ಹೊಡೆದುರುಳಿಸಿವೆ. ಈ ಘಟನೆಯಲ್ಲಿ ಇಬ್ಬರು ಯೋಧರಿಗೆ ಗಾಯಗಳಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜಿಲ್ಲೆಯ ವಾಟರ್‌ಗಾಮ್ ಪ್ರದೇಶದಲ್ಲಿ ಉಗ್ರರು ಅಡಗಿದ ವಿಷಯ ತಿಳಿದ ನಂತರ, ಭದ್ರತಾ ಪಡೆಗಳು ಶೋಧ ಕಾರ್ಯ ಆರಂಭಿಸಿ, ಪ್ರದೇಶವನ್ನು ಸುತ್ತುವರಿದವು. ಈ ವೇಳೆ, ಉಗ್ರರು ಭದ್ರತಾ ಪಡೆಗಳನ್ನು ಗುರಿಯಾಗಿಸಿ ಗುಂಡಿನ ದಾಳಿ ನಡೆಸಿದ್ದಾರೆ. ಇದಕ್ಕೆ ಪ್ರತಿಯಾಗಿ ಯೋಧರು ದಾಳಿ ನಡೆಸಿದಾಗ, ಗುಂಡಿನ ಚಕಮಕಿ ನಡೆದಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಪವನ್ ಅಧಿಕಾರ ಸ್ವೀಕಾರ

ವಿಜಯವಾಡ (ಪಿಟಿಐ): ನಟ, ಜನಸೇನಾ ಮುಖ್ಯಸ್ಥ ಪವನ್ ಕಲ್ಯಾಣ್ ಅವರು ಆಂಧ್ರಪ್ರದೇಶದ ಉಪಮುಖ್ಯಮಂತ್ರಿಯಾಗಿ ಬುಧವಾರ ಅಧಿಕಾರ ಸ್ವೀಕರಿಸಿದರು.

ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ, ಪರಿಸರ, ಅರಣ್ಯ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆಗಳನ್ನು ಪವನ್ ಕಲ್ಯಾಣ್ ಹೊಂದಿದ್ದಾರೆ. ಗ್ರಾಮೀಣ ನೀರು ಪೂರೈಕೆ ಖಾತೆಯ ಹೊಣೆಯನ್ನೂ ಅವರೇ ಹೊತ್ತಿದ್ದಾರೆ.


ಆಂಧ್ರಪ್ರದೇಶದ ಪೀಠಾಪುರಂ ವಿಧಾನಸಭಾ ಕ್ಷೇತ್ರದ ಶಾಸಕರಾಗಿ ಆಯ್ಕೆಯಾಗಿರುವ ಕಲ್ಯಾಣ್, ಮೊದಲ ಬಾರಿ ಸಚಿವರಾಗಿದ್ದಾರೆ.

ಕಾಂಗ್ರೆಸ್ ಕಳಪೆ ಸಾಧನೆ ಸತ್ಯಶೋಧನೆಗೆ ಮಿಸ್ತ್ರಿ ಸಮಿತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭಾ ಚುನಾವಣೆಯಲ್ಲಿ ಪಕ್ಷವು ಎಂಟು ರಾಜ್ಯಗಳಲ್ಲಿ ಕಳಪೆ ಸಾಧನೆ ಮಾಡಿರುವ ಹಿನ್ನೆಲೆಯಲ್ಲಿ ಪರಿಶೀಲನೆ ನಡೆಸಲು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸತ್ಯಶೋಧನಾ ಸಮಿತಿಗಳನ್ನು ರಚಿಸಿದ್ದಾರೆ.

ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿರುವ ಕರ್ನಾಟಕ, ತೆಲಂಗಾಣ, ಹಿಮಾಚಲ ಪ್ರದೇಶ ಹಾಗೂ ಮಧ್ಯಪ್ರದೇಶ, ಛತ್ತೀಸಗಡ, ದೆಹಲಿ, ಉತ್ತರಾಖಂಡ, ಒಡಿಶಾ ರಾಜ್ಯಗಳಿಗೆ ಸಮಿತಿ ರಚಿಸಲಾಗಿದೆ. ಕರ್ನಾಟಕದ ಸಮಿತಿಯಲ್ಲಿ ಮಧುಸೂದನ್ ಮಿಸ್ತ್ರಿ, ಗೌರವ್ ಗೊಗೊಯ್ ಹಾಗೂ ಹಿಬಿ ಇಡೆನ್ ಇದ್ದಾರೆ. ಛತ್ತೀಸಗಢ ಸಮಿತಿಯಲ್ಲಿ ಹಿರಿಯ ಮುಖಂಡ ಎಂ. ವೀರಪ್ಪ ಮೊಯಿಲಿ ಇದ್ದಾರೆ.



ಮಧುಸೂದನ್ ಮಿಸ್ತ್ರಿ

ಕರ್ನಾಟಕದಲ್ಲಿ ಕನಿಷ್ಠ 17 ಕ್ಷೇತ್ರಗಳಲ್ಲಿ ಪಕ್ಷ ಗೆಲುವು ಸಾಧಿಸಲಿದೆ ಎಂದು ಹೈಕಮಾಂಡ್ ನಿರೀಕ್ಷೆ ಇಟ್ಟುಕೊಂಡಿತ್ತು. ಆದರೆ, 9 ಕ್ಷೇತ್ರಗಳಲ್ಲಿ ಮಾತ್ರ ಜಯ ಗಳಿಸಿತ್ತು. ಕಲ್ಯಾಣ ಕರ್ನಾಟಕ ಭಾಗದಲ್ಲಿ ಉತ್ತಮ ಸಾಧನೆ ಮಾಡಿದ್ದ ಪಕ್ಷವು ಹಳೆ ಮೈಸೂರು ಭಾಗದಲ್ಲಿ ಕಳಪೆ ಪ್ರದರ್ಶನ ನೀಡಿತ್ತು. ಪಕ್ಷದ ಕಳಪೆ ಸಾಧನೆ ಬಗ್ಗೆ ಮಲ್ಲಿಕಾರ್ಜುನ ಖರ್ಗೆ ಹಾಗೂ ಪಕ್ಷದ ನಾಯಕ ರಾಹುಲ್ ಗಾಂಧಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಪ್ರಾಬಲ್ಯ ಹೊಂದಿರುವ ಭಾಗಗಳಲ್ಲೇ ಪಕ್ಷಕ್ಕೆ ಹಿನ್ನಡೆಯಾಗಿರುವುದನ್ನು ಹೈಕಮಾಂಡ್ ಗಂಭೀರವಾಗಿ ಪರಿಗಣಿಸಿದೆ.

ಬಿಜೆಪಿ ಸೇರಿದ ಕಾಂಗ್ರೆಸ್ ಶಾಸಕಿ ಕಿರಣ್

ಚಂಡೀಗಢ (ಪಿಟಿಐ): ಹರಿಯಾಣದ ಕಾಂಗ್ರೆಸ್ ಶಾಸಕಿ ಕಿರಣ್ ಚೌಧರಿ ಮತ್ತು ಅವರ ಮಗಳು ಶ್ರುತಿ ಚೌಧರಿ ಬುಧವಾರ ಬಿಜೆಪಿ ಸೇರಿದರು. ಈ ಮೂಲಕ ಹರಿಯಾಣದ ಮೂವರು ಪ್ರಸಿದ್ಧ 'ಲಾಲ್' ಕುಟುಂಬಗಳ ಹಲವು ಬಂಧುಗಳು ಬಿಜೆಪಿ ತೆಕ್ಕೆಗೆ ಸೇರಿಕೊಂಡಂತಾಗಿದೆ.

ಭಿವಾನಿ ಜಿಲ್ಲೆಯ ತೋಷಮ್‌ನ ಶಾಸಕಿ ಆಗಿರುವ ಕಿರಣ್ ಅವರು ಹರಿಯಾಣದ ಮಾಜಿ ಮುಖ್ಯಮಂತ್ರಿ ಬನ್ಸಿ ಲಾಲ್ ಅವರ ಸೊಸೆ. ಅವರ ಪುತ್ರಿ ಶ್ರುತಿ ಚೌಧರಿ ಅವರು ಮಾಜಿ ಸಂಸದೆ ಹಾಗೂ ಹರಿಯಾಣದ ಕಾಂಗ್ರೆಸ್ ಘಟಕದ ಕಾರ್ಯಾಧ್ಯಕ್ಷರಾಗಿದ್ದರು.

ಕಾಂಗ್ರೆಸ್‌ನ ಪ್ರಾಥಮಿಕ ಸದಸ್ಯತ್ವಕ್ಕೆ ಮಂಗಳವಾರವಷ್ಟೇ ರಾಜೀನಾಮೆ ನೀಡಿದ್ದ ಇಬ್ಬರು ನಾಯಕರು ಬುಧವಾರ ದೆಹಲಿಯಲ್ಲಿ ಬಿಜೆಪಿ ಸೇರ್ಪಡೆಯಾದರು.

ಒಡಿಶಾ: ಮಾಜಿ ಸಿ. ಎಂ ಪಟ್ನಾಯಕ್ ವಿಪಕ್ಷ ನಾಯಕ

ಭುವನೇಶ್ವರ (ಪಿಟಿಐ): ತಾವು ಒಡಿಶಾ ವಿಧಾನಸಭೆಯ ವಿಪಕ್ಷ ನಾಯಕರಾಗುವುದಾಗಿ ಮಾಜಿ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಬುಧವಾರ ತಿಳಿಸಿದ್ದಾರೆ.



'ಬಿಜೆಡಿಯ ಶಾಸಕಾಂಗ ಪಕ್ಷದ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ನಾವು ಬಿಜೆಡಿ ಶಾಸಕರ ಸಭೆ ನಡೆಸಿದೆವು. ಅವರು ನನ್ನನ್ನು ವಿಪಕ್ಷ ನಾಯಕ ಹಾಗೂ ಬಿಜೆಡಿ ಶಾಸಕಾಂಗ ಪಕ್ಷದ ನಾಯಕನನ್ನಾಗಿ ಆಯ್ಕೆಮಾಡಿದ್ದಾರೆ' ಎಂದು ಪಟ್ನಾಯಕ್ ತಿಳಿಸಿದರು.

ಪ್ರತಿಪಕ್ಷಗಳ ಉಪನಾಯಕರನ್ನಾಗಿ ಹಿರಿಯ ಶಾಸಕ ಪ್ರಸನ್ನ ಆಚಾರ್ಯ, ಸದನದಲ್ಲಿ ವಿಪಕ್ಷದ ಮುಖ್ಯ ಸಚೇತಕರಾಗಿ ಮಾಜಿ ಸಭಾಪತಿ ಪ್ರಮಿಳಾ ಮಲಿಕ್ ಅವರು ನೇಮಕಗೊಂಡಿದ್ದಾರೆ. ಪ್ರತಾಪ್ ಕೇಶರಿ ದೇಬ್ ಅವರನ್ನು ವಿಪಕ್ಷದ ಉಪ ಮುಖ್ಯ ಸಚೇತಕರನ್ನಾಗಿ ನೇಮಿಸಲಾಗಿದೆ.

ಕಳ್ಳ ಎಂದು ಭಾವಿಸಿ ಹತ್ಯೆ ನಡೆದಿರುವ ಆರೋಪ–6 ಮಂದಿ ಪೊಲೀಸರ ವಶಕ್ಕೆ

ಮುಸ್ಲಿಂ ಯುವಕನ ಹತ್ಯೆ ಆರೋಪ: ಅಲಿಗಢ ಉದ್ವಿಗ್ನ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಮಾಮು–ಭಾಂಜಾ ಪ್ರದೇಶದಲ್ಲಿ ಯುವಕನ ಹಿಡಿದು ಥಳಿತ
- ಯುವಕನ ಹತ್ಯೆ ಖಂಡಿಸಿ ಉದ್ರಿಕ್ತರಿಂದ ಕಲ್ಲು ತೂರಾಟ ನಡೆಸಿ ಪ್ರತಿಭಟನೆ
- ತಪ್ಪಿತಸ್ಥರನ್ನು ಕೂಡಲೇ ಬಂಧಿಸುವಂತೆ ಆಗ್ರಹ

ಲಖನೌ: ಕಳ್ಳ ಎಂದು ಭಾವಿಸಿ, ಗುಂಪೊಂದು ಮುಸ್ಲಿಂ ಯುವಕನನ್ನು ಹತ್ಯೆ ಮಾಡಿದೆ ಎನ್ನಲಾಗಿದೆ. ಇದರಿಂದ, ಕೋಮು ವಿಚಾರವಾಗಿ ಸೂಕ್ಷ್ಮವಾಗಿರುವ ಉತ್ತರ ಪ್ರದೇಶದ ಅಲಿಗಢ ಪಟ್ಟಣದಲ್ಲಿ ಮಂಗಳವಾರ ರಾತ್ರಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು.

ಮೃತನನ್ನು 35 ವರ್ಷದ ಫರೀದ್ ಅಲಿಯಾಸ್ ಔರಂಗಜೇಬ್ ಎಂದು ಗುರುತಿಸಲಾಗಿದೆ.

ಯುವಕನ ಹತ್ಯೆಯನ್ನು ಖಂಡಿಸಿ ಪ್ರತಿಭಟನೆ ನಡೆಸುತ್ತಿದ್ದ ಉದ್ರಿಕ್ತರ ಗುಂಪು, ಭಾರಿ ಪ್ರಮಾಣದಲ್ಲಿ ಕಲ್ಲು ತೂರಾಟ ನಡೆಸಿತು. ತಪ್ಪಿತಸ್ಥರನ್ನು ಬಂಧಿಸುವಂತೆ ಆಗ್ರಹಿಸಿ, ರಸ್ತೆ ಮೇಲೆ ಕುಳಿತು ಪ್ರತಿಭಟಿಸಿತು ಎಂದು ಪೊಲೀಸ್ ಅಧಿಕಾರಿಗಳು ಹೇಳಿದ್ದಾರೆ.

ಘಟನೆಗೆ ಸಂಬಂಧಿಸಿದ್ದು ಎನ್ನಲಾದ ವಿಡಿಯೊ ಪರಿಶೀಲಿಸಿದ ನಂತರ, ವ್ಯಾಪಾರಿಯೊಬ್ಬರ ಕುಟುಂಬದ ಸದಸ್ಯರು ಸೇರಿದಂತೆ 6 ಜನರನ್ನು ವಶಕ್ಕೆ ಪಡೆಯಲಾಗಿದೆ ಎಂದು ಮೂಲಗಳು ಹೇಳಿವೆ.

'ಮಂಗಳವಾರ ರಾತ್ರಿ ಪಟ್ಟಣದ ಮಾಮು–ಭಾಂಜಾ ಪ್ರದೇಶದಲ್ಲಿರುವ ವ್ಯಾಪಾರಿಯ ಮನೆ ಪ್ರವೇಶಿಸಲು ಯತ್ನಿಸಿದ ವೇಳೆ ಕೆಲವರು ಫರೀದ್‌ನನ್ನು ಹಿಡಿದಿದ್ದಾರೆ. ಆತನನ್ನು ಕಳ್ಳ ಎಂಬುದಾಗಿ ಭಾವಿಸಿದ ಜನರು ಬಡಿಗೆಗಳಿಂದ ಹೊಡೆದಿದ್ದಾರೆ ಎನ್ನಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಜನರ ಗುಂಪು ಫರೀದ್‌ಗೆ ಒದೆಯುತ್ತಿರುವ ಹಾಗೂ ಗುದ್ದುತ್ತಿರುವ ದೃಶ್ಯಗಳು ವಿಡಿಯೊದಲ್ಲಿದ್ದು, ಇದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಸುದ್ದಿ ತಿಳಿದು ಸ್ಥಳಕ್ಕೆ ಬಂದ ಪೊಲೀಸರು ಫರೀದ್‌ನನ್ನು ಆಸ್ಪತ್ರೆಗೆ ಕರೆದೊಯ್ದಿದ್ದು, ಆತ ಮೃತಪಟ್ಟಿದ್ದಾಗಿ ವೈದ್ಯರು ಘೋಷಿಸಿದ್ದಾರೆ.

ಈ ಸುದ್ದಿ ಹಬ್ಬುತ್ತಿದ್ದಂತೆಯೇ, ಅಲಿಗಢ ಮುಸ್ಲಿಂ ವಿಶ್ವವಿದ್ಯಾಲಯ (ಎಎಂಯು) ವಿದ್ಯಾರ್ಥಿಗಳ ನಾಯಕರು ಆಸ್ಪತ್ರೆಗೆ ಧಾವಿಸಿದ್ದಾರೆ. ದೊಡ್ಡ ಸಂಖ್ಯೆಯಲ್ಲಿ ಜನರು ಆಸ್ಪತ್ರೆ ಮುಂದೆ ಸೇರಿ, ಘಟನೆ ಖಂಡಿಸಿ ಪ್ರತಿಭಟನೆ ನಡೆಸಿದ್ದಾರೆ.

ವ್ಯಾಪಾರಿಗಳಿಂದ ಪ್ರತಿಭಟನೆ

ಘಟನೆಗೆ ಸಂಬಂಧಿಸಿ, ವ್ಯಾಪಾರಿಯೊಬ್ಬರ ಕುಟುಂಬದ ಸದಸ್ಯರು ಸೇರಿದಂತೆ 6 ಜನರನ್ನು ವಶಕ್ಕೆ ತೆಗೆದುಕೊಂಡ ಪೊಲೀಸರ ಕ್ರಮವನ್ನು ಖಂಡಿಸಿ, ಪಟ್ಟಣದ ವರ್ತಕರು ಬಿಜೆಪಿ ನಾಯಕರ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದರು.

ತಮ್ಮ ಅಂಗಡಿಗಳನ್ನು ಮುಚ್ಚಿದ ವ್ಯಾಪಾರಿಗಳು, ಬಂಧಿತರನ್ನು ಕೂಡಲೇ ಬಿಡುಗಡೆ ಮಾಡುವಂತೆ ಒತ್ತಾಯಿಸಿ ರಸ್ತೆ ತಡೆದರು.

'ಘಟನೆಗೆ ಸಂಬಂಧಿಸಿ ಪ್ರಕರಣ ದಾಖಲಿಸಿದ್ದು, ತನಿಖೆ ನಡೆಯುತ್ತಿದೆ. ಪಟ್ಟಣದ ಸೂಕ್ಷ್ಮ ಪ್ರದೇಶಗಳಲ್ಲಿ ವ್ಯಾಪಕ ಬಂದೋಬಸ್ತ್ ಹಾಕಲಾಗಿದೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸೂಪರ್ ಎಂಟರ ಘಟ್ಟ • ಭಾರತಕ್ಕೆ ಅಫ್ಗನ್ ಸವಾಲು • ಕುಲದೀಪ್ ಯಾದವ್‌ಗೆ ಸ್ಥಾನ ಸಾಧ್ಯತೆ

ಕೆರಿಬಿಯನ್‌ನಲ್ಲಿ ವಿರಾಟ್ ಅಲೆ ನಿರೀಕ್ಷೆ

ಬ್ರಿಜ್‌ಟೌನ್, ಬಾರ್ಬಡೋಸ್ (ಪಿಟಿಐ): ವಿರಾಟ್ ಕೊಹ್ಲಿ ತಮ್ಮ ಲಯಕ್ಕೆ ಮರಳುವರೇ? ಸ್ಪಿನ್ನರ್ ಕುಲದೀಪ್ ಯಾದವ್ ಕಣಕ್ಕಿಳಿದರೆ ಮೋಡಿ ಮಾಡುವರೇ?

ಎಂಬ ಪ್ರಶ್ನೆಗಳೊಂದಿಗೆ ಭಾರತ ಕ್ರಿಕೆಟ್ ತಂಡವು ಟಿ20 ವಿಶ್ವಕಪ್ ಟೂರ್ನಿಯ ಸೂಪರ್ 8ರ ಹಂತದ ಅಭಿಯಾನ ಗುರುವಾರ ಆರಂಭಿಸ ಲಿದೆ. ಈ ಹಂತದ ಮೊದಲ ಪಂದ್ಯದಲ್ಲಿ ರೋಹಿತ್ ಶರ್ಮಾ ಬಳಗವು ಅಪಾರ ಛಲದ ಆಟಗಾರರಿರುವ ಅಫ್ಗಾನಿಸ್ತಾನ ತಂಡವನ್ನು ಎದುರಿಸಲಿದೆ.

ಎ ಗುಂಪಿನ ಪಂದ್ಯಗಳಲ್ಲಿ ವಿರಾಟ್ ಅವರು ಬ್ಯಾಟಿಂಗ್‌ನಲ್ಲಿ ಸತತ ವೈಫಲ್ಯ ಅನುಭವಿಸಿದ್ದರು. ಎರಡಂಕಿ ಮೊತ್ತ ಗಳಿಸಿರಲಿಲ್ಲ. 35 ವರ್ಷದ 'ಚೇಸಿಂಗ್ ಮಾಸ್ಟರ್' ಲಯಕ್ಕೆ ಮರಳಿದರೆ ತಂಡದ ಶಕ್ತಿ ಇಮ್ಮಡಿಸಲಿದೆ. ವೆಸ್ಟ್ ಇಂಡೀಸ್‌ನ ಕ್ರೀಡಾಂಗಣಗಳಲ್ಲಿ ನಡೆಯಲಿರುವ ಎಂಟರ ಘಟ್ಟದ ಪಂದ್ಯಗಳಲ್ಲಿ ಅವರು ಲಯಕ್ಕೆ ಮರಳುವ ಭರವಸೆ ಇದೆ. ಕಳೆದ 12 ತಿಂಗಳುಗಳಲ್ಲಿ ಉತ್ತಮ ಸ್ಪಿನ್ನರ್ ಎಂದು ಸಾಬೀತುಪಡಿಸಿಕೊಂಡಿರುವ ಕುಲದೀಪ್ ಯಾದವ್ ಅವರಿಗೆ ಸ್ಥಾನ ನೀಡಲು ವೇಗದ ಬೌಲರ್ ಒಬ್ಬರಿಗೆ ವಿಶ್ರಾಂತಿ ನೀಡುವ ಸಾಧ್ಯತೆ ಇದೆ. ಮೊಹಮ್ಮದ್ ಸಿರಾಜ್ ಅಥವಾ ಅರ್ಷದೀಪ್ ಸಿಂಗ್ ಅವರಲ್ಲಿ ಒಬ್ಬರು ಸ್ಥಾನ ಬಿಟ್ಟುಕೊಡಬೇಕಾಗಬಹುದು.

ಕಣಕ್ಕಿಳಿಯುವ 11ರ ಬಳಗದ ಸಂಯೋಜನೆಯನ್ನು ಬಹಳ ಜತನದಿಂದ ಮಾಡಲಾಗುತ್ತಿದೆ. ನಾಲ್ವರು ಆಲ್‌ರೌಂಡರ್‌ಗಳಾದ ಹಾರ್ದಿಕ್ ಪಾಂಡ್ಯ, ಶಿವಂ ದುಬೆ, ಅಕ್ಷರ್ ಪಟೇಲ್ ಮತ್ತು ರವೀಂದ್ರ ಜಡೇಜ ಅವರೆಲ್ಲರಿಗೂ ಸ್ಥಾನ ಲಭಿಸುವುದು ಬಹುತೇಕ ಖಚಿತವಾಗಿದೆ. ಇದರಿಂದಾಗಿ ಬ್ಯಾಟಿಂಗ್ ಬಲವು 8ನೇ ಕ್ರಮಾಂಕದವರೆಗೂ ವಿಸ್ತರಿಸಲಿದೆ.

ನ್ಯೂಯಾರ್ಕ್‌ನಲ್ಲಿ ನಡೆದಿದ್ದ ಪಂದ್ಯಗಳಲ್ಲಿ ರೋಹಿತ್ ಬಳಗದ ಈ ತಂತ್ರಗಾರಿಕೆ ಫಲಿಸಿತ್ತು. ಅಲ್ಲಿಯ ಪಿಚ್‌ಗಳು ಬೌಲರ್‌ಸ್ನೇಹಿಯಾಗಿದ್ದ ಕಾರಣಕ್ಕೆ ತಂಡ ಯಶಸ್ವಿಯಾಗಿತ್ತು. ಕೆರಬಿಯನ್ ದ್ವೀಪದ ತಾಣಗಳಲ್ಲಿ ಸ್ಪಿನ್ನರ್‌ಗಳು ಮಿಂಚುವ ಸಾಧ್ಯತೆ ಹೆಚ್ಚಿದೆ. ಭಾರತ ತಂಡದ ಕಳೆದೆರಡು ನೆಟ್ಸ್ ಪ್ರಾಕ್ಟಿಸ್ ಅವಧಿಗಳನ್ನು ನೋಡಿದಾಗ ಕುಲದೀಪ್ ಅವರನ್ನು ಆಡಿಸುವುದು ಖಚಿತವೆಂದೇ ಹೇಳಬಹುದು.

ಇನಿಂಗ್ಸ್‌ನ ಮಧ್ಯಮ ಮತ್ತು ಕೊನೆಯ ಹಂತದ ಓವರ್‌ಗಳಲ್ಲಿ ಸಿಕ್ಸರ್‌ಗಳನ್ನು ಸಿಡಿಸಲು ಶಿವಂ ದುಬೆ ಅವರಿಗೆ ಅವಕಾಶ ನೀಡಲಾಗಿದೆ. ಐಪಿಎಲ್‌ನಲ್ಲಿ ಅವರು ಇಂತಹದೇ ಪಾತ್ರವನ್ನು ಅಚ್ಚುಕಟ್ಟಾಗಿ ನಿಭಾಯಿಸಿದ್ದರು. ಅವರಲ್ಲದೇ ಸೂರ್ಯಕುಮಾರ್‌ಯಾದವ್‌ಕೂಡತಮ್ಮಸಾಮರ್ಥ್ಯಕ್ಕೆ ಅನುಗುಣವಾಗಿ ಆಡಿದರೆ ಎದುರಾಳಿ ಬೌಲರ್‌ಗಳಿಗೆ ಕಠಿಣ ಸವಾಲೊಡ್ಡಬಹುದು.

ಎದುರಾಳಿ ಅಫ್ಗನ್ ಬಳಗವನ್ನು ಯಾವುದೇ ಹಂತದಲ್ಲಿಯೂ ಕಡೆಗಣಿಸುವಂತಿಲ್ಲ. ಅನುಭವಿ ಸ್ಪಿನ್ನರ್ ರಶೀದ್ ಖಾನ್ ನಾಯಕತ್ವದ ತಂಡವು ಗುಂಪು ಹಂತದಲ್ಲಿ ನ್ಯೂಜಿಲೆಂಡ್‌ನಂತಹ ಅನುಭವಿ ತಂಡಕ್ಕೆ ಸೋಲಿನ ಕಹಿ ಉಣಿಸಿತ್ತು. ಒಟ್ಟು ನಾಲ್ಕರಲ್ಲಿ ಮೂರು ಪಂದ್ಯಗಳನ್ನು ಗೆದ್ದು ಈ ಹಂತಕ್ಕೆ ಬಂದಿದೆ. ಸಾಂಘಿಕ ಹೋರಾಟ ಮಾಡುವ ಸಾಮರ್ಥ್ಯ ಈ ತಂಡಕ್ಕೆ ಇದೆ. ಬ್ಯಾಟರ್ ಗುಲ್ಬದಿನ್ ನಬಿ, ಬೌಲರ್ ಫಜಲ್‌ಹಕ್ ಫರೂಕಿ, ನವೀನ್ ಉಲ್ ಹಕ್ ಹಾಗೂ ರೆಹಮಾನುಲ್ಲಾ ಗುರ್ಬಾಜ್ ಅವರು ತಮ್ಮ ಆಟದ ಲಯವನ್ನು ಈಗಿರುವಂತೆಯೇ ಮುಂದುವರಿಸಿದರೆ ಭಾರತ ತಂಡದ ಹಾದಿ ಕಠಿಣವಾಗುವುದರಲ್ಲಿ ಅನುಮಾನವೇ ಇಲ್ಲ.



ಅಫ್ಗಾನಿಸ್ತಾನ ತಂಡದ ನಾಯಕ ರಶೀದ್ ಖಾನ್

ಬಲಾಬಲ

ಪಂದ್ಯ	8
ಭಾರತ ಜಯ	7
ಫಲಿತಾಂಶವಿಲ್ಲ	1



ರೋಹಿತ್ ಶರ್ಮಾ

ಮುಖ್ಯಾಂಶಗಳು

- ಎಂಟರ ಘಟ್ಟದಲ್ಲಿ ಮೂರು ಪಂದ್ಯ ಆಡಲಿರುವ ಭಾರತ
- ನಾಲ್ವರು ಆಲ್‌ರೌಂಡರ್‌ಗಳು ಕಣಕ್ಕಿಳಿಯುವ ಸಾಧ್ಯತೆ
- ಜಸ್‌ಪ್ರೀತ್ ಬೂಮ್ರಾ ಮೇಲೆ ನಿರೀಕ್ಷೆಯ ಭಾರ


ತಂಡಗಳು

ಭಾರತ: ರೋಹಿತ್ ಶರ್ಮಾ (ನಾಯಕ), ಹಾರ್ದಿಕ್ ಪಾಂಡ್ಯ, ಯಶಸ್ವಿ ಜೈಸ್ವಾಲ್, ವಿರಾಟ್ ಕೊಹ್ಲಿ, ಸೂರ್ಯಕುಮಾರ್ ಯಾದವ್, ರಿಷಭ್ ಪಂತ್, ಸಂಜು ಸ್ಯಾಮ್ಸನ್, ಶಿವಂ ದುಬೆ, ರವೀಂದ್ರ ಜಡೇಜ, ಅಕ್ಷರ್ ಪಟೇಲ್, ಕುಲದೀಪ್ ಯಾದವ್, ಯಜುವೇಂದ್ರ ಚಾಹಲ್, ಅರ್ಷದೀಪ್ ಸಿಂಗ್, ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಸಿರಾಜ್.
ಅಫ್ಗಾನಿಸ್ತಾನ: ರಶೀದ್ ಖಾನ್ (ನಾಯಕ), ರೆಹಮಾನುಲ್ಲಾ ಗುರ್ಬಾಜ್ (ವಿಕೆಟ್‌ಕೀಪರ್), ಇಬ್ರಾಹಿಂ ಝುದ್ರಾನ್, ಗುಲ್ಬದಿನ್ ನೈಬ್, ಅಜ್ಮತ್‌ವುಲ್ಲಾ ಒಮರ್‌ಝೈ, ಮೊಹಮ್ಮದ್ ನಬಿ, ನಜೀಬುಲ್ಲಾ ಝುದ್ರಾನ್, ಕರೀಂ ಜನತ್, ನೂರ್ ಅಹಮದ್, ನವೀನ್ ಉಲ್ ಹಕ್, ಫಜಲ್‌ಹಕ್ ಫರೂಕಿ, ಹಜ್ರತ್‌ಉಲ್ಲಾ ಝುಝೈ, ಫರೀದ್ ಅಹಮದ್ ಮಲಿಕ್, ಮೊಹಮ್ಮದ್ ಇಶಾಕ್, ನಾಂಗೆಲಿಯಾ ಖರೋಟೆ.

ಇಂದಿನ ಪಂದ್ಯಗಳು

ಇಂಗ್ಲೆಂಡ್	Vs ವೆಸ್ಟ್ ಇಂಡೀಸ್	ಬೆಳಿಗ್ಗೆ 6
ಅಫ್ಗಾನಿಸ್ತಾನ	Vs ಭಾರತ	ರಾತ್ರಿ 8

ಲೈವ್: ಸ್ಟಾರ್ ಸ್ಪೋರ್ಟ್ಸ್, ಡಿಡಿ ಸ್ಪೋರ್ಟ್ಸ್, ಹಾಟ್ ಸ್ಟಾರ್



ಬೀಚ್ ವಾಲಿಬಾಲ್ ಆಡಿದ ವಿರಾಟ್ ಕೊಹ್ಲಿ –ಪಿಟಿಐ ಚಿತ್ರಗಳು

ದಕ್ಷಿಣ ಆಫ್ರಿಕಾಕ್ಕೆ ಮಣಿದ ಅಮೆರಿಕ

ರಬಾಡ ಮಿಂಚು • ಡಿ ಕಾಕ್ ಅರ್ಧಶತಕ • ಗೌಸ್ ಹೋರಾಟ

ನಾರ್ತ್ ಸೌಂಡ್ (ಆ್ಯಂಟಿಗಾ), (ಪಿಟಿಐ): ಕಗಿಸೊ ರಬಾಡ (18ಕ್ಕೆ 3) ಅವರ ಪರಿಣಾಮಕಾರಿ ಬೌಲಿಂಗ್ ದಾಳಿ ಮತ್ತು ಕ್ವಿಂಟನ್ ಡಿ ಕಾಕ್ ಅವರ ಬಿರುಸಿನ ಅರ್ಧ ಶತಕದ (74, 40 ಎಸೆತ) ನೆರವಿನಿಂದ ದಕ್ಷಿಣ ಆಫ್ರಿಕಾ ತಂಡವು ಬುಧವಾರ ಟಿ20 ವಿಶ್ವಕಪ್ ಸೂಪರ್ ಎಂಟರ ಹಂತದ ಪಂದ್ಯದಲ್ಲಿ ಅಮೆರಿಕ ತಂಡವನ್ನು 18 ರನ್‌ಗಳಿಂದ ಮಣಿಸಿತು.

ಸ್ಪಿನ್ ಸ್ನೇಹಿ ಪಿಚ್‌ನಲ್ಲಿ ಡಿ ಕಾಕ್ ಅಮೆರಿಕ ಬೌಲರ್‌ಗಳನ್ನು ವಿಶ್ವಾಸದಿಂದ ಎದುರಿಸಿ ಈ ಟೂರ್ನಿಯಲ್ಲಿ ತಮ್ಮ ಮೊದಲ ಅರ್ಧಶತಕ ಗಳಿಸಿದರು. ದಕ್ಷಿಣ ಆಫ್ರಿಕಾ 20 ಓವರುಗಳಲ್ಲಿ 4 ವಿಕೆಟ್‌ಗೆ 194 ರನ್ ಹೊಡೆಯಿತು.

ಈ ಬೃಹತ್ ಗುರಿಯನ್ನು ಬೆನ್ನಟ್ಟಿದ ಅಮೆರಿಕ ನಿರೀಕ್ಷೆಗೆ ಮೀರಿದ ಹೋರಾಟ ತೋರಿತು. ಆ ಮೂಲಕ ಸುಲಭವಾಗಿ ಮಣಿಯುವ ತಂಡ ತಾನಲ್ಲ ಎಂಬುದನ್ನು ತೋರಿಸಿಕೊಟ್ಟಿತು. ತಂಡದ ಪರ ಆರಂಭಿಕ ಆಟಗಾರ ಆ್ಯಂಡ್ರೀಸ್ ಗೌಸ್ (ಔಟಾಗದೇ 80; 47ಎ, 4x5, 6x5) ಏಕಾಂಗಿ ಹೋರಾಟ ನಡೆಸಿದರು. ಅವರು ಸ್ಟೀವನ್ ಟೇಲರ್ (24; 14ಎ) ಅವರೊಂದಿಗೆ ತಂಡಕ್ಕೆ ಉತ್ತಮ ಆರಂಭ ಒದಗಿಸಿದರು. ಆದರೆ, ಮಧ್ಯಮ ಕ್ರಮಾಂಕದಲ್ಲಿ ತಂಡವು ಕುಸಿತಕ್ಕೆ ಒಳಗಾಯಿತು. 23 ರನ್‌ಗಳ ಅಂತರದಲ್ಲಿ ಪ್ರಮುಖ ನಾಲ್ಕು ವಿಕೆಟ್‌ಗಳು ಪತನವಾದವು.

ಆದರೆ, ಗೌಸ್ ಮತ್ತು ಹರ್ಮೀತ್ ಸಿಂಗ್ (38; 22ಎ) ಆರನೇ ವಿಕೆಟ್‌ಗೆ 91 ರನ್ (43ಎ) ಸೇರಿಸಿ ಗೆಲುವಿನ ಆಸೆಯನ್ನು ಚಿಗುರಿಸಿದರು. ಕೊನೆಯ ಮೂರು ಓವರ್‌ಗಳಲ್ಲಿ ಗೆಲುವಿಗೆ 50 ರನ್ ಬೇಕಿತ್ತು. ಈ ಹಂತದಲ್ಲಿ ತಂಬ್ರೇಜ್ ಶಮ್ಸಿ ಅವರು ಹಾಕಿದ 18ನೇ ಓವರ್‌ನಲ್ಲಿ ಗೌಸ್ ಮೂರು ಸಿಕ್ಸರ್‌ಗಳೊಂದಿಗೆ 22 ರನ್ ಸೂರೆಗೈದರು. ಆದರೆ, 19ನೇ ಓವರ್‌ನಲ್ಲಿ ರಬಾಡ ದಾಳಿಗಿಳಿದು ಮೊದಲ ಎಸೆತದಲ್ಲೇ ಹರ್ಮೀತ್ ಅವರ ವಿಕೆಟ್ ಪಡೆದರು. ಅಲ್ಲದೆ, ಓವರ್‌ನಲ್ಲಿ ಕೇವಲ 2 ರನ್ ನೀಡಿ, ಗೆಲುವಿಗೆ ಮಹತ್ವದ ಕಾಣಿಕೆ ನೀಡಿದರು. ಅಮೆರಿಕ 20 ಓವರ್‌ಗಳಲ್ಲಿ 6 ವಿಕೆಟ್‌ಗೆ 176 ರನ್ ಗಳಿಸಿ ಹೋರಾಟವನ್ನು ಮುಗಿಸಿತು.

ಇದಕ್ಕೂ ಮೊದಲು ಬ್ಯಾಟಿಂಗ್‌ಗೆ ಇಳಿದ ದಕ್ಷಿಣ ಆಫ್ರಿಕಾ ತಂಡದ ನಾಯಕ ಮರ್ಕರಂ ಸೊಗಸಾದ ಆಟವಾಡಿ 46 ರನ್ (32ಎ, 4x4, 6x1) ಗಳಿಸಿದರು. ಡಿಕಾಕ್ ಜೊತೆ ಎರಡನೇ ವಿಕೆಟ್‌ಗೆ ಅವರು 57 ಎಸೆತಗಳಲ್ಲಿ 110 ರನ್ ಸೇರಿಸಿದರು. ಲೀಗ್ ಹಂತದಲ್ಲಿ ವಿಫಲರಾಗಿದ್ದ ದಕ್ಷಿಣ ಆಫ್ರಿಕಾ ಬ್ಯಾಟರ್‌ಗಳು ಇಲ್ಲಿ ಸುಧಾರಿತ ಆಟವಾಡಿದರು. ಹೆನ್ರಿಚ್ ಕ್ಲಾಸೆನ್ (ಔಟಾಗದೇ 36) ಮತ್ತು ಟ್ರಿಸ್ಟನ್ ಸ್ಟಬ್ಸ್ (ಔಟಾಗದೇ 20) ಮುರಿಯದ 5ನೇ ವಿಕೆಟ್‌ಗೆ ಕೊನೆಯ ಐದು ಓವರ್‌ಗಳಲ್ಲಿ 53 ರನ್ ಸೇರಿಸಿದರು.

ಕ್ವಿಂಟನ್ ಆಕ್ರಮಣಕಾರಿಯಾಗಿದ್ದು, ಜಸದೀಪ್ ಸಿಂಗ್ ಅವರ ಮೊದಲ ಓವರ್‌ನಲ್ಲೇ 28 ರನ್ ಬಾಚಿ ತಂಡದ ರನ್ ವೇಗ ಹೆಚ್ಚಿಸಿದರು. ಇದರಲ್ಲಿ ಮೂರು ಭರ್ಜರಿ ಸಿಕ್ಸರ್‌ಗಳ ಜೊತೆ ಎರಡು ಬೌಂಡರಿಗಳೂ ಇದ್ದವು. ಪವರ್ ಪ್ಲೇ ವೇಳೆಗೆ ತಂಡ (1 ವಿಕೆಟ್‌ಗೆ) 64 ರನ್ ಗಳಿಸಿತ್ತು. 12ನೇ ಓವರ್‌ನಲ್ಲಿ ಡಿ ಕಾಕ್, ಹರ್ಮೀತ್ ಸಿಂಗ್ ಅವರ ಫುಲ್‌ಟಾಸ್ ಎಸೆತವನ್ನು ಬೌಂಡರಿ ದಾಟಿಸಲು ಹೋಗಿ ಡೀಪ್ ಮಿಡ್ ವಿಕೆಟ್‌ನಲ್ಲಿದ್ದ ಶಯನ್ ಜಹಾಂಗಿರ್‌ಗೆ ಕ್ಯಾಚಿತ್ತರು. ಆಗ ತಂಡದ ಮೊತ್ತ 2 ವಿಕೆಟ್‌ಗೆ 126. ನಂತರದಲ್ಲಿ ಕ್ಲಾಸೆನ್ ಮತ್ತು ಸ್ಟಬ್ಸ್ ಅಮೆರಿಕನ್ನರ ಮೇಲುಗೈ ಆಸೆಯನ್ನು ಭಗ್ನಗೊಳಿಸಿದರು.



ಕ್ವಿಂಟನ್ ಡಿ ಕಾಕ್ ಬ್ಯಾಟಿಂಗ್ ಸೊಬಗು –ಎಎಫ್‌ಪಿ ಚಿತ್ರ

ಸ್ಕೋರುಗಳು: ದಕ್ಷಿಣ ಆಫ್ರಿಕಾ: 20 ಓವರುಗಳಲ್ಲಿ 4 ವಿಕೆಟ್‌ಗೆ 194 (ಕ್ವಿಂಟನ್ ಡಿ ಕಾಕ್ 74, ಏಡನ್ ಮರ್ಕರಂ 46, ಹೆನ್ರಿಚ್ ಕ್ಲಾಸೆನ್ ಔಟಾಗದೇ 36, ಟ್ರಿಸ್ಟನ್ ಸ್ಟಬ್ಸ್ ಔಟಾಗದೇ 20; ಸೌರಭ್ ನೇತ್ರಾವಳ್ಕರ್ 21ಕ್ಕೆ2, ಹರ್ಮೀತ್ ಸಿಂಗ್ 24ಕ್ಕೆ2). **ಅಮೆರಿಕ:** 20 ಓವರ್‌ಗಳಲ್ಲಿ 6 ವಿಕೆಟ್‌ಗೆ 176 (ಸ್ಟೀವನ್ ಟೇಲರ್ 24, ಆ್ಯಂಡ್ರೀಸ್ ಗೌಸ್ ಔಟಾಗದೇ 80, ಹರ್ಮೀತ್ ಸಿಂಗ್ 38; ಕಗಿಸೊ ರಬಾಡ 48ಕ್ಕೆ 3, ಕೇಶವ ಮಹಾರಾಜ್ 24ಕ್ಕೆ1). **ಪಂದ್ಯದ ಆಟಗಾರ:** ಕ್ವಿಂಟನ್ ಡಿ ಕಾಕ್

ಪೂಜಾ ದಾಳಿಗೆ ಒಲಿದ ರೋಚಕ ಜಯ

ಮಂದಾನ, ಹರ್ಮನ್‌ಪ್ರೀತ್ ಶತಕ; ದಕ್ಷಿಣ ಆಫ್ರಿಕಾ ಎದುರು ವಿಜೃಂಭಿಸಿದ ಭಾರತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬುಧವಾರ ನಾಲ್ವರು ಬ್ಯಾಟರ್‌ಗಳು ಶತಕ ದಾಖಲಿಸಿದರು. ಆದರೆ, ಅಂತಿಮ ಓವರ್‌ನಲ್ಲಿ ಪಂದ್ಯದ ಫಲಿತಾಂಶವನ್ನು ಭಾರತದ ಮಡಿಲಿಗೆ ಅರ್ಪಿಸಿದ್ದು ಮಾತ್ರ ಮಧ್ಯಮವೇಗಿ ಪೂಜಾ ವಸ್ತ್ರಕರ್ ಅವರ ಬೌಲಿಂಗ್.

ಇಲ್ಲಿ ನಡೆದ ಎರಡನೇ ಏಕದಿನ ಪಂದ್ಯದಲ್ಲಿ 326 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ ದಕ್ಷಿಣ ಆಫ್ರಿಕಾ ತಂಡಕ್ಕೆ ಕೊನೆಯ ಓವರ್‌ನಲ್ಲಿ 11 ರನ್‌ಗಳ ಅಗತ್ಯವಿತ್ತು. ಆತಿಥೇಯ ನಾಯಕಿ ಹರ್ಮನ್‌ಪ್ರೀತ್ ಕೌರ್ ಕೊಟ್ಟ ಚೆಂಡು ತೆಗೆದುಕೊಂಡ ಪೂಜಾ, ಮೊದಲೆರಡು ಎಸೆತಗಳಲ್ಲಿ ಒಂದು ಬೌಂಡರಿ ಸಹಿತ ಐದು ರನ್ ಬಿಟ್ಟುಕೊಟ್ಟರು. ಆದರೆ, ನಂತರ ಸತತ ಎರಡು ವಿಕೆಟ್ ಕಬಳಿಸಿದರಲ್ಲದೇ ಇನ್ನುಳಿದ ಎರಡು ಎಸೆತಗಳಲ್ಲಿ ಕೇವಲ ಎರಡು ರನ್ ಕೊಟ್ಟು ಗೆಲುವಿನ ಕೇಕೆ ಹಾಕಿದರು. ತಂಡವು 4 ರನ್ ಗಳ ರೋಚಕ ಜಯ ಸಾಧಿಸಿತು. ಅಲ್ಲದೇ ಮೂರು ಪಂದ್ಯಗಳ ಸರಣಿಯನ್ನು 2–0ಯಿಂದ ಕೈವಶ ಮಾಡಿಕೊಂಡಿತು.

ಪೂಜಾ ಅವರು ಕೊನೆಯ ಓವರ್‌ನಲ್ಲಿ ಸತತ ಎರಡು ವಿಕೆಟ್ ಕಬಳಿಸದೇ ಹೋಗಿದ್ದರೆ ಜಯ ಕೈತಪ್ಪುವ ಸಾಧ್ಯತೆ ಇತ್ತು. ಅದರಿಂದಾಗಿ ಸ್ಮೃತಿ ಮಂದಾನ (136; 120ಎ, 4X18, 6X2) ಮತ್ತು ಹರ್ಮನ್‌ಪ್ರೀತ್ ಕೌರ್ (ಔಟಾಗದೆ 103; 88ಎ, 4X9, 6X3) ಅವರು ಗಳಿಸಿದ್ದ ಸುಂದರ ಶತಕಗಳು ಮೌಲ್ಯ ಕಳೆದುಕೊಳ್ಳುತ್ತಿದ್ದವು.

ಆದರೆ, ಬೃಹತ್ ಮೊತ್ತವನ್ನು ಬೆನ್ನಟ್ಟಿ ಶಾಂತಚಿತ್ತದಿಂದ ಆಡಿ ತಮ್ಮ ತಂಡವನ್ನು ಗೆಲುವಿನ ಅಂಚಿಗೆ ತಂದು ನಿಲ್ಲಿಸಿದ್ದ ದಕ್ಷಿಣ ಆಫ್ರಿಕಾ ನಾಯಕಿ ಲೌರಾ ವೋಲ್ವಾರ್ಟ್ (ಔಟಾಗದೆ 135; 135ಎ,4X12, 6X3) ಹಾಗೂ ಮರಿಜಾನ್ ಕಾಪ್ (114; 94ಎ, 4X11, 6X3) ಅವರ ಶತಕಗಳು ಮಾತ್ರ ಕ್ರಿಕೆಟ್‌ಪ್ರಿಯರ ಮನಗೆದ್ದವು.

ಸ್ಮೃತಿಗೆ ಟೂರ್ನಿಯಲ್ಲಿ ಇದು ಸತತ ಎರಡನೇ ಹಾಗೂ ಏಕದಿನ ಮಾದರಿಯಲ್ಲಿ ಏಳನೇ ಶತಕವಾಗಿದೆ. ಈ ಮೂಲಕ ಮಿಥಾಲಿ ರಾಜ್ (7 ಶತಕ) ಅವರೊಂದಿಗೆ ಭಾರತ ಪರ ಗರಿಷ್ಠ ಶತಕದ ದಾಖಲೆಯನ್ನು ಹಂಚಿಕೊಂಡರು.

ಬುಧವಾರ ಮಧ್ಯಾಹ್ನ ಟಾಸ್ ಗೆದ್ದ ದಕ್ಷಿಣ ಆಫ್ರಿಕಾ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ತಮ್ಮ ನಾಯಕಿಯ ನಿರ್ಧಾರ ಸಮರ್ಥಿಸಿಕೊಂಡ ಬೌಲರ್‌ಗಳು ಬಿಗಿ ದಾಳಿ ನಡೆಸಿದರು. ಇದರಿಂದಾಗಿ ಭಾರತದ ಆರಂಭಿಕ ಜೋಡಿ ಸ್ಮೃತಿ ಮತ್ತು ಶಫಾಲಿ ವರ್ಮಾ ಅವರು ಸೇರಿ ಮೊದಲ ನಾಲ್ಕು ಓವರ್‌ಗಳಲ್ಲಿ ಕೇವಲ 2 ರನ್ ಮಾತ್ರ ಗಳಿಸಿದ್ದರು.

ಆದರೆ ಐದನೇ ಓವರ್‌ನಲ್ಲಿ ಬೌಂಡರಿ ಹೊಡೆಯಲು ಆರಂಭಿಸಿದ ಈ ಜೋಡಿಯ ಆಟದಿಂದ ರನ್ ಗಳಿಕೆ ಹೆಚ್ಚತೊಡಗಿತು. ಆದರೆ 12ನೇ ಓವರ್‌ನಲ್ಲಿ ಶಫಾಲಿ ಔಟಾದರು. ಹೇಮಲತಾ 24 ರನ್ ಗಳಿಸಿ ನಿರ್ಗಮಿಸಿದರು. ಸ್ಮೃತಿ ಅವರೊಂದಿಗೆ ಸೇರಿಕೊಂಡ ಹರ್ಮನ್‌ಪ್ರೀತ್ ಮೂರನೇ ವಿಕೆಟ್ ಜೊತೆಯಾಟದಲ್ಲಿ 171 ರನ್ ಸೇರಿಸಿದರು. ಕೌರ್ ತಮಗೆ ಲಭಿಸಿದ ಎರಡು ಜೀವದಾನಗಳನ್ನು ಸಮರ್ಥವಾಗಿ ಬಳಸಿಕೊಂಡರು. 38ನೇ ಓವರ್‌ನವರೆಗೂ ಇಬ್ಬರೂ ತಾಳ್ಮೆಯಿಂದ ಆಡಿದರು. ಆದರೆ ನಂತರ ವೇಗ ಹೆಚ್ಚಿಸಿದರು. ಅದರಲ್ಲಿ ಹರ್ಮನ್ ಬೀಸಾಟ ಜೋರಾಗಿತ್ತು. ಇನಿಂಗ್ಸ್ ಕೊನೆಯ 12 ಓವರ್‌ಗಳಲ್ಲಿ 125 ರನ್ ತಂಡದ ಖಾತೆ ಸೇರಿದವು.

ಸ್ಮೃತಿ 103 ಎಸೆತಗಳಲ್ಲಿ ಶತಕ ಪೂರೈಸಿದಾಗ ಕೌರ್ ಇನ್ನೂ ಅರ್ಧಶತಕ ಗಳಿಸಿರಲಿಲ್ಲ. 58 ಎಸೆತಗಳಲ್ಲಿ 50ರ ಗಡಿ ಮುಟ್ಟಿದ ಅವರು, ತಾವೆದುರಿಸಿದ 87ನೇ ಎಸೆತದಲ್ಲಿ ಶತಕ ದಾಟಿದರು. ಇದರಿಂದಾಗಿ ತಂಡವು 50 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 325 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಪ್ರವಾಸಿ ತಂಡವು 67 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡಿತು. ಈ ಹಂತದಲ್ಲಿ ಲೌರಾ ಮತ್ತು ಕಾಪ್ 4ನೇ ವಿಕೆಟ್ ಜೊತೆಯಾಟದಲ್ಲಿ 184 ರನ್ ಸೇರಿಸಿದರು. ಆದರೆ ತಂಡಕ್ಕೆ 6 ವಿಕೆಟ್‌ಗಳಿಗೆ 321 ರನ್ ಗಳಿಸಲಷ್ಟೇ ಸಾಧ್ಯವಾಯಿತು.

ಸಂಕ್ಷಿಪ್ತ ಸ್ಕೋರು: ಭಾರತ: 50 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 325 (ಸ್ಮೃತಿ ಮಂದಾನ 136, ಶಫಾಲಿ ವರ್ಮಾ 20, ಹೇಮಲತಾ 24, ಹರ್ಮನ್‌ಪ್ರೀತ್ ಕೌರ್ ಔಟಾಗದೆ 103, ರಿಚಾ ಘೋಷ್ ಔಟಾಗದೆ 25, ನಾನ್‌ಕುಲುಲೆಂಕೊ ಮ್ಲಾಬಾ 51ಕ್ಕೆ2, ಮಸಾಬ್ತಾ ಕ್ಲಾಸ್ 67ಕ್ಕೆ1) **ದಕ್ಷಿಣ ಆಫ್ರಿಕಾ:** 50 ಓವರ್‌ಗಳಲ್ಲಿ 6ಕ್ಕೆ321 (ಲೌರಾ ವೊಲ್ವಾರ್ಟ್ ಔಟಾಗದೆ 135, ಮರಿಜಾನ್ ಕಾಪ್ 114, ನಾಡೈನ್ ಡಿ ಕ್ಲರ್ಕ್ 28, ಪೂಜಾ ವಸ್ತ್ರಕರ್ 54ಕ್ಕೆ2, ದೀಪ್ತಿ ಶರ್ಮಾ 56ಕ್ಕೆ2, ಸ್ಮೃತಿ ಮಂದಾನ 13ಕ್ಕೆ1, ಅರುಂಧತಿ ರೆಡ್ಡಿ 62ಕ್ಕೆ1) **ಫಲಿತಾಂಶ:** ಭಾರತ ತಂಡಕ್ಕೆ 4 ರನ್ ಜಯ. **ಪಂದ್ಯದ ಆಟಗಾರ್ತಿ:** ಹರ್ಮನ್‌ಪ್ರೀತ್ ಕೌರ್.



ವಿಕೆಟ್ ಪಡೆದ ಸ್ಮೃತಿ ಮಂದಾನ ಅವರನ್ನು ಅಭಿನಂದಿಸಿದ ಸಹ ಆಟಗಾರ್ತಿಯರು –ಪ್ರಜಾವಾಣಿ ಚಿತ್ರ/ಪುಷ್ಕರ್ ವಿ.

ಮುಖ್ಯಾಂಶಗಳು

- ಪಂದ್ಯದಲ್ಲಿ ಒಟ್ಟು 626 ರನ್‌ಗಳು ದಾಖಲಾದವು
- ಭಾರತ ಮಹಿಳಾ ತಂಡವು ಅತ್ಯಂತ ಕನಿಷ್ಠ ಅಂತರದಿಂದ ಗೆದ್ದ ದಾಖಲೆ
- ಕೊನೆಯ ಓವರ್‌ನಲ್ಲಿ ಎರಡು ವಿಕೆಟ್ ಕಬಳಿಸಿದ ಪೂಜಾ

ಉತ್ತಮ ಲಯದಲ್ಲಿರುವ ಆತಿಥೇಯರಿಗೆ ಇಂದು ಸತ್ವಪರೀಕ್ಷೆ

ವಿಂಡೀಸ್‌ಗೆ ಇಂಗ್ಲೆಂಡ್ ಸವಾಲು

ಗ್ರಾಸ್ ಐಲ್ (ಸೇಂಟ್ ಲೂಸಿಯಾ): ಉತ್ತಮ ಲಯದಲ್ಲಿರುವ ಆತಿಥೇಯ ವೆಸ್ಟ್ ಇಂಡೀಸ್ ತಂಡದವರು ಟಿ20 ವಿಶ್ವಕಪ್‌ನ ಸೂಪರ್ ಎಂಟರ ಹಂತದಲ್ಲೂ ಅದೇ ಉತ್ಸಾಹದಲ್ಲಿ ಆಡುವ ತವಕದಲ್ಲಿದ್ದಾರೆ. ಆದರೆ ಗುರುವಾರ ನಡೆಯುವ ಈ ಹಂತದ ಮೊದಲ ಪಂದ್ಯದಲ್ಲಿ 'ಚಿರಪರಿಚಿತ' ಎದುರಾಳಿ ಇಂಗ್ಲೆಂಡ್ ತಂಡವನ್ನು ಲಘುವಾಗಿ ಪರಿಗಣಿಸುವಂತಿಲ್ಲ.

ಪಂದ್ಯದಲ್ಲಿ ರನ್ನುಗಳು ಹರಿಯುವ ನಿರೀಕ್ಷೆಯಿಡಬಹುದು.


ಇತ್ತಂಡಗಳೂ ಮೂರನೇ ಬಾರಿ ಟಿ20 ವಿಶ್ವಕಪ್ ಗೆಲ್ಲುವ ಪ್ರಯತ್ನದಲ್ಲಿವೆ. ಆತಿಥೇಯರು ಈ ಬಾರಿ ಒಂದೂ ಪಂದ್ಯ ಸೋತಿಲ್ಲ. ಇಂಗ್ಲೆಂಡ್ ಒಂದಿಷ್ಟು ಆತಂಕದ ನಂತರ ಸೂಪರ್ ಎಂಟರಲ್ಲಿ ಸ್ಥಾನ ಪಡೆದಿತ್ತು. ಅದಕ್ಕೆ ಆಸ್ಟ್ರೇಲಿಯಾದ 'ಕೃಪೆ'ಯೂ ಬೇಕಾಯಿತು. ಈಗ ಜೋಸ್ ಬಟ್ಲರ್ ಬಳಗ ಹೊಸ ಉತ್ಸಾಹದೊಂದಿಗೆ ಸೂಪರ್ ಎಂಟರಲ್ಲಿ ಕಣಕ್ಕಿಳಿಯಲಿದೆ.

ವೆಸ್ಟ್ ಇಂಡೀಸ್ ಯಶಸ್ಸಿನ ಓಟದಲ್ಲಿದೆ. ಡಾರೆನ್ ಸಾಮಿ ನ್ಯಾಷನಲ್ ಕ್ರಿಕೆಟ್ ಸ್ಟೇಡಿಯಮ್‌ನಲ್ಲಿ ಅಫ್ಗಾನಿಸ್ತಾನ ವಿರುದ್ಧ ಕೊನೆಯ ಲೀಗ್ ಪಂದ್ಯವನ್ನು 104 ರನ್‌ಗಳ ಭರ್ಜರಿ ಅಂತರದಿಂದ ಜಯಿಸಿತ್ತು. ತಮ್ಮ ಹೆಡ್ ಕೋಚ್ ಮತ್ತು ಎರಡು ಸಲದ ಟಿ20 ವಿಶ್ವಕಪ್ ವಿಜೇತ ನಾಯಕನ ಹೆಸರಿನ ಕ್ರೀಡಾಂಗಣದಲ್ಲಿ ಮತ್ತೆ ಆಡಲಿರುವ ರೋವ್ಮನ್ ಪೊವೆಲ್ ಬಳಗ ಅಂಥದ್ದೇ ಫಲಿತಾಂಶ ನಿರೀಕ್ಷೆಯಲ್ಲಿದೆ.

ವೆಸ್ಟ್ ಇಂಡೀಸ್ ಸಂಘಟಿತ ತಂಡವಾಗಿ ಆಡುತ್ತಿದೆ. ತಂಡ ಸಂಕಷ್ಟದಲ್ಲಿರುವಾಗ ಒಬ್ಬರಾದರೂ ದೊಡ್ಡ ಮೊತ್ತದ ಇನಿಂಗ್ಸ್‌ನೊಡನೆ ನೆರವಿಗೆ ಬರುತ್ತಿದ್ದಾರೆ. ಶರ್ಫೇನ್ ರುದರ್‌ಫೋರ್ಡ್, ನಿಕೋಲಸ್ ಪೂರನ್ ಇದಕ್ಕೆ ನಿದರ್ಶನ. ಬೌಲರ್‌ಗಳೂ ನಿರಾಶೆ ಮೂಡಿಸಿಲ್ಲ. ಇಲ್ಲಿನ ಸಪಾಟಾದ ಪಿಚ್, ಶಾರ್ಟ್ ಬೌಂಡರಿಗಳು ಬ್ಯಾಟರ್ ಸ್ನೇಹಿಯಾಗಿದೆ.

ಇಂಗ್ಲೆಂಡ್‌ನ ಬಲಗೈ ಆಟಗಾರರ ಪಡೆಯನ್ನು ಕಟ್ಟಿಹಾಕಲು ವೆಸ್ಟ್ ಇಂಡೀಸ್, ಎಡಗೈ ಸ್ಪಿನ್ ಜೋಡಿಯಾದ ಅಖೀಲ್ ಹುಸೇನ್ ಮತ್ತು ಗುಡಕೇಶ್ ಮೋತಿ ಅವರನ್ನು ನೆಚ್ಚಿಕೊಂಡಿದೆ. ಪಿಚ್‌ನಲ್ಲಿ ಬೌನ್ಸ್ ಕೂಡ ಇರುವುದರಿಂದ ಎಡಗೈ ವೇಗಿ ಒಬೇದ್ ಮೆಕಾಯ್ ಅವರೂ ಪ್ರಮುಖ ಪಾತ್ರ ವಹಿಸಬಲ್ಲರು.

ಇಂಗ್ಲೆಂಡ್‌ನ ಪ್ರಮುಖ ವೇಗದ ಬೌಲರ್‌ಗಳಾದ ಜೋಫ್ರಾ ಅರ್ಚರ್ ಮತ್ತು ಮಾರ್ಕ್ ವುಡ್ ಅವರೂ ಇಲ್ಲಿನ ಪರಿಸ್ಥಿತಿಯ ಲಾಭ ಪಡೆಯುವ ಯತ್ನದಲ್ಲಿದ್ದಾರೆ. ಎರಡೂ ತಂಡಗಳು ಸಾಕಷ್ಟು ಸಲ ಮುಖಾಮುಖಿ ಆಗಿರುವ ಕಾರಣ ಪರಸ್ಪರರ ಸಾಮರ್ಥ್ಯ ಮತ್ತು ದೌರ್ಬಲ್ಯಗಳ ಅರಿವಿದ್ದೇ ಇದೆ.





ರೋವ್ಮನ್ ಪೊವೆಲ್ (ಎಡ). ಜಾಸ್ ಬಟ್ಲರ್ –ಎಎಫ್‌ಪಿ ಚಿತ್ರಗಳು

ರ‍್ಯಾಂಕಿಂಗ್: ಅಗ್ರಸ್ಥಾನಕ್ಕೇರಿದ ಸ್ಟೊಯಿನಿಸ್

ದುಬೈ (ಪಿಟಿಐ): ಆಸ್ಟ್ರೇಲಿಯಾದ ಮಾರ್ಕಸ್ ಸ್ಟೊಯಿನಿಸ್ ಅವರು ಬುಧವಾರ ಪ್ರಕಟವಾದ ಐಸಿಸಿ ಟಿ20 ಆಲ್‌ರೌಂಡರ್‌ಗಳ ರ‍್ಯಾಂಕಿಂಗ್‌ನಲ್ಲಿ ಅಫ್ಗಾನಿಸ್ತಾನದ ಮೊಹಮ್ಮದ್ ನಬಿ ಅವರನ್ನು ಹಿಂದೆಹಾಕಿ ಅಗ್ರಸ್ಥಾನಕ್ಕೇರಿದ್ದಾರೆ.



ಸ್ಟೊಯಿನಿಸ್

ಸ್ಟೊಯಿನಿಸ್ ಹಾಲಿ ಟಿ20 ವಿಶ್ವಕಪ್‌ನಲ್ಲಿ ಆರು ವಿಕೆಟ್‌ಗಳನ್ನು ಪಡೆದಿದ್ದಾರೆ. ಜೊತೆಗೆ ಉಪಯುಕ್ತ ರನ್ ಗಳನ್ನೂ ಗಳಿಸಿದ್ದು ಆಸ್ಟ್ರೇಲಿಯಾ ತಂಡ ಸೂಪರ್ ಎಂಟರ ಹಂತ ತಲುಪಲು ನೆರ ವಾಗಿದ್ದಾರೆ. ನಬಿ ಮೂರು ಸ್ಥಾನಗಳಷ್ಟು ಕೆಳಕ್ಕಿಳಿದು ನಾಲ್ಕನೇ ಸ್ಥಾನದಲ್ಲಿದ್ದಾರೆ.

ಲಂಕಾ ನಾಯಕ ವನಿಂದು ಹಸರಂಗ ಮತ್ತು ಬಾಂಗ್ಲಾದೇಶದ ಅನುಭವಿ ಆಲ್‌ರೌಂಡರ್ ಶಕಿಬ್ ಅಲ್ ಹಸನ್ ಅವರು ಕ್ರಮವಾಗಿ ಎರಡನೇ ಮತ್ತು ಮೂರನೇ ಸ್ಥಾನಕ್ಕೆ ಬಡ್ತಿ ಪಡೆದಿದ್ದಾರೆ.

ಬೌಲರ್‌ಗಳ ಪಟ್ಟಿಯಲ್ಲಿ ವೆಸ್ಟ್ ಇಂಡೀಸ್ ಬೌಲರ್‌ಗಳು ಬಡ್ತಿ ಪಡೆದಿದ್ದಾರೆ. ಆ ತಂಡದ ಎಡಗೈ ಸ್ಪಿನ್ನರ್ ಅಖೀಲ್ ಹುಸೇನ್ ಆರು ಸ್ಥಾನಗಳನ್ನು ಮೇಲೇರಿ ಎರಡನೇ ಸ್ಥಾನ ತಲುಪಿದ್ದಾರೆ. ಇಂಗ್ಲೆಂಡ್‌ನ ಸ್ಪಿನ್ನರ್ ಅದಿಲ್ ರಶೀದ್ ಅಗ್ರಸ್ಥಾನದಲ್ಲಿದ್ದಾರೆ. ವಿಂಡೀಶ್‌ನ ವೇಗಿ ಅಲ್ಜಾರಿ ಜೋಸೆಫ್ ಆರು ಸ್ಥಾನ ಬಡ್ತಿ ಪಡೆದು 11ನೇ ಸ್ಥಾನಕ್ಕೇರಿದರೆ, ಅದೇ ತಂಡದ ಗುಡಕೇಶ್ ಮೋತಿ 16 ಸ್ಥಾನ ಮೇಲೇರಿ 13ನೇ ಸ್ಥಾನದಲ್ಲಿ ನೆಲೆಸಿದ್ದಾರೆ.

ಬ್ಯಾಟರ್‌ಗಳ ಪಟ್ಟಿಯಲ್ಲಿ ಸೂರ್ಯ ಕುಮಾರ್ ಯಾದವ್ ಅಗ್ರಸ್ಥಾನದಲ್ಲೇ ಮುಂದುವರಿದಿದ್ದಾರೆ. ಫಿಲ್ ಸಾಲ್ಟ್, ಬಾಬರ್ ಆಜಂ ಮತ್ತು ಮೊಹಮ್ಮದ್ ರಿಜ್ವಾನ್ ಕ್ರಮವಾಗಿ ಎರಡು, ಮೂರು ಮತ್ತು ನಾಲ್ಕನೇ ಸ್ಥಾನದಲ್ಲಿದ್ದಾರೆ.

ಸಂಕ್ಷಿಪ್ತ ಸುದ್ದಿ

ವಿರಾಟ್ ಶ್ರೇಷ್ಠ ಆಟಗಾರ: ವೆಸ್ಲಿ

ಬಾರ್ಬಡೋಸ್ (ಪಿಟಿಐ): 'ಹಲವು ವರ್ಷಗಳಿಂದ ಸಾಕಷ್ಟು ಶ್ರೇಷ್ಠ ಬ್ಯಾಟರ್‌ಗಳನ್ನು ನಾನು ನೋಡಿದ್ದೇನೆ. ಆದರೆ, ಭಾರತದ 'ಸೂಪರ್ ಸ್ಟಾರ್' ವಿರಾಟ್ ಕೊಹ್ಲಿ ಸಾರ್ವಕಾಲಿಕ ಶ್ರೇಷ್ಠ ಆಟಗಾರ' ಎಂದು ವೆಸ್ಟ್ ಇಂಡೀಸ್‌ನ ಕ್ರಿಕೆಟ್ ದಂತಕತೆ ವೆಸ್ಲಿ ಹಾಲ್ ಬಣ್ಣಿಸಿದರು.

ಮಂಗಳವಾರ ಇಲ್ಲಿನ ಕೆನ್ಸಿಂಗ್ಟನ್ ಓವಲ್‌ನಲ್ಲಿ ವಿಶೇಷ ಅತಿಥಿಯಾಗಿ ಭಾಗವಹಿಸಿದ್ದ ಅವರು, ತಮ್ಮ ಆತ್ಮಚರಿತ್ರೆ ಪುಸ್ತಕವನ್ನು ಕೊಹ್ಲಿ, ರೋಹಿತ್ ಶರ್ಮಾ ಮತ್ತು ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಅವರಿಗೆ ಹಸ್ತಾಕ್ಷರದೊಂದಿಗೆ ಉಡುಗೊರೆಯಾಗಿ ನೀಡಿದರು.

'ನೀವು ಇನ್ನೂ ಹಲವು ವರ್ಷಗಳ ಕಾಲ ಭಾರತಕ್ಕಾಗಿ ಆಡುತ್ತೀರಿ ಎಂದು ನಾನು ಭಾವಿಸುತ್ತೇನೆ' ಎಂದು ಕೊಹ್ಲಿಯನ್ನು ಉದ್ದೇಶಿಸಿ 86 ವರ್ಷದ ವೆಸ್ಲಿ ಹೇಳಿದರು.

ಬಾಂಗ್ಲಾ ಬೌಲರ್ ತಂಜಿಮ್‌ಗೆ ದಂಡ

ದುಬೈ (ಪಿಟಿಐ): ಟಿ20 ವಿಶ್ವಕಪ್ ಪಂದ್ಯದಲ್ಲಿ ನೇಪಾಳ ತಂಡದ ನಾಯಕ ರೋಹಿತ್ ಪೌದೆಲ್ ಜೊತೆ ವಾಗ್ವಾದದ ವೇಳೆ ಅನುಚಿತವಾಗಿ ಅವರ ಮೈಗೆ ತಾಗಿದ ಬಾಂಗ್ಲಾದೇಶ ತಂಡದ ವೇಗಿ ತಂಜಿಮ್ ಹಸನ್ ಸಕೀಬ್ ಅವರಿಗೆ ಪಂದ್ಯ ಶುಲ್ಕದ ಶೇ 15ರಷ್ಟು ಮೊತ್ತವನ್ನು ದಂಡವನ್ನಾಗಿ ವಿಧಿಸಲಾಗಿದೆ.

ಭಾನುವಾರ ಕಿಂಗ್ಸ್‌ಟೌನ್‌ನಲ್ಲಿ ನಡೆದ 'ಡಿ' ಗುಂಪಿನ ಪಂದ್ಯದಲ್ಲಿ ನೇಪಾಳ ತಂಡ ಗುರಿ ಬೆನ್ನಟ್ಟುವಾಗ ಮೂರನೇ ಓವರ್‌ನಲ್ಲಿ ಈ ಪ್ರಕರಣ ನಡೆದಿದೆ. ಬಾಂಗ್ಲಾದೇಶ ಪಂದ್ಯವನ್ನು 21 ರನ್‌ಗಳಿಂದ ಗೆದ್ದುಕೊಂಡಿತ್ತು.

ಬ್ಯಾಕ್‌ಸ್ಟ್ರೋಕ್: ರೀಗನ್ ಸ್ಮಿತ್ ವಿಶ್ವದಾಖಲೆ

ಇಂಡಿಯಾನಾಪೊಲಿಸ್ (ಎಪಿ): ಅಲ್ಪಾವಧಿಯ ಕ್ರೀಡಾಜೀವನದಲ್ಲಿ ಏಳುಬೀಳುಗಳನ್ನು ಕಂಡಿರುವ ರೀಗನ್ ಸ್ಮಿತ್ ಅವರು ಅಮೆರಿಕದ ಈಜು ಟ್ರಯಲ್ಸ್‌ನಲ್ಲಿ ಮಂಗಳವಾರ ರಾತ್ರಿ ಮಹಿಳೆಯರ 100 ಮೀ. ಬ್ಯಾಕ್‌ಸ್ಟ್ರೋಕ್ ಸ್ಪರ್ಧೆಯಲ್ಲಿ ವಿಶ್ವದಾಖಲೆ ಸ್ಥಾಪಿಸಿದರು.

ಮಿನೆಸೋಟಾದವರಾದ 22 ವರ್ಷದ 57.13 ಸೆಕೆಂಡುಗಳಲ್ಲಿ ಅಂತರ ಕ್ರಮಿಸಿ, ಆಸ್ಟ್ರೇಲಿಯಾದ ಕೇಯ್ಲಿ ಮೆಕ್‌ಕಿಯೊನ್ ಹೆಸರಿನಲ್ಲಿದ್ದ 57.33 ಸೆ.ಗಳ ಹಳೆದ ದಾಖಲೆ ಮುಳುಗಿಸಿದರು. 2019ರಲ್ಲಿ ಈ ಸ್ಪರ್ಧೆಯಲ್ಲಿ ಮೊದಲ ಬಾರಿ ವಿಶ್ವದಾಖಲೆ ಸ್ಥಾಪಿಸಿದ್ದಾಗ ಸ್ಮಿತ್ ವಯಸ್ಸು ಕೇವಲ 17.

ಒಸಾಕಾ, ರಾಡುಕಾನು, ಕೆರ್ಬರ್‌ಗೆ ವೈಲ್ಡ್ ಕಾರ್ಡ್

ವಿಂಬಲ್ಡನ್ (ಇಂಗ್ಲೆಂಡ್), (ಎಪಿ): ಗ್ರ್ಯಾನ್‌ಸ್ಲಾಮ್ ಮಾಜಿ ಚಾಂಪಿಯನ್ನರಾದ ನವೋಮಿ ಒಸಾಕಾ, ಕೆರೋಲಿನ್ ವೋಜ್ನಿಯಾಕಿ, ಆ್ಯಂಜೆಲಿಕ್ ಕೆರ್ಬರ್ ಮತ್ತು ಎಮ್ಮಾ ರಾಡುಕಾನು ಅವರಿಗೆ ವಿಂಬಲ್ಡನ್ ಚಾಂಪಿಯನ್‌ಷಿಪ್ಸ್‌ಗೆ 'ವೈಲ್ಡ್ ಕಾರ್ಡ್' ಪ್ರವೇಶ ನೀಡಲಾಗಿದೆ.

ಹುಲ್ಲಿನಂಕಣದಲ್ಲಿ ನಡೆಯುವ ಈ ಚಾಂಪಿಯನ್ ಷಿಪ್ ಜುಲೈ 1ರಂದು ಆರಂಭವಾಗಲಿದೆ. ನಾಲ್ಕು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳನ್ನು ಗೆದ್ದಿರುವ ಮಾಜಿ ಅಗ್ರಮಾನ್ಯ ಆಟಗಾರ್ತಿ ಒಸಾಕಾ ಮತ್ತು ಮೂರು ಪ್ರಮುಖ ಟೂರ್ನಿಗಳನ್ನು ಗೆದ್ದಿರುವ ಕೆರ್ಬರ್ ಅವರು ಮಾತೃತ್ವ ರಜೆ ಮುಗಿಸಿ ಈ ವರ್ಷದ ಆರಂಭದಲ್ಲಿ ಟೆನಿಸ್‌ಗೆ ಮರಳಿದ್ದಾರೆ.

ಯುರೊ ಕಪ್: ಕ್ರೊವೇಷಿಯಾ ಜೊತೆ ಡ್ರಾ ಮಾಡಿಕೊಂಡ ಅಲ್ಬೇನಿಯಾ

ಪೋರ್ಚುಗಲ್ ನೆರವಿಗೆ ಕೊನ್ಸಿಕಾವೊ

ಲೀಪ್‌ಝಿಗ್ (ಜರ್ಮನಿ), (ಎಎಫ್‌ಪಿ): ಸಬ್‌ಸ್ಟಿಟ್ಯೂಟ್ ಆಟಗಾರ ಫ್ರಾನ್ಸಿಸ್ಕೊ ಕೊನ್ಸಿಕಾವೊ ಗಳಿಸಿದ ಕೊನೆಗಳಿಗೆಯ ಗೋಲಿನಿಂದ ಪೋರ್ಚುಗಲ್ ತಂಡ ಮಂಗಳವಾರ ಯುರೊ ಕಪ್ 'ಎಫ್' ಗುಂಪಿನ ಮೊದಲ ಪಂದ್ಯದಲ್ಲಿ ಜಿಗುಟು ಆಟವಾಡಿದ ಝೆಕ್ ರಿಪಬ್ಲಿಕ್ ತಂಡವನ್ನು 2–1 ಗೋಲುಗಳಿಂದ ಸೋಲಿಸಿತು.

ಪಂದ್ಯ ಮುಗಿಯಲು ಕೆಲವು ನಿಮಿಷಗಳಿರುವಾಗ ಆಟಕ್ಕಿಳಿದಿದ್ದ 21 ವರ್ಷ ವಯಸ್ಸಿನ ಕೊನ್ಸಿಕಾವೊ, 'ಇಂಜುರಿ ಅವಧಿ'ಯಲ್ಲಿ (90 + 2) ಈ ಗೋಲು ಗಳಿಸಿದರು. ಝೆಕ್ ರಕ್ಷಣೆ ಆಟಗಾರರು ಅಡ್ಡಪಾಸ್‌ನಲ್ಲಿ (ಕ್ರಾಸ್‌ನಲ್ಲಿ) ಚೆಂಡನ್ನು ಸರಿಯಾಗಿ ತಡೆಯದ ಕಾರಣ ಅದರ ಲಾಭ ಪಡೆದ ಅವರು ಸಮೀಪದಿಂದ ಚೆಂಡನ್ನು ಗುರಿತಲುಪಿಸಿ ಪೋರ್ಚುಗಲ್ ನಿಟ್ಟುಸಿರು ಬಿಡುವಂತೆ ಮಾಡಿದರು.

ಕ್ರಿಸ್ಟಿಯಾನೊ ರೊನಾಲ್ಡೊ ಅವರ ತಂಡ ಆಟದಲ್ಲಿ ಮಿಂಚಲಿಲ್ಲ. ಆದರೆ ವಿಶ್ವಾಸ ಕಳೆದುಕೊಳ್ಳಲಿಲ್ಲ. ರಾಬಿನ್ ಹ್ರನಾಕ್ ಗಳಿಸಿದ ಉಡುಗೋರೆ ಗೋಲಿನಿಂದ ಪೋರ್ಚುಗಲ್ 1–1ರಲ್ಲಿ ಸ್ಕೋರ್ ಸಮಮಾಡಿಕೊಳ್ಳಲು ಯಶಸ್ವಿಯಾಗಿತ್ತು.

ದಾಖಲೆ ಆರನೇ ಯುರೊ ಕಪ್ ಆಡುತ್ತಿರುವ 39 ವರ್ಷ ವಯಸ್ಸಿನ ರೊನಾಲ್ಡೊ ಅವರ ಮೂರು ಗೋಲು ಯತ್ನಗಳನ್ನು ಝೆಕ್ ಗೋಲ್‌ಕೀಪರ್ ಜಿಂಡ್ರಿಚ್ ಸ್ಟಾನೆಕ್ ಯಶಸ್ವಿಯಾಗಿ ತಡೆದರು. ಮತ್ತೊಮ್ಮೆ ಅವರ ಯತ್ನ ಗೋಲ್‌ಪೋಸ್ಟ್‌ಗೆ ಬಡಿಯಿತು. ಆ ವೇಳೆಗೆ ಸ್ಕೋರ್ 1–1 ಸಮನಾಗಿತ್ತು. ಝೆಕ್ ರಕ್ಷಣೆ ಆಟಗಾರರು ಎದುರಾಳಿ ಫಾರ್ವರ್ಡ್‌ಗಳಿಗೆ ಸರ್ಪಗಾವಲು ಹಾಕಿದರು.

ಪೋರ್ಚುಗಲ್ ಕೋಚ್ ರಾಬರ್ಟೊ ಮಾರ್ಟಿನೆಜ್ ಅವರು 41 ವರ್ಷದ ಡಿಫೆಂಡರ್ ಪೆಪೆ ಅವರನ್ನು ಆಡಲಿಳಿಸಿದರು. ಅವರು ಯುರೊ ಕಪ್ ಆಡಿದ ಅತಿ ಹಿರಿಯ ಆಟಗಾರ ಎಂಬ ದಾಖಲೆಗೆ ಪಾತ್ರರಾದರು. ಹಳೆದ ದಾಖಲೆ ಹಂಗೆರಿಯ ಗೋಲ್‌ಕೀಪರ್ ಗಬರ್ ಕಿರಾಲಿ (40 ವರ್ಷ) ಹೆಸರಿನಲ್ಲಿತ್ತು. ಮಿಡ್ ಫೀಲ್ಡರ್ ಲುಕಾಸ್ ಪ್ರೊವೊಡ್ ಪಂದ್ಯ ಆರಂಭವಾಗಿ ಸುಮಾರು ಒಂದು ಗಂಟೆಯ ನಂತರ ಝೆಕ್ ತಂಡಕ್ಕೆ ಮುನ್ನಡೆ ಒದಗಿಸಿದ್ದರು. 62ನೇ ನಿಮಿಷ ಪೋರ್ಚುಗಲ್ ರಕ್ಷಣಾ ಆಟಗಾರರು ಚೆಂಡನ್ನು ಸುರಕ್ಷಿತವಾಗಿ ಸಾಗಹಾ ಕಲು ವಿಫಲವಾದ ಕಾರಣ ಪ್ರೊವೊಡ್ ಅದರ ಲಾಭವನ್ನು ಎತ್ತಿದರು.



ಪೋರ್ಚುಗಲ್‌ನ ಫಾರ್ವಡ್ ಕ್ರಿಸ್ಟಿಯಾನೊ ರೊನಾಲ್ಡೊ, ಗೋಲು ಗಳಿಸಿದ ಸಹ ಆಟಗಾರ ಫ್ರಾನ್ಸಿಸ್ಕೊ ಕೊನ್ಸಿಕಾವೊ ಜೊತೆ ಸಂಭ್ರಮದಲ್ಲಿ... –ಎಎಫ್‌ಪಿ ಚಿತ್ರ

ಯುರೋ ಕಪ್ 2024 ಜರ್ಮನಿ

ಇಂದಿನ ಪಂದ್ಯಗಳು

ಸ್ಲೋವೆನಿಯಾ	Vs ಸರ್ಬಿಯಾ	ಸಂಜೆ 6.30
ಡೆನ್ಮಾರ್ಕ್	Vs ಇಂಗ್ಲೆಂಡ್	ರಾತ್ರಿ 9.30
ಸ್ಪೇನ್	Vs ಇಟಲಿ	ರಾತ್ರಿ 12.30

ಲೈವ್: ಸೋನಿ ಸ್ಪೋರ್ಟ್ಸ್

ಆತಂಕದಲ್ಲಿ ಕ್ರೊವೇಷಿಯಾ

ಹ್ಯಾಂಬರ್ಗ್‌ನಲ್ಲಿ ಬುಧವಾರ ನಡೆದ 'ಬಿ' ಗುಂಪಿನ ಪಂದ್ಯದಲ್ಲಿ ಅಲ್ಬೇನಿಯಾ 2–2 ಗೋಲುಗಳಿಂದ ಪ್ರಬಲ ಕ್ರೊವೇಷಿಯಾ ಜೊತೆ ಡ್ರಾ ಮಾಡಿಕೊಳ್ಳುವಲ್ಲಿ ಯಶಸ್ವಿಯಾಯಿತು.

ಈ ಡ್ರಾದಿಂದಾಗಿ ಕ್ರೊವೇಷಿಯಾ ಗುಂಪು ಹಂತದಲ್ಲಿ ನಿರ್ಗಮಿಸುವ ಅಪಾಯದಲ್ಲಿದೆ. ಗುಂಪಿನ ಮೊದಲ ಪಂದ್ಯದಲ್ಲಿ ಈ ತಂಡ 0–3 ಗೋಲುಗಳಿಂದ ಸ್ಪೇನ್‌ಗೆ ಸೋತಿತ್ತು.

ಜುಲೈ 4ರಿಂದ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲಾ ಟೇಬಲ್ ಟೆನಿಸ್ ಸಂಸ್ಥೆ ಆಯೋಜಿಸುವ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿ ಜುಲೈ 4ರಿಂದ 7ರ ವರೆಗೆ ನಗರದ ಫಾದರ್ ಮುಲ್ಲರ್ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯಲಿದೆ.

ಪುರುಷ, ಮಹಿಳೆಯರ, 11, 13, 15, 17, 19 ವರ್ಷದೊಳಗಿನವರ ವಿಭಾಗ ಮತ್ತು ನಾನ್ ಮೆಡಲಿಸ್ಟ್ ಮತ್ತು ಕೆಡೆಟ್ ವಿಭಾಗಗಳಲ್ಲಿ ಪಂದ್ಯಗಳು ನಡೆಯಲಿವೆ ಎಂದು ಸಂಸ್ಥೆಯ ಅಧ್ಯಕ್ಷ ಗೌತಮ್ ಶೆಟ್ಟಿ ಬುಧವಾರ ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು.

ರಾಜ್ಯ ರ‍್ಯಾಂಕಿಂಗ್ ಪಟ್ಟಿಯಲ್ಲಿರುವ ಮಂಗಳೂರಿನ ತ್ರಿಶಾ ಕರ್ಕೇರ ಮತ್ತು ಏಂಜಲಿನ್ ಅವರು 13 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ, 15 ವರ್ಷದೊಳಗಿನವರ ವಿಭಾಗದ ಅಥರ್ವ ನವರಂಗೆ ಮತ್ತು 17 ವರ್ಷದೊಳಗಿನವರ ವಿಭಾಗದ ಪ್ರೇಕ್ಷಾ ತಿಲಾವತ್ ಪಾಲ್ಗೊಳ್ಳುವರು ಎಂದು ವಿವರಿಸಿದರು.

ಟಿಟಿ: ಸಹನಾ, ರೋಹಿತ್‌ಗೆ ಪ್ರಶಸ್ತಿ

ಬೆಂಗಳೂರು: ಸಹನಾ ಎಚ್. ಮೂರ್ತಿ ಮತ್ತು ರೋಹಿತ್ ಶಂಕರ್ ಅವರು ಕರ್ನಾಟಕ ಟೇಬಲ್ ಟೆನಿಸ್ ಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ 19 ವರ್ಷದೊಳಗಿನವರ ಮಹಿಳೆಯರ ಮತ್ತು ಪುರುಷರ ವಿಭಾಗದ ಪ್ರಶಸ್ತಿಯನ್ನು ಗೆದ್ದುಕೊಂಡರು.

ವಿವಿ ಪುರಂನ ಮ್ಯಾಚ್ ಪಾಯಿಂಟ್‌ನಲ್ಲಿ ಬುಧವಾರ ನಡೆದ ಮಹಿಳೆಯರ ಫೈನಲ್‌ನಲ್ಲಿ ಸಹನಾ ಅವರು 11-7, 11-5, 12- 10, 11-4 ರಿಂದ ಹಿಮಾಂಶಿ ಚೌಧರಿ ಅವರನ್ನು ಮಣಿಸಿದರು. ಸೆಮಿಫೈನಲ್‌ನಲ್ಲಿ ಸಹನಾ ಅವರು ಪ್ರೇಕ್ಷಾ ಟಿ. ತಿಲಾವತ್ ವಿರುದ್ಧ; ಹಿಮಾಂಶಿ ಅವರು ನಿಹಾರಿಕಾ ವಿರುದ್ಧ ಜಯ ಸಾಧಿಸಿದ್ದರು.

ಪುರುಷರ ಫೈನಲ್‌ನಲ್ಲಿ ರೋಹಿತ್ 11-3, 11-6, 11-8, 11-1ರಿಂದ ವರುಣ್ ಬಿ. ಕಶ್ಯಪ್ ಅವರನ್ನು ಮಣಿಸಿದರು. ಸೆಮಿಫೈನಲ್‌ನಲ್ಲಿ ರೋಹಿತ್ ಅವರು ತೆಶುಬ್ ದಿನೇಶ್ ಅವರನ್ನು; ವರುಣ್ ಅವರು ಶಶಾಂಕ್ ಕೇಶವ್ ರಾವ್ ಅವರನ್ನು ಮಣಿಸಿದ್ದರು.



ಪ್ರಶಸ್ತಿ ಪತ್ರದೊಂದಿಗೆ ರೋಹಿತ್ ಶಂಕರ್ ಮತ್ತು ಸಹನಾ ಎಚ್ ಮೂರ್ತಿ

ಕ್ವಾರ್ಟರ್‌ಗೆ ರೋಹಣ್ಣ– ಎಬ್ಡೆನ್

ಲಂಡನ್ (ಪಿಟಿಐ): ಅಗ್ರ ಶ್ರೇಯಾಂಕದ ರೋಹನ್ ಬೋಪಣ್ಣ ಮತ್ತು ಆಸ್ಟ್ರೇಲಿಯಾದ ಮ್ಯಾಥ್ಯೂ ಎಬ್ಡೆನ್ ಅವರು ಇಲ್ಲಿ ನಡೆಯುತ್ತಿರುವ ಸಿಂಚ್ ಚಾಂಪಿಯನ್‌ಷಿಪ್‌ನ ಪುರುಷರ ಡಬಲ್ಸ್‌ನಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಬುಧವಾರ ನಡೆದ ಪ್ರಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ರೋಹನ್– ಎಬ್ಡೆನ್ ಜೋಡಿಯು 6-4, 6-4ರಿಂದ ಆಸ್ಟ್ರಿಯಾದ ಅಲೆಕ್ಸಾಂಡರ್ ಎರ್ಲರ್ ಮತ್ತು ಲ್ಯೂಕಾಸ್ ಮಿಡ್ಲರ್ ಜೋಡಿಯನ್ನು ಮಣಿಸಿತು. ಮುಂದಿನ ತಿಂಗಳು ವಿಂಬಲ್ಡನ್ ಚಾಂಪಿಯನ್ ಷಿಪ್ ನಡೆಯಲಿದ್ದು, ಈ ಟೂರ್ನಿ ಪೂರ್ವಸಿದ್ಧತೆಗೆ ವೇದಿಕೆಯಾಗಿದೆ.